# ಹದ್ದಿನ ಕಣ್ಣು

## ಪ್ರಕಾಶಕರ ಮಾತು

ಡಾ. ಚಂದ್ರಶೇಖರ ಕಂಬಾರರ ಮೊದಲ ನಾಟಕ 'ಋಷ್ಯಶೃಂಗ' ಮನೋಹರ ಗ್ರಂಥ ಮಾಲೆಯಲ್ಲಿ ೧೯೭೧ರಲ್ಲಿ ಪ್ರಕಟವಾಗಿತ್ತು. ಈಗ ನಾಟಕದ ಪ್ರತಿಗಳೆಲ್ಲ ಮುಗಿದು ಹೋಗಿ ಹಲವು ವರ್ಷಗಳಾದವು. ಡಾ| ಚಂದ್ರಶೇಖರ ಕಂಬಾರರಿಗೆ ಮಧ್ಯಪ್ರದೇಶದ ಪ್ರತಿಷ್ಠಿತ 'ಕಬೀರ ಸಮ್ಮಾನ' ದೊರಕಿದ ಸಂದರ್ಭದಲ್ಲಿ ಅವರ 'ಹದ್ದಿನ ಕಣ್ಣು' ಮೂರು ಕೃತಿಗಳ ಸಂಗ್ರಹ ಸೇರಿಸಿ ಪ್ರಕಟಿಸುತ್ತಿದ್ದೇವೆ. ಡಾ. ಕಂಬಾರರ 'ಹೇಳತೇನ ಕೇಳ' 'ಋಷ್ಯಶೃಂಗ' ಹಾಗೂ 'ಹುಲಿಯ ನೆರಳು' ಮೂರು ಕೃತಿಗಳು ಒಂದೇ ವಸ್ತುವನ್ನು ಒಳಗೊಂಡವುಗಳು. ಹೀಗಾಗಿ ಅವು ಮೂರನ್ನು ಸೇರಿಸಿ ಒಂದೇ ಸಂಗ್ರಹದಲ್ಲಿ ಪ್ರಕಟಿಸಿದರೆ ಸಾಹಿತ್ಯಾಸಕ್ತರಿಗೆ ಅಭ್ಯಸಿಸಲು ಅನುಕೂಲವಾಗುವದೆಂದು ಭಾವಿಸಿ ಈ ಸಂಗ್ರಹ ಹೊರತರುತ್ತಿದ್ದೇವೆ. ಈ ಗ್ರಂಥವನ್ನು ಪ್ರಕಟಿಸಲು ಅನುಮತಿಯಿತ್ತ ಕಂಬಾರರಿಗೆ, ನಮ್ಮ ವಂದನೆಗಳು.

**ರಮಾಕಾಂತ ಜೋಶಿ**

## ಲೇಖಕರ ಒಂದೆರಡು ಮಾತು

ಕುರ್ತಕೋಟಿಯವರ ನೆನಪಿನೊಂದಿಗೆ ಈ ಮಾತುಗಳನ್ನು ಬರೆಯುತ್ತಿದ್ದೇನೆ. ಕೆಲವು ತಿಂಗಳ ಹಿಂದೆ ಅವರು ನಮ್ಮ ಮನೆಗೆ ಬಂದಿದ್ದಾಗ ಮಾತಿಗೆ ಮಾತು ಬಂದು "ಋಷ್ಯಶೃಂಗದ ಮುಂದಿನ ಭಾಗವನ್ನು ಬರೆಯಬೇಕೇನ್ರಿ?" ಅಂದೆ. ತಕ್ಷಣಬೇಕಿಲ್ಲವೆಂದರು. 'ಹೇಳತೇನ ಕೇಳ'ದ ಪ್ರಶ್ನೆಗೆ 'ಹುಲಿಯ ನೆರಳಿ'ನಲ್ಲಿ ಉತ್ತರವಿದೆ. ಋಷ್ಯಶೃಂಗ ಅದರ ಪರಿಣಾಮದ ದುರಂತ ಚಿತ್ರ ನೀಡುತ್ತದೆ. ಮುಂದಿನದು ಈ ದೇಶದ ಕರ್ಮ ಅಂದರು. 'ನೀವು ಈಗಂದ ಮಾತುಗಳೊಂದಿಗೆ ಒಂದು ಮುನ್ನುಡಿ ಬರೆದುಬಿಡ್ರಿ' ಅಂದೆ. ಮನೋಹರ ಗ್ರಂಥಮಾಲೆಯ ಸಮೀರನಿಗೇ ಇದನ್ನು ಪ್ರಕಟಿಸಲು ಕೊಡಬೇಕೆಂಬ ಕರಾರಿನೊಂದಿಗೆ ನನ್ನನ್ನ ಒಪ್ಪಿಸಿದರು. ಅವರು ಬದುಕಿದ್ದಾಗಲೇ ಇದರ ಪ್ರಕಟಣ ಕಾರ್ಯ ಸುರುವಾಗಿತ್ತು ದುರ್ದೈವದಿಂದ ಅದು ಮುಗಿವ ಹೊತ್ತಿಗೆ ಅವರಿಲ್ಲ.

ಈ ಮೂರೂ ಕೃತಿಗಳೊಂದಿಗೆ ಕುರ್ತಕೋಟಿಯವರ ಸಂಬಂಧವಿದೆ. ೧೯೬೩ರ ಸುಮಾರಿಗೆ ಬೆಳಗಾವಿಯಲ್ಲಿದ್ದಾಗ ವಿಶ್ವವಿದ್ಯಾಲಯದ ಒಂದು ಸಣ್ಣ ಕೆಲಸಕ್ಕಾಗಿ ಧಾರವಾಡಕ್ಕೆ ಹೋಗಿದ್ದೆ. ಸ್ನೇಹಿತರು ಸಿಕ್ಕರೆ ಓದಬಹುದೆಂದು ಜೊತೆಗೆ ಹೊಸದಾಗಿ ಬರೆದ 'ಹೇಳತೇನ ಕೇಳ'ವನ್ನು ಬರೆದ ನೋಟಬುಕ್ಕನ್ನು ಒಯ್ದಿದ್ದೆ. ಅಲ್ಲಿಯ ತನಕ ನಾನು ಕುರ್ತಕೋಟಿಯವರನ್ನು ಕಂಡಿರಲಿಲ್ಲ. ಇದ್ದರೆ ನೋಡೋಣವೆಂದು ಅಟ್ಟಕ್ಕೆ ಹೋದೆ. ಕುರ್ತಕೋಟಿಯವರು ಕುಂತಿದ್ದರು. ಹಳೇಪರಿಚಿತರಂತೆ ಮುಖ ಅರಳಿಸಿ ಬರಮಾಡಿಕೊಂಡುದನ್ನು ನೋಡಿ ಬೆರಗಾದೆ. ಅವರಾಗಲೇ ಸಾಕ್ಷಿಯಲ್ಲಿ ಬಂದ ನನ್ನ ಪದ್ಯಗಳನ್ನ ಓದಿದ್ದರಾದ್ದರಿಂದ ಮಾತುಕತೆ ಸುಲಭವಾಯ್ತು ಜಿ.ಬಿ. ಪ್ರಕಾಶಕರ ಟೇಬಲ್ ಪಕ್ಕದ ಬಾಕಿನ ಮೇಲೆ ಇಡಿಯಾಗಿ ಒಬ್ಬರೇ ಆಕ್ರಮಿಸಿಕೊಂಡು ಸಿಟ್ಟುಮಾಡಿದ ಬೆಟ್ಟದ ಹಾಗೆ ಕುಂತಿದ್ದರು. ಕುರ್ತಕೋಟಿಯವರು ಪರಿಚಯಿಸಿದರೂ ಅವರ ದೊಡ್ಡ ಮುಖದ ತುಂಬ ಇದ್ದ ಗಡ್ಡದಲ್ಲಿ ಒಂದು ಬಿಳಿಗಡ್ಡವೂ ಅಲುಗಲಿಲ್ಲ. ಕುರ್ತಕೋಟಿಯವರೊಂದಿಗೆ ಪದ್ಯ ಓದಬೇಕೆಂದು ಬಹಳ ಆಸೆಯಾಗುತ್ತಿತ್ತು. ಆದರೆ ಭಯ. ಯುನಿವರ್ಸಿಟಿಯ ಕೆಲಸದ ಸಮಯವೂ ಆಯಿತಾದ್ದರಿಂದ 'ಹೇಳತೇನ ಕೇಳ' ಇದ್ದ ಕೈಚೀಲವನ್ನು ಅಲ್ಲೇ ಬಿಟ್ಟು ಹೋದೆ. ಸಂಜೆ ಸುಮಾರಿಗೆ ತಿರುಇ ಬಂದೆ. ಅಷ್ಟರಲ್ಲಿ ನನ್ನ ಜೀವನದ ಒಂದು ದೊಡ್ಡ ಪವಾಡ ಘಟಿಸಿಯಾಗಿತ್ತು. ಕುರ್ತಕೋಟಿಯವರು 'ಹೇಳತೇನ ಕೇಳ' ಓದಿದ್ದರು!

ಸಾಲದ್ದಕ್ಕೆ 'ಹೇಳತೇನ ಕೇಳ'ವನ್ನ ಜಿಬಿಯವರೆದುರು ಹಾಡುತ್ತಿದ್ದರು! ಕುರ್ತಕೋಟಿಯವರ ಹಾಡುಗಾರಿಕೆಯನ್ನು ಎಷ್ಟು ಜನ ಪುಣ್ಯಾತ್ಮರು ಕೇಳಿದ್ಯಾರೋ -ನನಗೆ ತಿಳಿಯದು. ಇಷ್ಟಂತೂ ನಿಜ ಅವರ ಸಂಗೀತ ಕಛೇರಿ ಒಂದು ಭಯಂಕರ ಅನುಭವ. ಅನುಭವಿಸಿದವರೇ ಬಲ್ಲರು ಆ ಸವಿಯ. ನಾನು ಬರೆದದ್ದು ದ್ರಾವಿಡ ಛಂದಸ್ಸಿನ ಅಂಶಗಣದಲ್ಲಿ, ಅವರೋ ಹಟಮಾರಿ ವಿಮರ್ಶಕ. ಅಂಶಗಣವನ್ನ ಮಾತ್ರಾಗಣಕ್ಕೆ ಬಗ್ಗಿಸಿ ಬಗ್ಗದಿದ್ದಲ್ಲಿ ಮುರಿದು, ಮುರಿದದ್ದನ್ನು ಜೋಡಿಸಿ, ಎಳೆಯಬಾರದ್ದನ್ನು ಎಳೆದೆಳದು ಹಾಡುತ್ತಿದ್ದರು! ಆಶ್ಚರ್ಯವೆಂದರೆ ಜೀಬಿ ಕಣ್ಣುಮುಚ್ಚಿ ತನ್ಮಯರಾಗಿ ಕೇಳುತ್ತಿದ್ದರು! ಅಥವಾ ನಿದ್ದೆ ಮಾಡುತ್ತಿದ್ದರು. ನನಗೆ ತಡೆಯಲಾಗಲಿಲ್ಲ. "ಸರ್ ಇದು ಹಿಂಗ ಹೇಳೂದಲ್ಲರೀ" ಅಂದೆ, ತಕ್ಷಣ ನಿಲ್ಲಿಸಿ ನನ್ನನ್ನ ದುರುಗುಟ್ಟಿ ನೋಡಿದರು. ಜಾತಿವಂತ ಸಂಗೀತಗಾರನಿಗಾದಂತೆ ರಸಭಂಗವಾಗಿ ಕೋಪದಲ್ಲಿ ಕುದಿಯುತ್ತ "ಮತ್ತ ಹೆಂಗ ಹೇಳಬೇಕೊ? ಅಂದ ತೋರ್ಸು" ಅಂದರು. 'ಹೇಳತೇನ ಕೇಳ'ಹಾಡಿದೆ. ಅಂದಾಜು ಒಂದು ತಾಸು ಹಾಡಿ ನಿಲ್ಲಿಸಿದಾಗ ಅಟ್ಟದ ತುಂಬ ಜನ ಸೇರಿದ್ದರು. ಕುರ್ತಕೋಟಿಯವರ ಕಣ್ಣು ಫಳಫಳ ಹೊಳೆಯುತ್ತಿದ್ದವು. ಬೆಟ್ಟ ಮಿದುವಾಗಿ ಜೀಬಿಯಾಗಿದ್ದರು. ಆದಿನ ಜೀಬಿ ಒಡ್ಡೋಲಗವನ್ನು ಗೆದ್ದುಬಿಟ್ಟಿದ್ದೆ. ಜೀಬಿ ಎಷ್ಟು ಗೆಲುವಾಗಿದ್ದರೆಂದರೆ-ಅಲ್ಲದ್ದವರಿಗೆಲ್ಲ ಚಹ ತರಿಸಿಕೊಟ್ಟರು. ಮುಂದೆ ಸದರಿ 'ಹೇಳತೇನ ಕೇಳ' ಕವಿತೆಯೇ ಋಷ್ಯಶೃಂಗವಾಗಿ ಹುಲಿಯ ನೆರಳಾಗಿ ಬೆಳೆಯಿತು. 'ಹೇಳತೇನ ಕೇಳ'ದ ಹುಲಿ ಹದ್ದಾಗಿ, ತಾಯಿ ವಿಶ್ವದ ತಾಯಾಗಿ ನನ್ನ ಅನೇಕ ಕೃತಿಗಳಿಗೆ ತಾಯಾದಳು. ಇದಕ್ಕೆಲ್ಲ ಕಾರಣ ಕುರ್ತಕೋಟಿಯವರು ನನ್ನ ಮೇಲೆ ಇಟ್ಟುಕೊಂಡಿದ್ದ ಪ್ರೀತಿ ಮತ್ತು ಅಭಿಮಾನಗಳೇ ಕಾರಣ ಎಂಬುದನ್ನು ಬೇರೆ ಹೇಳಬೇಕಿಲ್ಲ.

ಹುಲಿ ಹದ್ದಾಗಿ ಪರಿವರ್ತನ ಹೊಂದಿದ್ದುದಕ್ಕೆ ಒಂದೆರಡು ಮಾತು ಹೇಲಬೇಕೆನಿಸುತ್ತದೆ. ಸಾಮಾನ್ಯವಾಗಿ ಜಾನಪದ ನಂಬಿಕೆಗಳ್ಲಲಿ ಹುಲಿ ಅತ್ಯಂತ ಕ್ರೂರಿಯಾದ ಮೃಗ. ಹುಲಿ ಸವಾರಿ ಮಾಡುವುದು, ಹುಲಿ ಮತ್ತು ಹಸು ಒಂದೆಡೆ ಮೇಯುವುದು ಇತ್ಯಾದಿ ಕಲ್ಪನೆಗಳು ಅದರ ಕ್ರೌರ್ಯವನ್ನೆ ಹೇಳುತ್ತವೆ. ನಮ್ಮೂರು ಮಲೆನಾಡಿನ ಸೆರಗಿನ ಪ್ರದೇಶವಾದ್ದರಿಂದ ನಮ್ಮೂರಿಗೂ ಹುಲಿಗೂ ಸಂಬಂಧವಿಲ್ಲ. ಆದರೆ ಬ್ರಿಟಿಷರನ್ನು ಹುಲಿಗೆ ಹೋಲಿಸಿದ ನಾಕೈದು ಜನಪದ ಕಥೆಗಳು ನಮ್ಮಲ್ಲಿವೆ. ಟಿಪ್ಪು ಹುಲಿಯೊಂದಿಗೆ ಹೋರಾಡಿ ಕೊಂದನೆಂಬುದೂ ಅದೇ ಆಶಯದ ಕಥೆ. ಮುಂದೆ ಬ್ರಿಟಿಷರನ್ನು ಒಂದು ಕಾಲಲ್ಲಿ ಬಂದೂಕು, ಇನ್ನೊಂದರಲ್ಲಿ ತಕ್ಕಡಿ ಹಿಡಿದುಕೊಂಡು ಹ್ಯಾಟು ಹಾಕಿರುವ ಹದ್ದಿಗೆ ಹೋಲಿಸುವ ಜಾನಪದ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಪ್ರಚಾರಕ್ಕೆ ಬಂತು. ಹದ್ದು ಅಮೆರಿಕದ ರಾಷ್ಟ್ರೀಯ ಸಂಕೇತವಾಗಿರುವುದು ಅದರ ಅರ್ಥವಂತಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿದೆ.

ಈಗ ಈ ಕೃತಿಯನ್ನು ನಿಮ್ಮ ಕೈಯಲ್ಲಿರಿಸುತ್ತೇನೆ. ಮಿತ್ರರಾದ ಗಿರೀಶ್ ಕಾರ್ನಾಡರು ಹಿಂದೆ ಋಷ್ಯಶೃಂಗಕ್ಕೆ ಬರೆದ ಮುಖಪುಟವನ್ನು ಈ ಕೃತಿಗೂ ಹಾಕಿದ್ದಾರೆ. ಅವರಿಗೂ, ಎಳೆಯ ಆತ್ಮೀಯ ಮಿತ್ರ ಸಮೀರ ಜೋಶಿಗೂ ನನ್ನ ವಂದನೆಗಳು.

**ಚಂದ್ರಶೇಖರ ಕಂಬಾರ**

# ಹೇಳತೇನ ಕೇಳ

# ಮುನ್ನುಡಿ

ಶ್ರೀ ಚಂದ್ರಶೇಖರ ಕಂಬಾರರ ಈ ಎರಡನೆಯ ಕವನ ಸಂಕಲನ "ಹೇಳತೇನ ಕೇಳ" ಪ್ರಕಟವಾಗುತ್ತಿರುವುದು ತುಂಬ ಸಂತೋಷದ ಸಂಗತಿ. ನಿಜವಾದ ಕವಿಯೊಬ್ಬ ಸಂಕಲನದಿಂದ ಸಂಕಲನಕ್ಕೆ ಬೆಳೆದು ಬರುತ್ತಿರುವ ರೀತಿ ಕಾವ್ಯಾಭ್ಯಾಸಿಗಳಿಗೆ ಈ ಕವಿಯ ಭವಿಷ್ಯದ ಬಗ್ಗೆ ಭರವಸೆ ಹುಟ್ಟಿಸುವಂಥದು. ಇತ್ತೀಚೆಗೆ ಕನ್ನಡದಲ್ಲಿ ಕಾವ್ಯರಚನೆ ಮಾಡುತ್ತಿರುವ ತರುಣ ಕವಿಗಳಲ್ಲಿ ಶ್ರೀ ಕಂಬಾರರ ಕಾವ್ಯಶಕ್ತಿ ಅತ್ಯಂತ ಗಮನಾರ್ಹವಾದುದು. ತನ್ನ ಸುತ್ತು ಮುತ್ತಲೂ ಪರಂಪರಾಗತವಾಗಿ ಮೊಳಗುತ್ತ ಬಂದಿರುವ ಭಾಷೆಯನ್ನು ತನ್ನ ವಿಶಿಷ್ಟ ಉದ್ದೇಶಕ್ಕಾಗಿ

ಅದರ ಬೇರು ಹಿಡಿದು ಆಡಿಸುವ ಶಕ್ತಿ ಯಾವ ಕವಿಯಲ್ಲೇ ಆಗಲಿ ಇರಬೇಕಾದ ಮೂಲ ಲಕ್ಷಣ. ಅದು ಈ ಕವಿಯಲ್ಲಿ ನಿಚ್ಚಳವಾಗಿ ಇರುವುದು ಈ ಸಂಕಲನದ ಉದ್ದಕ್ಕೂ ಕಂಡು ಬರುತ್ತದೆ. ಉತ್ತರ ಕರ್ಣಾಟಕದ ದೇಸಿಯ ಮೇಲೆ ಇವರಿಗಿರುವ ಪ್ರಭುತ್ವ ಬೇಂದ್ರೆಯವರನ್ನು ಬಿಟ್ಟರೆ ಇನ್ನಾವ ಕವಿಯಲ್ಲೂ ಕಂಡು ಬರುವುದಿಲ್ಲ. ಆ ದೇಸಿಯ ಸೊಬಗು ಮೈಗೂಡಿರುವ ಈ ಕಾವ್ಯ ಸಹೃದಯರಿಗೆ ರಸದ ಸೆಲೆಯಾಗಿ ಪುಟಿಯುತ್ತಿದೆ. ಇಂಥ ಕವನಗಳನ್ನು ಬರೆಯ ಬಲ್ಲ, ಭಾಷೆಯನ್ನು ಈ ರೀತಿ ಬಳಸಬಲ್ಲ ಕವಿಯ ಬಗ್ಗೆ ಕಾವ್ಯ ಪ್ರಿಯರು ಅಭಿಮಾನ ಪಡುವುದು ಸಹಜ.

ಈ ಸಂಕಲನದುದ್ದಕ್ಕೂ ನಾವು ಗಮನಿಸಬೇಕಾದ್ದು ಈ ಕವಿಗೆ ಪರಿಸರದಿಂದ ಲಭಿಸಿದ ಜಾನಪದ ಭಾಷೆಗೂ ಈ ಕವಿಯ ಆಧುನಿಕ ಪ್ರಜ್ಞೆಗೂ ನಡೆಯುತ್ತಿರುವ ದ್ವಂದ್ವ. ಪರಂಪರೆಯಿಂದ ಬಂದ ಸಹಜ ಪ್ರಾಕೃತ ಭಾಷಾ ಸಂಪತ್ತಿಗೂ, ಇಂದು ಈಗ ಇಲ್ಲಿ ಜೀವಂತನಾಗಿದ್ದು ಹೊಸ ಪರಿವರ್ತನೆಗಳಿಗೆ ಜಾಗ್ರತನಾದ ಕವಿಯ ವಿಶಿಷ್ಟ ಅನುಭವಗಳಿಗೂ ನಡುವೆ ಇರುವ ಕಂದಕಕ್ಕೆ ಸೇತುವೆ ಕಟ್ಟುವ ಪ್ರಯತ್ನ ಉದ್ದಕ್ಕೂ ಕಂಡು ಬರುತ್ತದೆ. ಆದರೆ ಆ ಎರಡೂ ಒಂದೇ ಆಗಿ ಒಂದು ಇನ್ನೊಂದರ ಮಯಯಾಗುವ ಮಟ್ಟದಲ್ಲಿ ಸಮಗ್ರೀಕರಣ ಇನ್ನೂ ಸಿದ್ಧಿಸಬೇಕಾಗಿದೆ. ಇದು ಎಲ್ಲ ಕವಿಗಳೂ ಸಂಧಿಸಿ ಭಾಷೆಯನ್ನು ಒಗ್ಗಿಸಿಕೊಂಡು, ತನ್ನದೇ ಆದ ಅನುಭವ ಈ ಕಾಲದ್ದೂ ಆಗುವ ಹಾಗೆ. ಸಾರ್ವಕಾಲಿಕತೆಯನ್ನೂ ಧ್ವನಿಸುವ ಹಾಗೆ ಮಾಗುವ ಕೆಲಸ. ಬುದ್ಧಿಯ ಬೆಳವಣಿಗೆಯಿಂದ ಅನುಭವಕ್ಕೆ ವ್ಯಾಪಕತೆಯೂ ಆಳವೂ ಬಂದಾಗ ನಿಜವಾದ ಕವಿಗೆ ಆ ರೀತಿ ಪರಿಪಾಕಗೊಳ್ಳುವುದು ಸಾಧ್ಯವಾಗುವುದು.

ಈ ಸಂಕಲನದಲ್ಲಿ ಅತ್ಯಂತ ಗಮನಾರ್ಹವಾಗಿ ಅಭ್ಯಾಸಕ್ಕೆ ಅರ್ಹವಾದ ಪದ್ಯಗಳು 'ಹೋರಿ' ಮತ್ತು 'ಹೇಳತೇನ ಕೇಳ' ತನ್ನ ಆಧುನಿಕ ಪ್ರಜ್ಞೆಗೆ ವಿಶಿಷ್ಟವಾದ ವೈಯಕ್ತಿಕ ಅನುಭವಕ್ಕೆ ತಕ್ಕ ರೂಪವನ್ನು ಕೊಡುವ ಪ್ರಯತ್ನ 'ಹೋರಿ'ಯಲ್ಲಿ ಕಂಡು ಬರುತ್ತದೆ. ಅತ್ಯಂತ ಸಮರ್ಥವಾದ, ಮೂರ್ತವಾದ ಪ್ರತಿಮೆಗಳು ಉದ್ದಕ್ಕೂ ನಮ್ಮ ಮನಸ್ಸನ್ನು ತಟ್ಟುತ್ತವೆ. ನವ ತಾರುಣ್ಯದ ಉನ್ಮತ್ತ ವೃತ್ತಿಗೆ ತಕ್ಕ ಚಿತ್ರ ಇಲ್ಲಿ ಸುಸ್ಪಷ್ಟವಾಗಿ ಮೂಡಿದೆ. ಆದರೆ ಈ ಕವನದಲ್ಲಿ ಏಕಾಗ್ರತೆ ಸಿದ್ಧಿಸಿಲ್ಲ. ಬಹಳ ಹೇಳುವುದಕ್ಕೆ ಹೊರಟು ಯಾವುದಕ್ಕೂ ಸ್ಪಷ್ಟತೆ ಬಂದಿಲ್ಲ ಎನ್ನಿಸುತ್ತದೆ. ಆದ ಕಾರಣ ಕವಿ ಭಾಷೆಯನ್ನು ಬಳಸುವ ರೀತಿಯಿಂದ ನಮಗೆ ಎಷ್ಟು ಸಂತೋಷವಾಗುತ್ತದೋ ಅಷ್ಟು ಸಂತೋಷವನ್ನು ಕೊಡಲು ಸಮರ್ಥವಾದ ಸಮಗ್ರವಾದ ಅನುಭವ ಅದರಲ್ಲಿ ಮೂಡುವುದಿಲ್ಲ. 'ಹೇಳತೇನ ಕೇಳ' ಜನಪದ ಭಾಷೆಯಲ್ಲಿ ಲಾವಣಿಗಳ ಶೈಲಿಯಲ್ಲಿ ಬರೆದ ರಸಭರಿತವಾದ ದೀರ್ಘ ಕವನ. ಉತ್ತರ ಕರ್ಣಾಟಕದ ಒಂದು ಹಳ್ಳಿಯ, ಅಲ್ಲಿಯ ಜನಜೀವನದ ಸಮಗ್ರ ಚಿತ್ರ ಕಣ್ಣಿಗೆ ಕಟ್ಟುವ ಹಾಗೆ ಆ ಕವನದಲ್ಲಿ ರೂಪುಗೊಂಡಿದೆ. ಕವಿ ತನ್ನ ಹುಟ್ಟು ನೆಲವನ್ನು ಎಷ್ಟು ಆಳವಾಗಿ ಹೀರಿದ್ದಾರೆ ಎನ್ನುವುದು ಪ್ರತಿ ಸಾಲಿನಲ್ಲೂ ವ್ಯಕ್ತವಾಗುತ್ತದೆ. ಕವನದ ಉದ್ದಕ್ಕೂ ಈ ಕವಿ ಒಂದು ಜಾನಪದ ಕಥೆಯ ಮೂಲಕ ಆಧುನಿಕ ಜೀವನಕ್ಕೊಂದು ಪ್ರತಿಮೆಯನ್ನು ಹುಡುಕುತ್ತಿದ್ದಾರೆ ಎನ್ನುವುದು ತಿಳಿಯುತ್ತದೆ. ಆದರೆ ಕವನದ ಇಡೀ ವಾತಾವರಣವೇ ಕವಿಯ ಆಧುನಿಕ ಅನುಭವಕ್ಕೆ ಪ್ರತಿ ಗಾಮಿಯಾಗಿ ನಿಲ್ಲುವುದರಿಂದ ಸಾರ್ಥಕ ಪ್ರತಿಮೆ ಮೂಡುವುದಿಲ್ಲ. ಕವನ ಒಂದು ಹೃದ್ಯವಾದ ಜಾನಪದ ಕಥೆಯಾಗಿ ಮಾತ್ರ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತದೆ. ಆದರೆ ಈ ಕವನದಲ್ಲಿ ಕವಿ ಅನುಭವಿಸಿದರುವ ಸೋಲು ಸಾರ್ಥಕವಾದದ್ದು, ಮುಂದಿನ ಗೆಲುವಿಗೆ ಪೂರ್ವಭಾವಿಯಾಗಿ ನಡೆದದ್ದು ಎನ್ನಿಸುತ್ತದೆ.

ಚಂದ್ರಶೇಖರ ಕಂಬಾರರಿಂದ ಕನ್ನಡ ಕಾವ್ಯಲೋಕ ಬಹಳವನ್ನು ನಿರೀಕ್ಷಿಸುತ್ತದೆ. ಅಷ್ಟನ್ನು ಕೊಡುವ ಶಕ್ತಿ ಅವರಿಗಿದೆ. ಬೆಳೆಯುತ್ತಿರುವ ಅವರ ಕಾವ್ಯಶಕ್ತಿ ಸಾರ್ಥಕ ಪರಿಣತಿಯನ್ನು ಶೀಘ್ರವಾಗಿ ಗಳಿಸಲಿ ಎಂದು ಹಾರೈಸುತ್ತೇನೆ.

**ಎಂ.ಗೋಪಾಲಕೃಷ್ಣ ಅಡಿಗ**

**ಮೈಸೂರು**

**೩-೬-೧೯೬೪**

(ಮೊದಲ ಆವೃತ್ತಿಯಿಂದ)

# ಹೇಳತೇನ ಕೇಳ (೧-೧೦)

೧

ಮೊದಲೀಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ.
ಕಲಿಯುಗದೊಳಗಿನ ಕತೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನಾ.

ಕೂಡಿಕುಂತ ದೈವಕ್ಕ ಕೈಮುಗದ ಹೇಳತೇನು,
ಮರೆಯೀರಿ ಮುಂದಬಂದ್ರ ಚೂರ ಕಸರಾ.
ಯಪ್ಪಾ ಸ್ವಾಮಿ ಗುರುದೇವ ತಪ್ಪಮರತ ಒಪ್ಪಕೂಡ
ನೆಪ್ಪಿನ್ಯಾಗ ಇಡುವಾಂಗ ಸರ್ವರಾ.

ಏ ಎವ್ವಾ ಸರಸೋತಿ 'ತಾಳಕ್ಕ ನಲಿವಾಕಿ'
ನಾಲೀಗಕ್ಷರ ಕಲಿಸ ಐದಾರಾ.
ಹಿರಿಯರ ಪಿರತೀಗಿ ಸರಿದೊರೆ ಸಮನಿಲ್ಲ;
ಕೇಳಾವರ ಮ್ಯಾಲಿರಲಿ ನಿರಂತರಾ.

ಜಂಬೂದ್ವೀಪದ ಪೈಕಿ ಮ್ಯಾಗಡೆ ಮಲೆನಾಡ
ಸೂಸಿ ಹರಿದಾಳಲ್ಲಿ ಘಟಪ್ರಭಾ.
ಆ ದಂಡಿ ಆರ್ಯಾಣ, ಈ ದಂಡಿ ಶಿವಪೂರ,
ಕೆಂಪು ಹಂಚಿನ ಊರು ಬಲು ಶೋಭಾ.

ಗೌಡ ಶ್ರೀ ಭರತೇಶ, ಗೌಡ್ತಿ ಲಕ್ಷ್ಮೀದೇವಿ,
ಎಳಕ ವಯಾದೊಬ್ಬ ಗಂಡ ಮಗಾ.
ತೂಗು ತೊಟ್ಟಿಲವಾಗಿ, ಬೆಳ್ಳಿ ಬಟ್ಟಲವಾಗಿ,
ಕೈಕಾಲ ಮುರದ ಬಿದ್ದ ಲಕ್ಷ್ಮೀ ಜಾಗ.

ಕತಿ | ಹೇಳತೇವ್ರಿ ಮುಂದಿಂದಾ
ಇರು | ಗುರುವೆ ನಾಲಗೆಯ ಹಿಂದಾ
ಆಗ | ದಿರಲಿ ಒಂದು ಸಹ ಕುಂದಾ
ನಾ| ನಿಮ್ಮ ಕರುಣದ ಕಂದಾ

ಗೌಡ್ತಿ ಬ್ಯಾನೀ ತಿಂದ ಗಂಡ ಹಡದ, ಗಂಗಾಳ ಹೊಡದ,
ಐದೇರೆಲ್ಲ ಜೋ ಅಂದ ಕತಿ ನಿವಳಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧

ಊರಾಗೂರ ಅದರಾಗ ಇನ್ಯಾವೂರ
ಚಂದ, ಶಿವಾಪೂರ ರಾಜೇಕ.
ಮಳೆಯಾದ ಎರಿಯೊಳಗ ಬೆಳೆದ ಕರಿಕಿಯ ಹಾಂಗ
ಊರು ಹಬ್ಯಽದ ಮೂಡಪಡುವಣಕ.

ಹಸರುಶಾಂತಿ ಪಸರೀಸಿ ಮೈಚಾಚಿ ಮಲಗ್ಯಽದ
ನದಿಯ ಎದಯಾಗನು ಅದೆ ನೆರಳಾ
ಹೊಳೆಯ ದಂಡೆಯ ಆಲ ನೂರಾರು ಪಾರಂಬಿ,
ಬುಡದಾಗ ಕರ್ರೆವ್ವ ಊರ್ಯಾಳ್ತಳಾ.

ನೂರು ಬಂಡಿಗೆ ಇಂಬುಗೊಡುವಷ್ಟು ನೆರಳಿತ್ತು;
ಯಾರ್ಯಾರು ಸುಳಿದಿಲ್ಲ ಬಡ್ಡೀತನಕ.
ಉದಯಾಸ್ತಗಳ ನಡಕ, ಹೊಳಿಗುಡ್ಡ ಎಡಬಲಕ,
ಜಗದಾಗಿಂಥಾದ್ದಿಲ್ಲ ಬಹುತೇಕ.

ಊರ ದನಗಳನೆಲ್ಲ ಇಲ್ಲಿ ಹಾರಸತಾರ,
ಕೂಡತಾರೆ ಹಿರಿಯರು ಯಾವಾಗರೆ.
ಈ ನೆರಳ ತಂಪನ್ನ ಅದಕಿದಳು ಬಳಸುವರು
ಎಳಿಗೂಸು ನಗುವುದು ಅದರಾಗರೆ.

ನದಿಯ ತೆರೆಗಳ ಮ್ಯಾಲೆ ಬಿಸಲಿಂದ ಬರಬರದ
ಈ ತಂಪ ಕಳಿಸ್ಯಾರು ದಿಗ್ದೇಶಕ.
ಪೂಜಾರಿಗಳ ಬಿಟ್ಟು ಇನ್ಯಾರು ನೋಡಿಲ್ಲ
ಊರಕರ್ರೆವ್ವನ ಕರೀಮಕಾ.

ಮಾ | ಡಿದನು ಹರಿಯಿಲ್ಲ ಬೋಧಾ
ಬೆಳೆ | ದಾರು ಇಲ್ಲೆ ವೇದಾ

ಈ | ನೆರಳ ತಂಪಿನ ಹಸಾದಾ
ಕೊನೆ | ಕೊನೆಗೆ ಬುದ್ಧ ಏನಾದ?

ಈ ತಂಪು ಸತ್ಯದಲ್ಲಿ ಈ ಬದುಕ ಬಣ್ಣಿಸಿದ
ಚೆನ್ನsರ ನೆನಿ ತಮ್ಮ ದಿನಾದಿನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೨

ಹುಡಿಗೇರ ಹುಸಿ ಸಿಟ್ಟಿನ್ಹಾಂಗ ಓಣಿಯ ತಿರುವು.
ತೆರೆದ ಕಣ್ಣುಗಳಣ್ಣ ಮನಿಬಾಗಿಲಾ;
ಮಣ್ಣಾಗ ಆಡೂವ ಚೆಣ್ಣರ ಗಿಣಿ ಹಿಂಡ
ಯಾವತ್ತು ಊರಾಗ ಕಲಲಲಲಾ.

ಸೂರ್ಯಾ ಕರಗಿ ನೀರಾಗಿ ನಾಡೀ ಒಳಗ ಹರಿದಾನು
ಎಳಿ ಹರೆ ಬಂದಾಗ ಹುಡಗೋರಿಗಿ
ಜೋಡೆಮ್ಮಿ ಹಾಲಕುಡದದ ಸೆಡ್ಡುಹೊಡೆದ, ಕುಸ್ತಿಹಿಡದ,
ಗರಡಿಮನೆ ಕಾಣಸ್ತೈತಿ ಓಣಿ ತುದಿಗಿ.

ಚಿಗುರು ಮೊಲೆಗಳ ಕಂಡು ಚಿಗುರು ಚಿಗುರಲೆ ಇಲ್ಲ
ಒಮ್ಮಿಗಿಲೆ ಎಲೆಯಾಯ್ತು ಗಿಡಗಿಡಕ.
ಚೈತ್ರ ಫಾಲ್ಗುಣಗಳನು ಎದೆಯಾಗ ಹಿಡಿದಾರು
ಹೂವಾಗಿ ಸೋರೀತ ತಟತಟಕ.

ಯಾರೇನ ಆಡಿದರು ಗಾದಿ ನಾಣ್ಣುಡಿಯಾಗಿ
ವಾಡಿಕೆಯಾದಾವು ನಾಡೊಳಗ
ಕರಿಯಜ್ಜ ಹಾಕೀದ ಗೆರಿಗೋಳ ಯಾರ್ಯಾರು
ದಾಟಿಲ್ಲ ಹದಿನಾಕು ಹಳ್ಳಿಯೊಳಗ.

ಬೇಡಿ ಬಂದಾನ ಗೌಡ ಪಡದ ಬಂದಾರ ಜನಾ
ಕೊರತಿಲ್ಲ ಹೊಗಳುವ ಕವಿಜನಕ.
ಮನಿಮನಿಗಿ ನಡುವಡ್ಡ ಗೆರೆಯಿಲ್ಲ, ಎರಡಿಲ್ಲ,
ಕಾಣಿ ತಕ್ಕಡಿಗಿಲ್ಲ. ಸಮತೂಕ.

ಮರ | ತಾನ ಕೊಟ್ಟ ಭಗವಾನಾ
ಕಡಿ | ಮಿಲ್ಲ ಅವರಿಗೇನೇನಾ
ಹೊಲ | ದಾಗ ಕಾಳ ಭರಪೂರಾ
ದರ | ದಾಗ ಇಲ್ಲ ಹೇರಪೇರಾ

ಪಾರಂಬಿ ಕರ್ರೆವ್ವ ಗುಡ್ಡದ ನಿರವಾಣಿ
ಈ ಊರ ಕಡೆಗಿರಲಿ ನಿಮ್ಮ ಧ್ಯಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ||ಗೀ||

೪

ಇನ್ನ ಮುಂದಿನ ಕತಿ ಹ್ಯಾಂಗಾರೆ ಹೇಳಲಿ?
ಎದಿಯಾಗ ಆಗತದ ಕಸವೀಸಿ.
ಯೋಳಪಟ್ಟಿ ಹುಲಿಬಂದು ಯೋಳೆಂಟು ದನತಿಂದು
ಸುದ್ದಿ ಕೇಳಿ ಗೌಡ ಹೊಂಟಾ ಬ್ಯಾಟೀಗಿ.

ಗೌಡ್ತಿ ಲಕ್ಷ್ಮೀದೇವಿ ಸೆರಗೊಡ್ಡಿ ಬೇಡತಾಳ
ಹೋಗಬ್ಯಾಡ್ರಿ ಬಿದ್ದೀತೆನಗ ಕೆಟ್ಟಕನಸಾ.
ಖುಶೀಲಿಂದ ಸರಸವಾಡಿ, ಗೌಡಾ ನೀವು ಮಲಗಿದಾಗ,
ಮಂಚದ ಕಾಲ ಮುರಧಾಂಗಾತ ಕಸಕ್ಕನ.

ಅಬಲೆ ಅಂಜಿದಳೆಂದು ದಾದುಮಾಡದೆ ಹೊಂಟ;
ವಾದ್ಯದ ದನಿ ತುಂಬಿ ದಿಕ್ಕದಿಶಾ.
ಬೆಲ್ಲದ ಬೆಂಟೀಗಿ ಇರುವಿ ಮುತ್ತಿದ ಹಾಂಗ
ಜನಸೇರಿ ಹರಸ್ಯಾರು ತುಂಬಿ ಮನಸಾ.

ಇದೆ ಕೊನೆಯ ಸಲದಂತೆ ಮಳಮಳ ಮಕನೋಡಿ
ಎದಿಯಾಗ ಹಿಡಿದಾರು ಆ ರೂಪವ.
ಹತ್ತು ದೇವರಿಗೆಲ್ಲ ಹರಕೀಯ ಹೊತ್ತಾರು,
ತೇರ ಎಳಸತೇವ ಕಾಯೆ ಕರ್ರೆವ್ವ.

ಬ್ಯಾಟಿಗಾರರ ಕುದರಿ ರಥದ ಧೂಳಿನೊಳಗ
ಮುಳುಗಿ ಹೋದಾನ ಗೌಡ ಮುಂದಮುಂದಕ.

ಹುಬ್ಬಗೈಯ ಹಚ್ಚಿಕೊಂಡು ಏರನೇರಿ ನೋಡತಾರ
ಬೆಂಕಿ ಹೊತ್ತಿಸಿಧಾಂಗ ಬಿಸಲ ಬಿದ್ದೀತ.

ಹೊಳಿ | ಯಾಗ ತೆರಿಗಳಿರಲಿಲ್ಲ
ಆ | ಲsದ ಗಿಡದ ತಂಪಿಲ್ಲ
ಓ | ಣ್ಯಾಗ ಎಲ್ಲ ಬಣ ಬಣಾ
ಸುಡ | ಗಾಡಧಾಂಗ ರಣ ರಣಾ

ಗುಡ್ಡದ ಕಡ್ಡಕ ಬೆಂಕಿ ಹಚ್ಚಿದರ್ಯಾರೊ,
ಹೊಗಿ ತುಂಬಿ ನೋಡ್ಯಾರು ಎಲ್ಲಾ ಜನಾ.
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೨

ಪಡುವಣದ ಮೂಗಿನ ಮುತ್ತುದುರಿ ಸಂಜ್ಯಾಯ್ತು,
ಹಿಂದಿರುಗಿ ಬಂದಾವು ದನಾ ಕರಾ.
ಈದೊಡನೆ ಕರುಸತ್ತು, ಎಮ್ಮಿ ಕೆರೆಯೊಳಗೊದರಿ
ಕ್ಷಿತಿಜ ಬಾನಿನ ತುಂಬ ಹಸಿನೆತ್ತರಾ.

ಕಂಡ ಹಗಲಿನ ಸತ್ಯ ಸಂಶಯವಾದೀತು
ಸಂಧಿಪ್ರಕಾಶದ ಸಂಧಿನೊಳಗ.
ಕನಸಿನ ಕರಿಯ ಚೋರನ ಹಾಂಗ ಗೌಡ ಬಂದ,
ಊದಿ ಬಾರಿಸಿ ಏನೇನಿಲ್ಲ ಬ್ಯಾಟಿ ಬಳಗ.

ಸಿಡ್ಲ ಹೊಡೆದು ಹಾಳಬಿದ್ದ ಬಾವೀತನಕ ತಾನs ಹೋಗಿ
ಏನೋ ಚೆಲ್ಲಿ ತಿರುಗಿ ಬಂದಾ ನಗನಗತ.
ತೊಟ್ಟಿಲೊಳಗಿನ ಕೂಸು ಚಿಟ್ಟಂತ ಚೀರೀತ-
ಊದು ಹಾಕಿದ ಹೊಗಿ ಓಣಿ ತುಂಬೀತ.

ಊದ ಹಾಕಿ ಐದೇರು ಆರತಿಯ ಬೆಳಗ್ಯಾರು
ಖುಶಿ ಬಾಳ ಗೌಡ್ತೀಗಿ ಒಳಗೊಳಗ.
ಮಗ ಬಂದು ಕೇಳ್ಯಾನು: ಹುಲಿ ಎಲ್ಲಿ? -ಸತ್ತೀತ?
ಇನ್ನ ಮ್ಯಾಲ ಚಿಂತಿಲ್ಲ ಏಟು ನನಗ.

ಪರಭಾರೆ ಹಾಸ್ಗಿ ಒಳಗ ಮುಟ್ಟಿಬಿಟ್ಟು ಹೇಳ್ತಾನ:
ನಿನ್ನ ತಾಳಿ ಗಟ್ಟಿಮುಟ್ಟ ಉಳಿದು ಬಂದೇನ.
ಹುಲಿಯಲ್ಲ ಅಂವ ದೊಡ್ಡ ರಾಕ್ಷೇಸ, ಮಾಯಾವಿ,
ಕೊಂದ ಹಾಳ ಬಾಂವಿ ತಳಾ ಕಾಣ್ಸಿ ಬಂದೇನ

ಹಣಕಿ | ಹಾಕಬಾರ್ದು ಯಾರ್ಯಾರಾ
ಹಾ | ಕಿದರ ಗೋರಿ ತಯ್ಯಾರಾ
ಊ | ರಾಗ ಹೊಡಸ ಡಂಗೂರಾ
ಯಾ | ವತ್ತು ಇರಲಿ ಖಬರಾ

ನಿನ್ನ ಮಗ ಹಣಿಕಿ ಹಾಕಿದಂದು ನಾನು ಹಲಿಗಿ ಹೊಡಿಸಿ
ಹಾದೀ ಹಿಡಿದೀನಂತ ಗಟ್ಟಿ ತಿಳಕೊ ರಮಣಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ||ಗೀ||

೬

ಬೀಸು ಜ್ವಾಳ ಆದಾವು, ನಮ ಹಾಡು ಮುಗಿದಾವು,
ಹಕ್ಕಿ ಚಿಲಿಪಿಲಿ ಚೀರಿ ಬೆಳಗಾಯಿತ.
ಝುಮು ಝುಮು ನಸಕಿನ್ಯಾಗ ಆಲsದ ಬಡ್ಯಾಗ
ಕರಿಯಜ್ಜ ಕೂತಾನ ಕೆಮ್ಮಿಕೋತ.

ಗೊಂಡೀಯ ಲಂಗೋಟಿ, ಕಸಿಯಂಗಿ ತೊಟ್ಟಾನ,
ಮುದಿಸೂಳಿ ಬಂದಾಳ ಹೊಳಿನೀರಿಗಿ.
ಕೈಬೀಸಿ ಕುಮಡಿ ಹೊಳಿಸಿ ಕಣ್ಣ ಹಾರ್ಸಿ ನಡದಾಳ
ನೆನನೆನದ ನಗತಾನ ತಿರುತಿರುಗಿ.

ಇಳಿದ ಪಾರಂಬೀಗಿ ಗೊಡ್ಡೆಮ್ಮಿ ಮೈತಿಕ್ಕಿ
ಸೆಗಣಿ ಹಾಕಿದ ನಾತ ಗೊಮ್ಮೆಂದಿತ.
ದಿನಧಾಂಗ ರಾಮಗೊಂಡ ಚರಿಗಿ ಹಿಡಿದ ಬಂದಾನು,
ಕೂಡ್ರತಾನು ಮುದುಕನ ಹಂತ್ಯಾಕ.

ನಾತಕ್ಕ ಹೇಸಿ ತುಸು ಮುಂದ ಕೂಡ್ರೂನಂದ;
ಅಜ್ಜ ಕೀಳಲೆ ಇಲ್ಲ ತನ್ನ ತಳ.

ಎಣ್ಣೆ ಇಲ್ಲದೆ ಉರಿದ ತನ್ನ ದಿನಮಾನಗಳ
ಹೇಳತಾನ, ಕ್ವಾರಿಮೀಸಿ ಕೊರಕೊರದ.

ಅಷ್ಟರಾಗ ಸಮಗಾರ ಬಸ್ಸಿಕೂಸನು ತಂದು
ಕರ್ರೆವ್ವಗಿದಿರಾಗ ಇಟ್ವಾಳಡ್ಡ:
ರಾತ್ರಿ ಚೆಟ್ಟನೆ ಚೀರಿ ಮಲಿಮರತ ಮಲಗೇತಿ
ತಾಯಿ ನಿನ್ನ ವರ್ಮಬ್ಯಾಡ ನಮಗೂಡ.

ಕೇಳಿ | ಬಂತ ಹೊಡೆದ ಡಂಗೂರಾ
ಹಾಳ | ಬಾಂವ್ಗಿ ಹೋಗಬ್ಯಾಡ್ರಿ ಯಾರಾ
ಹಣಿಕಿ | ಹಾಕಬಾರ್ದು ಯಾರ್ಯಾರಾ
ಯಾ | ವತ್ತು ಇರಲಿ ಖಬರಾ

ತಪ್ಪಿಗಿಪ್ಪಿ ಹಣಿಕಿದರ ದಂಡಾಶಿಕ್ಷಾ ಮಾಡತಾರು
ನೆಪ್ಪಿನ್ಯಾಗ ಇಟಗೊಳ್ರಿ ಎಲ್ಲಾ ಜನಾ.
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೬

ಹೋರೀಯ ಕೊಂಬಿನ್ಹಾಂಗ ಮಕ ಮೀಸಿ ಮೂಡ್ಯಾವ
ಎಳಕ ಯೌವನ ಬಂದು ರಾಮಗೊಂಡಗ.
ಹಿಂಡ ದನಗೋಳೊಳಗ ದ್ಯಾಮನ್ನ ಕ್ವಾಣಧಾಂಗ
ಅವನಿದ್ದ ವಾರಿಗಿಯವರೊಳಗ.

ಅವನ ಕೆನ್ನಿಯ ಒಳಗ ಸೂರ್ಯದೇವ ಹೊಳದಾನು
ಕಣ್ಣಾಗ ಹುಣ್ಣೀಮಿ ಚಂದ್ರಾಮರಾ
ಒಗರೇನು, ಹೊಗರೇನು, ಹರೆಯ ಗರುವಿಕೆಯೇನು
ಬಾಯಿ ಬಾಯಿ ಬಿಡತಾವ ಹುಡಿಗೇರಾ.

ಹಸನಾದ ಬಾಲೇರು ಹಂತೇಲಿ ಬಂದ ಬಂದ,
ಒಡಪ ಹೇಳಿ ಓಡತಾರ ನಗನಗತ.
ಸರಿಸರಿ ಸಖಿಯರು ಮಾರೀಗಿ ನೀರಗೊಜ್ಜಿ
ಕಾಡತಾರ ಪರಿ ಪರಿ ಅಡ್ಡನಿಂತಾ.

ತುಂಬೀದ ಹೊಳೆಯಾಗ ತೆರಿ ಹೊಡದದ ಈಸಾಂವಾ,
ಗುಡಿಯ ಮುಂದಿನ ಗುಂಡ ಹೊತ್ತ ಒಗದಾಂವಾ.
ಮನ್ನಿ ಶಿವರಾತ್ರ್ಯಾಗ ಹತ್ತು ಮಂದಿಯ ಕೂಡ
ಕುಸ್ತಿ ಹಿಡಿದ, ಎರಿ ಮಣ್ಣ ಮುಕ್ಕಿಸಿದಾಂವಾ.

ಊರೀನ ಹುಡುಗೋರು ದೊಡ್ಡಾಟ ಬಿಟಕೊಟ್ಟು
ನಾಟಕವಾಡ್ಯಾರು ಪಟ್ಟಪೈಲೇಕ.
ಹುಳಮೇದ ಬನಧಾಂಗ ಒಣಗ್ಯಾವ ಕುಣಿದಾವ;
ನೋಡಲಿಲ್ಲ ರಾಮಗೊಂಡ, ಕರಿಮುದಕ.

ಅವನ | ಮ್ಯಾಲೆ ಮುದುಕ ಭಾಳ ಪ್ರೀತಿ
ಕ | ಣ್ಣಾಗ ತುಂಬಿ ಅಕ್ಕರತಿ
ನೀ | ನಮ್ಮ ಊರ ಸರದಾರಾ
ನನ | ಗಿಲ್ಲ ಎದರ ದರಕಾರಾ

ಊರ ಹೊರಗ ಹೋಗುವಾಗ ತಿರುಗಿ ನೋಡ್ಯಾನ ಗೌಡ
ಹಾವಿನ ಹುತ್ತಿನ್ಹಾಂಗ ಮೂಗ ಮುರದಾನ.
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೮

ಚಂದ್ರನ ಮುರಿದ್ಯಾರೊ ನೀರಿಗೆ ಎಸೆದಾರ
ಚೂರು ಚೂರು ಚೀರ್ಯಾವ ನದಿಯೊಳಗೆ
ಬಸರಿಯರ ಕನಸಿನಲಿ ತಲೆಬುರುಡೆ ಹಲ್ಕಿರಿದು
ಹೂ ಹೆರುವ ಗಿಡಬಳ್ಳಿ ಒಣಗ್ಯಾವ

ಹೋರಿಗsಳು ಎತ್ತಾಗಿ ನೊಗ ಎತ್ತಲಾರದೆ
ಗದ್ದೆಯಲಿ ಬಿದ್ದಾವ ಬಾಲ ಮುದುರಿ
ಪಾರಂಬಿಕರ್ರೆವ್ವನ ಕೈ ಭಿನ್ನವಾದಾವು
ಮಾಯವಾಗದ ಗಾಯವಾದಾವರಿ.

ಹೊತ್ತೇರಿ ಎದ್ದ ಗೌಡ ಬಡ್ಡೀಗಿ ಹಣ ಕೊಟ್ಟು
ಕೂಡ್ಸ್ಯಾನ ಚಾವಡ್ಯಾಗ ದೊಡ್ಡಸಭಾ.

ಹಸಮಕ್ಕ ಸಲುವಾಗಿ ಗರಡೀಯ ಮನಿ ಕೆಡಿವಿ
ಹೊಸ ಸಾಲಿ ಕಟ್ಟಿಸೋಣ, -ಬಲೆ ಶೋಭಾ

ಊರಂತ ಊರೆಲ್ಲ ಹೌದಂತ ತಲಿದೂಗಿ
ಬಾಯಿತುಂಬ ಹೊಗಳ್ಯಾರ ಗೌಡಪ್ಪನ
ಮನೆಗೊಂದು ಹೆಣ್ಣಾಳು ಗಂಡಾಳು ಬಂದಾವು,
ಲಗುಮಾಡಿ ಮುಗೀಬೇಕ, ಮೂರಽದಿನಾ.

ಶುಕ್ರಾರ ಸುರುವಾಗಿ ಆಯ್ತಾರ ತಯ್ಯಾರ
ಬಿರದೀತ ಸ್ವಾಮಾರ ಬಡ್ಯಾಗನ.
ಆಲಽದ ಬೇರ ಬಂದು ತೊಡರ್ಯಾವು ತೊಡಕ್ಯಾವು;
ಮೊದಲದನ ಎಲ್ಲಾರು ಕಡಿಯೋಣ.

ಚಾಲಿ | ವರದ ಮುದುಕ ಬೇಡಿಕೊಂಡಾ
ಕೈ | ಮುಗಿದು ಅಡ್ಡ ನಿಂತಕೊಂಡಾ
ಸರಿ | ಸರಿಸಿ ಗಿಡವ ಕಡಿದಾರ
ಸಾ | ಲೀಯ ಪೂಜಿ ಮಾಡ್ಯಾರ

ತಾಸೇ ಹಲಗಿ ಡೊಳ್ಳ ಗರ್ದೀಲೆ ಬಾರಿಸ್ಯಾರ;
ಕರಿಯಜ್ಜ ತೀರಿಕೊಂಡ ಅದಽದಿನಾ.
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರದ ಮನಾ||ಗೀ||

೬

ಬಾಂದದ ಮ್ಯಾಗಿನ ಕೆಂದ ಗೋವಿನ ಕರಾ
ಬಿಸಲೀಗಿ ಬಾಯಿ ಬಾಯಿ ಬಿಡತಽದರಿ.
ಬಿಸಲ ಹಳದಿಯ ನಡುವ ಕರಿ ನೆರಳ ಚೆಲ್ಲೂವ
ಹಸರ ನಂಬಿಗೆಯನ್ನು ಕಡದಾರರಿ.

ರಾಮ ಮುದುಕನ ನೆನೆದು ಹಾಡಿ ಅಳಬೇಕಂದ್ರ
ಹನಿ ನೀರು ಬರಲಿಲ್ಲ ಕಣ್ಣಾಗ.
ಹಡೆದವನ ಬಯ್ಯುದಕ ಬಾಯಽರೆ ತಗದಾನ
ಅಕ್ಷರ ಹಿಡೀಲಿಲ್ಲ ಶಬ್ದದೊಳಗೆ.

ಕ್ವಾಣೀ ಬಾಗಿಲ ಮುಚ್ಚಿ ಕುಂತ ಧ್ಯಾನಿಸತಾನ,
ಉಸುರರೆ ಹಾಕತಾನ ಮೈಲುದ್ಧ.
ಕತ್ತಲೆಯ ಗವಿಯೊಳಗ ಕೇಂದ್ರ ತಪ್ಪಿದ ಭ್ರಾಂತಿ
ಉರುಳ್ಯಾವ ಇಳಕಲಕಡ್ಡಬಿದ್ದಾ.

ಅದನಿದನು ಬ್ಯಾರೇ ಮಾಡಿ ವರ್ಣಿಸುವ ವಿವರಿಸುವ
ಬೆಳಕಿಲ್ಲ, ಬಲ್ಲಿರೇನ ನೀವ್ಯಾರರೇ?
ದೀವೀಗಿ ತರಲಾಕ ದೇವರ ಮನಿ ಹೊಕ್ಕ,
ಮನದಾಗ ಖುಶಿಯಾಗಿ ಕುಂತಾನರಿ.

ಅವರಪ್ಪ ಬಂದವನು 'ಭಕ್ತಿ ನಾಟಕ ಸಾಕು'
ಹಿಂಗಂದು ಚೆಂಡೀಯ ಚಿವುಟ್ಯಾನರಿ
ನಾಚಿ ಕೋಣೆಗೆ ಬಂದು ನೋಡತಾನು, -ಕರಿಯಜ್ಜ
ಮೀಸ್ಯಾಗ ಮುಸಿ ಮುಸಿ ನಗತಾನರಿ.

ಚಿ | ಟ್ಟಂತ ಚೀರಿ ಬಿದ್ದಾನು
ಬೇ | ಖಬರ ಆಗಿ ಅಂದಾನು
ಪಾ | ರಂಬಿ ಅಂತ ಕೂಗ್ಯಾನು
ಹಡೆ | ದವನ ಬಳಿಗೆ ಕರದಾನು

ಕರ್ರೆವ್ವನಾಣಿ ನೀನಲ್ಲ-ಇನ್ನೇನೇನೊ
ಬಡಬಡಿಸಿ, ಹೊಸ್ತಿಲಕ ತಲಿ ಹೊಡೆದಾನ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೧೦

# ಹೇಳತೇನ ಕೇಳ (೧೧-೨೧)

ಕರಿಯ ಅಜ್ಜನ ಭೂತ ರಾಮಗೊಂಡನ ಹಿಡಿದ
ಸುದ್ದಿ ಹಬ್ಬಿತು ಊರ ಕಡೀತನಕ;
ಹೊರಕಡಿಗೆ ಹೋದ ಹೆಣ್ಣಿಗೆ ತಿಳಿದು ಹೊಳಿಮ್ಯಾಗ
ಬರ ಬರದ ಕಳಿಸ್ಯಾಳು ದಿಗ್ದೇಶಕ.

ಬಾಗೀಲ ಹಾಕ್ಯಾನು, ಅಗಳೀಯ ಜಡಿದಾನು,
ಕಳಕೊಂಡು ಹುಡಿಕ್ಯಾನು ಒಳಹೊರಗು.
ಉಗುರು ತಾಕಿದ ಹೇನಿನಂತೆ ಅಡಗುವ ಹೆಣ್ಣು,
ಮರ ಮರಾ ಮರಿಗ್ಯಾವ ಮನದೊಳಗ.

ಏಸೋ ಅಮಾಸೆಗಳ ಪುರಮಾಸೆ ಸಾಕ್ಯಾನ
ಸುರದಾನ ಅಳದಾನ ನಿಟ್ಟುಸಿರ
ಮುಗಿಲ ನೀಲಿಯ ಕೆಳಗ ಟೊಂಗಿ ತೂಗ್ಯಾಡ್ಯಾವ
ಎಲಿ ಉದುರಿ ಅದರ್ಯಾವ ತೆರಿನೀರ.

ಈ ಊರಿಗೆರವಾಗಿ ಬ್ಯಾರೆ ಕಡೆ ಹೋಗುದಕ-
ಕಾಲಕಿತ್ತ ಆದಾನ ತಯ್ಯಾರಾ.
ಹಡದಪ್ಪ ಬ್ಯಾಡಂತ ಅನಲಿಲ್ಲ, ಹಡದವ್ವ
ಹಾಕಿದ್ದ ಗೆರಿದಾಟಿ ನಡೀಲಾರ.

ಹಣ್ಣಾಗ ಸೊನ್ನಿಯನಿಂಬುಗೊಂಡಾನಣ್ಣ
ಹಳಿ ನಿಮಿಷ ಹಾಸ್ಯಾನ ಮಲಗ್ಯಾನರಿ
ಬೂದಿ ಬೆಳದಿಂಗಳಲಿ ಹುದುಗಿ ಹೊಳೆದವು ಕೆಂಡ
ಮೈ ಸುಟ್ಟು ಭಟ್ಟನೆ ಎದ್ದಾನರಿ

ಮೈ | ನಡುಕ ಹುಟ್ಟಿ ಎದ್ದಾನ
ದಿ | ಕ್ಕೀಗಿ ಕೈಯ ಮುಗದಾನ
ಹಡ | ದಾಕಿ ಬಳಿಗೆ ಬಂದಾನ
ಹೇಳುದಕ ಬಾಯಿ ತಗದಾನ

ತಾಯಿ ಕುಲು ಕುಲು ನಕ್ಕು ಏನಂತ ಅಂದಾಳ:
ತೃಪ್ತಿ ಮಾಡೊ ಬಸರಿನ ಬಂಕಿಯನಾ
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನಮುಂದೆ ಕುಂಡ್ರ ಹೀಂಗ ತೆರೆದ ಮನಾ ||ಗೀ||

೧೧

ಅವಳ ಬಸುರಿನ ಸುದ್ದಿ ನಾ ಕೇಳಿ ನೀ ಕೇಳಿ
ಕೇಳಿ ಊರಂತೂರ ನಕ್ಕಾರರಿ.

ಹಸರ ಕುಪ್ಪಸ ತೊಟ್ಟು ಬಿಸಲೀಗೆ ತಲಿಬಿಟ್ಟು
ಹೊಳೆಸಾಲ ದನಧಾಂಗ ನಿಂತಾಳರಿ.

ಕೆನ್ನೆ ಮಿರಿಮಿರಿ ಮಿಂಚಿ ಬಣ್ಣಗಳು ಉರಿದಾವು,
ಕಣ್ಣಾಗ ತೋರ್ಯಾವು ಎಳಿ ಚಿಗರ.
ಭೈರವಿಯ ವಂಕ ತೆರಿಗಳ ಹಾಂಗ ಅಂಗಾಂಗ
ಮುರಿದೆದ್ದು ಧರಿಸ್ಯಾವು ಹೊಸ ಹೊಗರಾ.

ಚಂದ್ರಕಾಳಿಯ ಸೀರಿ ಚಂದಽಕ ನೇಸ್ಯಾಳ
ಸೆರಗಿನ್ಯಾಗ ತಗಸ್ಯಾಳ ಗಿಣಿಹಿಂಡಾ
ಆಲಽದ ಎಲಿಗೋಳ ದಂಡಿಕಟ್ಟ ಬಿಗಿಸ್ಯಾಳ
ಹುಡಿಗೇರ ನಾಚ್ಯಾರ ಇದ ಕಂಡಾ.

ಒಂದಂಬು ತಿಂಗಳಿಗೆ ಒಂದೇನ ಬಯಸ್ಯಾಳ
ತುಂಬ ಹುಣ್ಣಿಮಿ ರಾತ್ರಿ ಬೆಳದಿಂಗಳಾ;
ಇಂಬಾದ ಮಂಚದಲಿ ದಿಂಬೀಗೆ ಒರಗ್ಯಾಳು
ಕುಡಿವುದಕ ಕೇಳ್ಯಾಳ ಹುಲಿಹಾಲಾ.

ಮಗ ಬಂದು ಅಂತಾನ: ಬಂಕೀ ಬಂಕೀ ಒಳಗ
ಅಲ್ಲ ಸಲ್ಲದ ಬಂಕಿ ಅಲ್ಲತಗಿ.
ಸಿಡಿಮಿಡಿಗುಟ್ಯಾಳ ಮುಡಿಯನಲ್ಲಾಡ್ಯಾಳ
ಬಿದ್ದಾವ ಎಡವಿದರೆಂಟಮನಿ.

ಬರ| ಲಿಲ್ಲ ಏಟು ಕಕಲಾತಿ
ಮರ | ತಾಳ ರೀತಿ ಮತ್ತ ನಡತಿ
ಮರಿ | ಗ್ಯಾರ ಮಂದಿ ಮರಮರಾ
ಬದ | ಲಾಗಿದಾನ ಗೌಡ ಪೂರಾ

ಕುಂದನಾಡಿದಳೆಂದು ಅಂದ ಮಾತಿಗೆ ನೊಂದು
ಹೋಗುದಕ ತಯ್ಯಾರಿ ಮಾಡ್ಯಾನ
ಹೇಳತೇನ ಕೇಳ ಗೆಳೆಯಾ ನಿನ ಮುಂದ ಕತಿಯೊಂದ
ನನ ಮುಂದ ಕುಂಡ್ರ ಹಿಂಗ ತೆರೆದ ಮನಾ ||ಗೀ||

ಸಿಂಗಾರ ಉಟ್ಟಾನ, ಸಿಂಗಾರ ತೊಟ್ಟಾನ,
ಸಿಂಗಾರ ಆದಾನ ತಲೀತನಕ.
ಜರ ತಗದ ರುಂಬಾಲ ದುಂಡಾಗಿ ಸುತ್ತ್ಯಾನ,
ಶಮನಾಸ ಬಿಟ್ಟಾನ ಹಿಂಬಡಕ.

ಅಂಗ್ಯಾ ಉಡುಗೋ ಹೊತ್ತು, ಗಂಗಾಳ ಬೆಳಗೋ ಹೊತ್ತು
ಬಂದಾನ ಜೋಡೆತ್ತ ಹೊಡಕೊಂಡ.
ಬಂಡೀಗಾಲಿಯ ಅಚ್ಚು ಸರದಿತ್ತು, ಹೆದರದ
ಹೊಂಟಾನ ಕುಡುಗೋಲ ಹಿಡಕೊಂಡಾ.

ಪಟ್ಟೇದ ಕುದರೀಯ ಏರ್ಯಾನ ರಾಮಗೊಂಡ
ಬೆನ್ನ ಚಪ್ಪರಿಸ್ಯಾನ ಮೆಲ್ಲsಕ
ಕಹಾಡಿ ಹರಸುವರಿಲ್ಲ, ನೋಡಿ ಮರುಗುವರಿಲ್ಲ.
ಹಿಂದ ಮುಂದ ಯಾರಿಲ್ಲ ಎಡಬಲಕ.

ಅಗಸೀ ಹೊರಗ ಬಂದ, ಏನಂದ ರಾಮಗೊಂಡ?
ಪಾರಂಬಿ ಕರ್‍ರೆವ್ವ ನಮ ಶರಣಾ;
ತಿರುಗಿ ಬಂದ ನಾವು ಆರ ಸೊಲಗಿಯ ಹುಗ್ಗಿ
ಹಾಕ್ಸೇವ, ಕೊಟ್ಟೇವ ಸೀರೀಖಣಾ.

ಹಳ್ಳದ ಹಂತೇಲಿ ಬಂದೇನ ಅಂದಾನ
ಗುಡ್ಡದ ನಿರವಾಣಿ ನಮ ಶರಣಾ;
ತಿರುಗಿ ಬಂದರ ನಾವು ದೀಡ ನಮಸ್ಕಾರ
ಹಾಕೇವ, ಕೊಟ್ಟೇವ ಬೆಳ್ಳೀಕಣ್ಣಾ.

ಬಂ | ದಾವ ಇದಿರು ಬರಿ ಬುಟ್ಟಿ
ಹೊಡೆ | ದಾನ ಕುದರಿಯನು ಮೆಟ್ಟಿ
ಹಿರಿ | ಯರ ಪುಣ್ಯ ನಮ ಮ್ಯಾಲಾ
ಸುರಿ | ತಿರಲಿ ಶಿವನೆ ಅನುಗಾಲಾ

ಪಾರಂಬಿ ಕರ್‍ರೆವ್ವ, ಗುಡ್ಡದ ನಿರವಾಣಿ
ಈ ಊರ ಕಡೆಗಿರಲಿ ನಿಮಧ್ಯಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

ಕಾ ಅಂಬೊ ಕಾಗಿಲ್ಲ, ಗೂ ಅಂಬೊ ಗೂಗಿಲ್ಲ,
ಯ್ಯಾರ್ಯಾರ ಸುಳಿವಿಲ್ಲ ಅಡಿವ್ಯಾಗ.
ಏರ್ಯಾನ, ಇಳದಾನ ಇದ್ದಬಿದ್ದ ತಗ್ಗಾದಿನ್ನಿ;
ಹುಯ್ಲ ಹೊಡೆದ ಹುಡಕ್ಯಾನ ಗವಿಯೊಳಗ.

ಹೊತ್ತು ನೆತ್ತಿಗೆ ಏರಿ, ಹುಳಹುಪಡಿ ಹುರಪಳಿಸಿ,
ತಳುವ್ಯಾನ ಗವಿಯೊಳಗ ತುಸು ಹೊತ್ತ.
ಚುಚ್ಚಿದರೆ ಬೆರಳು ಸಿಗಬೀಳುವಂಥಾ ತಂಪು,
ಮೈಗೆ ಮನಸಿಗೆ ಅಹ ಎಂಥಾ ಸುಖ!

ಮನ್ನಿ ರಾತ್ರೀ ಶ್ಯಾರಿ ಕದ್ದಮುಚ್ಚಿ ಬಂದವಳು;
ಆಗಿತ್ತು ಇದ ನಮನಿ ಹ್ವಾದಮ್ಯಾಲ.
ಬೆಳಕೀನ ಬಿಳಿಸುಟ್ಟು ಬೂದಿಬಣ್ಣಕೆ ತಿರುಗಿ,
ನೆರಳೆಲ್ಲ ಕರಕಾಗಿ ಗಾಲಮೇಲಾ.

ದೂರ ತಾರೆಯ ಹಾಂಗ ಮಿಣಕ್ಯಾವೆರಡು ಕೆಂಡ,
ಬರಬರತ ಹೊಳೆದಾವು ಬೆಂಕೀ ಕೊಳ್ಳಿ.
ಮನ ಸುಟ್ಟು ಛಟ್ಟನೆ ಎದ್ದಾನ; ಬಿಗಿಯಾಗಿ
ಹಿಡಿದಾನ ಕುಡುಗೋಲ ಬೆಳ್ಳೀಹಿಡಿ.

ಯೋಳ ಪಟ್ಟೆಯ ಹೆಣ್ಣ ಹುಲಿ ಬಂದು ನಿಂತೀತ;
ಧೈರ್ಯದಿಂದ ಕೇಳ್ಯಾನ; ಕೊಡ ಹಾಲ.
ಹುಲಿಯು ತಾಲಿಯ ತುಂಬ ಮಲಿಹಾಲ ಕೊಟ್ಟೀತ,
ನೆನ ನೆನದ ನಗತಽದ ಕಲಲಲಲಾ!

ಕೊ | ಟ್ಟೇರಿ ಹಾಳ ಭರಪೂರಾ
ಮಾ | ಡಿದಿರಿ ನಮಗ ಉಪಕಾರಾ
ನಗ | ತೇರಿ ಯಾಕ ಕಲಕಲಾ
ಆ | ತೇನು ನಿಮಗ ಖುಶಿ ಬಾಳಾ

ಹೊಟ್ಟಿತುಂಬಾ ಉಂಡು ಹನ್ನೆರಡು ವರುಷಾತು,
ಈಗ ಬಂದಿ ಬಾಳಾ ಕೂಡಿ ಬಂತ ದಿನಾ!

ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

೧೪

ಕಣ್ಣಾಗ ಕತ್ತಲಿ ಕೂಡಿ ಬಿದ್ದಾಂಗಾಗಿ
ಕೋಲ್ಮಿಂಚ ಕುಡಗೋಲ ಝಳಪಿಸಿದಾ.
ಬೆನ್ನಾಗ ಸಿಗಬಿದ್ದು ಹುಲಿ ಒದರಿ, ದವಡಾಸಿ,
ಹಿಂದ ಹಿಂದ ಅಟ್ಯಾನ ಬೆನ್ನಿಗಿ ಬಿದ್ದಾ.

ಹೊಕ್ಕಲಿ ಹೊಕ್ಕಾನ, ಜಿಗಿದಲ್ಲಿ  ಜಿಗಿದಾನ,
ಹಾರಿದಲ್ಲಿಗೆ ಹಾರಿ ಗಾಳೀಹಂಗಾ.
ಮೆಳಿಯೊಳಗ ಸರಬುರುಕ, ಹೊದರೊಳಗ ಸರಬುರುಕ,
ಜೋಡ ಸರಬುರುಕಣ್ಣ ಹುಲ್ಲೊಳಗ.

ಮಾಡsದ ಚಿಮಣಿ ಮ್ಯಾಗ ಕಾಡೀಗಿ ಕಡಕೊಂಡ
ಬಿದ್ಧಾಂಗ ಹೊತ್ತಾರಿ ಕತ್ತಲಿಸಿತ.
ಹುಲಿ ಗಪ್ಪಗಾರಾಗಿ, ಕುದರಿ ಮಟಾಮಾಯಾಗಿ;
ತಾಲಿಹಿಡಿದ ಹೊಂಟಾನ ಊರತ್ತ.

ಮುಂದಮುಂದ ಬಂದಾನ ಸರಿರಾತ್ರಿ, ಉಲುವಿಲ್ಲ;
ಇದರೀಗ ಕಂಡಾನ ವಿಚಿತ್ತರಾ.
ಜಕ್ಕಜಲದೇರ ಜೋಡಿ ಜತ್ತಾಗಿ ಹೊಂಟೀತ
ಮೆತ್ತsಗ ಅಡಗ್ಯಾನ ಭಯಂಕರಾ.

ನೀರಹನಿ ಹೆಣೆಧಾಂಗ ಮೈತುಂಬ ಆಭರಣ;
ಹನಿಗೊಂದು ತಾರಕ್ಕಿ ಚಂದ್ರಾಮರಾ.
ಮಿಂಚ ಕರಗಿಸಿ ಎರಕ ಹೊಯ್ದಾಂಗ ಮೈ ಹೂಗರ,
ನಕ್ಕಾಗ ಕಂಡಾವು ಮುತ್ತಿನ ಸರಾ.

ನಡ | ದಾವ ಭಾಳ ಗಂಭೀರಾ
ಬಿಡಿ | ಬಿಡಿಸಿ ಒಡಪನಾಡ್ಯಾವ
ಬಿ | ದ್ದಾವ ಹುಬ್ಬ ಅಗ್ಗಂಟಾ
ಮಾ | ತೊಂದ ಚೆಂತಿ ಯೋಳೆಂಟ

ಗಣದ ಮಾತ್ರೆಯ ಹಾಂಗ ದಿನಗೋಳ ಎಣಿಸ್ಯಾವ;
ಹನ್ನೆರಡು ವರುಷಾತ ಈ ಹೊತ್ತಾನಃ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರ ಹೀಂಗ ತೆರೆದ ಮನಾ||ಗೀ||

೧೫

ಏನ ಕಾಣಲು ಬಂದು ಇನ್ನೇನ ಕಂಡೇವ!
ಹೆಣ್ಣೀಗಿ ದಿನಮಾನ ಅನುವಾದಾವ.
ಹಬ್ಬೀದ ಹಸರಾಗ ಹೆಬ್ಬುಲಿ ಒದರ್ಯಾವು,
ತಬ್ಬಲಿ ಮಗ ಅತ್ತ ಕರೆದಾವ.

ಅಮ್ಮಾ ಎಂದವನನ್ನು ಗುಮ್ಮ್ಯಾಡಿ ಕೊಂದಾಳು,
ಹುಲಿಯೇರಿ ಎದ್ದಾಳು ಗುದ್ಯಾಡಲು.
ಹುಯ್ಯಾಲ ಬೊಬ್ಬೆಯೊ ಜಗವೆಲ್ಲ ತುಂಬಿದರು
ಒದರ್ಯಾಟ ಕೇಳಿಲ್ಲ ಯಾರ್ಯಾರಿಗು.

ಮರಿಯಾನಿ ಕರತಂದ ಕ್ವಾರಿಹಲ್ಲ ಕೊರೆಕೊರೆದ
ಬಲಗೈಗೆ ಯೋಳ ಬಳಿ ಏನ ನಿವಳಾ!
ಹಚ್ಚೀ ಬಟ್ಟ ಚುಚ್ಚುದಕ ಹಸರ ಸಾಕಾಗಿಲ್ಲ,
ಚಿಗರೀಗಿ ಮಿದುಕೈಯ ಚಾಚ್ಯಾಳ.

ಬಣ್ಣದ ಅರಮನಿ ನಡುಗಂಬ ಬಿದ್ದೀತ;
ಬಣ್ಣಗಳ ಸುಟ್ಟಾಳ ಕೆನ್ನೀ ಒಳಗ.
ಯಾತ ತಿರುಗಿಸುವಂತ ಭೂತ ದೇವರನೆಲ್ಲ
ಹುಗದಾಳ ಹಾಳಾದ ಬಾಂವ್ಯಾಂಗ.

ಇಷ್ಟಕೇಳಿ ರಾಮಗೊಂಡ ಹೊಟ್ಟೀ ಒಳಗ ಕಷ್ಟವಾಗಿ
ಬಂದ ನಿಂತ ಕಟ್ಯಾನ ಮುಕ್ಕಟ್ಟ.
ಹೆಜ್ಜಿಯಿಡ ಒಡಪಾ ಒಡದ ಬಿಡಾಂವಲ್ಲ ದೇವೀ ನಿಮಗ
ಚಾಲಿವರದ ಕಾಡಿ ಬೇಡಿ ಎಲ್ಲಾ ಕಟ್ಟಾ.

ಹೌ | ಹಾರಿ ನೋಡ್ಯಾವ ಇಂವಃನಾ
ಹಿಡ | ದಾವ ಗುರುತ ಖೂನ

ಇಂವ | ಇಂವಽ ಹೌದು ಅಂದಾವ
ದಿಕ್ಕು | ತಪ್ಪಿ ಓಡಿ ಹೋದಾವ

ನಿಮ್ಮ ಕೈ ಬಳಿಯಾಣಿ ರಾಮಗೊಂಡ ಕೇಳತೇನು
ಒಡದ ಹೋಗರಿ ನಿಮ್ಮ ಒಗಟಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ||ಗೀ||

೧೮

ಬೆಳದಿಂಗಳೊಳಗಿನ ತಿಳಿನೀರ ಝರಿ ಹಾಂಗ
ಭರಭರ ಹರಿದಾವ ಮುಂದ ಮುಂದಕ.
ಗುಡ್ಡಽದ ಮ್ಯಾಗೀನ ಫಡಿ ಉರುಳಿ ಬಿದ್ದಾಂಗ
ಕೂಗ ಹೊಡದ ಓಡ್ಯಾನ ಹಿಂದ ಹಿಂದಕ.

ವಂಕ ದಾರೀ ಒಳಗ ಮಿಂಚ್ಯಾವ ಮರಕಂಟಿ,
ಕಲ್ಲಾಗ ಹಾರಗಾಲ ಬಿದ್ದಾವ.
ಕೆಟ್ಟದೇವರ ಆಣಿ ಹೆಜ್ಜೀಯನಿಟ್ಟೇರಿ
ಕೊಟ್ಟಹೋಗಲಿ ನಮಗುತ್ತರವ.

ಸೊಂಡಿ ಸುಟ್ಟ ಬೆಕ್ಕಿನ್ಹಾಂಗ ಖಬರತಪ್ಪಿ ಓಡ್ಯಾವ
ಬಂದಾವ ಹಾಳಬಾಂವಿ ಸಮೀಪಕ.
ಅಮವಾಸಿ ದಿನ ಉಲ್ಕಿ ಉರುಳಿ ಬಿದ್ದಾಂಗಾಗಿ
ಜಿಗದಾವ ಜೋಡಾಗಿ ಬಾಂವಿಯೊಳೀಕ.

ಮ್ಯಾಲಹಾರಿದ ಮೀನು ನೀರಿನೊಳು ಜರಿಧಾಂಗ
ಸೇರಿ ಒಂದಾದಾವ ನೀರ ನೀರಿಗಿ.
ತೆರೆಸುತ್ತಿ ಆಗಾಗ ತಾರಕ್ಕಿನಗೆ ನಕ್ಕು
ದಂಡೀಯನಡರ್ಯಾವು ತಿರುತಿರುಗಿ.

ಹಸುಗೂಸು ಎಳಿಎಳೀ ಕಳಲು ಅತ್ತಂಗಾತು
ತೆರಿಗೋಳ ಸಪ್ಪಳ ದಂಡ್ಯಾಗ.
ಕರಿಯ ಭ್ರಾಂತಿಯ ಮುದ್ದಿ, ಕಣ್ಣುಮೂಗುಗಳಿಲ್ಲ
ಮೆತ್ಯಾವ ಮೂಲ್ಯಾಗ ಮೂಲ್ಯಾಗ

ತಿದಿ| ತೇಗಿ ಬಂದಾನ ರಾಮಾ
ಮೂ | ಡ್ಯಾನ ಆಗ ಚಂದ್ರಾಮ
ಒಳ | ಒಳಗ ಹಣಿಕ ಹಾಕ್ಯಾನ
ಪ್ರತಿ | ಬಿಂಬ ಕಂಡ ಸರದಾನ

ಅಡ್ಡಮಳಿ ಗುಡ್ಡಮೋಡ ತಿಕ್ಕಿ ಗರ್ಜಿಸಿಧಾಂಗ
ಹಾಳಬಾಂವಿ ನಕ್ಕೀತ ಒಂದಸವನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೬

ಕಿವಿಯೊಳಗ ಘಜ್ಜಂತ ಗೂಟ ಜಡಿಧಾಂಗಾಗಿ
ಎಲ್ಲಿ ತೆಂಕಣ ಮೂಡ ಬಡಗಣಾ?
ತಾನೆಲ್ಲಿ ತನ್ನ ದೇಹಕ್ಕೆ ನೆರಳಿದೆ ಇಲ್ಲೊ?
ಕಾಳು ಉರಿವೆ ಹೌದು ನೆಲದಾಗನ.

ತನ್ನ ಒಳಗಿನ ರಾಮ ಚಪ್ಪಾಳಿ ಹೊಡೆಧಾಂಗ,
ಖೊಕ್ಕಂತ ನಕ್ಕಾಂಗ ಬಿಳೀನಗಿ.
ನಕ್ಕ ರಾಮನನೊಮ್ಮೆ ತೆಕ್ಕೆ ಹಾಯಲೆ ಓಡಿ?
ನಡುವಿನಂತರ ನೂರ ಹರದಾರಿ!

ತೆರಿಯೊಳಗ ಪ್ರತಿಬಿಂಬ ಕೊರಕೊರದ ಹಂಚೇತ
ತೆರಿನಿಂತ ಹೊರತಿಲ್ಲ ಆಕಾರವು.
ತೆರೆಯ ತಣ್ಣನೆ ಸರ್ಪ ಮೈಸುತ್ತಿ ಬಿಗಿಧಾಂಗ
ಮುದುಡಿ, ಹೀಗ್ಗೀ, ನಡುಗಿ ಮಿಡಿಕ್ಯಾಟವು.

ನೋಡ ನೋಡ್ತ ಇದರೀಗೆ ದೊಡ್ಡ ಧಾಂಡಿಗ ಮೂರ್ತಿ
ನಡೆದು ಬಂತೋ ಥೇಟು ಹಿಮಾಲಯಾ.
ಚಿಕ್ಕ ಮಕ್ಕಳ ಚೊಕ್ಕ ನಗಿಯ ಬೆಳದಿಂಗಳಿಗಿ
ಕೈಕಾಲು ಒಡದಾವೋ, ಏನಭಾಯಾ!

ಆಡೇನಂದರ ನಾಲಿಗಿಲ್ಲ. ಓಡುದಕ್ಕಿಲ್ಲ.
ಮೈಮುಳ್ಳ ಎದ್ದಾವ ಕೊರಿ ಬೇಲಿ.

ದಳದಳ ಸುರಿದಾವ ಬೆವರಹೊಳಿ; ನಿಂತಾನ
ಚಿತ್ರದ ಒಳಗಿನ ಗೊಂಬೀ ನಮುನಿ

ಸಾರಿ | ಸಾರಿ ಬಂತ ಹಂತ್ಯಾಕ
ಎ | ತ್ತೀತ ಹಸ್ತ ಹರಸುದಕ
ಋನ | ಗುರ್ತ ಹತ್ತಿ ಕಾಣುದಕ
ಬಿ | ದ್ದಾನ ಮತ್ತ ಹಣಗಲಕ

ಮರತಿ ಏನೋ ಮಗನಽ ಹರಕೀ ಹೊತ್ತ ಹಡೆದವನ
ನಶೀಬಿಲ್ದ ಹಾಳ ಬಾಂವಿ ಹಿಡಿದವನಾ?
ಹೇಳತೇನ ಕೇಳ ಗೆಳೆಯಾ  ನಿನಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರೆದ ಮನಾ ||ಗೀ||

೧೮

ಬಾರಾ ವರ್ಷದ ಮಾತು ನೀ ಗೇಣ ಚೋಟಿದ್ದಿ,
ಯೋಳ ಪಟ್ಟಿ ಹುಲಿ ಬಂತ ಅಡವೀಗೆ.
ಹಿಂದ ಮುಂದ ಹಳಬರು ಎಡಬಲಕ ಬ್ಯಾಟಿಗಾರು
ಗೌಡ್ತಿ ಮಾತ ಮೀರಿ ಹೊಂಟೆ ಬ್ಯಾಟೀಗಿ.

ಹುಲಿಯಲ್ಲ ಅಂವ ದೊಡ್ಡ ರಾಕ್ಷೇಸ, ಮಾಯಾವಿ
ಮಳ್ಳ ಮಾಡಿ ಮಂದಿ ಒಯ್ದಾ ಸಂದರ್ಯಾಗ,
ಮಟಾ ಮಟಾ ಮದ್ದೀನ ಮೈಮ್ಯಾಲ ಬಿದ್ದಾನ
ಕೊಂದಾನ ಸಂಶಯ ಬರಧಾಂಗ.

ನನ್ನ ಚರ್ಮ ಸುಲಿದು ಮೈಮ್ಯಾಲ ಹೊದ್ದಾನ
ಕಡಿದು ಬುಟ್ಟೀ ತುಂಬಿ ಹೊತ್ತ ತಂದಾನ.
ಹಾಳಽಬಾಂವಿಯ ಹಾಳಿನೊಳಗೆ ಹೂಳ್ಯಾನಯ್ಯೊ
ಪಾರಮಾಡೊ ನಿನ್ನ ಕೆಟ್ಟ ತಂದೀಯನಾ.

ಭಾವಿಸಿದ್ದುದನ್ನೆಲ್ಲ ಬಿಚ್ಚಿಟ್ಟ ಶಬ್ದಧಾಂಗ
ಹೇಳಿತಿಷ್ಟು ಬಾಯಿಬಿಟ್ಟು ಆಕಾಶಕ
ದಂಗಬಡದ ರಾಮಗೊಂಡ ದಿಕ್ಕ ಮರತ ನಿಂತಾನ
ಸುರದ ಸೋಸಿ ನೆನೆದಾನ ತಳತನಕ.

ಕತ್ತಲ ನಿರಾಕಾರ ಸರಿದು ಚಂದಿರ ಏರಿ
ಸಾಕಾರವಾಯಿತೊ ಸರ್ವಜಗಾ.
ನಿನ್ನ ಪಡೆವುದಕೆ ನಾವಿನ್ನೇನ ಮಾಡೋಣ
ಹೇಳೆಂದ ಕಾಲೂರಿ, ಕೈಮುಗದ.

ದಿಕ್ಕಿ | ನ್ಯಾಗ ದಿಕ್ಕ ಮೂಡsಣಾ
ಅಲ್ಲಿ | ಒಬ್ಬ ಸಾಧು ಶರಣಾ
ಕೊಡ | ತಾನ ಮಂತ್ರಿಸಿದ ನೀರಾ
ಸಿಂ | ಪಡಿಸ ರಾಕ್ಷಸಗ ಪೂರಾ

ಜ್ವಾಕಿ ಬಾಳಾ ಅಲ್ಲಿ ತಿರಗತಾವ ರಾಕ್ಷೇಸ
ನೇಮಿಸಿದ ಹಿಂಡ ಹಿಂಡ ಸೈತಾನಾ.
ಹೇಳತೇನ ಕೇಳ ಗೆಳೆಯಾ ನಿನ್ನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ||ಗೀ||

೧೯

ಇನ್ನೊಮ್ಮೆ ಅಲ್ಲಮಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ.
ಕಲಿಯುಗದೊಳಗಿನ ಕಥೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನಾ.

ಕೂಡಿ ಕುಂತ ದೈಂವಕ್ಕ ಕೈಮುಗದ ಹೇಳತೇನು,
ಹೊಟ್ಟ್ಯಾಗ್ಹಾಕ್ರಿ ಉಳಿದಿದ್ರ ಚೂರ ಕಸರಾ.
ಯಪ್ಪಾ ಸ್ವಾಮಿ ಗುರುದೇವ ತಪ್ಪ ಮರತ ಒಪ್ಪಕೊಡ
ನೆಪ್ಪಿನ್ಯಾಗ ಇಡುವಾಂಗ ಸರ್ವರಾ.

ನೇಸರಿಗು ಬಿಸಲೀಗು ಬಿಗಿದಿಟ್ಟ ಒಗತಾನ;
ಅಂತೆ ಅನುಭವ ಮಾತು ಎರಡಕ್ಕುನು.
ಅನುಭವದ ಐಸಿರಿಯ ಆಗುಮಾಡುವ ಮಾತಿ
ಗೋತು ನಮೋನಮೋ ಎನ್ನುವೆನು.

ಘೋಡಗೇರಿ ಬಸ್ಸಪ್ಪ ಅವರ ಮಗ ಚಂದ್ರಪ್ಪ
ಪದಾ ಮಾಡಿದಾರ ಭಾಳ ನಿವಾಳ

ಗೌಡ್ತಿ ಬ್ಯಾನೀ ತಿಂದ ಗಂಡ ಹಡದ ಗಂಗಾಳ ಹೊಡದ
ಐದೇರಲ್ಲ ಜೋ ಅಂದ ಕತಿ ನಿವಳಾ

ಹಿರಿಯರ ಪಿರತೀಗಿ ಸರಿದೊರೆ ಸಮನಿಲ್ಲ
ಕೇಳಾವರ ಮ್ಯಾಲಿರಲಿ ನಿರಂತರಾ.
ಏ ಎವ್ವಾ ಸರಸೋತಿ ತಾಳಕ್ಕ ನಲಿವಾಕಿ
ನಾಲೀಗಕ್ಷರ ಕಲಿಸ ಇನ್ನೆರಡಾ

ಕತಿ | ಹೇಳತೇವ್ರಿ ಮುಂದಿಂದಾ
ಆಗ | ಧಾಂಗ ಒಂದು ಸಹ ಕುಂದಾ
ಇರು | ಗುರುವೆ ನಾಲಗೆಯ ಹಿಂದಾ
ನಾ | ನಿಮ್ಮ ಕರುಣದ ಕಂದಾ

ಬೆನ್ನಾಗ ನೆತ್ತರ ಕಣ್ಣಾಗ ಕಣ್ಣೀರ
ಗೌಡಪ್ಪ ಕರಸತಾನ ಗೌಡ್ತಿಯನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೧೦

ಕಾಳ ತುಂಬಿದ ಜ್ವಾಳ ಗಾಳಿಗಲುಗಿದ ಹಾಂಗ
ತೂಗಿ ತೂಗಿ ಬಂದಾಳ ಮೈವಜನಾ.
ಚಳ್ಳಪಳ್ಳ ಗೆಜ್ಜೀನಾದ ಹೆಜ್ಜೀಯ ಚೆಲ್ಲತಾಳ
ನಾಜೂಕ ನಗಿ ನಕ್ಕ, ಏನ ಹಗಣಾ!

ಹಾಸ್ಯಾಗ ಗುಜುಗುಜು ಆಡತಾರ, ಹಾಕತಾರ
ಲೆಕ್ಕಾ ಗುಣಿಸಿ ಭಾಗಾಕಾರ ಪರಭಾಷೆ:
ಯೋಳಕ್ಕ ಗೋಳಾತ ಎಂಟಕ್ಕ ಗಂಟಬಿತ್ತ
ಸರಿ ಬೆಸ, ಹಿಡಿದ ಹ್ವಾರೆ ಗಂಡಽ ಖರೆ.

ಯೋಳ ಗಾದಿಯ ಮ್ಯಾಲ ಹೋಳಾಗಿ ಮಲಗ್ಯಾಳ
ಅಂತಾಳ; ಕರತರ್ರೆ ರಾಮಗೊಂಡಗ.
ಕೈಯಾಗ ಹಾಲತಾಲಿ ಕಣ್ಣತಾಮ್ರದ ತಾಲಿ
ಕಂಡಾನ ಖರಖರೆ ಯಮನ್ಹಾಂಗ!

ಒಲಿಯ ಮ್ಯಾಲಿನ ಅಕ್ಕಿ ಉಕ್ಕುಕ್ಕಿ ಕುದ್ದಾಂಗ
ಸಿಟ್ಟಾಗಿ ಕಿಸಿದಾಳ ಕಿಸಮೂಗನಾ.
ಬಲಾ ಇಲ್ಲದವನ ನೆಲಾ ಎದ್ದು ಬಿಡಿಧಾಂಗ
ಕರದಾಳ, ಮುಂದಕ ಬಾ ಚೆಲುವಾ.

ತುಸು ಆಡಿ ಹಲ್ಲsರೆ ಕಿಸಕಿಸದ ನಕ್ಕಾಳ,
ಜೊಲ್ಲಬಿತ್ತು ಗಾದಿಮ್ಯಾಲ ನಾಕ ಹನಿ.
ಏನೋ ಆಡಲು ಹೋಗಿ ಇನ್ನಷ್ಟು ನಕ್ಕಾಳ,
ಥೂ ಅಂತ ಉಗುಳ್ಯಾನ, ಅಲ್ಲತಗೀ.

ಬರ | ಲಿಲ್ಲ ಏಟು ಕಕಲಾತಿ
ಮರ | ತಾಳ ರೀತಿ ಮತ್ತು ನಡತಿ
ದಾ | ಸೇರು ಮರುಗಿ ಮರಮರಾ |
ಬದ | ಲಾಗಿದಾನ ಗೌಡ ಪೂರಾ

ಎರಡಂಬು ತಿಂಗಳಿಗೆ ಎರಡೇನು ಬಯಸ್ಯಾಳ?
ತಿನ್ನಲು ಕೊಡು ನಿನ್ನ ಹೃದಯವನಾ!
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನ ಮುಂದ ಕುಂಡ್ರ ಹೀಂಗ ತೆರೆದ ಮನಾ ||ಗೀ||



ಮೂರಂಬು ತಿಂಗಳಿಗೆ ಮೂಗೀನ ಸಿರಕೋದ
ಮೂಸ್ಯಾಳ ಕಿಸಮೂಗ ತುಂಬೂಮಟಾ!
ನಾಕಂಬು ತಿಂಗಳಿಗೆ ಅಂಡ್ಯಾಳ ಆಡುದಕ
ಕಣ್ಣಗುಡ್ಡಿ ಬಯಸ್ಯಾಳ ಕೊಡ ಲಗುಟಾ

ಐದಂಬು ತಿಂಗಳಿಗೆ ಐದೇನ ಬಯಸ್ಯಾಳ?
ಕಿವಿಯ ಗಂಟೆಯ ಕೊಡ ನಾದಕ್ಕ.
ಆರಂಬು ತಿಂಗಳಿಗೆ ನಾಲೀಗಿ ಹೆರಚೇರಿ
ಸಾಂಬಾರ ಮಾಡಿರಿ ನಂಜೂದಕ!

ಏಳಂಟು ತಿಂಗಳಿಗೆ ಸಾಕಂಬುತನ ಬೇಕ
ತೊಗಲ ಹೆಚಚೆರಿ ಪಚಡಿ ಮಾಡುದಕ!

ಎಂಟಂದು ತಿಂಗಳಿಗೆ ಹೊಟ್ಟೀಯ ಹೊಸದಾಳ
ಗಾಂಧಾರಿ ಹಡೆದಾಳ ಗಂಡ ಮಗಾ!

ಐದೇರು ಬಂದಾರು ಗುಗ್ಗರಿ ತಿಂದಾರು
ಕುರ್ರಂತ ಕೂಗ್ಯಾರು ಹೆಸರಿಟ್ಟಾ!
ಊರ ತುಂಬ ಸಕ್ರಿ ಹಂಚಿ ಸಿಹಿ ಬಾಯಿ ಮಾಡ್ಯಾರ
ನಿಮ್ಮ ಮನಸೂ ಹೀಂಗ ಇರಲಿ ಸಿಹಿ ಕಟ್ಟಾ.

ಝುಳ ತಾಗಿ ಬಾಡೀದ ಚಿವುಟಿದ್ದ ಚಿಗುರೆಲಿ
ರಾಮಗೊಂಡ ನಿಂತಾನ ಬಾಡಿ ಮುಖಾ
ಬಂದs ಬರ್ತsದಂತ ಆ ದಿನ ಕಾದಾನ
ಕಣ್ಣೀರದs ಕಂಡಾನ ಸೂರ್ಯದಿಕ್ಕಾ,

ದಿಕ್ಕಿ | ನ್ಯಾಗ ದಿಕ್ಕ ಮೂಡsಣಾ
ಅಲ್ಲಿ | ಒಬ್ಬ ಸಾಧು ಶರಣಾ
ಕೊಡ | ತಾನ ಮಂತ್ರಿಸಿದ ನೀರಾ
ಸಿಂ | ಪಡಿಸ ರಾಕ್ಷಸಗ ಪೂರಾ

ಹೇಳಾಕ ಹೆಸರ ಚಂದ ಕೇಳಾಕ ಕತಿ ಚಂದ
ನಿಮಗಾಗ್ಲಿ ಹತ್ತೆಂಟು ಮರಿಮಕ್ಕಳಾ
ಅವರಲ್ಲಿ ನಾವಿಲ್ಲಿ ಮಗಹುಟ್ಟಿ ಶುಭವಾಗಿ
ಅಂತಿಂತು ಬೆಳಗಾಯ್ತು ನಮ ಶರಣಾ.

# ಋಷ್ಯಶೃಂಗ

## ಮುನ್ನುಡಿ

ಚಂದ್ರಶೇಖರ ಕಂಬಾರರ 'ಹೇಳತೇನ ಕೇಳ' ಎಂಬ ದೀರ್ಘವಾದ ಕಥನ-ಕವನ ಪ್ರಕಟವಾದಾಗ ಅದು ಅನೇಕರ ಕುತೂಹಲವನ್ನು ಸೆಳೆದಿತ್ತು. ಆ ಕವನ ಮೆಚ್ಚುಗೆಯನ್ನು ಪಡೆದದ್ದಕ್ಕೆ ಮುಖ್ಯವಾದ ಕಾರಣವೆಂದರೆ ಆ ಕವಿತೆಯಲ್ಲಿಯ ಆಡು-ನುಡಿಯ ಸೌಭಾಗ್ಯ. ಲಾವಣಿಯ ಗತ್ತು ಮತ್ತು ಅಪೂರ್ವವಾದ ಚಿತ್ರಕಶಕ್ತಿ ಕಂಬಾರರು ಮುಂದೆ ಹಲವು ನವ್ಯಕವಿತೆಗಳನ್ನು ಬರೆದದ್ದರಿಂದ 'ಹೇಳತೇನ ಕೇಳ'ದ ಅರ್ಥವಂತಿಕೆಯನ್ನು ಮರೆಯುವಂತಾಯಿತು. 'ಹೇಳತೇನ ಕೇಳ' ಒಂದು ಹಾಡುಗಬ್ಬವಾದ್ದರಿಂದ ಅದು ಅಪ್ರಬುದ್ಧ-ಪ್ರಜ್ಞೆಯ ಪ್ರದರ್ಶನ ಮತ್ತು ನವ್ಯರೀತಿ ಪ್ರಬುದ್ಧ-ಸಂವೇದನೆಯ ಫಲ ಎಂಬ ಸಾಮಾನ್ಯವಾದ, ಸರಳವಾದ ವಿಮರ್ಶಕ-ಸತ್ಯಕ್ಕೆ ಎಡೆ ಕೊಟ್ಟಂತಾಯಿತು. ಎರಡು ಕಾವ್ಯರೀತಿಗಳ ಭಿನ್ನತೆಗೆ ಕಂಬಾರರ ಮೂಲಸಂವೇದನೆಯಲ್ಲಿಯ ವಿಷಮತೆ ಕಾರಣವಾಗಿರಬಹುದೇನೋ ಎಂಬ ಸಂಶಯ ಬಂದರೆ ಅದಕ್ಕೆ ಉತ್ತರ ಕೊಡಬಲ್ಲ ಸಾಮರ್ಥ್ಯ ಕಂಬಾರರ ಮೊದಲ ಕೃತಿಗಳಲ್ಲಿ ಇಲ್ಲ. ಆದರೆ 'ಹೇಳತೇನ ಕೇಳ' ಕಂಬಾರರ ಪ್ರಥಮಕೃತಿಯಾಗಿದ್ದರೂ ಆ ಕಾವ್ಯರೂಪದ ಸಜೀವತೆಯೇ ಸಾಕಷ್ಟು ಮಹತ್ವ ಪೂರ್ಣವಾಗಿದೆ. ಬೇಂದ್ರೆಯವರೊಬ್ಬರನ್ನು ಬಿಟ್ಟರೆ ಲಾವಣಿಯ ಶಿಲ್ಪವನ್ನು ಕಾವ್ಯದಲ್ಲಿ ಅಷ್ಟು ಸಮರ್ಥವಾಗಿ ಬೇರೆ ಯಾರೂ ಬಳಸಿಕೊಂಡಿಲ್ಲ. ಲಾವಣಿಯ ಭಾಷೆ, ಲಯ ಮತ್ತು ಕಥನ-ರೀತಿಗಳಿಂದ ಕವಿತೆಯ ವಸ್ತುವಿನ ಬೆಳವಣಿಗೆ ಕುಂಠಿತವಾಗದಂತೆ ನಡೆಸಿಕೊಂಡು ಹೋಗಿರುವ ಸಂಗತಿಯೇ ಮೊದಲು ಆಶ್ಚರ್ಯಕರವಾಗಿದೆ. 'ಹೇಳತೇನ ಕೇಳ'ದ ಇನ್ನೊಂದು ವಿಶೇಷವೆಂದರೆ, ಡಪ್ಪು ಬಾರಿಸುತ್ತ ಬಯಲಿಗೆಲ್ಲ ಕೇಳಿಸುವಂತೆ ಹಾಡುವ ಲಾವಣಿಕಾರನ ದನಿ ಆ ಕವಿತೆಯ ಲಯದಲ್ಲಿ ಸ್ಪಷ್ಟವಾಗಿ ಮಾರ್ದನಿಗೊಂಡಿದೆ. ಕವಿಯ ದನಿಯಲ್ಲಿ ಇಷ್ಟು ಜೀವಂತತನ ಇದ್ದರೆ ಮಾತ್ರ ಕಾವ್ಯಕ್ಕೆ ಹೊಸ ಆಕಾರ, ರೂಪ ಬರಬಲ್ಲದು. ಕಂಬಾರರ ದನಿಯಲ್ಲಿ ಪ್ರಾಚೀನತೆಯ ಮಣ್ಣಿನಲ್ಲಿ ಹುಗಿದುಹೋದಂತಿರುವ ಬೇರುಗಳನ್ನು ಅಲುಗಾಡಿಸುವ ಶಕ್ತಿಯಿದೆ. ಇಂಥ ಶಕ್ತಿ ಅವರ ಕಾವ್ಯಕ್ಕೆ ಆಡು-ನುಡಿಯ ಉಪಯೋಗದಿಂದ ಬಂದಿದೆ.

ಬೇಂದ್ರೆ ಮತ್ತು ಅಡಿಗರಲ್ಲಿ ಕೂಡ ಕಾವ್ಯ ಹೊಸ ರೂಪವನ್ನು ತಳೆದದ್ದು ಭಾಷೆಯ ಸಫಲ ಉಪಯೋಗದ ಮೂಲಕವಾಗಿಯೇ. ಭಾಷೆ ಕೇವಲ ಅರ್ಥದ ಸಂಕೇತವಾಗುವದು ಸಾಮಾಜಿಕ ಅವನತಿಯ ಲಕ್ಷಣವಾಗಿದೆ. ಅದರಲ್ಲಿಯೂ ಆಧುನಿಕ ಯುಗದಲ್ಲಿ ಶಿಕ್ಷಣಪ್ರಸಾರ ಮತ್ತು ಪತ್ರಿಕಾವ್ಯವಸಾಯಗಳ ಮುಖಾಂತರವಾಗಿ ಈ ಅವನತಿಯ ಪ್ರಕ್ರಿಯೆ ಹೆಚ್ಚು ವೇಗದಿಂದ ನಡೆಯುತ್ತದೆ. ಆದ್ದರಿಂದ ನಿಜವಾದ ಕವಿ ಮತ್ತೆ ಮತ್ತೆ ಜೀವಂತವಾದ ಭಾಷೆಯ ಶೋಧಕ್ಕಾಗಿ ಹೊರಡಬೇಕಾಗುತ್ತದೆ. ಆಡು-ನುಡಿಯ ಉಪಯೋಗದ ಒಂದು ವಿಶೇಷವಾದ ಲಾಭವೆಂದರೆ ಅದು ಮಾತಿನಲ್ಲಿ ಆಡುವವನ ವ್ಯಕ್ತಿತ್ವನ್ನು ಸಮಗ್ರವಾಗಿ ಪ್ರಕಟಿಸಬಲ್ಲದು. ಮಾತಿನ ಅರ್ಥದೊಡನೆ ಭಾವಸಂಕೀರ್ಣತೆಯನ್ನು, ಧೋರಣೆಯನ್ನು ನಿಲುವನ್ನು ಮತ್ತು ಹಾವಭಾವಗಳನ್ನು ಕೂಡ ಆಡು-ನುಡಿ ಸೂಚಿಸಬಹುದು. ಕವಿ ಭಾಷೆಯ ಈ ಎಲ್ಲ ಶಕ್ತಿಗಳನ್ನು ಬಳಸಿಕೊಂಡಾಗ ಮಾತ್ರ ಕಾವ್ಯ ಶ್ರೀಮಂತವಾಗಬಲ್ಲದು. ಆದರೆ ಆಡು-ನುಡಿಯ ಉಪಯೋಗದ ಅನನುಕೂಲತೆಯೆಂದರೆ ಅದರ ಸಮೃದ್ಧಿ ಅವಶ್ಯಕತೆಗಿಂತ ಹೆಚ್ಚಾಗಿರುವದು. ಕಾವ್ಯ ಪ್ರಕಟಿಸಬೇಕೆನ್ನುವ ಅರ್ಥಕ್ಕೂ ಮಾತು ನೆನಪಿಗೆ ತಂದುಕೊಡುವ ಪ್ರತಿಮೆಗೂ ವಿರೋಧ ಉಂಟಾಗಿ ಅರ್ಥಸಂಕರಕ್ಕೂ ಎಡೆಕೊಡಬಹುದು. ಬೆಂಕಿಯನ್ನು ಉಪಯೋಗಿಸಿದಂತೆ ಆಡುನುಡಿಯನ್ನು ಬಳಸಿಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಗ್ರಂಥ-ಭಾಷೆಯಷ್ಟು ಸುಲಭವಾಗಿ ಆಡು-ನುಡಿ ಕಾವ್ಯದ ಉಪಯೋಗಕ್ಕೆ ಒಗ್ಗುವಂಥದಲ್ಲ. ಕವಿಗೆ ಈ ಅರಿವು ಇದ್ದರೆ ಅವನು ಜೀವಂತ ಭಾಷೆಯನ್ನು ತನ್ನ ಕಾವ್ಯದ ಹದಕ್ಕೆ ತಕ್ಕ ಹಾಗೆ ಉಪಯೋಗಿಸಿಕೊಳ್ಳಬಲ್ಲ; ಹತ್ತು ದಿಕ್ಕಿಗೆ ಓಡುವ ಅದರ ಶಕ್ತಿಗಳನ್ನು ನಿಯಂತ್ರಿಸಬಲ್ಲ. ವಾಕ್ಯರಚನೆಯ ತಿರುವು ಬದಲಾದರೂ ಕೂಡ ಎಲ್ಲಿ ಜೀವನದೃಷ್ಟಿಯೇ ಪಲ್ಲಟವಾಗುತ್ತದೋ ಎಂಬ ಎಚ್ಚರಿಕೆಯಿಂದ ಕವಿ ಭಾಷೆಯನ್ನು ಬಳಸಿದಾಗ ಮಾತ್ರ ಅದು ಅತ್ಯಂತ ಸೂಕ್ಷ್ಮವಾದ ಉಪಕರಣವಾಗಬಲ್ಲದು. ಕೆಲವೇ ಮಾತುಗಳಲ್ಲಿ ಬಹಳಷ್ಟು ಅರ್ಥವನ್ನು ಪ್ರಕಟಿಸುವದು ಕಲೆಯ ಶ್ರೇಷ್ಠತೆಯ ಗುರುತು ಎಂದು ಹೇಳುವದು ವಿಮರ್ಶೆಯಲ್ಲಿಯ ದಿನಬಳಕೆಯ ಸಿದ್ಧಾಂತವಾಗಿಬಿಟ್ಟಿದೆ. ಆದರೆ ಬಾಹುಬಲಿಯ ವೈರಾಗ್ಯ ಮದನದ ಶೃಂಗಾರದಿಂದ ಹುಟ್ಟಿಬಂದಂತೆ ಭಾಷೆಯ ಮಿತವ್ಯಯ ಭಾಷೆಯ ಸಮೃದ್ಧಿಯಲ್ಲಿಯೇ ಹುಟ್ಟಿಬರಬೇಕು. ಕಂಬಾರರ 'ಹೇಳತೇನ ಕೇಳ'ದ ಸಮೃದ್ಧಿ ಅಂಥ ಸೃಜನಶೀಲವಾದ ಸಮೃದ್ಧಿಯಾಗಿದೆ. ಕಂಬಾರರಲ್ಲಿ ಅದು ಸಂಸ್ಕಾರದ ರೂಪದಲ್ಲಿದ್ದರೆ ಅವರ ಕಾವ್ಯದ ಬೆಳವಣಿಗೆಗೆ ಅದೂ ಒಂದು ಅನುಕೂಲವಾದ ವಾತಾವರಣವೇ. ಭಾಷೆಯ ಶಕ್ತಿಗಳು ಸಂಸ್ಕಾರದಿಂದಲೇ ಬರಲಿ ಅಥವಾ ಕವಿ ಅದನ್ನು ಕಷ್ಟಪಟ್ಟು ಗಳಿಸಿಕೊಂಡಿರಲಿ, ಅದರ ಬೆಳವಣಿಗೆ ಮಾತ್ರ ಕವಿಯ ಪ್ರಜ್ಞಾ ಪೂರ್ವಕವಾದ ಹಟದಲ್ಲಿದೆ.

‘ಹೇಳತೇನ ಕೇಳ’ದಲ್ಲಿಯ ಆಡು-ನುಡಿಯ ಉಪಯೋಗ ನಿರೀಕ್ಷಿಸುವಷ್ಟು ಫಲ ಕೊಡಲಿಲ್ಲ. ಮೇಲೆ ಸೂಚಿಸಿರುವಂತೆ ಕಂಬಾರರ ಪ್ರತಿಭೆ ಆ ಕಾವ್ಯದಲ್ಲಿ ಭಾಷೆಯ ಸಮೃದ್ಧಿಯನ್ನು ನಿಯಂತ್ರಿಸುವ ಗೋಜಿಗೆ ಹೋಗಿಲ್ಲ. ತನ್ನ ಭಾಷೆಯ ಸೃಜನಶಕ್ತಿಗೆ ಮರುಳಾದ ಕವಿ ಮತ್ತೆ ಮತ್ತೆ ಅದನ್ನು ದುಡಿಸಿಕೊಂಡಂತಾಗಿದೆ. ಕಂಬಾರರ ಒಂದು ಮಾತಿನ ಲಯ ಒಂದು ಚಿತ್ರವನ್ನು ದುಡಿಸಿಕೊಂಡಂತಾಗಿದೆ. ಕಂಬಾರರ ಒಂದು ಮಾತಿನ ಲಯ ಒಂದು ಚಿತ್ರವನ್ನು ಮೂಡಿಸಬಲ್ಲದು. ಆದರೆ ಚಿತ್ರಗಳಲ್ಲಿಯ ಅನುಭವದಿಂದ ಮನಸ್ಸು ಮುಗ್ಧವಾದರೂ ಹೊಟ್ಟೆತುಂಬುವದಿಲ್ಲ. ಅಲ್ಲದೆ ಕಾವ್ಯದ ಆಶಯವನ್ನು ಮುಟ್ಟಬೇಕೆನ್ನುವ ತವಕದಲ್ಲಿರುವಾಗ ಈ ಚಿತ್ರಗಳು ದಾರಿ ತಪ್ಪಿಸುತ್ತವೆ. ಅನುಭವ ಭಾಷೆಯಲ್ಲಿ ನಾಟ್ಯಸಿದ್ಧಿಯನ್ನು ಪಡೆಯದೆ ಗತ್ಯಂತರವಿಲ್ಲ. ಕಾವ್ಯದಲ್ಲಿ ಈ ಸಿದ್ಧಿ ಸಾಧ್ಯವಾಗದೆಂದು ಮಾತ್ರ ಇದರ ಅರ್ಥವಲ್ಲ. ಆದರೆ ‘ಹೇಳತೇನ ಕೇಳ’ದಲ್ಲಿ ಇದು ಸಾಧ್ಯವಾಗಿಲ್ಲ. ಒಂದು ಉದಾಹರಣೆಯಿಂದ ಈ ಮಾತನ್ನು ಸ್ಪಷ್ಟಗೊಳಿಸಬಹುದು:

ಮರಿಯಾನಿ ಕರತಂದ ಕ್ವಾರಿಹಲ್ಲ ಕೊರಕೊರದ
ಬಲಗೈಗೆ ಯೋಳ ಬಳಿ ಏನ ನಿವಳಾ!
ಹಚ್ಚಿಬಟ್ಟ ಚುಚ್ಚದಕ ಹಸರ ಸಾಕಾಗಿಲ್ಲ
ಚಿಗುರಿಗೆ ಮಿದುಗೈಯ ಚಾಚ್ಯಾಳ!

ಗೌಡಿತಿಯ ಹಿಂಸ್ರಕಾಮಕ್ಕೆ ಬಲಿಯಾದ ತಾಯಿ-ಮಕ್ಕಳ ಕರುಣಸಂಬಂಧದ ಚಿತ್ರ ಇಲ್ಲಿದೆ. ಗೌಡಿತಿಯ ಅಲಂಕಾರಕ್ಕೆ ಬೆಳೆಯುತ್ತಿರುವ ಜೀವ ಬಲಿಯಾಗುವದರ ಚಿತ್ರವೂ ಮಾರ್ಮಿಕವಾಗಿದೆ. ಆದರೆ ಈ ಪದ್ಯದಲ್ಲಿಯ ಪ್ರತಿಮೆಗಳು ಅಷ್ಟಕ್ಕೇ ನಿಲ್ಲುವದಿಲ್ಲ. ಮರಿಯಾನೆ, ಅದರ ಕೋರೆಹಲ್ಲು, ಹಸಿರು, ಚಿಗುರು, ಮಿದುಗೈ ಇವು ಬೇರೊಂದು ಸುಕುಮಾರ ಪ್ರಪಂಚವನ್ನು ನಿರ್ಮಿಸುವ ಹವಣಿಕೆಯಲ್ಲಿವೆ ಮತ್ತು ಈ ಹವಣಿಕೆಯನ್ನು ನಿಯಂತ್ರಿಸಲು ಕವಿತೆಯ ಧೋರಣೆಯಾಗಲಿ ಪ್ರಯತ್ನಿಸುವುದಿಲ್ಲ. ಕವಿತೆಯ ಅಭಿವ್ಯಕ್ತಿಯಲ್ಲಿ ದೋಷವಿಲ್ಲದಿದ್ದರೂ ಕವಿಯ ಬಹುಮುಖಪ್ರಜ್ಞೆ ಜಾಗೃತವಾಗದಿದ್ದಾಗ ಇಂಥ ಸಬಲವಾದ ಪ್ರತಿಮೆಗಳು ಕವಿತೆಯ ಹೊರಗೇ ಉಳಿದುಬಿಡುವ ಹೆದರಿಕೆ ಇದೆ. ಕುಮಾರವ್ಯಾಸ ರತ್ನಾಕರವರ್ಣಿಯಂಥ ವರ್ಣಕ ಕವಿಗಳಲ್ಲಿ ಕೂಡ ಈ ಬಗೆಯ ಅಪಾಯವಿರುವದನ್ನು ನೋಡಬಹುದು. ಕುಮಾರವ್ಯಾಸ ತನ್ನ ಅಸದೃಶವಾದ ನಾಟ್ಯಪ್ರಜ್ಞೆಯಿಂದ ಈ ಅಪಾಯವನ್ನು ನಿವಾರಿಸಿಕೊಳ್ಳುತ್ತಾನೆ. ಇನ್ನು ರತ್ನಾಕರನ ಅಭಿವ್ಯಕ್ತಿಯ ರೀತಿಯೇ ಪ್ರತಿಮೆಗಳ ನಿರ್ಮಾಣವಾಗಿರುವದರಿಂದ ಈ ಸಮಸ್ಯೆ ಅಷ್ಟೊಂದಾಗಿ ಕಾಡುವದಿಲ್ಲ. ಹೀಗಾಗಿ ಅವರಿಬ್ಬರಲ್ಲಿಯೂ ಅಲಂಕಾರಗಳ ಯೋಜನೆ ಕಾವ್ಯದ ಆಶಯವನ್ನು ಮರೆಮಾಡುವದಿಲ್ಲ.

ಕಂಬಾರರು ಬೆಳೆಯುತ್ತಿರುವ ಕವಿಯಾಗಿರುವದರಿಂದ ಅವರ ಕಾವ್ಯ ಎದುರಿಸಬೇಕಾಗಿರುವ ಕೆಲವು ಸಮಸ್ಯೆಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ಅವರ ಕಾವ್ಯದ ಗುಣದೋಷಗಳ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಅವರ ‘ಋಷ್ಯಶೃಂಗ’ ನಾಟಕ ಕೂಡ ಒಂದು ದೃಶ್ಯಕಾವ್ಯವಾಗಿರುವದರಿಂದ ಮೇಲಿನ ಮಾತುಗಳು ಆ ಕೃತಿಯ ಚರ್ಚೆಗೆ ಪೀಠಿಕೆಯಾಗಿ ಬಂದಿವೆ. ಕಾವ್ಯಸ್ವರೂಪವನ್ನು ನಮ್ಮ ನಾಟಕ ಮರೆತು ಹಳೆಮಾತಾಗಿದೆ. ಪಾಶ್ಚಾತ್ಯ-ಪದ್ಯ ನಾಟಕಗಳ ಮೂಲಕವಾಗಿ ಅಭಿವ್ಯಕ್ತಿಯ ರೀತಿಯನ್ನು ಕಲಿತುಕೊಂಡು ಪದ್ಯನಾಟಕವನ್ನು ಪುನಃ ಸೃಷ್ಟಿಸುವ ಪ್ರಯತ್ನ ಅಲ್ಲಲ್ಲಿ ನಡದಿದೆ. (ಉದಾ: ಶ್ರೀಯುವರ ‘ಅಶ್ವತ್ಥಾಮನ್’ ಪುತಿನ ಅವರ ಗೀತನಾಟಕಗಳು. ರಾಮಚಂದ್ರಶರ್ಮರ ‘ವೈತರಣಿ’ ಇಂಥ ಕೆಲವು ಉಲ್ಲೇಖನೀಯವಾದ ಪ್ರಯೋಗಗಳಾಗಿವೆ.) ಕಂಬಾರರ ಈ ನಾಟಕ ಅಂಥ ಪ್ರಯೋಗವಾಗಿಲ್ಲ. ಪರಂಪರಾಗ್ತವಾಗಿ ನಾಡಿನಲ್ಲಿ ಪ್ರಚಲಿತವಾಗಿರುವ ಜಾನಪದ ರೂಪಕಗಳ ತಂತ್ರವನ್ನು ಅಳವಡಿಸಿಕೊಂಡು ಈ ಕೃತಿ ರಚಿತವಾಗಿದೆ. ಇಂಥ ಪ್ರಯತ್ನಗಳ ಸಫಲತೆಯೇನೆಂಬುದನ್ನು ಅರಿಯುವ ಪ್ರಯತ್ನವೇ ಈ ನನ್ನ ಮುನ್ನುಡಿಯಾಗಿದೆ.

‘ಋಷ್ಯಶೃಂಗ’ ನಾಟಕ ‘ಹೇಳತೇನ ಕೇಳ’ದ ಕತೆಯನ್ನೇ ಮುಂದುವರಿಸಿ ಬೆಳೆಸುತ್ತದೆ. ಆದರೆ ಸಂದರ್ಭ ಮತ್ತು ಅಭಿವ್ಯಕ್ತಿಯ ಮಾಧ್ಯಮ ಭಿನ್ನವಾದಂತೆ ಅದರ ಅರ್ಥವಂತಿಕೆಯಲ್ಲಿ ಬಹಳಷ್ಟು ಅಂತರವಿದೆ. ‘ಹೇಳತೇನ ಕೇಳ’ದ ನಾಯಕನಾದ ರಾಮಗೊಂಡನ ತಮ್ಮನಾದ ಬಾಳಗೊಂಡ ಇಲ್ಲಿಯ ನಾಯಕನಾಗಿದ್ದಾನೆ. ಗೌಡನನ್ನು ಕೊಂದು ಅವನ ರೂಪದಲ್ಲಿ ತಿರುಗಿ ಬಂದು ಗೌಡಿಕೆಯನ್ನು ಆಕ್ರಮಿಸಿದ್ದ ರಾಕ್ಷಸ ಮುದುಕನಾಗಿದ್ದರೂ ಸಮರ್ಥನಾದ ಪ್ರತಿನಾಯಕನಾಗಿದ್ದಾನೆ. ರಾಕ್ಷಸ ಮತ್ತು ಗೌಡತಿಯರ ಅಸಹಜಸಂಯೋಗದಿಂದ ಹುಟ್ಟಿದ ಬಾಳಗೊಂಡ ಬರಗಾಲದಿಂದ ಶಾಪಗ್ರಸ್ತವಾದಂತಿದ್ದ ಊರಿಗೆ ಒಂದೇ ಒಂದು ಭರವಸೆಯಾಗಿದ್ದಾನೆ. ನಾಟಕದ ಪ್ರಾರಂಭದಲ್ಲಿ ಅವನ ಪ್ರತೀಕ್ಷೆಯಲ್ಲಿ ತುದಿಗಾಲಮೇಲೆ ನಿಂತ ಊರವರ ಚಿತ್ರವಿದೆ. ಇದರ ಜೊತೆಯಲ್ಲಿಯೇ ವಸ್ತುವಿನ ಇನ್ನೊಂದು ಮಗ್ಗಲು ಸೇರಿಕೊಳ್ಳುತ್ತದೆ. ಗೊಲ್ಲತಿಯ ವೇಷದಲ್ಲಿ ಹೊಲೆಯರ ಕಮಲಿ ತನ್ನ ಕನಸನ್ನು ಹೇಳಹೇಳುತ್ತ ಸಫಲ-ಕಾಮದ ಸಂಕೇತವಗುವದಲ್ಲದೆ ನಾಟಕದ ನಾಯಿಕೆಯೂ ಆಗಿಬಿಡುತ್ತಾಳೆ. ಅವಳ ಪೂರ್ವೋತ್ತರಗಳಿಂದ ಊರಿನ ಜೀವನದ ನಿರ್ವೀರ್ಯತೆ ಮತ್ತು ಆರ್ತತೆಗಳು ತಿಳಿದುಬರುತ್ತವೆ. ಬಾಳಗೊಂಡ ಮತ್ತು ಕಮಲಿಯರ ಕೂಡುವಿಕೆಯಿಂದ ಮಳೆಯಾಗಿ ಊರವರು ಬರಗಾಲದ ಪೀಡೆಯಿಂದ ಬಿಡುಗಡೆಯನ್ನು ಪಡೆಯಬೇಕು. ನಾಟಕದ ಹೆಸರಿನಲ್ಲಿರುವ ಪೌರಾಣಿಕ ಸೂಚನೆ ಮತ್ತು ನಡುವೆ ಬರುವ ಜೋಕುಮಾರನ ಕತೆ, ಗಂಡು ಹೆಣ್ಣಿನ ಸಫಲವಾದ ಕೂಟಕ್ಕೂ ಭೂಮಿಯ ಸುಭಿಕ್ಷಕ್ಕೂ ಇರುವ ಸಂಬಂಧವನ್ನು ಎತ್ತಿ ತೋರಿಸುತ್ತವೆ. ಬಾಳಗೊಂಡನ ಆಗಮನದಿಂದಲೇ ಮಳೆಯಾಗುತ್ತದೆಂದು ಲೆಕ್ಕಹಾಕಿದ್ದ ಊರವರು ನಿರಾಶರಾಗಿ ಅವನಿಂದ ದೂರವಾಗುತ್ತಾರೆ. ಊರು ಬಿಟ್ಟು ಹೋಗಬೇಕೆಂದುಕೊಂಡಿದ್ದ ಬಾಳಗೊಂಡ ಮಣ್ಣಿನ ಮೋಹಕ್ಕೆ ಬಿದ್ದು ಊರಿನ ಬಿಡುಗಡೆಗಾಗಿ ಯೋಜನೆಯನ್ನು ಹಾಕುತ್ತಾನೆ. ಆದರೆ ಅವನ ತಂದೆ ಅವನ ಯೋಜನೆಗಳನ್ನೆಲ್ಲ ತಾನೇ ಕಾರ್ಯಗತವಾಗಿಸುತ್ತಾನೆ. ದುಷ್ಟಶಕ್ತಿ ನೆಲೆಯೂರಿ ನಿಲ್ಲುತ್ತದೆ. ಕೊನೆಯಂಕಿನಲ್ಲಿ ನಡೆಯುವ ತಂದೆ ಮಕ್ಕಳ ದ್ವಂದ್ವದಲ್ಲಿ ಮಗ ಗೆದ್ದು ಸೋಲುತ್ತಾನೆ.

ಈ ಕತೆ ನಾಟಕದಲ್ಲಿ ಅಭಿವ್ಯಕ್ತಿಯನ್ನು ಪಡೆಯುವಾಗ ಅದು ಹಲವಾರು ಮಟ್ಟಗಳಲ್ಲಿ ಬೆಳೆದು ಹೊಸ ಹೊಸ ಅರ್ಥವಿಶೇಷಗಳನ್ನು ಮೈಗೂಡಿಸಿಕೊಂಡಿದೆ. ಬಾಳಗೊಂಡನ ವ್ಯಕ್ತಿತ್ವ ಬಹುಮುಖವಾಗಿರುವದರಿಂದ ಅದು ಬೇರೆ ಬೇರೆ ಮಟ್ಟಗಳಲ್ಲಿ ಬೆಳೆದುಬರುತ್ತದೆ. ಮುಖ್ಯವಾಗಿ ಅದು ಕಾವ್ಯದ ಮಟ್ಟದಲ್ಲಿ ಬೆಳೆಯುತ್ತ ಬಂದಿದೆ. ನಾಟಕದ ನಾಟಕೀಯತೆಯಲ್ಲಿ-ಒಂದು ಪಾತ್ರದ ಅನುಭವ ಇನ್ನೊಂದು ಪಾತ್ರದ ಅನುಭವದೊಡನೆ ನಡೆಸುವ ಪ್ರತಿಕ್ರಿಯೆಯಲ್ಲಿ ಅವನ ಪಾಲು ಇಲ್ಲವೆಂದಲ್ಲ ಎರಡು ಮತ್ತು ನಾಲ್ಕನೆಯ ಅಂಕುಗಳಲ್ಲಿ ಅವನು ತಂದೆಯೊಡನೆ ನಡೆಸುವ ಸೆಣಸಾಟ ಬಹಳ ಮಹತ್ವದ ನಾಟಕೀಯ ಕ್ರಿಯೆಯಾಗಿದೆ. ಆದರೆ ನಾಟಕದಲ್ಲಿ ಬಾಳಗೊಂಡ ಹಲವಾರು ಪಾತ್ರಗಳನ್ನು ಅಭಿನಯಿಸುತ್ತಾನೆ. ಊರಿನ ಜೀವನ ನಿಸ್ಸತ್ವವಾದ ನೆಲದಂತೆ. ಭೋಗಲಾಲಸೆ ತೃಪ್ತವಾಗದ ಹೆಣ್ಣಿನಂತೆ ದೂರದಿಂದ ಬರುವ ಕರುಣೆಗಾಗಿ, ಸಹಾಯಕ್ಕಾಗಿ ಬಾಯಿ ತೆರೆದುಕೊಂಡು ಬಿದ್ದಿದೆ. ಬರಗಾಲ ಮತ್ತು ಮಳೆ, ಕಾಮ ಮತ್ತು ಅದರ ತೃಪ್ತಿ ಈ ಪ್ರತಿಮೆಗಳಲ್ಲಿ ನಾಟಕದ ವಸ್ತು ಮುಪ್ಪುರಿಗೊಂಡು ವ್ಯಕ್ತವಾಗುತ್ತದೆ. ಬಾಳಗೊಂಡ ಈ ಎಲ್ಲ ಬಯಕೆಗಳ ತೃಪ್ತಿಗೆ ಪ್ರತೀಕವಾಗಿದ್ದಾನೆ.

ಆದರೆ ಬಾಳಗೊಂಡ ಹುಟ್ಟಿದೂರಿಗೆ ಎರವಾಗಿ ಪರದೇಶಿಯಾಗಿದ್ದಾನೆ. ವಿಕಲ-ವ್ಯಕ್ತಿದ ಮೂಲಕವಾಗಿ ಅಂತರಪಿಶಾಚಿಯಾಗಿದ್ದಾನೆ. ವ್ಯಕ್ತಿತ್ವದ ಬೇರುಗಳನ್ನು ಹುಡುಕಿಕೊಂಡು ಹೋಗಿ ತನ್ನ ಜೀವನವನ್ನು ಪುನರ್ರಚಿಸಿಕೊಳ್ಳುವ ಬೆಳವಣಿಗೆ ನಾಟಕದಲ್ಲಿ ಕಾವ್ಯದ ಮಟ್ಟದಲ್ಲಿ ನಡೆಯುತ್ತದೆ. ಅವನು ಊರಿಗೆ ಬಂದ ಕೂಡಲೆ ಮೊದಲು ಕಮಲಿಯನ್ನು ಕಾಣುತ್ತಾನೆ. ಈ ಅನುಭವವನ್ನು ಕಮಲಿ ವರ್ಣಿಸುವ ರೀತಿಯಲ್ಲಿ ಸುಕಮಾರ-ದಂತಕತೆಗಳ ಕಾವ್ಯಛಾಯೆ ಇದೆ.

ಕಮಲಿ: ಹೆಸರು ಹೇಳ ಅಂದರ
ಕೊಳ್ಳಾಗಿನ ಮುತ್ತಿನ ಸರಕ್ಕ ಚಿಟಮುದ್ದ ಕೊಟ್ಟ
ನನ್ನ ಮ್ಯಾಲ ಒಗದ ಕುದರಿ ಓಡಿಸಿದಾ.

ಕಮಲಿಯ ಈ ಅನುಭವದಲ್ಲಿ ವಾಸ್ತವಿಕತೆ ಎಷ್ಟು, ಕನಸಿನ ಅಂಶವೆಷ್ಟು ಎನ್ನುವದು ಸಂದಿಗ್ದವಿಷಯವಾಗಿದೆ. ವರ್ಣನೆಯ ರೀತಿಯಲ್ಲಿಯ ಕಾವ್ಯಮಯತೆ ಉದ್ದೇಶಪೂರ್ಣವಾಗಿದೆ. ಈ ಕಾವ್ಯಮಯ ವ್ಯಕ್ತಿತ್ವಕ್ಕೂ ಮುಂದೆ ಕಾಣುವ ಅವನ ವ್ಯಕ್ತಿತ್ವಕ್ಕೂ ಸಂಬಂಧ ತಪ್ಪಿಹೋಗಿರುವದರಿಂದ; ಅವನ ಅಸಲು ವ್ಯಕ್ತಿತ್ವ ಯಾವುದೆಂಬುದು ಸಂದಿಗ್ಧವಾಗಿ ಉಳಿಯುತ್ತದೆ. ಸ್ವಂತ ವ್ಯಕ್ತಿತ್ವದ ರೂಪರೇಷೆಗಳನ್ನು ಅವನು ಪಡೆಯುವದು ತನ್ನ ಅಣ್ಣನ ಕತೆಯ ಮೂಲಕವಾಗಿ, ಮತ್ತು ಹಳಬರ ಲಕ್ಷ್ಯಾನೊಡನೆ ಮಾತಾಡುವಾಗ ತೇಲಿಬರುವ ಬಾಲ್ಯದ ಸ್ಮೃತಿಗಳ ಮೂಲಕವಾಗಿ. ಕನಸು, ಗತಕಾಲದ ಸಂಗತಿಗಳ ಕಥನ, ನೆನಪು ಇವು ಕಾವ್ಯಾಭಿವ್ಯಕ್ತಿಯ ರೀತಿಗಳಾಗಿವೆ. ಇವುಗಳಿಂದ ಬಾಳಗೊಂಡನ ವ್ಯಕ್ತಿತ್ವದ ಆಂತರಿಕ ಬೆಳವಣಿಗೆ ಮೂರ್ತವಾಗಿ ಕಾಣುವಂತಾಗಿದೆ. ಆದರೆ ಇಡೀ ನಾಟಕದಲ್ಲಿ ಬಾಲಗೊಂಡ ಒಂದು ಹಾಡನ್ನೂಹಾಡಿಲ್ಲ. ಬೇರೆಯವರು ಹಾಡುವ ನಾಟಕದ ಗೀತಗಳಲ್ಲಿ ಅವನ ವ್ಯಕ್ತಿತ್ವ ಪ್ರತಿಫಲಿತವಾಗುತ್ತದೆ. ಈ ಸಂಗತಿ ನೈಜ ಅನುಭವಕ್ಕೂ ಅವನಿಗೂ ಇರುವ ಅಂತರವನ್ನು ಗೆರೆಕೊರೆದು ತೋರಿಸುತ್ತದೆ. ಬಾಳಗೊಂಡನಿಗೆ ಸಂಬಂಧಿಸಿದಂತೆ ಆಗಿರುವ ಈ ಕಾವ್ಯದ ಉಪಯೋಗಕ್ಕೆ ತಾಂತ್ರಿಕ ಮಹತ್ವವಿದೆ. ಬಾಳಗೊಂಡ ನಾಟಕದ ನಾಯಕ. ಜಾನಪದ ಕಾವ್ಯ ಹಾಗೂ ನಾಟಕಗಳಲ್ಲಿನ ನಾಯಕ ಸಾಮಾನ್ಯರ ಜೊತೆಗೆ ಸಂಬಂಧವನ್ನಿಟ್ಟುಕೊಂಡೂ ಪ್ರತ್ಯೇಕವಾಗಿ ಉಳಿಯುತ್ತಾನೆ. ಸಾಮಾನ್ಯರ ಕೈಯಳತೆಗೆ ಮೀರಿದ ಸುಖ-ದುಃಖಗಳನ್ನು ಅವನು ಅನುಭವಿಸುತ್ತಾನೆ; ಅವರು ಕಾಣದ ದೈವ-ದುರ್ದೈವಗಳನ್ನು ಅವನು ಕಾಣುತ್ತಾನೆ. ಸಂಸ್ಕೃತ ನಾಟಕಗಳಲ್ಲಿಯ ಕಾವ್ಯದ ಉಪಯೋಗ ಮತ್ತು ಕಂಪನಿನಾಟಕಗಳಲ್ಲಿ 'ಸ್ವಗತ ಭಾಷಣ' ಮುಂತಾದವುಗಳು ನಾಟಕ ಉಪಯೋಗಿಸುವ ಕಾವ್ಯತಂತ್ರಗಳಿಗೆ ಉದಾಹರಣೆಗಳಾಗಿವೆ. ಬಾಳಗೊಂಡನ ವಿಷಯದಲ್ಲಿ ಅವನ ಪರಿಸ್ಥಿತಿ ತೊಡಕಿನದಾಗಿದೆ. ನಾಟಕದಲ್ಲ ಉಳಿದವರ ದೃಷ್ಟಿಯಿಂದ ನೋಡಿದಾಗ ತನ್ನ ನೆಲೆ ತನಗೇ ಗೊತ್ತಿಲ್ಲ. ನಾಟಕದಲ್ಲಿಯ ಕಾವ್ಯ ಅವನ 'ನಾಯಕತ್ವ'ದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ; ಅವನ ಅಂತಃಸತ್ವದ ಅನ್ವೇಷಣೆಯನ್ನು ನಡೆಸುತ್ತದೆ. 'ಋಷ್ಯಶೃಂಗ' ನಾಟಕದ ಗೀತಗಳಷ್ಟನ್ನೇ ಪರೀಕ್ಷಿಸಿದಾಗ ಅವುಗಳಲ್ಲಿಯ ವಿಷಣ್ಣತೆ ಅನನ್ಯವಾದದ್ದೆಂದು ತೋರುತ್ತದೆ. ಗೀತಗಳ ಪ್ರತಿಮಾಯೋಜನೆಗಿಂತ ಅವುಗಳ ಲಯ ಈ ವಿಷಣ್ಣ ಭಾವವನ್ನು ಪ್ರಕಟಿಸುತ್ತದೆಂಬ ಮಾತು ಮಹತ್ವದ್ದಾಗಿದೆ.

ಬಾಳಗೊಂಡನ ವ್ಯಕ್ತಿತ್ವದ ಬೆಳವಣಿಗೆ ಮತ್ತು ನಾಟಕದ ಉಳಿದ ಜೀವನ ಇವು ಒಂದನ್ನೊಂದು ಸಂಧಿಸುವ ಸ್ಥಳದಲ್ಲಿ ನಾಟಕ ತಂತಾನೆ ಪ್ರಕಟವಾಗುತ್ತದೆ. ಬಾಳಗೊಂಡನ ವ್ಯಕ್ತಿತ್ವಕ್ಕೂ ಉಳಿದ ಜನಜೀವನಕ್ಕೂ ಇರುವ ಸಂಬಂಧ ಮಳೆ ಮತ್ತು ಭೂಮಿಯ ಸಂಬಂಧದಂತೆ ರೂಪಕದ ಸಂಬಂಧವಾಗಿದೆ. ಜನಜೀವನದ ಚಿತ್ರಣ ನಾಟಕದ ಮುಕ್ಕಾಲು ಪಾಲನ್ನು ಆಕ್ರಮಿಸಿಕೊಂಡಿದೆ. ಪಾಪ ಮತ್ತು ನಪುಂಸಕತ್ವಗಳ ಬಾಹ್ಯಸಂಕೇತವಾಗಿರುವ ಬರಗಾಲದಿಂದ ಪೀಡಿತವಾಗಿರುವ ಜೀವನದ ವೇದನೆ ಕಾರ್ಯಕಾರಣಗಳ ಸಂಬಂಧವನ್ನು ಮೀರಿದೆ. ನಾಟಕದ ಪ್ರಾರಂಭದಲ್ಲಿ ಜೀವನದ ಗತಿಯನ್ನು ವರ್ಣಿಸುತ್ತ ಸೂತ್ರಧಾರ. "ನರಮನಿಶ್ಯಾ ಭೂಮಿ ತಲಿಮ್ಯಾಲ ಹುಟ್ಟಿದ ಬಳಿಕ, ಇಲ್ಲಾ ದನಾ ಆದರೂ ಆಗಬೇಕು, ಇಲ್ಲಾ. ಕಸಾಬಾದರೂ ಆಗಬೇಕು." ಎಂದು ಹೇಳುತ್ತಾನೆ. ರಾಕ್ಷಸಗೌಡ ಮತ್ತು ಗೌಡತಿಯರ ಪಾಪದ ಫಲಕ್ಕೆ ಇದು ಸೂತ್ರವಾಗುತ್ತದೆ. ಈ ಸೂತ್ರದಿಂದ ಪಾರಾಗುವ ದಾರಿ ತಿಳಿದಿದ್ದರೂ, ಪಾರಾಗು ಸಂಕಲ್ಪವಿಲ್ಲದಷ್ಟು ಜೀವನ ನಿರ್ವಿಣ್ಣತೆಯನ್ನು ಕಾಣಬಹುದು. ಬಾಳಗೊಂಡನ ಸ್ವಾಗತಕ್ಕಾಗಿ ಬಂದು ನೆರೆದವರ ಗೊತ್ತುಗುರಿಯಿಲ್ಲದ ಹರಟೆಯಲ್ಲಿ ಮತ್ತೆ ಮತ್ತೆ ಸಾವಿನ ಪ್ರತಿಮೆಗಳು ಮೂಡಿ ಮಾಯವಾಗುತ್ತವೆ. ಆದರೆ ಇಲ್ಲಿಯ ಸಾವು ವ್ಯಕ್ತಿಗತ ಮರಣದಂತೆ ಪರಿಪೂರ್ಣತೆಯ ಕುರುಹಾಗಿಲ್ಲ. ಮುಪ್ಪಿನಿಂದ ಬರುವ ಸಾವು ನಿಸರ್ಗದ ಲಯವಿಧಾನ: ಸಂಕಲ್ಪಬಲದ ಸಾವು ವೈಯಕ್ತಿಕ ವಿಜಯದ ಸಂಕೇತ. ಈ ನಾಟಕದಲ್ಲಿಯ ಸಾವು ಮಾತ್ರ ಇವೆರಡೂ ಅಲ್ಲದ ನಿರ್ಬಲ ಸಾವು. ದೊಡ್ಡ ಬಸ್ಯಾ ಗೋರಿಯನ್ನು ಅಗೆದಾಗ ಕಂಡ ಹೆಣವನ್ನು ಈ ರೀತಿ ವರ್ಣಿಸುತ್ತಾನೆ: "ಬೇವಿನ ಹಸಿತಪ್ಪಲ ಹಾಂಗs ಇತ್ತ. ಹೊಸಾ ಅಂಗಿ, ಹೊಸಾ ದೋತರ, ದಡಿರುಮಾಲಾ ಮಾತಾಡಸಬೇಕನಿಸ್ತು" ಜೀವನವನ್ನು ವಿಕೃತಗೊಳಿಸಿ ಅಣಕಿಸುವ ಸಾವು ಇದು. ಹೆಣದ ನಿಲುವಿನ ಶೈಲಿ ಜೀವಂತವಾಗಿದೆ. ದೊಡ್ಡಬಸ್ಯಾನ ವಿಸ್ಮಯದ ಅನುಭವ (ಮಾತಾಡಸಬೇಕನಿಸ್ತು) ಜೀವ ಮತ್ತು ಸಾವುಗಳ ಅಂತರವನ್ನು ತೊಡೆದುಹಾಕಿದೆ. ಜೀವಂತ ಮನುಷ್ಯನ ಅನುಭವ ಸಾವಿನ ಸಲಿಗೆಯ ಸಂಬಂಧದಿಂದ ಮತ್ತಿಷ್ಟು ನಿರ್ಜೀವವಾಗಿದೆ. ಹಳಬರ ಭರಿಮ್ಯಾ ಹೊಲೇರ ಯಮನಿ ಸತ್ತದ್ದನ್ನು ತಿಳಿಯದೆ ಅವಳನ್ನು ಕೂಡಿ ಸಾಯುತ್ತಾನೆ.

ಸಾವಿನ ನಿರ್ವೀರ್ಯತೆ ಈ ಪರಿಯಾದರೆ ಜೀವನದ ನಿರ್ವೀರ್ಯತೆಯನ್ನು ಇಲ್ಲಿಯ ಕಾಮ-ಜೀವನದ ಪ್ರತಿಮೆಗಳು ಚಿತ್ರಿಸುತ್ತವೆ. ನಾಟಕದಲ್ಲಿಯ ಹೆಣ್ಣುಗಳ ಕಾಮ ಜೀವನವನ್ನು ಹರಿದು ತಿನ್ನುವ ಹಿಂಸೆಯಾಗಿದ್ದರೆ ಇಲ್ಲಿಯ ಗಂಡುಗಳೆಲ್ಲ ಬರಿ ಹೋರಿಗಳಾಗಿವೆ. ಜೋಕುಮಾರನ ಕತೆಯಲ್ಲಿಯ ಅನಿರುದ್ಧಕಾಮ ಅಸಂಯಮದ ಪ್ರತೀಕವಾಗಿದೆ. ಗೌಡಿತಿ, ಯಮುನಿ, ಪಾರಿ ಮೊದಲಾದ ಹೆಣ್ಣುಗಳಲ್ಲಿಯ ತೀವ್ರ ಕಾಮ ಸೃಜನದ ಅಪೇಕ್ಷೆಯಿಲ್ಲದ ಅದರ ಶಕ್ತಿಯೂ ಇಲ್ಲದ ಕಾಮವಾಗಿದೆ. ನಾಟಕದಲ್ಲಿಯ ಕಾಮ-ಜೀವನ ಆರೋಗ್ಯಕರವಾದ ವ್ಯವಸ್ಥೆಯಿಲ್ಲದ್ದು. ಮೂರನೆಯ ಅಂಕಿನಲ್ಲಿ ಪಾರಂಬಿ ಕರೆವ್ವನ ಎದುರಿಗಿಟ್ಟ ಕುಳ್ಳಗಳಲ್ಲಿ ಹುಳ ಬೀಳುವದನ್ನು ಎದುರು ನೋಡುತ್ತಿರುವ ಜನರ ಜಗಳದಲ್ಲಿ ಕೂಡ ರೊಚ್ಚು, ತ್ವೇಷ ಕಾಣುವುದಿಲ್ಲ.

ಹೀಗೆ ಈ ನಾಟಕದಲ್ಲಿ ವರ್ಣಿತವಾಗಿರುವ ಸಂಕಟ ಸಾಮಾಜಿಕ ಇಲ್ಲವೆ ಆರ್ಥಿಕ ವಿಷಮತೆಯಿಂದ ಉಂಟಾದದ್ದಲ್ಲ. ಈ ಸಂಕಟ ನೈತಿಕ ಅಧಃಪತನದ ಫಲವಾಗಿದೆ. ಜೀವನ ತಿದ್ದಲಾಗದಂಥ ಅವ್ಯವಸ್ಥೆಗೀಡಾಗಿದೆ. ಗಂಡ-ಹೆಂಡತಿ, ತಾಯಿ-ಮಕ್ಕಳು, ವಿಟ-ಸೂಳೆ ಇಂಥ ಆತ್ಮೀಯ ಸಂಬಂಧಗಳ ಹೊಲಿಗೆ ಬಿಚ್ಚಿಹೋಗಿ, ಈ ಅವ್ಯವಸ್ಥೆ ಬೇರೆ ಸಾಮಾಜಿಕ ಸಂಬಂಧಗಳನ್ನೂ, ಮೌಲ್ಯವ್ಯವಸ್ಥೆಯನ್ನೂ ಗೊಂದಲಗೆಡಿಸಿದೆ. ಒಳಗಿನ ವ್ಯವಸ್ಥೆಯ ಅಭಾವದಿಂದಾಗಿ ಜೀವನದ ಚಟುವಟಿಕೆ ಅರ್ಥಹೀನವಾಗಿದೆ. ರಾಕ್ಷಸಗೌಡನ ದಬ್ಬಾಳಿಕೆ, ಗೌಡಿತಿಯ ಅಸಹಜವಾದ ಕಾಮ ಇವು ಪಾಪವನ್ನು ಬಿತ್ತಿ, ಜನರ ಅಸ್ತಿತ್ವದ ಬೇರಿಗೆ ಬೆಂಕಿ ಹಾಕಿರುವಾಗ ಈ ಚಟುವಟಿಕೆ ಅರ್ಥಹೀನವಾಗಿದೆ. ರಾಕ್ಷಸಗೌಡನ ದಬ್ಬಾಳಿಕೆ, ಗೌಡಿತಿಯ ಅಸಹಜವಾದ ಕಾಮ ಇವು ಪಾಪವನ್ನು ಬಿತ್ತಿ, ಜನರ ಅಸ್ತಿತ್ವದ ಬೇರಿಗೆ ಬೆಂಕಿ ಹಾಕಿರುವಾಗ ಈ ಚಟುವಟಿಕೆ ಕೂಡ ಅಸಂಬದ್ಧವಾಗಿದೆ. ಗ್ರೀಕ್ ನಾಟಕದಲ್ಲಿಯ 'ಮೇಳ'ಗಳಂತೆ ನಾಟಕದ ನಡುನಡುವೆ ಬಂದು ಹುಡದಿ ಹಾಕುವ ಜನರ ಗುಂಪುಗಳು ಈ ಅಸಂಬಂದ್ಧತೆಯನ್ನು ಅಭಿನಯಿಸಿ ತೋರಿಸುತ್ತವೆ. ಆದರೆ ಈ ನಾಟಕದಲ್ಲಿ ಮೇಳದ ಕ್ರಿಯೆ ಮಾತ್ರ ವಿಪರೀತವಾಗಿದೆ. ಗ್ರೀಕ್ ನಾಟಕಗಳಲ್ಲಿ ಆಗುವ ದುರಂತವೆಲ್ಲ ನಾಯಕನದು; 'ಮೇಳ'ದವರು ಅಸಹಾಯ-ಪ್ರೇಕ್ಷಕರು; ನಾಯಕನ ದುರಂತದ ಬಗ್ಗೆ ಅವರು ಭಾಷ್ಯಬರೆಯುವವರು. ಈ ನಾಟಕದಲ್ಲಿ ದುರಂತ ಜನರದು, ನಾಯಕನೇ ಅಸಹಾಯ-ಪ್ರೇಕ್ಷಕ.

ಅವ್ಯವಸ್ಥೆಯಿಂದ ಪಾರಾಗಿ ಹೊಸ ವ್ಯವಸ್ಥೆಯನ್ನು ಜೀವನದಲ್ಲಿ ನಿರ್ಮಿಸಬೇಕಾದರೆ ಇರುವ ಉಪಾಯಗಳು ಎರಡೇ ಎರಡು, ಉದ್ಧಾರಕನ ಸ್ಪರ್ಶದಿಂದ ಜೀವನ ಪುನರುಜ್ಜೀವಿತವಾಗಬೇಕು. ಇಲ್ಲವೆ ದೈವದಲ್ಲಿ ಅಚಲಶ್ರದ್ಧೆಯಿದ್ದವರು ಬಲಿಯಾಗಬೇಕು. ಬಾಳಗೊಂಡ ಈ ಎರಡೂ ಬಗೆಯ ಕ್ರಿಯಾವಿಧಿಗಳಿಗೆ ಕೇಂದ್ರ ವ್ಯಕ್ತಿಯಾಗಿದ್ದಾನೆ. ಸಾಲೆ ಕಲಿಯಲು ಊರು ಬಿಟ್ಟು ಹೋದ ಅವನು ತಿರುಗಿಬಂದು ಊರ ಅಗಸೆಯಲ್ಲಿ ಐದು ಹೆಜ್ಜೆಗಳನ್ನಿಟ್ಟರೆ ಮಳೆಯಾಗುವದೆಂದು ಕಣಿಯಾಗಿದೆ. ಅವನ ಸ್ವಾಗತಕ್ಕಾಗಿಹಾಡಿನಲ್ಲಿ, ಬಾಳಿನ ಜಂಜಡಗಳನ್ನೆಲ್ಲ ಉದ್ಧಾರಕನ ಪಾದಗಳಲ್ಲಿ ಸಮರ್ಪಿಸಿಬಿಡುವ ಅನನ್ಯಶರಣತೆಯ ಭಾವವಿದೆ. ೩ನೆಯ ಅಂಕಿನಲ್ಲಿ ಸೂತ್ರಧಾರ ಹಾಡುವ 'ಏ ಕುರುಬಣ್ಣಾ ಸತ್ತ್ಯುಳ್ಳ ಶರಣಾ' ಎಂಬ ಹಾಡಿನಲ್ಲಿ ದೊಡ್ಡಿಯ ಗುರುತನ್ನೇ ಮರೆತಂತಿರುವ ಕುರಿಗಳು ಮತ್ತು ಕುರುಬನ ಸಂಬಂಧದಲ್ಲಿ ಉದ್ಧಾರಕನನ್ನು ಕೂಗಿ ಕರೆಯುವ ಆರ್ತತೆಯಿದೆ. ಇನ್ನೊಂದು ಕಡೆಗೆ ಅದೇ ಸೂತ್ರಧಾರ ಹಾಡುವ 'ಹಾರಿ ಹಾರೈಸುವೆ ಹಲವ ಹಂಬಲಿಸುವೆ' ಎಂಬ ಗೀತದಲ್ಲಿ ಪ್ರಣಯದ ಪ್ರತಿಮೆಗಳ ಮೂಲಕ ಇದೇ ಆಶಯ ವ್ಯಕ್ತಿವಾಗುತ್ತದೆ. ರಾಕ್ಷಸಗೌಡನ ವ್ಯವಸ್ಥೆ ಹೊರಗಿನ ನಿಯಂತ್ರಣವಾಗಿ ಬಂದು ಜೀವನದ ಸೃಜನಶಕ್ತಿಯನ್ನು ಹಾಳುಮಾಡಿದೆ. ಈ ವ್ಯವಸ್ಥೆಯನ್ನು ಕಿತ್ತೊಗೆದು ಸಹಜಸಂಯಮದಿಂದ ಕೂಡಿದ ಹೊಸ ವ್ಯವಸ್ಥೆಯನ್ನು ನಿರ್ಮಿಸುವದು ಉದ್ಧಾರಕನ ಹೊಣೆಯಾಗಿದೆ. ಊರವರ ಆಸೆಗಳೆಲ್ಲ ಸಹಜವಾಗಿ ಬಾಳಗೊಂಡನಲ್ಲಿ ಕೇಂದ್ರೀಕೃತವಾಗಿವೆ.

ಬಾಳಗೊಂಡ ಊರವರ ಕಣ್ಣಿನಲ್ಲಿ ಉದ್ಧಾರಕನೂ ಹೌದು ಬಲಿ-ಪಶುವೂ ಹೌದು. ಉದ್ಧಾರಕನ ಆಗಮನ ಅವತರಣದ ಸಂಕೇತವಾಗಿದ್ದರೆ ಬಲಿ-ಕಾರ್ಯ ಆರೋಹಣದ ಒಂದು ಮಾರ್ಗವಾಗಿದೆ. ಮಳೆಯಾಗದಿದ್ದರೆ, ಕೆರೆಯಲ್ಲಿ ನೀರು ನಿಲ್ಲದಿದ್ದರೆ, ಕಟ್ಟಡ ಭದ್ರವಾಗಬೇಕಾದರೆ, ಭೂಮಿಯ ಉರ್ವರತೆ ಹೆಚ್ಚಾಗಬೇಕಾಗಿದ್ದರೆ ಬಲಿ ಕೊಡುವ ವಾಡಿಕೆ ಮೊದಲಿನಿಂದಲೂ ನಮ್ಮ ದೇಶದಲ್ಲಿದೆ. ಬಲಿ ಕೊಡುವವರ ದೈವಶ್ರದ್ಧೆ, ಬಲಲಿಯಾಗಬೇಕಾದವನ ಆತ್ಮಶ್ರದ್ಧೆಗಳಿಂದ ಬಲಿ ಕೊಲೆಯಾಗದೆ ಧಾರ್ಮಿಕ ವಿಧಿಯಾಗುತ್ತದೆ. ಯಜ್ಞದಂತೆ ಬಲಿಕರ್ಮವೂ ದೈವ ಮಾನವ ಸಂಬಂಧದ ಪ್ರತೀಕವಾಗಿದೆ. ಗ್ರೀಕರ ರುದ್ರನಾಟಕ ಇಂಥ ಧಾರ್ಮಿಕ ವಿಧಿಯನ್ನು ಕ್ರಿಯಾಪರಿಸರವನ್ನು, ಭಾವಸಂದೋಹವನ್ನು

ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬೆಳೆಸಿಕೊಂಡು ಬಂದಿದೆ. ಬಲಿಯಾಗಬೇಕಾದ ವ್ಯಕ್ತಿ ದೇವತೆಗಳಲ್ಲಿ ಸೇರುವವನಾದ್ದರಿಂದ ಅವನು ಸತ್ಕುಲಪ್ರಸೂತನಾಗಿದ್ದು, ಯಾವದೇ ಶಾರೀರಿಕ ಅಥವಾ ಮಾನಸಿಕ ವಿಕಲತೆಗಳು ಅವನಲ್ಲಿರಬಾರದು. ರುದ್ರನಾಟಕಗಳ ಅಭಿವ್ಯಕ್ತಿಯ ಕ್ರಮದಲ್ಲಿ ಬಲಿಕರ್ಮದ ಅಂಶಗಳನ್ನು ವಿದ್ವಾಂಸರು ಕಂಡುಹಿಡಿದು ಚರ್ಚಿಸಿದ್ದಾರೆ. ಬಾಳಗೊಂಡ ಊರವನೇ ಆಗಿದ್ದರೂ, ಊರವರ ನಿರ್ವೀರ್ಯವಾದ ಜೀವನದಲ್ಲಿ ಭಾಗವಹಿಸದೆ ಬೆಳೆದುಬಂದಿರುವದರಿಂದ ಬಲಿಗೆ ಯೋಗ್ಯವಾದ ಅಖಂಡ ಫಲವಾಗಿದ್ದಾನೆಂದು ಊರವರ ತಿಳುವಳಿಕೆ.

ಆದರೆ ನಾಟಕದಲ್ಲಿ ಉದ್ಧಾರಕಾರ್ಯವೂ ನಡೆಯುವುದಿಲ್ಲ ಬಲಿಕರ್ಮವೂ ಸಾಂಗವಾಗುವದಿಲ್ಲ. ಬಾಳಗೊಂಡನಿಗೆ ತನ್ನ ಉದ್ಧಾರಕತ್ವದಲ್ಲಿ ತನಗೇ ನಂಬಿಕೆಯಿಲ್ಲ ಊರವರಿಗೆ ಉದ್ಧಾರದ ಸಫಲತೆಗಾಗಿ ಕಾಯುವಷ್ಟು ತಾಳ್ಮೆಯಿಲ್ಲ. ಬಾಳಗೊಂಡ ಸ್ವಂತದ ವ್ಯಕ್ತಿತ್ವದ ಹುಡುಕಾಟದಲ್ಲಿ ತೊಳಲಾಡಿ ಸೋತು ಹೋಗಿದ್ದಾನೆ. ಗೌಡನ ಜೊತೆಗೆ ನಡೆಸುವ ಹೋರಾಟ ಹೋರಾಟದ ವಿಡಂಬನವಾಗಿದೆ. ಅವನ ಆಗಮನದಿಂದಲೇ ಮಳೆಯಾಗುವೆಂದು ನಂಬಿದ್ದ ಜನರು ತಮ್ಮ ನಿರೀಕ್ಷೆ ವಿಫಲವಾದೊಡನೆ ಅವನ ಅಸ್ತಿತ್ವವನ್ನು ಮರೆತುಬಿಡುತ್ತಾರೆ. ಬಾಳಗೊಂಡ ಹೊರಗು-ಒಳಗನ್ನು ಒಂದು ಮಾಡಿ ಬೆಸೆಯುವ ನಿಜಲಿಂಗವನ್ನು ಕಾಣದೆ ದೈವದ ಕೆಲಸ ತನ್ನಿಂದ ಆಗುವದಿಲ್ಲವೆಂದು ತಿಳಿದಿದ್ದಾನೆ. ಇನ್ನು ಕಮಲಿಯೊಡನೆ ಕೂಡುವಿಕೆಯಾಗುವ ಕಾರ್ಯಕ್ಕೆ ಸ್ವತಃ ತಂದೆಯೇ ವಿಘ್ನವಾಗಿದ್ದಾನೆ. ಇನ್ನು ರುದ್ರನಾಟಕಗಳ ನಾಯಕರಂತೆ ಬಲಿಯಾಗಬೇಕೆಂದರೆ ಅವನ ವ್ಯಕ್ತಿತ್ವ ಪೂರ್ಣವಾಗಿಲ್ಲ. ಜನರ ಸಂಕಲ್ಪದಲ್ಲಿಯೂ ಬಲವಿಲ್ಲ. ಬಾಳಗೊಂಡ ರಾಕ್ಷಸಗೌಡ ಮತ್ತು ಗೌಡಿತಿಯರ ಕೃತಕ ಸಂತಾನ. ಅವನ ವ್ಯಕಿತ್ವದ ದುರ್ಬಲತೆಯ ಮೂಲ ಅವನ ಹುಟ್ಟಿನಲ್ಲಿಯೇ ಇದೆ. ಹೀಗೆ ನಾಟಕದ ವಸ್ತುವಿನಲ್ಲಿರುವ ದಾರುಣವಾದ ಅರ್ಥಹೀನತೆ ನಾಟಕವನ್ನು ಈ ಎರಡೂ ಮಾರ್ಗಗಳಲ್ಲಿ ಹೋಗಲು ಬಿಡುವದಿಲ್ಲ. ಜೀವನದ ಸಂಕಟಪರಿಹಾರಕ್ಕೂ ಅದೇ ಅಡ್ಡಿಯಾಗಿದೆ. ನಾಟಕದ ಕೊನೆಯಲ್ಲಿ ಬಾಳಗೊಂಡ ಸಾಯುವದಿಲ್ಲ. ಮಳೆಯಾಗುತ್ತದೆ; ಆದರೆ ಅದು ನಿರೀಕ್ಷೆ ಸಫಲವಾದ ಮಳೆಯಲ್ಲ. ಗೌಡ ಸತ್ತರೂ ಅವನ ದುಷ್ಟ ಶಕ್ತಿಗೆ ಒಂದು ದೃಷ್ಟಿಯಿಂದ ವಿಜಯವಾಗುತ್ತದೆ. ಜೀವನದ ಮೌಲ್ಯಗಳ ಅವ್ಯವಸ್ಥೆ, ಶ್ರದ್ಧೆಯ ಅಭಾವ, ಬದುಕಿನ ಬಂಜೆತನ, ಸಂಬಂಧಗಳ ವಿಚ್ಛೇದ ಈ ಸ್ಥಿತಿ ಕೊನೆಯ ವರೆಗೂ ಅಪರಿಹಾರ್ಯವೇ ಎಂಬ ಪ್ರಶ್ನೆ ಮಾತ್ರ ಉಳಿಯುತ್ತದೆ. ಶುದ್ಧವಾದ ಕಲಾತ್ಮಕ ದೃಷ್ಟಿಯಿಂದಲೂ ಈ ನಿಲುವು ಎಷ್ಟರ ಮಟ್ಟಿಗೆ ಸಾಧುವಾದದ್ದೆಂಬ ಸಮಸ್ಯೆಯ ವಿವೇಚನೆ ಇನ್ನು ಮುಂದೆ ಆಗಬೇಕು. ಆ ವಿವೇಚನೆಗೆ ಇಲ್ಲಿ ಸ್ಥಳವಿಲ್ಲ. ಮುನ್ನುಡಿಯಲ್ಲಿ ಈ ನಾಟಕದ ಅಭಿವ್ಯಕ್ತಿಯ ವಿಧಾನವನ್ನು ಸೋಲಿಸುತ್ತ ಹೋಗುವ ಈ ಪ್ರಕ್ರಿಯೆ ವಿಚಾರಣೀಯವಾಗಿದೆ.

೩

ಇಂಥ ವಸ್ತುವನ್ನು ಅಭಿವ್ಯಕ್ತಿಗೊಳಿಸಲು ನಾಟಕ ಅಳವಡಿಸಿಕೊಂಡ ಸ್ವರೂಪ ಸಮರ್ಥವಾಗಿದೆಯೇ ಎಂಬುದೊಂದು ಪ್ರಶ್ನೆಯಿದೆ. ಕಂಬಾರರು ದೊಡ್ಡಾಟಗಳ 'ಕೃಷ್ಣಪಾರಿಜಾತ' 'ಸಂಗ್ಯಾಬಾಳ್ಯಾ' ದಂಥ ಜಾನಪದ ರೂಪಕಗಳ ಸ್ವರೂಪವನ್ನು ಇಡಿಯಾಗಿ ಈ ನಾಟಕದ ಮಟ್ಟಿಗೆ ಸ್ವೀಕರಿಸಿದ್ದಾರೆ. ಸೂತ್ರಧಾರ, ಹಿಮ್ಮೇಳದವ ಮುಂತಾದ ಅಸಲು-ಪಾತ್ರಗಳು, ನಾಯಿಕೆ ಗೊಲ್ಲತಿಯ ವೇಷದಲ್ಲಿ ಬರುವದು, ದುರಗವ್ವ, ಲಗಮವ್ವ, ದಿಟ್ಟಾದೇವಿಯರಂಥ ಅತಿಮಾನುಷ ಪಾತ್ರಗಳು ಕಾಣಿಸಿಕೊಳ್ಳುವದು, ಬಾಳಗೊಂಡನಿಗೆ ಯಕ್ಷಿಣಿ ಪ್ರತ್ಯಕ್ಷಳಾಗಿ ರತ್ನವನ್ನು ದಯಪಾಲಿಸುವದು-ಇಂಥ ಜಾನಪದ ರೂಪಕಗಳ ಅಂಶಗಳು ಈ ನಾಟಕದಲ್ಲಿ ಬೇಕಾದಷ್ಟಿವೆ. ಅಲ್ಲದೆ ಕಂಬಾರರು ಜಾನಪದ ಆಟಗಳ ಕಟ್ಟುಕಟ್ಟಳೆಗಳನ್ನು-ಪಾತ್ರಗಳು ಸೂತ್ರಧಾರ ಪರಿಚಯಮಾಡಿಕೊಡದಿದ್ದರೆ ಒಬ್ಬರೊಬ್ಬರೊಡನೆ ಮಾತಾಡದಿರುವದು. ಹಿಮ್ಮೇಳದವನ ಲಘುಹಾಸ್ಯ ಮುಂ-ನಿಷ್ಠುರವಾಗಿ ಪಾಲಿಸುತ್ತಾರೆ. ಅಂದ ಮೇಲೆ ಆಧುನಿಕವೆನ್ನಬಹುದಾದ ವಸ್ತುವನ್ನು ಪರಂಪರಾಗತವಾದ ಸ್ವರೂಪದಲ್ಲಿ, ಶೈಲಿಯಲ್ಲಿ ಸಜೀವವಾಗಿ ವ್ಯಕ್ತಗೊಳಿಸುವದಾದರೂ ಹೇಗೆ?

ಪ್ರತಿಯೊಂದು ಸಾಹಿತ್ಯಸ್ವರೂಪಕ್ಕೆ-ಅದು ಜಾನಪದವೇ ಇರಲಿ ಅಭಿಜಾತವಾಗಿರಲಿ-ಅದರ ಬಾಹ್ಯ ವೈಶಿಷ್ಟ್ಯಗಳಿರುವಂತೆ ಆಂತರಿಕವೈಶಿಷ್ಟ್ಯಗಳೂ ಇರುತ್ತವೆ. ಒಂದು ಕೃತಿಯ ಆಕೃತಿ ಅದು ಪ್ರತಿಪಾದಿಸುವ ಜೀವನನಿಷ್ಠವಾದ ಮತ್ತು ಕಲಾತ್ಮಕವಾದ

ಮೌಲ್ಯಗಳನ್ನು ಅವಲಂಬಿಸಿರುತ್ತದೆ. ಕೃತಿಯ ಶೈಲಿಗೂ ಶೀಲಕ್ಕೂ ಇರುವ ಸಂಬಂಧ ಕಲಾತ್ಮಕವಾಗಿ ಅನಿವಾರ್ಯವಾದದ್ದು. ನಮ್ಮ ಜಾನಪದ ರೂಪಕಗಳೆಲ್ಲ ಜೀವನಸಮೃದ್ಧಿಯ, ಸಫಲತೆಯ ಚಿತ್ರಗಳು. ಪ್ರಾಚೀನ ಆಖ್ಯಾಯಿಕೆಗಳಲ್ಲಿಯಂತೆ ಇಲ್ಲಿಯೂ ನಾಯಕ ಸಫಲತೆಯ ಅನ್ವೇಷಣೆಗೆ, ದೈವದ ಸಾಕ್ಷಾತ್ಕಾರಕ್ಕೆ ಹೊರಡುತ್ತಾನೆ. ಅನೇಕ ಕಷ್ಟಗಳನ್ನೆದುರಿಸಿ ಕೊನೆಗೆ ಗೆಲುವು ಪಡೆಯುತ್ತಾನೆ. ಉಳಿದ ಜನರ ಬದುಕು ನಾಯಕನ ಬದುಕಿಗೆ ಸಂವಾದಿಯಾಗಿ ನಡೆದಿರುತ್ತದೆ. ಅವನ ದುಃಖದಲ್ಲಿಯಂತೆ ಸುಖದಲ್ಲಿಯೂ ಅವರು ಪಾಲುಗೊಳ್ಳುತ್ತಾರೆ. ನಾಟಕದಲ್ಲಿಯ ಬದಲಾಗುತ್ತಿರುವ ಜೀವನವೆಲ್ಲಕ್ಕೂ ಕೇಂದ್ರವಾಗಿ ಒಂದು ಮೌಲ್ಯವ್ಯವಸ್ಥೆಯಿರುತ್ತದೆ. ಭಾಷೆಯಂತೆ ಈ ಮೌಲ್ಯವ್ಯವಸ್ಥೆ ಕೂಡ ಪಾತ್ರಗಳಿಗೆ, ಪ್ರೇಕ್ಷಕರಿಗೆ ಸರ್ವಸಮ್ಮತ ಮತ್ತು ಸರ್ವವಿದಿತವಾಗಿರುತ್ತದೆ. ಹೀಗೆ ಪ್ರೇಕ್ಷಕರ ನೈತಿಕ ಹಾಗೂ ಕಲಾತ್ಮಕವಾದ ನಿರೀಕ್ಷೆಗಳು ನಾಟಕಪ್ರಯೋಗದಲ್ಲಿ ತೃಪ್ತಿಯನ್ನು ಪಡೆದಾಗಲೇ ನಾಟಕ ರಸಾನುಭವವನ್ನುಂಟುಮಾಡಬಲ್ಲದು. ಹೀಗಿದ್ದಾಗ ಮಾತ್ರ ನಾಟಕ ಒಂದು ಸಂಸ್ಕೃತಿಯ ಸಜೀವ ಅಭಿವ್ಯಕ್ತಿಯಾಗಿ ಆ ಸಂಸ್ಕೃತಿ ಮೃತವಾಗದಂತೆ ನೋಡಿಕೊಳ್ಳುತ್ತದೆ.

ಅಂದ ಮೇಲೆ ಕಂಬಾರರ ಈ ನಾಟಕದ ವಸ್ತುವಿಗೂ ಅವರ ಅಭಿವ್ಯಕ್ತಿಗೂ ನಡುವೆ ಇರುವ ವಿರೋಧಕ್ಕೆ ಸಮಾಧಾನ ಎಲ್ಲಿದೆ? ನನಗೆ ತಿಳಿದ ಮಟ್ಟಿಗೆ ಕಂಬಾರರು ಈ ವಿಷಮತೆಯನ್ನು ಕಲಾತ್ಮಕವಾಗಿ ಉಪಯೋಗಿಸಿಕೊಂಡಿದ್ದಾರೆಂದು ತೋರುತ್ತದೆ. ಒಂದು ಕೃತಿಯ ವಸ್ತು ಮತ್ತು ಅದರ ಅಭಿವ್ಯಕ್ತಿಯ ಕ್ರಮ ಬೇರ್ಪಡಿಸಬಾರದಷ್ಟು ಅವಿಭಾಜ್ಯವಾಗಿರಬೇಕೆಂಬುದೂ ನಿಜವೇ. ಆದರೆ 'ಋಷ್ಯಶೃಂಗ' ನಾಟಕದಲ್ಲಿ ತೋರುವ ವಿಷಮತೆ ಆ ಬಗೆಯದಲ್ಲ. ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಸಿಗರೇಟಿನ ಮೇಲೆ ಕವಿತೆಯನ್ನು ಬರೆದಾಗ ಉಂಟಾಗುವ ವಿಷಮತೆ ಹಾಸ್ಯಾಸ್ಪದವಾಗಬಹುದು. ಹಾಗೆಂದು ನೈಲಾನ್ ಹುಡುಗಿಯ ಮೇಲೆ ನವ್ಯ ಕವಿತೆಯನ್ನು ಬರೆದು ಅದನ್ನು ಯಶಸ್ವಿಯಾಗಿದೆಯೆಂದು ಹೇಳುವದರಲ್ಲಿಯೂ ಅರ್ಥವಿಲ್ಲ. ಕಲಾಕೃತಿ ಒಂದೇ ಎರಕದಿಂದ ಮಾಡಿದ ಅಚ್ಚಿನ ಗೊಂಬೆಯಲ್ಲ. ಮುಖ್ಯವಾಗಿ ಕಲಾವಿದನಿಗೆ ತಾನು ಮಾಡುತ್ತಿರುವದೇನು ಎಂಬುದರ ಬಗ್ಗೆ ಸಂಪೂರ್ಣ ಎಚ್ಚರವಿದ್ದರೆ ಸಾಕು.

ಇಂಥ ಎಚ್ಚರ ಕಂಬಾರರಲ್ಲಿದೆ. ಅವರು ಉಪಯೋಗಿಸಿರುವ ಜಾನಪದ ರೂಪಕದ ಅಂಶಗಳು. ಅವರ ಭಾಷೆ ಪ್ರತಿಮೆಗಳು ಜೀವಂತವಾಗಿರುವದೇ ಈ ಎಚ್ಚರಕ್ಕೆ ಸಾಕ್ಷಿಯಾಗಿದೆ. 'ಋಷ್ಯಶೃಂಗ' ನಾಟಕದ ಬಾಹ್ಯ ಅಂಶಗಳು ಕೂಡ ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಭಿನ್ನ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಆದ್ದರಿಂದ ಈ ನಾಟಕದಲ್ಲಿ ತಂತ್ರ ಒಂದು ದೃಷ್ಟಿಯಿಂದ ವಸ್ತುವಿನ ನಿಕಷವಾಗುತ್ತದೆ. ಈ ಮೊದಲೇ ಹೇಳಿರುವಂತೆ ನಾಟಕದ ವಸ್ತುವಿನಲ್ಲಿರುವ ಅವ್ಯವಸ್ಥೆ ಒಂದು ವ್ಯವಸ್ಥೆಯನ್ನು ಕೈಮಾಡಿ ಕರೆಯುತ್ತದೆ. ಆ ವ್ಯವಸ್ಥೆ ನಾಟಕದ ತಂತ್ರದ ಮೌಲ್ಯಗಳಲ್ಲಿದೆ.

ಕಂಬಾರರ ನಾಟಕದ ಪ್ರಯೋಗ ಇನ್ನೂ ಹೆಚ್ಚು ಸೂಕ್ಷ್ಮವಾದ ವಿಚಾರ ವಿಮರ್ಶೆಯನ್ನು ಪಡೆಯಬಹುದೆಂದು ಹಾರೈಸಿ ಮುನ್ನುಡಿ ಈ ಮಾತುಗಳನ್ನು ಇಲ್ಲಿಗೇ ಮುಗಿಸುತ್ತೇನೆ.

**ಕೀರ್ತಿನಾಥ ಕುರ್ತಕೋಟಿ**

(ಮೊದಲ ಆವೃತ್ತಿಯಿಂದ)

# ಪಾತ್ರಗಳು

ಸೂತ್ರಧಾರ

ಹಿಮ್ಮೇಳದವ

ಕಮಲಿ

ಇರಿಪ್ಯಾ

ಗುರ್ಯಾ

ಯಮನ್ಯಾ

ಗದಿಗ್ಯಾ

ದೊಡ್ಡಬಸ್ಯಾ

ಒಬ್ಬ

ಮುದಿಗೌಡ

ಬಾಳಗೊಂಡ

ಹಳಬ

ಯಕ್ಷಿಣಿ

೧ನೆಯವಳು

೨ನೆಯವಳು

೩ನೆಯವಳು

ಗೌಡ್ತಿ

ಪಾರಿ

ಎಲ್ಲ್ಯಾ

ಚೆನಬಸ್ಯಾ

ಗೌಡ

## ಗಣಪದ

ಹೊ ಎಲ್ಲಾರು ನಮೋ ತಮ ಪಾದಕ! ||ಪ||
ಬೆನಕಾ| ಕೊಡೋ ಸುಖ|| ||ಅ.ಪ.||

ಘೋಡಗೇರಿ ಸತ್ಯುಳ್ಳ ಗಜನಿಂಗಾ
ಸಾವಳಗಿ ಶಿವಲಿಂಗಾ | ಎಲ್ಲಾರೂ
ಭೂಸನೂರಮಠದ ಸಂಗಮಸ್ವಾಮಿ
ಶರಣೆಂಬೆ | ಹಡೆದಂಥ ತಂದಿ ತಾಯಿಗಿ ||೧||

ಕೈಯ ಮುಗದ ನೆನದೇವ ನಿಮ ಪಾದಾ
ಪದಗಳು ಬರಲೆಂದಾ | ಎಲ್ಲಾರೂ

ಎಲ್ಲಾರಿಗು ಮಾಡೇವ ನಮಸ್ಕಾರಾ
ಬಂದಂಥ | ವಿಘ್ನವಾಗಲಿ ದೂರದೂರಾ ||೨||

## ಅಂಕ : ಒಂದು (a)

**ಸೂತ್ರಧಾರ:** ಕುಂತಿರೊ ಅಣ್ಣಗೋಳ್ರಾ ನಿಂತಿರೋ ತಮ್ಮಗೋಳ್ರಾ,-
ಗರಡಿ ಹುಡಗೋರು ಹಾಂಗs ಬಂ ದ ಅಟ್ಟ ಏರಿದೇವು.
ಇದನ್ನ ಕವಿ ಮಾಡಿದಾಂವಿನ್ನೂ ಹಣ್ಣಾಗಿಲ್ಲ,
ಆಡಾವರಿನ್ನೂ ಬಲಿತಿಲ್ಲ; ಅಜ್ಞಾನ ಬಾಲಕರು
ಜೋಲಿ ತಪ್ಪಿ ಏನಾರ ತಪ್ಪ ಮಾಡಿದರ
ಚಪ್ಪಾಳಿ ಹೊಡದ ನಗಬ್ಯಾಡರಿ;
ಜೋಡೆಳಿ ಸಿಳ್ಳ ಹಾಕಬ್ಯಾಡರಿ;
ಇದ್ಯಾತರ ಆಟಂತ ಏಳಬ್ಯಾಡರಿ;
ತಿಳೀಲಾರ ಕುರ್ಚೆ ತಿಕ್ಕಿ ಆಕಳಿಸಬ್ಯಾಡರಿ,-
ಗೀತರೂಪದಿಂದ ಗೀತೀ ಮಾಡದs ಪ್ರೀತಿಲೆ
ನೀತೀ ಹೇಳತೇವು-
ಇದೆಲ್ಲಾ ನಮ್ಮ ನಿಮ್ಮೊಳಗs ಹುಟ್ಟಿ, ಒಳಗೊಳಗs
ಬೆಳದದ್ದಂತ ತಿಳಕೊಂಡು, ಶರಣಂದವರನ್ನ
ಕರುಣದಿಂದ ಕೇಳಬೇಕಂತ ಹೇಳಿ,
ಹಿರೇರೆಲ್ಲಾರಿಗೂ ನಮೋ ನಿಮ್ಮ ಪಾದಕ.

*(ತೆಂಗಿನಕಾಯಿ ಒಡೆದು ಅದರ ಎರಡೂ ಭಾಗಗಳನ್ನು ರಂಗದ ಎರಡೂ ಬದಿಗೆ ಎಸೆಯುವನು. ಇದೇ ಈಗ ಹೊತ್ತು ಮುಳುಗಿದೆ. ಊರ ಅಗ ಸಿ. ರಂಗದ ಬಲಬದಿಯಲ್ಲಿ ಒಂದು ಗದ್ದಿಗೆಯಿದೆ. ತೀರ ಹಿಂಭಾಗದಲ್ಲಿ ಜನ ಸೇರಿದ್ದು ರಂಗದ ಮುಂಭಾಗದಲ್ಲಿ ನಡೆಯುವ ಪೂರ್ವರಂಗದ ಬ ಗೆಗೆ ಅವರೆಲ್ಲ ನಿಷ್ಕಾಳಜಿಯಿಂದ, ಶೂನ್ಯ ಮನಸ್ಕರಾಗಿದ್ದು ಪೂರ್ವರಂಗ ಮುಗಿದಾದ ಮೇಲೆ ಮುಂಭಾಗದಲ್ಲಿ ಗದ್ದಿಗೆಯ ಸುತ್ತ ಸೇರುತ್ತಾರೆ. ಪೂರ್ವರಂಗದ ಸಂಭಾಷಣೆ, ಧಾಟಿ, ನಟನೆ- ಇವೆಲ್ಲವೂ ಶ್ರೀ ಕೃಷ್ಣ ಪಾರಿಜಾತದಂತೆಯೇ ಇರಬೇಕು.)*

**ಸೂತ್ರಧಾರ :** ಹೆಂಗ ಹೇಳಲಿ? ಹೆಂಗ ಹೇಳಲಾರದs ಇರಲಿ?
ಹೆಂಗ ಹೇಳಿದರೂ, ಮತ್ಹೆಂಗ ತಿಳಿಸಿದರೂ
ಒಡಕ ಗಡಿಗಿ ಹಾಂಗ ಬರೀ ಸಪ್ಪಳಾಗತೈತಿ,
ಅರ್ಥಂಬೋ ಒಳದನಿ ಸಿಗೋದs ಇಲ್ಲ.
ನಾವ ಆಡೋದs ಒಂದು, ಅದು ಇರೋದs ಇನ್ನೊಂದು,-
ತಾಳಿಲ್ಲ ಮೇಳಿಲ್ಲ; ಇಲ್ಲಂತ ಬಿಡಾಕಾಗಣಿಲ್ಲ.
ಮಾತಾಡಿ ಹಿಡ್ಯಾಕ, ಹಿಡದ ನೋಡಾಕ, ನೋಡಿ ಕೇಳಾಕ
ತಿಣಿಕೀ ತಿಣಕತೀವಿ; ಹೀಂಗ ಖುದ್ದ

ಕೇಳೋದಕ್ಕ ಬಾಯಿ ತೆರದರೂ ಅಂದರ
ತೆರದ ಹೇಳಿದರೂ
ನಾ ಹೇಳೋದs ಒಂದು, ನೀವು ಕೇಳೋದs ಇನ್ನೊಂದು,
ಕೇಳಿ ತಿಳಿಕೊಳ್ಳೋದ ಇನ್ನೂ ಮತ್ತೊಂದು!
ಹಾಂಗ ಹೇಳಿದ್ದ ಸೈತ ಹೇಳಬೇಕಂದದ್ದs ಏನಲ್ಲ!
ಮೂಲ ಮೀಸಲ, ಶಿವಾ ಮುರೀದs ಉಳೀತೈತಿ
ಎಲ್ಲಿಂದ ಹೊರಟು ಎಲ್ಲಿಗಿ ಬಂದಿವಿ?

ಈಗ ಬೇಕಂದರ ನಮ್ಮ ನಿಮ್ಮ ಅಸ ಮಾತs
ತಗೋರೆಲ್ಲ;
ಆಡಕಾ ಅಟ್ಟಾ ಏರಿದೇವಂದರ, ಆಟೇನೂ ಹೊಸಾದಲ್ಲ.
ಹಾಂಗ ನೋಡಿದರ, ಬ್ಯಾಡ ಅದನs ಹೀಂಗ ಹೇಳಬೇಕಂದರ
ಅಥವಾ ಹೆಂಗ ಹೇಳಿ ತಿಳಿಕೊಂಡರೇನಾ,-
ನಮ್ಮ ನಿಮ್ಮ ಮುಖಗೋಳೆಲ್ಲ ಆಟದ ಅಟ್ಟನs.
ಹೌದೊ ಅಲ್ಲೋ ನೋಡ್ರೆಲಾ,-
ಹರೀವತ್ತೆದ್ದ ಮಲಗೋತನಕ ಎಷ್ಟ ಬಯಲಾಟ
ಮಾಡತೇವ, ಎಷ್ಟ ಸೋಗ, ಎಷ್ಟ ಮುಖವಾಡ!
ಹೊರಗಾ ಒಳಗಾ ಒಂದಮಾಡೋ ನಿಜಲಿಂಗ
ಎಲ್ಲಿ, ಯಾ ಕಡೆ, ಯಾ ಗವ್ಯಾಗಿದಾನೋ!
ಆಡತೇವ, ಕುಡೀತೇವ, ತಿಂತೇವ, ನಡೀತೇವ,-
ಏನಂದರೂ ನಮ್ಮ ಗುರುತ ನಮಗಿಲ್ಲ.
ಜಳಕಾ ಮಾಡಾಕ ಹೋದಾಗ ಬಾಂವ್ಯಾಗ ಒಮ್ಮೊಮ್ಮಿ
ಗುರುತ ಹತ್ತಿಧಾಂಗಾಗಿ ಕೈಚಾಚತೇವು, ಆದರ
ಮುಟ್ಟಿದರೆ ತೆಕ್ಕ್ಯಾಗಿಲ್ಲ, ಹಿಡಿದರ ಹಿಡ್ಯಾಗಿಲ್ಲ.
ಮೂಗ ಹಿಡದ ಅಳಬೇಕಂದರ, ಹೆಣಾ ಕಂಡ ಅಳೋದ
ಭಾಳ ಹಳೀ ಪದ್ಧತಿ, ಏನ ಮಾಡೋಣ?

ಗಚ್ಚಿನ ಮಾನ್ಯಾಗ ಹೆಚ್ಚಿನ ಹುಲಿ ಹೊಕ್ಕ
ತಟ್ಟಂತ ಒಂದ ಹನಿ ಮಳಿಯಿಲ್ಲ, ಬೆಳಿಯಿಲ್ಲ.
ಬಿತ್ತಿದ ಬೀಜ ಹುರದ ಹೋಗಿ, ಬಿರಕ ಬಿಟ್ಟ ಬೀಳನೆಲ
ಆs ಅಂತ ಬಾಯಿ ತೆರಕೊಂಡೈತಿ!
ಮಂದೀ ಮಕಾ ಕರಕಾಗಿ, ಹಸರಿನ ಜೋಡಿ ಕಣ್ಣಾಗಿನ
ಹೌಸಿ ಒಣಗಿ, ಬೆವತೇನಂದರ ಬೆವರ ಸೈತ
ಸುರೀದಂಥಾ ತೊಗಲ ಜೋಳಿಗಿ ತೊಟಗೊಂಡ

ಮುಗಿಲೆದರ ತೆರಕೊಂಡ, ಇಲ್ಲಿ ನಿಂತೀವಿ.
ಲೆಕ್ಕಲೆ ಹಳೇಬೇಕಂದರ,-
ಈಗ, ಈ ಸೂರ ಸೋರಬೇಕಾಗಿತ್ತು,
ನಾವಾ ನೀವಾ ಮಣ್ಣಿನ ಹದದಾಗ ರೆಂಟಿ ಹಲ್ಲ ಊರಿ
ಬೀಜಾ ಬಿತ್ತಬೇಕಾಗಿತ್ತು. ಅದರ ಶಿವಾ!-
ಹುಟ್ಟಿದ ಹೋರಿಗೋಳ ಆಗs ಎತ್ತಾಗಿ,
ಕೂಳಿಲ್ಲದ್ದಕ್ಕ ಎತ್ತಿನ ಎಲುವ ಅರದ ತಿಂದು,
ಊರ ಮಂದಿ ಗುಳೆ ಎದ್ದರೂ
ಮುಗಿಲಿಗೇನಾ ಕರುಣಾ ಬರಲಿಲ್ಲ.
ತಪ್ಪಿದ ಲೆಕ್ಕಾ ಬರೋಬರಿ ಮಾಡಾವರು ಯಾರಾ?
ಒಂದs ಒಂದು ಭರೋಸ ಬೀಜ ಕಳಕೊಂಡ
ಗುಡ್ಡ ಸೇರಿತು, ಬಸವಾ ಬಸವಾ!
ಇದನ್ನೆಲ್ಲ ನೆನದಾಗ ಹಗಲೆಲ್ಲ ಅನಸತೈತಿ,-
ನರಮನಿಶ್ಯಾ ಭೂಮಿ ತಲಿಮ್ಯಾಲ ಹುಟ್ಟಿದ ಬಳಿಕ
ಇಲ್ಲಾ ಕಸಾಬಾದರೂ ಆಗಬೇಕು-
ಇಲ್ಲಾ, ದನಾ ಆದರೂ ಆಗಬೇಕು.

*(ಹೊಲೇರ ಕಮಲಿ ರಂಗಮಧ್ಯಕ್ಕೆ ಬಂದು ಬೆದರಿ ತಕ್ಷಣವೇ ಒಳಕ್ಕೆ ಓಡಿ ಹೋಗುವಳು)*

ಅಡ! ಇಷ್ಟ ಅನ್ನೂದರಾಗs ಯಾವುದೋ ಬೆದಿಮಣಕ
ಹೀಂಗ ಬಂದ  ಹಾಂಗ ಹೋಯ್ತಲ್ಲೊ! ಯಾರವರಾ?
ಯಾರ ಯಾರವರಾ? ಅಪ್ಪೂ ಹಿಮ್ಯಾಳ್ಯಾ

ಹಿಮ್ಮೇಳದವ :  *(ಪ್ರವೇಶಿಸಿ)*
ಯಾಕ ಕರದಿ? ಯಾಕ ಕರದಿ?
ಮಣಕ ಅನ್ನೋದಷ್ಟs ತಡ, ಕಣ್ಣೀ ಹರಕೊಂಡ
ಹಾಂಗs ಬಂದೇನ, ಎಲ್ಲಿ ಐತಿ?

ಸೂತ್ರಧಾರ :  ಅಕಾ ಅವಸರ ಮಾಡಬ್ಯಾಡ, ಅಲ್ಲಿ ಹೌದಾ?
ಯಾರಾ, ಏನಾ ಕೇಳೋಣು, ಹೋಗಿ ಕರದು ಬಾ

ಹಿಮ್ಮೇಳದವ : *(ಹೋಗದೆ ಹಾಗೇ ಕಣ್ಣು ತೆರೆದು ವರ್ಣಿಸುತ್ತ ನಿಲ್ಲುವನು)*
ಕುಡಿಹಬ್ಬ ಕೊಂಕೇನ!
ಕಣ್ಣ ಕಾಡಿಗಿಯೇನ!
ಸಣ್ಣಾನೆಸಳ ಬೈತಲದಾಕಿ ಯಾಕಿಕ್ಕಿ?

ಸೂತ್ರಧಾರ : ಮೀರಿ ಹೊಗತಾಳ ಕೂಗ ಹೊಡದ ಕರಿಯೊ.

ಹಿಮ್ಮೇಳದವ : ಬಿರಿ ಬಿರಿ ನಡಿವಾಕಿ
ತಿರ ತಿರಗಿ ನೋಡುವಾಕಿ
ವಾರಿ ನೋಡಿ ವಯ್ಯಾರ ಮಾಡೋ ಹುಡಿಗಿ ಯಾರಿಕ್ಕಿ?

ಸೂತ್ರಧಾರ : ದೂರ ಹೋಗತಾಳ ಒದರಿ ಕರಿಯೊ

ಹಿಮ್ಮೇಳದವ : ಸಣ್ಣದಡಿ ಪಾವಡದಾಕಿ
ಕಿರಿ ನಿರಿಗಿ ಹೆಚ್ಚಿನ ಸೀರಿ
ಮಿರಿ ಮಿರಿ ಮಿಂಚೊ ಬಾಲಿ ಯಾರಿಕ್ಕಿ?

ಸೂತ್ರಧಾರ : ಏ, ಮರಿಗಾಗತಾಳ ಚೇರಿ ಕರಿ ಅಂದರ

ಹಿಮ್ಮೇಳದವ : ಏ ಅವೂ, ಪರಿಬ್ಯಾ ಕರೀತಾನ ಬಂದ,
ಎಲಿ ಅಡಿಕಿ ತಿಂದ,
ನಾಕ ಮಾತ ಮಾತಾಡಿ ಹೋಗ.
ಏ ಹತ್ತ ಬರೆ ಅವೂ…

*(ತುಸು ಹೊತ್ತು ಇಬ್ಬರೂ ಸುಮ್ಮನಾಗಿ ಅದೇ ದಿಕ್ಕನ್ನು ನೋಡುತ್ತಿರುವಂತೆ ಕಮಲಿ ನಿಧಾನವಾಗಿ ರಂಗದ ಬಲಭಾಗದಿಂ ದ ಬಂದು ಗಂಭೀ ರವಾಗಿ ನಿಲ್ಲುವಳು. ಎಡಗೈಯಲ್ಲಿ ಹಾಲಿನ ಗಡಿಗೆಯಿದೆ. ಪಾರಿಜಾತದ ಗೊಲ್ಲತಿಯಂತೆ ಅವಳ ಭಂಗಿ, ಉಡುಪು. ಕೊನೆಯ ತನಕ ಹಿಮ್ಮೇಳ ದವನ ಬಗ್ಗೆ ನಿರ್ಲಕ್ಷ್ಯ ದಿಂದ ಇರುತ್ತಾಳೆ)*

ಸೂತ್ರಧಾರ : ಸೂರ್ಯ ತಾಯೀ ಹೊಟ್ಯಾಗ ಹೋದ ಯಾಳೇದಲ್ಲಿ
ಹಾಲಗಡಿಗಿ ಹಿಡಕೊಂಡ, ಕೈಬೀಸಿ,
ಬಿರಿಬಿರಿ ಹೊಂಟೀದಿ, -ತಂಗೀ
ನೀನು ಯಾರು?

ಹಿಮ್ಮೇಳದವ : *(ಕಮಲಿ ಸುಮ್ಮನೆ ನಿಂತುದನ್ನು ನೋಡಿ)*
ಉದ್ದಕ ಈಚಲಬಡ್ಡೀ ಹಾಂಗ ಹಾಂಗs ನಿಂತಾಳಲ್ಲೊ!
ದೇವರ ಇದಕ ಮೋತಿ ಮಕಾ ಮಾಡಿದಾನಿಲ್ಲೊ?
ಇನ್ನೊಮ್ಮಿ ಮಾತಾಡಿಸಿ ನೋಡು,

ಸೂತ್ರಧಾರ : ತಂಗೀ, ಇಲ್ಲಿ ಬಂದಂಥವಳು ನೀನು ದಾರು?

ಕಮಲಿ : ಹರೇದ ಹುಡಿಗೇರನ್ನ ತರಿಬಿ, ಹೆಸರ ಕೇಳೋವಂಥಾ ನೀನು ದಾರು?

ಹಿಮ್ಮೇಳದವ : ನಿಮ್ಮಂಥಾ ಹೊತ್ತ ಗೊತ್ತಿಲ್ದs ತಿರಗಾವರಿಗಿ ಹಗ್ಗಾಹಚ್ಚಿ ಹಂತೀಹೂಡೋ ಮೇಟಿ ತಾಳ ಅಂತಾರ.
ಅಟ್ಟದ ಮ್ಯಾಲಿ ಬಂದಂಥವರನ್ನ ಗಟ್ಟಿಸಿ ಮಾತಾಡಿಸುವಂತಾ
ಸೂತ್ರಧಾರ ಅಂತಾರ.
ಹೋಗೂ ಬಾರೊ ಪರಬೂ ಅಂತಾರ.
ನನಗ ಬಂದ ಹಿಮ್ಮ್ಯಾಳ್ಯಾ ಅಂತಾರ

*(ಪ್ರತಿಕ್ರಿಯೆಗಾಗಿ ಕಾದು ಆಗಲೂ ಅವಳು ಸುಮ್ಮನೆ ನಿಂತುದನ್ನು ನೋಡಿ)*

ತೋದ ಹೊರಸಿನ್ಹಾಂಗ ಇನ್ನೂ ಬಿಗದ್ದಾಳಲ್ಲೊ
ನಾರೊ ಎಣ್ಣಿ ಹಚ್ಚಿದಾಳಂತ
ಭಾಳ ದಿಗರ ಮಾಡತಾಳೇನಿಕ್ಕಿ?

ಸೂತ್ರಧಾರ : ತಂಗೀ ಬಂದಂಥವಳು ನೀನು ದಾರು?
ನಿನ್ನ ನಾಮಾಂಕಿತವೇನು?

ಹಿಮ್ಮೇಳದವ : ಕನ್ನಡದಾಗ ಕೇಳೊ, ತಂಗೀ, ಓಣ್ಯಾಗಿನ
ಅವ್ವಕ್ಕಗೋಳು, ಹೇಲಗುಗ್ಗರಿ ತಿಂದ
ಇಟ್ಟಂಥಾ ನಿನ್ನ ಹೆಸರೇನು?

ಕಮಲಿ : ಅಪ್ಪಾ ಸೂತ್ರಧಾರ, ಹೇಳಾಕs ಬೇಕ?

ಸೂತ್ರಧಾರ : ಹೇಳಿದರ ನನಗಾದರೂ ತಿಳಿದೀತು.
ಕುಂತ ನಾಕ ಮಂದಿಗಾದರೂ ತಿಳಿದೀತು.

ಹಿಮ್ಮೇಳದವ : ಮ್ಯಾಲ ನನಗಾದರೂ ತಿಳಿಬಂದೀತು.

ಕಮಲಿ : ಸೂತ್ರಧಾರ, ಬಲಕ್ಕ ಬೇವಿನ ಮರ, ಎಡಕ್ಕ
ತೆಂಗಿನ ಮರ, ನಡಕಿನ ಹೊಲಗೇರ್ಯಾಗಿರುವಂಥಾ
ಹೊಲೇರ ಪಾರೀ ಮಗಳು,
ಕಮಲಿ ಕಮಲಿ ಅಂತಾರ ನೋಡು.

ಹಿಮ್ಮೇಳದವ : ಪಾರಿ? ಊರ ಹೋರಿಗೋಳೆಲ್ಲಾ ಅಕಿ ಕಾಲಾಗs
ಎತ್ತಾದವು ಬಿಡೋ.

ಸೂತ್ರಧಾರ : ಅವೂ ಕಮಲವ್ವ,
ಹೊತ್ತ ಮುಣಗಿದ ಯಾಳೇದಲ್ಲಿ

ಮನೀ ಮುಂದಿನ ಹೊರಸಿನ ಮ್ಯಾಲ ಕುಂಡ್ರೂದ ಬಿಟ್ಟ
ಹಾಲಗಡಿಗಿ ಹಿಡಕೊಂಡ
ಈ ಸಭಾಕ ಬಂದ್ಯಾಕ? ಹ್ವಾದ್ಯಾಕ?

ಹಿಮ್ಮೇಳದವ : ಹಾಂಗೆಲ್ಲಾ ಹೋಗಬ್ಯಾಡೊ ಹಂತ್ಯಾಕ ಹಾದರ
ಗಬ್ಬ ಆಗೂ ಜಾತಿ ಅದು!

ಕಮಲಿ : ಅಪ್ಪಾ ಸೂತ್ರಧಾರ
ಕಾಲಾಗ ಕೆಟ್ಟ ಅಮಾಸಿ ಬಂತು.
ಇಂದಿಗೆ ಮೂರ ದಿನದಿಂದ ಕೆಟ್ಟ ಕನಸ ಬಿದ್ದ,
ಕನಸಿನಾಗ ಯೋಳಹೆಡಿ ಸರ್ಪ ಕಂಡ್ಹಾಂಗಾಗಿ,
ದೇವರಿಗಿ ಹಾಲೆರದ, ಬೇಡಿಕೊಂಬರಾಕ ಹೊಂಟೇನಿ.

ಸೂತ್ರಧಾರ : ಯೋಳಹೆಡಿ ಸರ್ಪ ಕಂಡರ ಕೆಟ್ಟ ಕನಸ ಹೆಂಗ ಆಯ್ತು?

ಕಮಲಿ : ಅಯ್ ಶಿವನ! ಹೆಂಗ ಹೇಳಲೆ?

ಹಿಮ್ಮೇಳದವ : ಏ. ಹೆಂಗಾರ ಮಾಡಿ ಹೇಳಾಕs ಬೇಕ ತಗಿ.

ಕಮಲಿ : ಅವಯ್ಯ! ಏನ ಹೇಳಲೆ?

ಹಿಮ್ಮೇಳದವ : ಏನಾರ ಹೇಳಾಕs ಬೇಕ ಬಿಡು. ನಿಂದ ಕೇಳಾಕs
ನಾ ಹುಟ್ಟಿಧಾಂಗ ಅನ್ನಸಾಕ ಹತ್ತೇತಿ!

ಕಮಲಿ : ಅಪ್ಪಾ ಸೂತ್ರಧಾರ,
ಇಂದಿಗಿ ಮೂರ ರಾತ್ರಿ ಆತು, ಕೆಟ್ಟ ಕನಸ
ಬೀಳಲಿಕ್ಹತ್ಯಾವ…

ಸೂತ್ರಧಾರ : ತಂಗೀ ಕನಸಿನೊಳಗ ಏನೇನ ಕಂಡಿ?

ಕಮಲಿ : ಹಾಂಗಾದರ ಹೇಳುತ್ತೇನೆ ಕೇಳುವಂಥವನಾಗು

ಸೂತ್ರಧಾರ : ಕೇಳುತ್ತೇನೆ, ನೀನಾದರೂ ಹೇಳುವಂಥವಳಾಗು

ಕಮಲಿ : *(ಉಚಿತ ಅಭಿನಯ, ನೃತ್ಯದೊಂದಿಗೆ)*
ಅಪ್ಪಾ ಸೂತ್ರಧಾರ ಕೇಳೊ ಕನಸ ಕಂಡಿನೆ
ಸುಖದ ನೋವ ಸದ್ದಮಾಡಿ ಹೆಂಗ ಹೇಳಲೆ? ||ಪ||

ಬೆಳ್ಳಿತೊಡಿಯ ಬಿಳಿಯ ಕುದರಿ ಬೆರಗ ಕಂಡಿನೆ
ಬೆನ್ನನೇರಿ ಚಿನ್ನದುರಿಯ ಕಾಡ ಕಂಡಿನೆ||

ಅಯ್ ನನ ಶಿವನ ಆರ್ಯಾಣದಾಗ ಅರಳಿ ಶಿರಸ
ಎಲ್ಲಿ ಕೈಯ ಹಾಕಿದಲ್ಲಿ ಗೊಂಚಲs ಗೊಂಚಲ||

ಹಿಂದ ಮುಂದ ತಂಪಗಾಳಿ ತೀಡಿ ಸಳಸಳ
ಚಿನ್ನ ತೊಡಿಯ ಉರಿ ಸುರಿಸೇನ ಹೂವ ಬಳಬಳ||

ಹೂವ ಕರಗಿ ಕೆಂಪ ನೀರ ಕೆರಿಯ ಕಂಡಿನೆ
ಯೋಳ ಹೆಡಿಯ ಕಾಳನಾಗ ದೊರಿಯ ಕಂಡಿನೆ||

ಸಂದಿಗೊಂದಿ ಬೆಂಕಿ ಹಚ್ಚಿ ಹೆಡಿಯ ಚುಚ್ಚಿದಾ
ಮೈಯನೊಟ್ಟಿ ಮೆಟ್ಟಿ ತುಳಿದು ಮುದ್ದಿ ಮಾಡಿದಾ||

ಬಳಸಿ ಆಗುಮಾಡಿ ಸಾಗಿ ಸಂದು ಹೋದನೊ
ಸುಖದ ನೋವ ಎದಿಗಿ ನಟ್ಟು ದಾಟಿ ಹೋದನೊ

ಅಪ್ಪಾ ಸೂತ್ರಧಾರ

ಸೂತ್ರಧಾರ : ಹಾ.

ಕಮಲಿ : ಕಾಣಾ ಕಾಣಾ ಇದರಿಗೊಂದ ಬಿಳಿ ಕುದರ್ಯಾಗಿ
ಕುದರೀ ಏರಿ ಸೆರಗ ಬೀಸಿಧಾಂಗಾತು
ಕಣ್ಣಮುಚ್ಚಿ ಕಣ್ಣ ತೆರೆಯೋದರೊಳಗ
ನಿರ್ವಾಣೆಪ್ಪನ ಗುಡ್ಡ ಆಗಿ, ಗುಡ್ಡದ ತುಂಬ
ಎಲ್ಲಿ ನೋಡತಿ ಅಲ್ಲಿ, ಎಲ್ಲಿ ಕೈ ಹಾಕತಿ ಅಲ್ಲಿ
ಕೆಂಪ ಹೂವಿನ ಗೊಂಚಲs ಗೊಂಚಲ!
ನನ್ನ ಮೈ ಸಂದಿಗೊಂದ್ಯಾಗೆಲ್ಲ ಮೂಡಗಾಳಿ ಸುಳುಸುಳು ಅಂದ,
ಶಿವನs ಇದೇನಂತ ನೋಡಿಕೊಂಡರ,-
ನಾನs ಬಂಗಾರ ತೊಡಿ ಉರಿ ಗಿಡಾ ಆಧಾಂಗಾತು!
ನಡುಕ ಹುಟ್ಟಿ ಮೈ ಹೀಂಗ ಅಲುಗಿದರ,
ಬಳಬಳಾ ಹೂ ಉದರಿ, ಉದುರಿದ ಹೂವ ಕೆಂಪ ಕೆರಿಯಾಗಿ
ಕೈಮಾಡಿ ಕರಧಾಂಗಾತು!
ಕುಡೀಬೇಕಂದರ ಬಗಸ್ಯಾಗ ಬಂತು ಇಲ್ಲಾ,-
ಯೋಳ ಹೆಡಿ ನಾಗರಹಾಂವ ನಡಾ ಬಿಗಧಾಂಗಾಗಿ

ಎವ್ವಾs ಅಂತ ಚಿಟ್ಟನ ಚೀರಿ ಎಚ್ಚರಾತು.
ಕರೆವ್ವಗ ಹಾಲೆರಿ ಅಂತ ಅವ್ವ ಅಂದಳು.
ಅದಕ್ಕs ಹೊಂಟೇನಿ.

ಹಿಮ್ಮೇಳದವ : ಅಂತೂ ಹಾಲಿನ ಗಡಿಗಿನ್ನೂ ಮುಕ್ಕಾಗಿಲ್ಲಂಥಾಂಗಾತು.

ಸೂತ್ರಧಾರ : ಅಷ್ಟ ಸಸಾರಲ್ಲೊ ಈ ಗಣಿತ. ಕಮಲವ್ವಾ,
ನೀ ಎಲ್ಲಿ, ಯಾಕ ಹೊಂಟೀದಿ ಅನ್ನೋದು ನನಗಾದರೂ
ತಿಳೀತು, ಕುಂತ ಸಭಾಕಾದರು ತಿಳಿದಬಂತು.
ಆದರ ಮೊದಲ ಬಂದ್ಯಾಕ? ಹ್ವಾದ್ಯಾಕ?

ಕಮಲಿ : ಹಿಂಗs ಹೋಗೂಣಂತ ಸನೆ ನೋಡಿ ಬಂದರ
ಗುಬುಗುಬು ಮಂದಿ ಕೂಡಿತ್ತು, ತಿರಿಗಿನಿ.
ಮಂದ್ಯಾಗ ನಂದೇನೈತಿ? ಅಂಥಾಂಗ ಮಂದಿ
ಯಾಕ ಕೂಡೇತಿ?

ಸೂತ್ರಧಾರ : ನಮಗ ನಿನಗ ಹೇರಪೇರ ಆಗೋದs ಇಲ್ಲಿ.
ನೀ ಯಾಕ ಹೊಂಟೀದಿ ಅನ್ನೋದರ ನಿನಗ ಗೊತ್ತೈತಿ:
ನಮಗ ಎಂದ ಗೊತ್ತಿತ್ತು?
ಮರತವರ್ಹಾಂಗ ಹುಡಿಕ್ಯಾಡಾಕ ಸೇರೇವಿಲ್ಲ.
ಏನ ಮರತಿದೇವ ಅದs ಗೊತ್ತಿಲ್ಲಾ, ಹುಡುಕೋದೇನಾ?
ಬಿಳೀ ಮುಗಲ ಸಂಜಿ ಮುಂಜಾನೆ
ಒಣಾ ಬಣ್ಣಾ ನಕ್ಕ ತಿರಿಗೇ ತಿರಿಗತೈತಿ.
ಭೂಮಿಮ್ಯಾಲ ಲಂಗೋಟಿಯಷ್ಟ ನೆರಳ ಬೀಳೋದಿಲ್ಲ;
ಹದಾ ಬಾಯ್ತೆರದ ಹಾಂಗs ನಿಂತೈತಿ,-

ಹಿಮ್ಮೇಳದವ : ಮಂದೀದೊಂದಾದರ ನಿಂದs ಒಂದಪಾ!
ನೆಟ್ಟಗ ಮಾತಾಡಾಕೇನ ರೊಕ್ಕ ಬೀಳತಾವು?
ಮಾರಾಯಾ, ಸರಳ ಹಾದೀ ಹಿಡದ ಮಾತಾಡಿದರs
ಒಬ್ಬನ ಮಾತ ಇನ್ನೊಬ್ಬಗ ಮುಟ್ಟೋ ದಿನಮಾನ ಅಲ್ಲಿವು;
ಅಂತಾದರಾಗ ಒಂಕ ಒಗಟಾ ಹಾಕಿದರ?
ನೋಡ ಕಮಲವ್ವಾ, ಹೇಳಿ ಹ್ವಾದ ಮಳಿ ಬರಲಿಲ್ಲ.
ಊರಿಗಿ ಊಟಾ ಹಾಕಿ ಐದ ದಿನಾ ಹಸೀ ಒದ್ದೀಲೆ
ಬಜನಿ ಮಾಡಿದರೂ ಮುಗಲ ಯಾಕನ್ನಲಿಲ್ಲ.
ಯಾಕನ್ನಬೇಕನ್ನಲಾ. ಗೌಡ್ರ ಮಗ ಬಾಳಗೊಂಡ

ಸಾಲಿ ಬರ್ಯಾಕ ಬ್ಯಾರೇ ದೇಸಕ ಹೋಗಿದ್ದ.
ಅಷ್ಟೂ ಬರದ ಇಂದ ಬರತಾನ.
ಮನ್ನಿ, ಪಾರಂಬಿ ಕರ್ರೆವ್ವ ಪೂಜೇರಿ ಮೈಯಾಗ ತುಂಬಿ
'ಬಾಳಗೊಂಡ ಬಂದ ಊರ ಅಗಸ್ಯಾಗ
ಮೂರ ಹೆಜ್ಜಿ ಇಟ್ಟದ್ದಾದರ,
ಪಳಪಳ ಮಳಿ ಬರತೈತಿ' ಅಂತ ಹೇಳ್ಯಾಳ.
ಮೂರ್ಯಾಕ? ಅಗಸ್ಯಾಗ ಐದ ಹೆಜ್ಜಿ ಬಿಟ್ಟ, ಗದ್ದಿಗೀ ಮಾಡೇವ!
ಎಲ್ಲಾ ಆತು. ಇನ್ನ ಅವನ ಕಾಲಗುಣಲೆ ಆದರೂ
ಮಳಿ ಬರತೈತೇನಂತ ಅಗಸ್ಯಾಗ ನಿಂತೇವ.
ಹೊತ್ತ ಮುಣಗಿ ಕತ್ತಲಾಗಾಕ ಹತ್ತೇತಿ
ಇನ್ನೇನ ಬರೋ ಹೊತ್ತಾತ.

ಸೂತ್ರಧಾರ : ಅವೂ ಕಮಲವ್ವ,
ಪೂಜಿಗಿ ಹೋಗೋದ ಹೋಗತಿ.
ನೀ ಎರದ ಹಾಲಿನ್ಹಾಂಗ ಮುಗಲ ಸುರೀಲೆಂತ
ಬೇಡಿಕೋ ಹೋಗು.

ಕಮಲಿ : ಹಾಂಗಾದರ, ಅಪ್ಪಾ ಸೂತ್ರಧಾರ ನಾ ಬರಲ್ಯಾ?
ಅಪ್ಪೂ ಹಿಮ್ಯಾಳ್ಯಾ ನಾ ಬರಲ್ಯಾ?
(ಹೋಗುವಳು)

## ಅಂಕ : ಒಂದು (b)

*(ಪೂರ್ವರಂಗ ಮುಗಿದುದು. ಸೂತ್ರಧಾರ ಪ್ರೇಕ್ಷಕರನ್ನು ಕುರಿತಾಗಿ ಸ್ವಗತ ಭಾಷಣವೆಂಬಂತೆ ಮಾತಾಡುತ್ತಿರುವಾಗ ಹಿಂದಿನವರೆಲ್ಲ ಗದ್ದಿಗೆಯ ಸುತ್ತ ಸೇರಲಾರಂಭಿಸುತ್ತಾರೆ.)*

ಸೂತ್ರಧಾರ : ಕಾಯೋದ, ಹಾದೀ ನೋಡೋದ, ಕಾಯೋದ,-
ಮಾಡಾಕೇನೂ ಇಲ್ಲದ್ದಕ್ಕ ಕಾಯೋದ,
ನೋಡಾಕೇನೂ ಇಲ್ಲದ್ದಕ್ಕ ಕಾಯೋದ,
ಕಿರಿಬೆರಳ ಚಿವುಟಿದರು ಎಚ್ಚರಾಗದಷ್ಟು
ಮೈ ಮರಗಟ್ಟೋತನಕ ಕಾಯೋದ,-
ಹಳೀ ನೋವಿನ್ಹಾಂಗ ಎಲ್ಲೋ ಅಳಕತೈತಿ;
ನಮ್ಮನ್ನೇನ ಈ ತೆಪ್ಪ ಉಳಸಾಣಿಲ್ಲ.
ಮುಳಗೋದ ತಪ್ಪಸಾಣಿಲ್ಲ,

ಈಸಿ ಬರೋ ತಾಕತ್ತಿಲ್ಲ.
ಆದರ ನಂಬಾಕ ಮನಸ ಆಗಾಣಿಲ್ಲ.
ಯಾಕಂದರ ತೆಪ್ಪs ಇಲ್ಲ!
ದೇವರs, ನಾವ ಮಾಡತಾ ಇದ್ದದ್ದ ನಮಗs
ಗೊತ್ತಾದರ ಏನ ಮಾಡೋಣು?
ಹೊತ್ತ ಮುಣಗಿ ಕತ್ತಲಾತ ಇನ್ನೂ ಬರಲಿಲ್ಲಲ್ಲೊ!

ಇರಿಪ್ಯಾ : ಭರಿಮ್ಯಾ ಒಬ್ಬ ಹ್ವಾದಾ, ಭಾಳ ಹಳಹಳಿ
ಆತ ಮಾರಾಯಾ!

ಗುರ್ಯಾ : ಬಿಕನೇಸಿಗೋಳಿದ್ದರ ಇಷ್ಟ ಆಗೋದs ಮತ್ತ,
ಅದಕೇನ ನಾ ಇಲ್ಲ, ನೀ ಇಲ್ಲ.

ಯಮನ್ಯಾ : ಆದದ್ದರ ಏನ ಹೇಳ್ರೊ ನಮಗsಟು.

ಇರಿಪ್ಯಾ : ಸಜ್ಜನ ಬಂದ ನೋಡ್ರೆಪಾ, ಗೊತ್ತಿಲ್ಲದವನ್ಹಾಂಗ
ಆಡತೀಯಲ್ಲೊ.

ಯಮನ್ಯಾ : ಏ, ಏನ ಖರೇನ ನನ್ನಾಣಿ ನಿರ್ವಾಣೆಪ್ಪನ
ಆಣಿ ಗೊತ್ತಿಲ್ಲ, ಒಳತನ್ನು,

ಗದಿಗ್ಯಾ : ಹಳಬರ ಭರಿಮ್ಯಾ ಇರಾಕಿಲ್ಲಲೊ? ಅಂವ ಇಂದ ಹ್ವಾದ.

ಯಮನ್ಯಾ : ಅsಟ ನನಗೂ ಗೊತ್ತೈತೊ; ಹೆಂಗ ಹ್ವಾದಂದ್ರ?

ಇರಿಪ್ಯಾ : ಸರ್ವತ್ತಿನಾಗ ಮುದಿಗೌಡ ಬರಿಮ್ಯಾನ ಕರದ-
ಮಗನs ಹೊಲೇರ ಯಮನೀ ಮನಿಗಿ ಹೋಗು
ನಾಳಿ ಹರೀವತ್ತ ಗೌಡರ ಮನಿಗಿ ಬರಾಕ
ಹೇಳ್ಯಾರಂತs ಕರದ ಬಾ ಹೋಗು-ಅಂದಾರ.
ಈ ಮಗಾ ಹೋಗಿ ಬಾಗಲಾ ಬಡದ್ದಾನು-
ತೆರದಿತ್ತು. ಅಡ! ಈ ಯಾಳೇದಾಗ ಯಮನಿ
ಬಾಗಲಾ ಹಾಂಗs ಬಿಟ್ವಾಳಲ್ಲಪಾ- ಅಂದವನ
ಒಳಗ ಹೊಕ್ಕಿದಾನು -ದೀಪಿಲ್ಲ, ಬೆಳಕಿಲ್ಲ-
ಕೈಯಾಡಿಸಿಕೋತ ಹೊಕ್ಕಿದಾನು, -ಹೊರಸ ಸಿಕ್ಕೈತಿ.
ಮ್ಯಾಲ ಯಮನಿ ಮಲಗಿದ್ದಳು. ಇಂದ ಯಾರ
ಗಿರಾಕಿ ಇಲ್ಲದ್ದಕ್ಕ ಕದಾ ತಗದೈತಂದವನ ಮಗಾ

ಇವನೂ ದೋತರ ಕಚ್ಚೀ ಬಿಚ್ಚಿದ!
ಗಳಿಗಿ ಹೊತ್ತಾಗಿ, ಮಗನ ಮದಾ ಇಳದ
ಕರದ್ದಾನು-ಮಾತಾಡಿಲ್ಲ. ಅಳಿಗ್ಯಾಡಿಸಿದಾನು-ಎದ್ದಿಲ್ಲ.
ಮುಟ್ಟತಾನು ಮೈ ತಣ್ಣಗ ಚೋಳ!
ಅಲ್ಲೆ ಒಮ್ಮಿ ಚೀರಿ, ಮತ್ತೇನ ತಿಳೀತೇನೊ
ಬಾಯಿಮಾಡಿ ಹಾಡಿಕೋತ ಹೊರಗ ಬಂದ.
ಸೀತೀನ ಎಬ್ಬಿಸಿ ಚಿಮಣಿ ತಗೊಂಡ್ಹೋಗಿ
ನೋಡತಾನು-ತೆರದ ಕಣ್ಣ ತೆರಧಾಂಗs
ಯಮನಿ ಗೊಟಕ್! ಇವನೂ
ಮಗಾ ಚೀರಿದವನs ಅಲ್ಲೇ ಗೊಟಕ್ಕಂದಬಿಟ್ಟ.

ಯಮನ್ಯಾ : ಮೊದಲ ಯಮನಿ ಹೆಂಗ ಹೋಗಿದ್ದಳು?

ಗುರ್ಯಾ: ಮೂರೂಸಂಜಿ ಮುದಿಗೌಡ ಯಮನೀs ಮನ್ಯಾಗ
ಹೊಕ್ಕದ್ದ ಪಾರಿ ಸ್ವತಾ ನೋಡಿದಾಳಂತಪಾ,
ಎಷ್ಟ ಖರೇನೊ ಎಷ್ಟ ಸುಳ್ಳೋ!

ಗದಿಗ್ಯಾ : ಒಟ್ಟ ಅದೆಲ್ಲ ಶಿವನ ಮಾಯೆ ಏನಪಾ.
ನಾವೇನ ಕಣಗಾಣಲಿಲ್ಲ, ಕಿವಿಗೇಳಲಿಲ್ಲ,
ಆಡಿಕೊಳ್ಳೋದ್ಯಾಕ? ಖರೆ ಸುಳ್ಳ?

ಸೂತ್ರಧಾರ : ಹೊತ್ತ ಮುಣಗಿ ಕತ್ತಲಾತ ಇನ್ನೂ ಬರಲಿಲ್ಲಲ್ಲೊ?

ಗುರ್ಯಾ : ಲಗು ಬರತೇನಂದಿರಲಿಲ್ಲ ಅಂವ?

ಇರಿಪ್ಯಾ : ಇಕ್ಕs ಈಗ ಬರತೇನಂದ ದೇವರುs
ಬರಾಣಿಲ್ಲೇನಪಾ.

ದೊಡಬಸ್ಯಾ *(ಉದ್ವೇಗದಿಂದ ಬಂದು ಕುಳಿತು ಬೆವರು ಒರೆಸಿಕೊಳ್ಳುತ್ತ)*
ಮತ್ತ ಒಬ್ಬ ಜಿಗದಪಾ.

ಇರಿಪ್ಯಾ : ಮತ್ಯಾರ ಹ್ವಾದರಪಾ?
ಈ ಮಂದೀನೆಲ್ಲ ಮೊದಲs ಎಣಿಸಲಿಲ್ಲ.
ನಾ ಅಂತೂ ಅಲ್ಲ? ನೀ ಯಾಕ ಹೋಗಿದ್ದಿ
ಸಾಯಾಕ?

ದೊಡಬಸ್ಯಾ : ಸಾಯಾಕ ಹ್ವಾದಂಗs ಹುಡುಗಾ! ಬರಿಮ್ಯಾಣ
ಹುಗ್ಯಾಕ ಒಂದ ಗೋರಿ ಹಡ್ಡಬೇಕಂತ-
ಮಣಕಾಲಮಟ ಹಡ್ಡೀದೇವೋ ಇಲ್ಲೊ-ಅಲ್ಲೆ
ಒಂದ ಹಸಿ ಹೆಣ-ಕೈ ಕಟಿಕೊಂಡ, ಚಪ್ಪಾಗಳಿ
ಹಕ್ಕ್ಯೊಂಡ-ಕಣ್ಣ ಮುಚ್ಚೇತಿ, ಇಲ್ಲ, ಟಬರಲೆ
ಕುಂತಿತ್ತಪಾ!

ಯಮನ್ಯಾ : ಏ ಹೌದ ಹೌದೊ; ಅದು ದಾಸರ ಗುರಿವ್ಯಾಂದ.
ಮನ್ನಿ ಮನ್ನಿ ಅವನೂ ಸತ್ತಿದ್ದ…

ದೊಡಬಸ್ಯಾ : ನಮಗೇನ ಗೊತ್ತೊ? ರಾತ್ರಿ ಯಾಳೆ.
ಈಟ ಲಾಟಾನ ಬೆಳಕಾ ಎದಕ್ಕ ಆಗೋದಾ?-
ಹಳಿ ಗೋರಿ ಇರಬೇಕಂತ ಹಡ್ಡಿದಿವು-
ಬೇವಿನ ಹಸಿ ತಪ್ಪಲ ಹಾಂಗs ಇತ್ತು!
ಹೊಸಾ ಅಂಗಿ, ಹೊಸಾ ದೋತರ, ದಡಿ ರುಮಾಲಾ
ಮಾತಾಡಸಬೇಕನ್ನಿಸ್ತು,
ಆsಟಗಾರ ನೋಡೋ, ಕಾಲಲೆ ಒದ್ದ ಕೈ
ಚಾಚಿ ಹಲ್ಲ ತೆರಕೊಂಡ ಚಿಟ್ಟನ ಚೀರಿತೊ ಚೀರಿತು-
ಕುರುಬರ ಪುಂಡ್ಯಾ ಅಲ್ಲೆ ಸೆಟದ.
ಉಳಿದವರೆಲ್ಲಾ ಜೀಂವಾ ಕೈಯಾಗ ಹಿಡಕೊಂಡ
ಆಗೊ ಈಗೊ ಅಂತ ಓಡಿ ಬಂದಿವಿ.
ನನಗರೆ ಶಿವನs ಮಾದೇವನs ಈ ಮಂದೆಲ್ಲಾ
ಹಾಂಗs ಕಾಣಸಾಕ ಹತ್ಯಾರ.

ಯಮನ್ಯಾ : ಮತ್ತೂ ನೀ ಭಾಳ ಗಟ್ಟಿ ಅಂತ ಉಳದ
ಬಂದಿ ಬಾ. ಮಾರಾಯಾ ಯಾರ ಸತ್ತಾಗೆಲ್ಲಾ
ನನಗ ನಾನs ಸತ್ಹಾಂಗ ಆಗತೈತಿ.

ಸೂತ್ರಧಾರೆ : ಹೊತ್ತ ಮುಣಗಿ ಕತ್ತಲಾತ ಇನ್ನೂ ಬರಲಿಲ್ಲಲ್ಲೊ?

ಗದಿಗ್ಯಾ : ಮನ್ನಿ ಹಿಂಗಾತು:
ಹಸಿ ಎಷ್ಟ ದೂರ ಹೋಗೇತಿ ನೋಡೋಣಂತ
ಗುದ್ದಲಿ ತಗೊಂಡ ಹೊಲಕ್ಕ ಹೋಗಿ
ಹಡ್ಡಬೇಕನ್ನೊದರಾಗ ನೋಡೊ-
ಎಡಕ್ಕೊಂದ ಗೋರಿ, ಬಲಕ್ಕೊಂದ ಗೋರಿ-

ಎಡಕಿನ ಗೋರಿ ಬಿರದ ಕಣ್ಣಿಗಿ ಕತ್ತಲಿ ಬಂದ
ನಾನs ಚೀರಿದರ ನನಗs ಕೇಳಸಲಿಲ್ಲ!
ಗೋರ್ಯಾಗ ಯಾರೋ ಎಳಕೊಂಡ್ಹೋಗಿ ತಂಬಾಕ ಮಾಡಿ
ತಿಂಧಾಂಗಾತ! ತಿಂದ ಚಟ್ಟಾ ಉಗುಳಿಧಾಂಗ ಸಟ್ಟಂತ
ಸಿಡದ ಬಿದ್ದ, ಹೆಂಗೊ ಏನೊ ಬಗಲಾಗ
ರುಂಬಾಲ ಹಿಡಕೊಂಡವನ ಓಡಿ ಓಡಿ ಬಂದಿನು.
ಮನಿಗಿ ಬಂದ ಕೆರಕೋಬೇಕಂದರ
ಕೈ ಎತ್ತಾಕ ಆಗವಾತು! ನನ್ನ ಹೇಂತಿ ಬಂದ
'ಹೊಲೇರ ಪಾರೀ ಮನಿಗಿ ಹೋಗಿದ್ಯಾನಂ'ತ ಕೇಳಿತ.
ಅಂದಿಂದ ನೋಡೋ, ಏನೋ ಕಳಕೊಂಡ್ಹಾಂಗ
ಕಳಕೊಂಡ್ಹಾಂಗ ಅನಸ್ತೈತಿ. ನೀ ಯಾಕ ಸುಮ್ಮನ
ಕುಂತಿ? ಏನಾರ ಮಾತಾಡಲಾ.

ಯಮನ್ಯಾ : ಏ, ಇನ್ನ ಸಾಕ ಸುಮ್ಮನ ಕುಂದರ್ಯೋ
ಹೆದರಿಕೆ ಬರತೈತಿ.

ಗುರ್ಯಾ : ಈಗ ನಾವಿರೋದ ಹಗಲಿ ಅಂತ ತಿಳಿಕೊಂಡ
ಕುಂಡ್ರೋ, ಹೆದರಿಕಿ ಬರಾಣಿಲ್ಲ.

ಸೂತ್ರಧಾರ : ಹೊತ್ತ ಮುಣಗಿ ಕತ್ತಲಾತ ಇನ್ನೂ ಬರಲಿಲ್ಲಲ್ಲೊ?

ಗದಿಗ್ಯಾ : ಅಲ್ಲೀತನಕ ನೀ ಏನsರೆ ಮಾತಾಡಲಾ.

ಗುರ್ಯಾ : ಏನ ಮಾತಾಡಲಿ?

ಗದಿಗ್ಯಾ : ಏನsರೆ, ಅದs ಇದs ನೇಮ ಐತಿ?
ಗಲಗಲ ಸಪ್ಪಳಿದ್ದರ ಅಂಜಿಕಿ ಬರಾಣಿಲ್ಲ,
ಯಾಕಪಾ? ಮಾತಾಡ ಮಾತಾಡ.

ಗುರ್ಯಾ : ಏನ ಮಾತಾಡಲಿ?

ಗದಿಗ್ಯಾ : ಹಿಂಗs ಏನರೆಪಾ. ನೀರಾಗ ಹೂಂಸ
ಬಿಟ್ಹಾಂಗ ನಾವ ಮಾತಾಡಲಿಲ್ಲ? ಹಂಗ ಏನರೆಪಾ.
ಕ್ವಾಣ ಗಬ್ಬ ಹೋತನ್ನು;
ಗುಡ್ಡದಾನ ಗವಿ ಮಾತಾಡಿತನ್ನು,
ಚಿನಿದಾಂಡ ಅನ್ನು, ನಿದ್ದಿ ಬಗರಿ ಅನ್ನು,

ಎಲ್ಲಿಗಿ ಬಂತೊ ಸಂಗಯ್ಯಾ ಅನ್ನು,
ಎಲ್ಲಿಗಿ ಬಂತೊ ಸಂಗಯ್ಯಾ ಅನ್ನು,
ಠರ್ ಅನ್ನು ಟುಸ್ ಅನ್ನು-
ಹಂಡೋಲ್ ಬಂಡೋಲ್
ಚಿಗರಿ ಚಿಕಲಕ ಬಕಲಕ
ಸಾಲಕುದರಿ ಹನುಮಂತರಾಯಾ
ಬಚ್ಚಾಬೋಲ್
ಬೋಲಾತಿ ಬೋಲ ತುಮಿ ಲಂಗೋಟಿ ಕೋಲ.

*(ಒಳಗಿನಿಂದ ಕಮಲಿ 'ಅಯ್ಯೋ ಬಯೋರ್ ಎಪ್ಪಾ ಕಾಯಯೋರ್' ಎಂದು ಚೀರುವಳು.)*

ಸೂತ್ರಧಾರ : ಯಾರಿಗೇನಾತು? ಏ ಹೋಗಿ ನೋಡೊ.

ಹಿಮ್ಮೇಳದವ : ಹೊಲೇರ ಕಮಲಿ ಢುರಕೀ ಹೊಡೀತಾಳ ಬಿಡೊ.

(ಒಳಗಿನಿಂದ ಕಮಲಿ 'ಅಯ್ಯೋ ಬಯೋರ್ ಎಪ್ಪಾ ಕಾಯಯೋರ್' ಎಂದು ಚೀರುವಳು.)

ಹಿಮ್ಮೇಳದವ : ಢುರಕೀ ಸೈತ ರಾಗ ತಗದs ಹೊಡೀತಾಳ ನೋಡೊ! (ಕಮಲಿ ಅಳುತ್ತ ಪ್ರವೇಶಿಸುವಳು.)

ಕಮಲಿ : ಬಯೋರ್ ಎಪ್ಪಾ ಕಾಯಯೋರ್

ಸೂತ್ರಧಾರ : ಏನಾತು? ಏನಾತು?

ಕಮಲಿ : ಎಲ್ಲಾ ಆತು.

ಹಿಮ್ಮೇಳದವ : (ಸೂತ್ರಧಾರನನ್ನು ಹಿಂದಕ್ಕೆ ಸರಿಸಿ) ಎಲ್ಲಾ ಏನಾತು?

ಕಮಲಿ : ಆಗಬಾರದ್ದೆಲ್ಲಾ ಆತು.

ಹಿಮ್ಮೇಳದವ : ಆಗಬಾರದ್ದೆಲ್ಲಾ ಅಂದರ ಏನೇನಾತು?

ಕಮಲಿ : ಹಾಲ ಚೆಲ್ಲಿಹೋಯ್ತು.

ಹಿಮ್ಮೇಳದವ : ಯಾವುದರ ಬೆಕ್ಕ ಬಂದಿತ್ತೇನ?

ಕಮಲಿ : ಯಾರೋ ಬಂದಿದ್ದರು.

ಹಿಮ್ಮೇಳದವ : ಯಾಂವ ಬಂದಿದ್ದ? ಹೆಂಗ ಇದ್ದ?

ಕಮಲಿ : ಬಿಳೀ ಕುದರೀ ಏರಿದ್ದಾ, ಜರದ ರುಮಾಲ ಸುತ್ತಿದ್ದಾ.
ಚಿಗರ ಮೀಸ್ಯಾಗ ಯಾಸಿ ನಗಿ ನಗತಿದ್ದಾ.
ಲಗಾಮ ಜಗ್ಗಿ ನನ್ನ ಮುಂದs ನಿಲ್ಲಿಸಿದಾ.
ಕುದರಿ ಇಳದ ಬಂದಾ…

ಹಿಮ್ಮೇಳದವ : ಬಂದಾ? ಹೂಂ ಬಂದ ಮುಂದೇನ ಮಾಡಿದಾ?

ಕಮಲಿ : ಸೀರೀ ಸೆರಗ ಹಿಡದಾ, –

ಹಿಮ್ಮೇಳದವ : ಹಿಡದ ಏನು ಮಾಡಿದಾ?

ಕಮಲಿ : ಹಿಡದಾ, ಹಿಡದವನ ಹಾಲ ಕೊಡ ಅಂದಾ...
ಅಂದವನ ಗಡಿಗಿ ಕಸಗೊಂಡಾ...
ಹಿಡದವನ… ಅಂದವನ… ಕಸಗೊಂಡವನ
ಕಂಟಕ ಬಾಯಿ ಹಚ್ಚಿ ಗಟಗಟಾ ಕುಡದಾ,
ಕಣ್ಣಿಗಿ ಕತ್ತಲಿ ಬಂದ,
ರೆಪ್ಪಿ ಹೀಂಗ ಮುಚ್ಚಿ ತಗ್ಯೂದರಾಗ ಕುದರಿ ಏರಿದ್ದಾ.

ಹಿಮ್ಮೇಳದವ : ಏರಿರಬೇಕ ಮತ್ತs. ಹಾಲ ಕುಡದ ಮ್ಯಾಲ
ಕೆಲಸೇನ ಇರತೈತಿ?

ಸೂತ್ರಧಾರ : ಎಲ್ಲಿಯಾಂವಾ? ಯಾವೂರ? ಎಂತೂರ?….

ಕಮಲಿ : ಹೆಸರ ಹೇಳ ಅಂದರ
ಕೊಳ್ಳಾಗಿನ ಮುತ್ತಿನ ಸರಕ್ಕ ಚಟಮುದ್ದ ಕೊಟ್ಟ
ನನ್ನ ಮ್ಯಾಲ ಒಗದ ಕುದರಿ ಓಡಿಸಿದಾ.

ಸೂತ್ರಧಾರ : ಯಾರಿದ್ದಿರಬೇಕು? ಕಮಲವ್ವಾ,
ಮುತ್ತಿನ ಸರಾ ತಕ್ಕೊಂಡ ನೀ ಮನಿಗಿ ಹೋಗು.
ಇಂದಿಲ್ಲ ನಾಳಿ ಯಾರನ್ನೋದ ಗೊತ್ತಾದೀತು.

ಹಿಮ್ಮೇಳದವ : ಅದs ಅಂತೀನ್ನಾನೂ. ಹಾಲಿನ ರುಚಿ ಹಲ್ಲಿಗಿಳದ ಮ್ಯಾಲ
ಬರದs ಇರತಾನ್ಹೆಂಗ?
ಅಂವ ಬರತಾನ ಹೋಗ ನೀ. ಪಾಪ ಹುಡಿಗಿ ಬಾಡಿ
ತಪ್ಪಲಾಗೇತಿ, ತಿಳೀಬಾರದs ಅವಂಗ? ಹೋಗ ನೀ.

*(ಕಮಲಿ ಅಳುತ್ತ ಹೋಗುವಳು. ನೇಪಥ್ಯದಲ್ಲಿ ಸ್ತ್ರೀಯರ ಹಾಡು ಕೇಳಲಾರಂಭಿಸುತ್ತದೆ.)*

ನೇಪಥ್ಯದಲ್ಲಿ : ಮೇಲಾದ ನಾಡಿಂದ ಬಾಲಯ್ಯ ಬರತಾನ
ಕುಲದ ಬಾಲೇರೆಲ್ಲ ಕರೆತನ್ನಿರೇ
ಹೆಚ್ಚೇನ ನಾಡಿಂದ ಅಚ್ಚೇದ ದೊರಿ ಬಂದ
ಅಚ್ಚ ಬಾಲೇರೆಲ್ಲ ಕರೆತನ್ನಿರೇ

ಹಿಮ್ಮೇಳದವನ : ಬಾಳಗೊಂಡ ಬಂದ! ಬಂದಾ! ಬಂದಾ!....

*(ಎಲ್ಲರೂ ಎದ್ದು ರುಮಾಲು ಸುತ್ತಿಕೊಳ್ಳುತ್ತ, ಕುಂಡಿ ಜಾಡಿಸುತ್ತ ಸಡಗರದಿಂದ ಸಿದ್ಧರಾಗತೊಡಗುವರು.)*

ನೇಪಥ್ಯದಲ್ಲಿ : ಚಿಗರ ಮೀಸೀ ಚೆಲುವ ದಿಗರನಾಡುತ ಬರುವ
ಒಗರ ಬಾಲೇರೆಲ್ಲ ಕರತನ್ನಿರೇ
ಚಿನ್ನದ ಗಿಂಡ್ಯಾಗ ಪನ್ನೀರ ತನ್ನಿರೆ
ಚೆನ್ನಾಗಿ ಚರಣಾ ತೊಳೆಯೀರೆ

*(ರಂಗದ ಎಡಬದಿಯಿಂದ ಬಾಳಗೊಂಡ, ಅವನ ಹಿಂದೆ ಮುದಿಗೌಡ ಬರುತ್ತಲೂ ಒಬ್ಬನು ಮುಂದೆ ಹೋಗಿ ಸಂಭ್ರಮದಿಂದ ಬಾಳಗೊಂಡನ ಬಲಗೈಯನ್ನೂ ಹಿಮ್ಮೇಳದವನು ಎಡಗೈಯನ್ನೂ ಹಿಡಿದು ನಿಧಾನವಾಗಿ ಗದ್ದಿಗೆಯ ತನಕ ಕರೆತರುತ್ತಾರೆ. ಜನರಲ್ಲಿಯೇ ಒಬ್ಬನು ಬರಿ ಬಾಳ ಗೊಂಡನ ಹೆಜ್ಜೆಗಳನ್ನೇ ಎಣಿಸುತ್ತಿರುತ್ತಾನೆ. ಮುಂದಿನ ಪ್ರತಿ ಎರಡು ಸಾಲಿಗೊಂದರಂತೆ ಬಾಳಗೊಂಡ ಹೆಜ್ಜೆಯನ್ನಿಟ್ಟು ಗದ್ದಿಗೆಯ ಮೇಲೆ ಕೊನೆಯ ಪದ್ಯವಾದ ನಂತರ ಕುಳಿತುಕೊಳ್ಳಬೇಕು.)*

ಒಬ್ಬ : ಬಾರೊ ಬಾರೊ ನಮ್ಮಯ್ಯಾ ಎದಿ
ಕದಗೋಳ ತೆರದೇವ ಕರದೇವ||

ಹಿಮ್ಮೇಳದವ : ಹಾಲದ ಬಳ್ಳಿ ಹಾದಿಗುಂಟ ಹಬ್ಬಿಸೇವ
ಬಾಡಧಾಂಗ ಬಾ ಸ್ವಾಮಿ ಅಂದೇವ||

ಒಬ್ಬ : ಹೆಜ್ಜಿಗಿ ಯೋಳ್ಯೋಳ ಎಳಿದೀಪ ಹಚ್ಚೇವ
ಕಳೀಧಾಂಗ ಬಾ ಸ್ವಾಮಿ ಮೆಲ್ಲಕರೆ||

ಹಿಮ್ಮೇಳದವ : ನಂಬುಗೆಯೆಂಬೊ ರತ್ನಗಂಬಳಿ
ಗದ್ದಿಗಿ ಮಾಡೇವ ಕುಂಡ್ರಾಕರೆ||

ಒಬ್ಬ ಮತ್ತು (ಬಾಳಗೊಂಡನೆದುರು ನಿಂತು ಕೈಮುಗಿದು)

ಹಿಮ್ಮೇಳದವ : ಕುಡಗೋಲ ನಿಂದೋ ಕುಂಬಳ ನಿಂದೊ
ಹೆಂಗರ ಹೆರಚಂತಂದೇವ||

ಬತಗೆಟ್ಟ ಬಂದೇವ ಬಲ್ಲಾಂಗ ಮಾಡೇವ
ಬಾಗಿ ನಮೋನಮ ಅಂದೇವ||

*(ಬಾಳಗೊಂಡ ಕುಳಿತುಕೊಳ್ಳುವನು. ಹಿಮ್ಮೇಳದವನು ಉತ್ಸಾಹದಿಂದ ರಂಗದ ಆ ಬದಿಗೊಮ್ಮೆ ಈ ಬದಿಗೊಮ್ಮೆ ಓಡಾಡುತ್ತ ಹೇಳುವನು*

ಹಿಮ್ಮೇಳದವ : ಬಂದ! ಬಂದಾ! ಬಾಳಗೊಂಡ ಬಂದಾ!
ನಮ್ಮ ಹೊಲಗೋಳ ಹುಲ ಬಂದಾ!
ಹಂಗಾಮದ ಹರಿಚಂದ ಗಾಳಿ ಬಂದಾ!
ಕೊರತಿಗಿ ಭರತಿ ಆಗಿ ಬಂದಾ!
ಅಭಾವಕ ಆಸೇ ಆಗಿ ಬಂದಾ!

ಒಬ್ಬೊಬ್ಬರನ್ನೇ ಕರೆದು

ಏ, ನೀ ಹೋಗಿ ಹಸಿ ಎಷ್ಟ ದೂರ ಹೋಗೇತಿ ನೋಡಿ ಬಾರೊ
ಏ, ನೀ ಹೋಗಿ ಊರಾಗ ಹಸರ ಎಲಿ ಎಷ್ಟದಾವ ಎಣಿಸಿಕೊಂಬಾರೊ
ಏ, ನೀ ಹೋಗಿ ಮುಗಿಲಿನ್ಯಾಗ ಮೋಡ ಕಟ್ಟಿದುವೇನ ನೋಡೊ
ಏ, ನೀ ಹೋಗಿ ಹೇಳಿ ಹ್ವಾದ ಮಳಿ ಬಂತೇನ ನೋಡೊ

*(ಇಲ್ಲಿಯವರೆಗೆ ಉಳಿದವರೆಲ್ಲ ಬಹಳ ಜನ ಸೇರಿರುವದನ್ನು ಸೂಚಿಸುವಂತೆ ಗುಬು ಗುಬು ಸದ್ದು ಮಾಡುತ್ತಿದ್ದು ಒಬ್ಬೊಬ್ಬರೇ ಹೋಗಿ ರಂಗ ಭೂಮಿ ಒಮ್ಮೆಲೆ ಸ್ತಬ್ಧವಾಗುತ್ತದೆ. ಒಬ್ಬ ಮತ್ತೆ ರಂಗದ ಮೇಲೆ ಬಂದಾಗ ಹಿಮ್ಮೇಳದವನು 'ಯಾಕ ಎಲ್ಲಿಗೆ ಬಂತೋ' ಎಂದಾಗ ಅವನು ಕುತ್ತಿಗೆಗೆ ಎರಡೂ ಕೈ ಹಚ್ಚಿಕೊಂಡು 'ಇಲ್ಲಿಗೆ ಬಂತೋ ಸಂಗಯ್ಯಾ' ಎಂದು ಹೇಳಿ ಬಾಳಗೊಂಡನನ್ನು ದುರುದುರು ನೋಡುತ್ತ ಹೊರಟುಹೋಗುವನು. ರಂಗದ ಮೇಲೆ ಸೂತ್ರಧಾರ, ಹಿಮ್ಮೇಳದವ, ಬಾಳಗೊಂಡ, ಮುದಿಗೌಡ ನಾಲ್ವರು ಮಾತ್ರ ಉಳಿಯುವರು. ರಂಗಭೂಮಿ ಈಗ ಶೂನ್ಯವಾಗುತ್ತದೆ.)*

ಬಾಳಗೊಂಡ : ಎಲ್ಲರೂ ಹೋಗಿ ಬರೇ ಅವರ ನೆರಳಿನ್ಹಾಂಗ
ನಾವ ಉಳಿದಿವಿ. ಏನಿದು?
ಹಸಿ ಅಂದರು, ಹಸರೆಲಿ ಅಂದರು, ಹೋದ ಮಳಿ ಅಂದ,
ಕರದರ ಓ ಅನ್ನಧಾಂಗ ಹೋದರಲ್ಲ,-
ಯಾಕ ಹಿಂಗ್ಯಾಕ?

ಮುದಿಗೌಡ : ಯಾಕ, ಎಂತಾ ಹೆಂಗ ಹೇಳಲಿ?
ಬಂದರು, ಹ್ವಾದರು ಅಷ್ಟs. ಸಣ್ಣಸಣ್ಣ
ಮಾತಿಗೆಲ್ಲ ಹಿಂಗ ತೆಲಿ ಕೆಡಿಸಿಕೊಂಡರ ಹೆಂಗ ಹೇಳು?

ಹೇಳಿಕೇಳಿ ದನಾ, ಹಸರ ಇದ್ದಲ್ಲಿ ಮೇದ,
ನೆರಳಿದ್ದಲ್ಲಿ ಮಲಗಿ, ಮೆಲಕಾಡಸೋದೊಂದs ಗೊತ್ತವಕ್ಕ.

ಬಾಳಗೊಂಡ : ಬಹುಶಃ ನಿನಗ ಗೊತ್ತಿರಬೇಕು,-
ಯಾಕ ಬಂದರು? ಯಾಕ ಹೋದರು?

ಸೂತ್ರಧಾರ : ನಿಜ ಹೇಳಿದರ ನಿಷ್ಠೂರ, ಕಟ್ಟಿಗಿ ಹಚ್ಚಿದರ ಕಷ್ಟ.
ಗೊತ್ತೈತಿ. ಗೊತ್ತಿಲ್ಲ, ಗೊತ್ತಿದ್ದರೂ
ಹೇಳಾಕ ಆಗಾಣಿಲ್ಲ; ಯಾಕಂದರ ನೋಡೊ:
ಪ್ರತಿಯೊಂದ ಮಾತಿಗಿ ಹಿಂದೊಂದ ಮುಂದೊಂದ
ಇದ್ದs ಇರತಾವೇನಪಾ, ನಡುವಿಂದೊಂದs
ಹೇಳಿದರ ನಿನಗೇನ ತಿಳಿಬೇಕು? ಆದರೂ ನೋಡಪಾ…

ಮುದಿಗೌಡ : ಇಂವಗ ಇನ್ನೊಬ್ಬರಿಗಿ ತಿಳಿಯೋ ಹಾಂಗ ಮಾತಾಡಿ
ಗೊತ್ತs ಇಲ್ಲ. ಜರಾ ತಡವಿದರ ಸಾಕು
ಪನ್ನಾಸ ಪುರಾಣ ತಿರುವನಾತ. ಹುಲಿ ಹೆಂಗ
ಇರತೈತಂತ ಹುಡಗೋರ ಕೇಳಿದರ
ಮುದಿಗೌಡನ್ಹಾಂಗಂತ ನನ್ನ ತೋರತಾನ.
ಕೇಳಿದ್ದಕ್ಕ ಒಮ್ಮೆರೆ, ಬರೋಬರಿ, ಸರಳ, ಅಷ್ಟಕ್ಕಷ್ಟs
ಒಡಪ ಬಿಡಿಸಿ ಉತ್ತರ ಹೇಳೀದಿ? ನೋಡೋ,
ನೀ ಉಂಡ ಊಟಾ ಬಿಟ್ಟ ಹೂಂಸಾ ನನಗೆಲ್ಲ
ಗೊತ್ತದಾವ. ನೀ ದಿನ್ನಾ ಸೇದೋ ಚುಟ್ಟಾದ
ಲೆಕ್ಕಾ ಹೇಳಲೇನ? ಚೆಲ್ಲಿದ ರೊಟ್ಟಿ ತಿಂದ
ಹಲ್ಲಾಗ ನಾಲಿಗೀ ಇಟಗೊಂಡ,
ಸುಮ್ಮನ ಬಾಯಿ ಮುಚ್ಚಿಕೊಂಡ ಬಿದ್ದಿರು.
ಅನ್ನಾ ಹಾಕಿದವರಿಗೂ ಗುರ್ ಅನ್ನಬ್ಯಾಡ.
ನಿನ್ನ ಕೊಳ್ಳಾಗಿನ ಪಟ್ಟೀಮ್ಯಾಗ, ಯಾರ ಹೆಸರೈತಿ,
ನೋಡು, ಆ ಮ್ಯಾಲ ಮಾತಾಡು.
ನಡಿ ನಡಿಯೊ….

*(ಬಾಳಗೊಂಡನ ರಟ್ಟೆ ಹಿಡಿದು ಜಗ್ಗಿಕೊಂಡು ಹೋಗುವನು. ರಂಗದ ಮೇಲೆ ಸೂತ್ರಧಾರ, ಹಿಮ್ಮೇಳದವ ಇಬ್ಬರೇ ಉಳಿಯುವರು.)*

ಹಿಮ್ಮೇಳದವ: ನೀವೆಲ್ಲಾ ಜೀಂವಾ ಕೈಯಾಗ ಹಿಡಕೊಂಡ
ಕಾದ ಕುಂತಾಗs ನನಗ ಅನ್ನಿಸಿತ್ತಪಾ:
ಇವ ಬಾಳಗೊಂಡಲ್ಲಾ; ಬಾಳಗೊಂಡಾದರೂ

ಗೌಡನ ಮಗಾ ಅಲ್ಲಾ; ಗೌಡನ ಮಗಾ ಆದರೂ
ಗೌಡ ಇಂವನ ಹಡದಾವಲ್ಲಾ...
ಅದಕ್ಕs ಮಳೀ ಬರಲಿಲ್ಲಾ.

ಸೂತ್ರಧಾರ : ಗಚ್ಚಿನ ಗುಡ್ಯಾಗ ಹೆಚ್ಚಿನ ಹುಲೀ ಹೊಕ್ಕೈತಿ
ಬಾ ಅಂದರ ಹೆಂಗ ಬಂದೀತ ಮಳಿ?

ಹಿಮ್ಮೇಳದವ : ಏ ಏ ಏ ಪರಬೂ, ಹಂಗ್ಯಾಕ ಒಡಪಾ ಒಗೀತೀಯೊ?
ನಿನಗ ಮಾತಾಡಕ ಬರಾಣಿಲ್ಲಂತ ಊರ ಮಂದೆಲ್ಲಾ
ಹೇಳತಾರ. ನಾನs ಒಬ್ಬಾಂವ ಅದನ್ನ ನಂಬದಾಂವ.
ಹೇಳಬಾರದ ಬಿಡಿಸಿ-ಅದೇನೊ ಹಿಂದಿಂದಾ
ಮುಂದಿಂದಾ ನಡುವಿಂದಾ-ಅಂತಿದ್ದಿ, ಮೂರೂನೂ
ಬೇರೀಜ ಮಾಡಿ ಹೇಳಬಾರದ ತಿಳಿಸಿ?
ಬೇಕಂದರ ಬಾಯಿ ಮುಚ್ಚಿಕೊಂಡ ಹೂಂ ಅಂತೇನು.

ಸೂತ್ರಧಾರ : ನೋಡಪಾ; ಇಂದಿಗಿ ಎರಡಿಪ್ಪತ್ತ ವರ್ಷದ
ಹಿಂದಿನ ಮಾತು. ಊರಿಗಿ ಯೋಳಪಟ್ಟೀ ಹುಲಿ ಬಂದು
ಯೋಳೆಂಟ ದನಾ ತಿಂದು, ಬ್ಯಾಟಿ ಆಡಾಕ ಗೌಡ
ಹೋದ. ಹಗಲೀ ಹೋದ ಗೌಡ ರಾತ್ರೀ ಬಂದ.
ಹೆಗಲ ಮ್ಯಾಲ ಏನೋ ಹೊತ್ತಕೊಂಬಂದ. ಊರ ಮುಂದಿನ
ಹಾಳಬಾಂವ್ಯಾಂಗ ಚೆಲ್ಲಿ, ಯಾರೂ ಹಣಿಕಿ ಹಾಕಬ್ಯಾಡ್ರೀ
ಅಂತ ಡಂಗರಾ ಸಾರಿದ. ಅಂದಿಂದ ಗೌಡನ ಚೇರಾಪಟ್ಟೆ
ಯಾರಿಗೂ ತಿಳೀಧಾಂಗಾತ.

ಹಿಮ್ಮೇಳದವ : ಹುಲೀ ಕೊಂದ ಬಂದ ಹೌಂದಲ್ಲೊ?

ಸೂತ್ರಧಾರ : ಕೇಳಿಲ್ಲೆ, -ತಿಳೀಧಾಂಗಾತ. ನನಗಿಲ್ಲ. ನಿನಗಿಲ್ಲ, ಮ್ಯಾಲ
ಮಗಾ ರಾಮಗೊಂಡಗೂ ತಿಳೀಲಿಲ್ಲ. ತಿಳೀಲಾರಕ ಮಗ
ಊರ ಬಿಟ್ಟ ಬ್ಯಾರೇ ಊರಿಗಿ ಹೊಂಟ ನಿಂತ.
ಗೌಡ ಹೋಗಂದ. ಗೌಡ್ತಿ 'ಬ್ಯಾನೀ ತಿಂತೇನು
ಬಯಕಿ ತೀರಸು' ಅಂದ್ಳು, 'ಹಂಗಾದರ ಏನ ತಂದ್ಕೊಡ್ಲಿ?'
'ಹುಲೀ ಹಾಲ ತಂದ್ಕೊಡು'. ಆಗಲೆಂದ ರಾಮ ಹೊಂಟ.
ಹಾಲ ಕೊಟ್ಟ ಹುಲೀ ಕೊಲ್ಲಾಕ ಬಂದರ, ಓಡಿಸಿ
ಹಾಲ ತಗೊಂಡ ಬರ್ತಿದ್ದ. ನಡುವ ಇಬ್ಬರು ಜಕ್ಕಜಲದೇರ
ಭೇಟ್ಯಾಗಿ ಹಣಿಕಿ ಹಾಕಬ್ಯಾಡಂದ ಹಾಳಬಾಂವಿಗ್ಯs

ಕರಕೊಂಬಂದೂವಪ! ಹಾಳಬಾಂವ್ಯಾಗ ಹಣಿಕಿ
ಹಾಕತಾನು: ಒಳಗ ಗೌಡನ ದೆವ್ವ!

ಹಿಮ್ಮೇಳದವ : ಏನಂದಿ?

ಸೂತ್ರಧಾರ : ಹುಡುಗ ಗಟ್ಟಿದ್ದಾ, 'ಯಾರ್ ನೀ?' ಅಂದ
'ಮಗನs, ನಾ ನಿಮ್ಮಪ್ಪ ಊರ ಗೌಡ. ಊರಿಗಿ
ಬಂದದ್ದ ಹುಲೀ ಅಲ್ಲ, ರಾಕ್ಷೇಸ, ನನ್ನ ಕೊಂದ
ನನ್ಹಾಂಗs ಆಗಿ ಊರ ಹೊಕ್ಕಾನ. ನನ್ನ ಎಲುವ
ಈ ಹಾಳಬಾಂವ್ಯಾಗ ಒಗದ್ದಾನು, ನನ್ನ ಪಾರಮಾಡೋ
ಮಗನs' ಅಂದಿತು.

ಹಿಮ್ಮೇಳದವ : ಇಂವೇನಂದ?

ಸೂತ್ರಧಾರ : ಆಗಲೆಂದ ಬಂದರ ತಾಯಿ ರಾಕ್ಷೇಸನ ಗಾಳದಾಗ
ಸಿಕ್ಕ, ಒಂದ ತಿಂಗಳ ಚರ್ಮಾ, ಒಂದ ತಿಂಗಳ ಕಣ್ಣಾ,
ಮೂಗಾ, ಕಿವೀ, ನಾಲಿಗಿ, ಎದಿ -ಎಲ್ಲಾ ಕಸಗೊಂಡ
ಬಂಗಾರದಂಥಾ ಹುಡುಗನ್ನ ಹೆಣಾ ಮಾಡಿ
ಇಟ್ಟೈಲ್ಲs.

ಹಿಮ್ಮೇಳದವ : ಹಾಂಗಾದರ ಈಗ ಇದ್ದಾಂವ ಯಾರ ರಾಕ್ಷೇಸಾ?

ಸೂತ್ರಧಾರ : ಇನ್ಯಾರಂದಿ?

ಹಿಮ್ಮೇಳದವ : ಹಾಲ ಕೊಟ್ಟ ಕೊಲ್ಲಾಕ ಹ್ವಾದ ಹುಲಿ ಇವನs?

ಸೂತ್ರಧಾರ : ಇನ್ನೇನ ಅನ್ನಲಿ?

ಹಿಮ್ಮೇಳನದವ : ನಿನಾಪ್ಪನ. ನೀವೆಲ್ಲಾ ನಿಮ್‌ನಿಮ್ಮ ಗೋರ್ಯಾಗ
ಹೋಗಿ ಕುಂತಕೊಳ್ರಿ ಅನ್ನಬಾರದ ನಮಗ?

ಸೂತ್ರಧಾರ : ಬಾಳಗೊಂಡ ಏನಂದರೂ ಗೌಡ್ತೀ ಕುಡಿ ಅಂದಮ್ಯಾಲ
ನಮ್ಮವ್ವನ ಕಣ್ಣ ಅವನ ಮ್ಯಾಲ ಬೀಳಬಾರದ್ಯಾಕ?

ಹಿಮ್ಮೇಳದವ : ಹಿಂತಾ ಗುಟ್ಟ ಇಟ್ಟಕೊಂಡ ಸಾಯದs ಹೆಂಗಿದ್ದೀಯೊ?
ಕಡೀದೊಂದ ಮಾತ ಕೇಳತೇನು, ನಾ ಕೇಳಿ ಹ್ವಾದ

ಮ್ಯಾಲ ಜವಾಬ ಹೇಳಬೇಕs-
ಬಾಳಗೊಂಡಗ ಇದ ಗೊತ್ತಿಲ್ಲಾ?

*(ಇಷ್ಟು ಹೇಳಿ ಕಿವಿಯಲ್ಲಿ ಬೆರಳಿಟ್ಟುಕೊಂಡು ಓಡಿಹೋಗುವನು.)*

## ಅಂಕ : ಎರಡು (a)

ಸೂತ್ರಧಾರ : ಬಿಟ್ಟಂಥ ಬೇರ ಹರದಾವ
ಕೂಸ ಚೀರ್ಯಾವ|
ಮುಗಲ ನೋಡ್ಯವ|
ಮಣ್ಣ ಬಗದಾವ|
ಖೂನ ಗುರುತು ಎಲ್ಲಾಪಾಕ ಮರತ
ತಿರಿಗ್ಯಾವ ಸುತ್ತ ಮುತ್ತ.||

ದೂರ ದೂರ ಹಸರ ಹಾರೇತಿ
ಹಸೀ ಸರದೈತಿ|
ಬಾವಲಿ ಜೋತಾವ|
ಹದ್ದ ಹಾರ್ಯಾವ|

ಕಣ್ಣ ಮುಚ್ಚಿದಾನೊ ಒಳಗ ದೊರಿ
ಜರಾ ಕಣ್ಣ ತೆರಿ||

ಮೈಮ್ಯಾಗ ಬರಿಯಲೇನ ಗೆರಿ
ಯೋಳಪಟ್ಟಿ ಕರಿ|
ಗೆರೀಗೊಂದ ಗಂಟ|
ಗಂಟಿಗೊಂದ ತೂತ|
ತೂತಿಗೊಂದ ಕಣ್ಣ ಮಾಡಿ
ನೋಡಲೇನ ಬಿಳಿ ಮೋಡಾ.||

*(ರಾತ್ರಿ ಸಮಯ. ಬಾಳಗೊಂಡ ಅತ್ತಿಂದಿತ್ತ ವಿಶ್ರಾಂತಿಯಿಲ್ಲದೆ ಅಡ್ಡಾಡುತ್ತಿದ್ದಾನೆ. ರಂಗದ ಒಂದು ಮೂಲೆಯಲ್ಲಿ ಮುದಿಗೌಡ ವೇಷಾಂತರದಿಂದ ಚಿಲುಮೆ ಸೇದುತ್ತ ಕುಳಿತಿದ್ದಾನೆ. ಸ್ಪಷ್ಟವಾಗಿ ಆತನ ಅಸ್ತಿತ್ವ ಗೊತ್ತಾಗುವದು ಮುಮದೆ ಅವನು ಕೆಮ್ಮಿದ ಮೇಲೆಯೇ.)*

ಬಾಳಗೊಂಡ : ಅಪ್ಪಾ ಸೂತ್ರಧಾರ

ಸೂತ್ರಧಾರ : ಹಾ

ಬಾಳಗೊಂಡ : ಎಷ್ಟ ಭಾರ ಅದsನೊ ಈ ಮೌನ?
ಏನಾರ ಮಾತಾಡೊ,
ಈ ಮೌನ ಗಪ್ಪಗಾರಿಕಿ ಬ್ಯಾಡೊ ನನಗ.
ತುಸು ಸುಮ್ಮನಿದ್ದರೂ ಮುದಿ ಎತ್ತೊಂದ
ಹೋರಿಗೊಳ ಉಚ್ಚೀ ಮೂಸಿ ನೋಡತಾ,
ಮೈಮ್ಯಾಲಿನ ನೊಣಕ್ಕ ಬಾಲಾ ಎತ್ತಲಿಕ್ಕೂ ಆಗದ
ಎದಿಯೊಳಗ ನಿಂತ್ಹಾಂಗ ಅನ್ನಸ್ತದ: ಜೋತ ಕಿವಿ,
ಗುಳಿಬಿದ್ದ ಕಣ್ಣ, ಹರಕ ತೊಗಲ ತೊಟಗೊಂಡ
ಢುರಕೀ ಹೊಡೀಬೇಕಂದ, ಉಸರ ಹಾಕೇ ಹಾಕತದ,
ಅದನ್ನ ಕಂಡರ ನನಗ...
ಏ ಹಿಂದಿಂದೆಲ್ಲಾ ನೆನಪಾಗೋ ಹಾಂಗ ಏನಾದರೂ ಮಾತಾಡೊ.
ಹಾಂ ಹೂಂ ಅನ್ನು, ಯಾಕನ್ನು, ಏನ ಅನ್ನು-
ಏನಾರ ಮಣ್ಣ ಮಸಿ ಅನ್ನು.
ಅಂದ್ಹಾಂಗ ನಿನ್ನ ವಯಸ್ಸೆಷ್ಟ?

ಸೂತ್ರಧಾರ : ಮೂರಿಪ್ಪತ್ತರ ಹತ್ತು.

ಬಾಳಗೊಂಡ : ಈ ವಯಸ್ಸಿನಾಗ
ನಾ ಏನೇನಾಗಬೇಕಂತ ಕನಸ ಕಂಡಿದ್ದೆ!
ಕಣ್ಣಿಗಿ ಏಳ ಬಣ್ಣದ ಚಷ್ಮಾ,
ಏನ ಕಂಡಿ ಏನ ಬಿಟ್ಟಿ?
ಬಾಯಿ ತಗದರ ಹಾಡ ಉಕ್ಕಬೇಕ.
ಹರೆ ಅರಳಿ ಅದs ಪರಕಾರ ಕಳದ, ಸೀರೀ ಉಟ್ಟ
ಘಮಘಮಾ ನಾರತಾ
ಹಾಲಗಡಿಗೀ ಹಾಂಗ ಇದರ ಬಂದರ-
ತೊಡಿ, ತೋಳ, ನಡ, ರಕ್ತ ಮಾಂಸದಾಗ ಕೊಳಲ ಮಾಡಿ
ಹೊಸಾ ಹಾಡ ನುಡಿಸೇ ನುಡಿಸಬೇಕ, ನುಡಿಸೇ ನುಡಿಸಬೇಕ.
ಇಲ್ಲಿ ಬಂದರ ಒಂದ ಬಣ್ಣಿಲ್ಲ,
ಒಂದ ಸಪ್ಪಳಿಲ್ಲ, -ಹಾಳ ಹಾಳ!
ಊರಂತಾರs ಇದಕ್ಕ ಯಾರಾದರೂ?
ಕದ್ದ ಹಾದರಾ ಮಾಡಾವರೂ ಹೆದರಬೇಕಂಥಾ ಹಾಳಮನಿ;
ಬಾಗಲ ಪಡಕ ಮುಚ್ಚೋರಿಲ್ಲ, ತೆರೆಯೋರಿಲ್ಲ,
ಕರದರ ಓ ಅನ್ನೋರಿಲ್ಲ.

ಜೇಡಹುಳ ಬಲಿ ಹೆಣ್ಯಾಕ, ಹಾಂವ ಗುದ್ದಾ ತೋಡಾಕ
ಅಷ್ಟs ಯೋಗ್ಯದ ಇದು,

ಸೂತ್ರಧಾರ : ಹಿಂಗೆಲ್ಲಾ ಕಣ್ಣಾಗ ಸೂಚಿ ಚುಚ್ಚಿ
ಸರಸ ಆಡಬಾರದು ಏನಪಾ, ಮೊದಲs
ನೊಂದ ಮಂದಿ, ಹಳೀದ ನೆನಪಾದರ ಮೈತುಂಬ
ಉರುಪ ಬಿಡತೈತಿ. ಕರ್ಮ ಬೆನ್ನ ಹತ್ತಿದವರನ್ನ
ಏನಂತ ಮಾತಾಡತಿ?

ಬಾಳಗೊಂಡ : ಆಗಲಿ ಪ್ರಭೂ,
ಸುತ್ತಮುತ್ತ ಯಾರೂ ಇಲ್ಲ, ಈಗs ಖರೆ ಹೇಳೊ
ನಮ್ಮಣ್ಣನ ಕತಿಯೇನ?

ಸೂತ್ರಧಾರ : ಕೇಳೋವಂಥಾ ನೀ ಯಾರನ್ನೋದs
ನನಗ ಗೊತ್ತಿಲ್ಲ, ಕೂತ ಮಂದಿಗಿ ಗೊತ್ತಿಲ್ಲ.
ಇನ್ನ ನಿಮ್ಮಣ್ಣನ ಕತಿ ಕೇಳಿದರ ಏನ ಹೇಳಲಿ?

ಬಾಳಗೊಂಡ : ಸಣ್ಣಂದಿರತ ಇದs ತೊಡೀಮ್ಯಾಲ ತಗೊಂಡ,
ಆಡಿಸಿ, ಈಗ ನಾ ಗೌಡನ ಮಗಾನs ಅಲ್ಲ
ಅಂಬವರ ಹಾಂಗ ಹೆಸರ ಕೇಳತಿ, ನಾ ಏನ ಹೇಳಲಿ?
ಊರಂತೂರೆಲ್ಲ ನಾ ಅಂದರ ಹೊಳಿಗಿ ಬಂದ
ಹೆಣಧಾಂಗ ಮೂಗ ಮುಚ್ಚತೀರಿ.
ನನ್ನ ಕಂಡ ಕೂಡಲೆ ಕಳಕೊಂಡದ್ದ ನೆನಪಾಧಾಂಗಾಗಿ
ಅದನ್ನ ಭರ್ತಿ ಮಾಡಿಕೊಳ್ಳಾಕ ಒದರಿ ಒದರಿ
ಓಡಿತೀರಿ. ನಾ ಏನ ದೆವ್ವನs? ಭೂತನs?
ನನ್ನ ಉಗಳ ಸಿಡಿದರ ಮೈಲಿಬ್ಯಾನಿ ಬರತದನ?
ನಾ ದಾಟಿ ಹ್ವಾದಮ್ಯಾಲ ಹೆಂಗಸರ ಹಾಂಗ
ಗುಂಪುಗೂಡಿ ಮಾತಾಡತೀರಿ. ಏನ ಏನಿದರ ಅರ್ಥ?
ನಾ ಬರಬರಾ ಬರಬೇಕಂದರೇನ?
ಊರ ಅಗಸ್ಯಾಗ ಮೂರ ಹೆಜ್ಜಿ ಇಡಬೇಕಂದರೇನ?
ಘಳಘಳ ಮಳಿ ಬರಬೇಕಂದರೇನ? ಮಳಿ
ತರತೇನಂತ ಮಾತ ಕೊಟ್ಟಿದ್ನೇನ ನಿಮಗ?
ಮಳಿ ಬರಲಿಲ್ಲ; ಅದರಿಂದೇನ ಸಿದ್ಧ ಆದ್ಹಾಂಗಾಯ್ತು?
ಮರದಿನ ಪಾಟೀಮ್ಯಾಲಿನ ಅಕ್ಷರ ಅಳಿಸಿದಷ್ಟ
ಸಸಾರಾಗಿ ನನ್ನ ಹೆಸರಿ ಮರತ ಕುಂತಿರಿ.

ನಾ ಇಷ್ಟ ಮಾತಾಡಿದರೂ ನಿನ್ನ ಎದ್ಯಾಗ
ನನ್ನ ಒಂದ ಬೇರ ಕೂಡ ಅಳಕಲಿಲ್ಲೇನು?

ಸೂತ್ರಧಾರ : ಅಪ್ಪಾ ಬಾಲಕಾ, ನಿನ್ನ ನಾಮಾಂಕಿತವೇನು? ಅದs
ಗೊತ್ತಿಲ್ದ ಹಿಂದಮುಂದಿಂದ ಹೆಂಗ ಹೇಳಲಿ?

ಬಾಳಗೊಂಡ : ಏ -ನಿಮ್ಮನ್ನ ಕೊಂದ ಬೆಳಗಾಂವ್ಯಾಗ
ಚರ್ಮದ ಅಂಗಡಿ ಇಡೋವಂಥಾ ಕಸಾಬಂತ ತಿಳಕೊ!
ನಿಮ್ಮ ಹೆಜ್ಜ್ಯಾಗ ನವಣಿ ಬಿತ್ತಿ ರಾಶಿ ಒಕ್ಕೋವಂಥಾ
ದುರಗವ್ವನ ಬ್ಯಾನಿ ಅಂತ ತಿಳಕೊ!
ಪಾರಂಬಿ ಕಡದ ಸಿವುಡ ಮಾಡಿ ಸುಡೋವಂಥಾ
ಕೊಳ್ಳೀದೆವ್ವಂತ ತಿಳಕೊ! ಸಾಕೊ ಬೇಕೊ!
ಇನ್ನ ಹೇಳ ಆ ಕತೀಯಾದರು ಖರೆ ಏನು?

ಸೂತ್ರಧಾರ : ಕತಿ ಯಾವತ್ತು ಖರೆ ಇರತಾವೇನಪಾ.

ಬಾಳಗೊಮಡ : ಗೌಡಗೊಬ್ಬ ಬಾಳಗೊಮಡಂತ ಮಗ ಇದ್ದದ್ದ
ಆ ಕತ್ಯಾಗಿಲ್ಲೇನು?

ಸೂತ್ರಧಾರ : ಗೌಡ್ತಿಗೊಬ್ಬ ಅಂಥ ಮಗ ಇದ್ದದ್ದ ಖರೆ.

*(ಚಿಲುಮೆ ಸೇದುವ ಮುದುಕ ಕೆಮ್ಮತೊಡಗುವನು.)*

ಬಾಳಗೊಂಡ : ಅವನs ನಾ ಅಂತ ತಿಳಿದು ಆ ಕತಿ ಹೇಳು.

ಮುದುಕ : ತಮ್ಮಾ, ನಾವ್ ಸುರಕೊಳ್ಳೋ ನಶೀಬ ನನಗೂ
ಬೇಕಂತ ಹಟ ಯಾಕೋ ನಿನಗ? ನನ್ನ ಮಾತ
ಕೇಳೇನಂದರ ಸುಮ್ಮನ ಕಲ್ಯಾಕಿದ್ದ ಊರಿಗಿ
ತಿರಿಗಿ ಹೋಗಿ ಹುಡಿಗೇರ ಬೆನ್ನಹತ್ತಿ ಸಿಳ್ಳಹೊಡಿ ಹೋಗು.
ಮಾಡಿದವರ ಉಣ್ಣತಾರ ಮಾಡಿದಂಥಾ ಕರ್ಮ.
ನೀ ಮಾಡೋದರೊಳಗs ಇರಲಿಲ್ಲ, ಉಣ್ಣೋದರೊಳಗ
ಯಾಕ? ತಿರಿಗಿ ಕೇಳಿದರ ನಮ್ಮ ಕರ್ಮದ
ಹಿಂದ ಮುಂದಾದರೂ ನಿನಗೇನ ಗೊತ್ತೈತಿ?

ಬಾಳಗೊಂಡ : ಖರೆ, ನನಗೇನ ಗೊತ್ತದ?
ನಿಂತ ಈ ಹಾದಿ ಯಾರ ಮನಿಗಿ, ಯಾವ ಓಣಿಗಿ

ಒಯ್ತುದs ಅಂತ ಗೊತ್ತಿಲ್ಲ. ಯಾರ್ಯಾರಿಗಿ ಎಷ್ಟೆಷ್ಟ
ಮಕ್ಕಳಂಬೂದ ಗೊತ್ತಿಲ್ಲ. ದೂರ್ಯಾಕ?
ನಮ್ಮ ಮನೀ ಒಬ್ಬ ಹಳಬಂದೂ ಗುರತಿಲ್ಲ.
ಆದರ ಕತಿ ತಿಳದ ಮ್ಯಾಳ ನಾನೂ ಭಾಳಿಲ್ಲ,
ತುಸುವಾದರೂ ನಿರ್ಧಾರ ಕೈಕೊಳ್ಳಬೇಕು,
ನಾನೂ ನನ್ನ ಪಾಲಿನ ಮಾತ ಆಡಬೇಕು,
ಮಾಡಬೇಕು-ಅದಕ್ಕಾಗಿ ಹೇಳು.

ಮುದುಕ : ನೀ ಆಡಿಮಾಡೋದರಿಂದ ಮುಂದಿನ ಕತಿ
ಬದಲಾಗತೈತೆಂತ ತಿಳಕೋಬ್ಯಾಡೋ ತಮ್ಮ.
ಮಾಡೋದೆಲ್ಲ ಮುಗದು ಸುರಕೊಳ್ಳೋದೊಂದs
ಈಗ ಉಳದೈತಿ. ಆತು ಸುರಕೋತೀವು.
ಕೇಳಿದರೆ ಕಿವಿಗುಂಟ ಸೀಸಾಗಿ ಒಲಗಿಳಿಯೋದನ್ನ
ಕೇಳೇನಂಬೊ ಹಟ ಯಾಕೊ ನಿನಗ?
ಈ ಹರೆ, ಈ ರೂಪಕ್ಕ ಈ ಬಿರಸ ಕತಿ ಒಪ್ಪಾಣಿಲ್ಲ.
ಕನಸ ಮೂಡೋ ಕೆಂದ ತೊಗಲಿಗಿ
ಅಲಾಬಿ ಹುಲೀ ಬಣ್ಣಾ ಬಳೀಬಾರದೇನಪಾ.
ಎಳಕಿದ್ದಿ, ನನ್ನ ಮಗನ ಸರಿ ಅಂತ ಬುದ್ದಿ
ಹೇಳತೇನು, ಸುಮ್ಮನ ಈ ಊರ ಬಿಟ್ಟ ಹೋಗಿಬಿಡ.

ಬಾಳಗೊಂಡ : ಹೋಗಲಿ ಅಜ್ಜಾ, ಊರಿಗಿ ಹೋಗಿ ನನ್ನ
ಹುಡಿಗೇರ ಹುಸಿ ಸಿಟ್ಟ ಶಾಂತ ಮಾಡೋದಕ್ಕಾದರೂ
ಈ ಕತಿ ಹೇಳಬಹುದು. ನಡದ ಹಕೀಕತ್ತ ಏನದು?

ಮುದುಕ : ನಿನ್ನ ಹಟ ಕೇಳಿ ನನ್ನ ಮಗಂದs ನೆನಪಾಗತೈತಿ.
ಅದs ದಿಗರಾ, ನಿಲಿವಿಕಿ, ಅದs ನದರಾ...
ಕತಿ ಕೇಳಾಕ ನಿನ್ಹಾಂಗ ಬಲೆ ಹುರುಪ ಅವನೂ,
ಆಗ ನೋಡಪಾ, ಏನ ಕನಸ ಬಿದ್ದರೂ ಅವನ ಸುತ್ತಮುತ್ತs:
ಮಗಾ ದೊಡ್ಡಾಂವಾಗಿ ಹೊಲಮನಿಗೆಲ್ಲ ಮಾಲಕ ಆಗತಾನ,
ಹಂಗಾಮದಾಗ ಹೊಲಾ ಉತ್ತಿ ಬೀಜಾ ಬಿತ್ತತಾನ....
ಹೊಲ ತುಂಬ ಬೆಳಿ.... ದಂಟಿಗೆಂಟ ತೆನಿ,
ತೆನಿಗಿ ನಾಕ ಹಕ್ಕಿ, ಹರ್ಯಾಗೊಮ್ಮಿ ಸಂಜಿಕೊಮ್ಮಿ
ಹಾಡೇ ಹಾಡತಾವ: ಬೀಜಧಾಂಗ ಬೆಳಿ! ಬೀಜಧಾಂಗ ಬೆಳಿ!
....ಥೇ! ಎಷ್ಟಂದರೂ ರಂಡೀs ಮಗಾ.

ಬಾಳಗೊಂಡ : ಯಾಕ ಏನ ಮಾಡಿದಾ?

ಮುದುಕ : ಕುಲಕರ್ಣಿ ಪುಸ್ತೇಕ ಬರ್ರ್ಕೋವಾಗ, ನಿಮ್ಮಪ್ಪನ ಹೆಸರೇನಂದರ, – ನಂದ ಬಿಟ್ಟ ತಮ್ಮವ್ವನ ಹಳೀ ಗಂಡನ ಹೆಸರ ಹೇಳಿಬಿಟ್ಟ. ನನ್ನ ತೊಡಿ ಮಣಕಾಲ ಮ್ಯಾಲ ಮೂರ ಬರೆ ಥೂ ಥೂ ಥೂ ಉಗಳಿಧಾಂಗಾತ. ಆಮ್ಯಾಲ ಸುಡಗಾಡ ಗಟ್ಟ್ಯಾಗ ಭೆಟ್ಟ್ಯಾದ. ನಾ ಬಿಟೇನ? ಹೇಳ ಮಗನs ನಿಮ್ಮ ಅಪ್ಪನ ಹೆಸರೇನ?

ಬಾಳಗೊಂಡ : ಏನಂದ?

ಮುದುಕ : ನೀ ಏನಂತಿ?

ಬಾಳಗೊಂಡ : ನಾ ಏ ಅನ್ನಲಿ?

ಮುದುಕ : ನೀನs ಅವನಾಗಿದ್ದರ ಏನಂತಿದ್ದಿ?

ಬಾಳಗೊಂಡ : ನಾ ಯಾಕ ಅವನಾಗಲಿ?

ಮುದುಕ : ನಿನ್ನ ಪಾಲಿನ ಮಾತ ಆಡಬೇಕಂತಿದ್ದೆಲ್ಲ-ಆಡು.

ಬಾಳಗೊಂಡ : ಛೇ ಛೇ! ನಾ ಏನಾಡಲಿ? ಅವನ ಮೆಟ್ಟ
ನಾ ಹೆಂಗ ಮೆಡ್ಲಿ? ಅಥವಾ
ಒಬ್ಬ ಮನುಷ್ಯ ಇನ್ನೇನಾಗೋದ ಸಾಧ್ಯ?
ಮುದುಕಾ ನಿನ್ನ ಹೆಸರೇನಾ?

ಮುದುಕ : ಯಾವನರೆ, ಬಾಳ್ಯಾ ಬಸ್ಯಾ ಅನ್ನು. ಯಾ ಹೆಸರಲೆ
ಕರೆದರೂ ಮೊದಲಿನ್ಹಾಂಗ ಸಿಟ್ಟs ಬರಾಣಿಲ್ಲ.

ಬಾಳಗೊಂಡ : ಅಜ್ಜಾ, ಲಗು ಹೇಳ, ಅವನೇನಂದ?

ಮುದುಕ : ಕಡ್ಡೀ ಮುರದಾ, ಎರಡ ತುಂಡ ಮಾಡಿದಾ,
ನನ್ನ ಕೈಯಾಗೊಂದ ಕೊಟ್ಟಾ, ತನ್ನ ಕೈಯಾಗೊಂದ ಹಿಡಿದಾ,
ಹೇಳಿದ: ನಿನ್ನ ಮಾತ ಖರೆ. ಅಪ್ಪಿಲ್ಲದs ಮಗ
ಹುಟ್ಟಾಣಿಲ್ಲ- ಅಂದ, ಹೋದ. ನೀ ಏನಂತಿ?

ಬಾಳಗೊಂಡ : ಮುದುಕಾ ಒಂದs ಉಸರಿನ್ಯಾಗ
ಹೇಳಿಬಿಡು: ಗೌಡ-ಅಂದರ ದೊಡ್ಡಗೌಡನ,
ಕತಿ-ಅಂದರೆ ಆದ ಮಜಕೂರ,
ಏನೇಂದರ-ಖರೆ ಏನು?

ಮುದುಕ : ಕಡ್ಯಾಕ ಹೊಂಟವರ್ಹಾಂಗ ಇಷ್ಟ್ಯಾಕ ಅವಸರ
ಮಾಡತೀಯೋ ತಮ್ಮ?

ಬಾಳಗೊಂಡ : ಅವಸರ ಮಾಡಂದ್ರ-
ಇನ್ನೊಂದ ನಾಲ್ಕ ದಿನಕ್ಕ, ಬ್ಯಾಡ ನಾಲ್ಕು ತಾಸಿಗಿ,
ಅದ್ಯಾಕ ಇನ್ನೊಂದ ಗಳಿಗ್ಗಿ ನಾ ಹ್ಯಾಂಗಾಗಬಹುದು,
ಹ್ಯಾಂಗಿರಬಹುದು-ಒಂದೂ ಗೊತ್ತಿಲ್ಲ.
ನಾ ಅಂದಕೊಂಡಷ್ಟು ಕೂದಲಾದರೂ ತಲೀಮ್ಯಾಲ
ಇರತಾವೊ ಇಲ್ಲೊ, ಲಗು ಹೇಳ.

ಮುದುಕ : ಸಿಟ್ಟಿಗೇಳೋದಂದ್ರ ಹರೆದವರ ಹಕ್ಕಿನ ಚೈನಿ
ಏನಪಾ. ಇಷ್ಟ ಗಟ್ಟಿದ್ದರ ಹೇಳತೇನ ಕೇಳ:
ಆಯ್ತು, ಇಂದಿಗಿ ಐದ ಕಡಿಮಿ ಎರಡಿಪ್ಪತ್ತು ವರ್ಷದ
ಹಿಂದಿನ ಮಾತೇನಪಾ. ಅದs ಆಗಳೆ ಅಂದೆನಲ್ಲ-
ನನ್ನ ರಂಡಿ ಹಿರೀಮಗನ್ನ ಅದs ಹಡದಿದ್ದಳು.
ಏನ ದಿನಮಾವು! ಉಡ್ಯಾಗ ಚೈನೀ ಕಟ್ಟಿಕೊಂಡ
ತಿನ್ನಕೋತ ತಿರಗ್ಯಾಡಬೇಡ! ಬಿತ್ತೋದಷ್ಟs ತಡ,
ಹೊತುಂಬ ಬೆಳಿ, ಕಣತುಂಬ ರಾಶಿ, ಮನಿತುಂಬ ಕಾಳ!
ಆಗಿನ ಹೆಂಗಸರ ಹಂತವರಂತಿ? – ನಡಾ ಹಿಡಿದ
ಅಲಗಿದರ ನಾಕೈದ ಕೂಸ ಹಾಂಗs ಬೀಳಬೇಕ!
ಪಾರಿ? ಹೊಲೇರ ಪಾರಿ ಇಲ್ಲ?-ಆಕಿ ಊರಾಗ
ಹೊಕ್ಕರ ಹಾಡಾಹಗಲಿ ಸಂದಿಗೊಂದ್ಯಾಗ ಹಾಯೋಹಾಂಗs
ಇರಲಿಲ್ಲ. ಆಕೀ ಮಗಳ ಕಮಲೀಕಿಂತ ಕಣ್ಣ ಮೂಗಲೆ
ಚೆಲಿವಿ ಪಾರಿ. ಅಂಥಾಂಗ ಕಮಲೀನ
ನೋಡಿಯೊ ಇಲ್ಲೊ?

ಬಾಳಗೊಂಡ : ಕತಿ ಹೇಳ ಮಾರಾಯ.

ಮುದುಕ : ಹೂಂ ಆಗ ನೋಡಪಾ, ಯೋಳಪಟ್ಟಿ ಹುಲಿ ಬಂದ
ಯೋಳೆಂಟ ದನಾ ತಿಂದ, ಬ್ಯಾಟಿ ಆಡಾಕ ಗೌಡ ಹ್ವಾದ.
ಹ್ವಾದ ಹ್ವಾದ ಅತ್ತs ಹ್ವಾದ.
ಹೊತ್ತ ಮುಣಗಿ ಕೆತ್ತಲಾದರೂ ಗೌಡನ ಸುದ್ದಿಲ್ಲ.
ಜನ ಕತ್ತಲಂತಿ? ಕತ್ತಲಿ ಕೆಸರಾಗಿ
ಕಣ್ಣಿಗೆಲ್ಲ ಮೆತ್ತಿ ನನ್ನ ಮೋತಿ ನಿನಗಿಲ್ಲ, ನಿಂದ ನನಗಿಲ್ಲ.
ಯಾರೋ ಗುಗ್ಗಳ ಹೋಗಿ ಬ್ಯಾರಿ ಹಾಕಬೇಕs ಸುಟ್ಟಬರಲಿ?

ಯಾರ್ಯಾರ ಎಲ್ಲೆಲ್ಲಿದ್ದರ ಅಲ್ಲೆ ನಿದ್ದಿ!
ಹರೀವತ್ತರ ಕೈಮಾರ ಹೊತ್ತೇರಿದ ಮ್ಯಾಲ
ನೋಡತೇನು: ಎಲಾ, ಮೊದಲಿದ್ದ ನಮ್ಮೂರ ಕೆಡಿಸಿ
ದೇವರು, ಹೊಸದಾಗಿ ಮಾಡಿರಬೇಕೇನಪಾ!
ಮನಿ, ಓಣಿ, ಗುಡಿ, ಎಲ್ಲಾ ಅದಲಬದಲ!
ನಿನ್ನಿ ಕಂಡ ಹರೇದ ಹುಡಗೋರೆಲ್ಲ ಇಂದ
ಮುದುಕರಾಗಿ ಆಕಳಿಸಾಕ ಹತ್ಯಾರ! ಶಿವನಽ
ಮಾದೇವನಽ ಏನಾತಿದಾ? ನನಗರೆ ನೋಡಪಾ-
ಖರೆ ಹೇಳಿದರು ಕೇಳತಿ, ಖೊಟ್ಟಿ ಹೇಳಿದರು ಕೇಳತಿ,-
ಬೆರಗಽ ಬೆರಗ! ನನಗೂ ಒಂದ ಆಕಳಿಕಿ
ಬಂತಪಾ. ಹೀಂಗ ಆಕಳಿಸಿ ಚಿಟಕಿ ಹೊಡದ
ನೋಡತೇನು: ಇದರಿಗಿ ನಿಮ್ಮಣ್ಣ ರಾಮಗೊಂಡ! ಕಣ್ಣಮೂಗಿಲ್ಲ.
ಕಿವಿ ನಾಲಿಗಿಲ್ಲ, ತೊಗಲಿಲ್ಲ, ನಿಂತ ಬಿಟ್ಟಿದ್ದಪಾ
ಮತ್ತ ನಕ್ಕೋತ! ಅಂದಿಂದ ಹಿಂಗಽ ಆಕಳಿಸಿ
ಆಕಳಿಸಿ ಆಯುಸ್ಸೆಲ್ಲಾ ಆಗಿಹೋತ. ಇಂದಿಲ್ಲಿ
ನಾಳಿ ಗೋರ್ಯಾಗ, ನಡುವ ಬಂದ ನೀ ಕೇಳಿದಿ
ನಾ ಹೇಳಿನು.

ಬಾಳಗೊಂಡ : ಈಗ ರಾಮಗೊಂಡ ಎಲ್ಲಿ?

ಸೂತ್ರಧಾರ : ಅವನೆಲ್ಲಿ ಸಿಗತಾನ? ಇಂದ ಎದ್ಯಾಗ
ನಾಳಿ ನೆನಿಪಿನ್ಯಾಗ, ಮರತೇನಂದರ ಮರ್ಯಾಕಿಲ್ಲ.
ಬಿಟ್ಟೇನಂದರ ಬಿಡಾಕಿಲ್ಲ, ಆಳದೊಳಗೆ ಒಂದಳತಿ
ಚುಚ್ಚೇ ಚುಚ್ಚತಾನ. ಕನ್ನಡಿ ಕಂಡರ
ಅವನಽ ಮೂಡಿ ಬಂದ, ಒದ್ದಿಗ್ಯೆಲೆ ಮೈ ಸವರಿ
ಕುಲುಕುಲು ನಗತಾನ. ಆ ನಗಿ ನಮ್ಮ
ತುಟ್ಯಾಗ ಹೆಪ್ಪಹಾಕಬೇಕನ್ನೂದರಾಗಽ
ಕಿಲಬ ಹಿಡದ ನಾರತೈತಿ. ನಾರೂ ನಗಿ ನಕ್ಕ ನಕ್ಕ
ನಾವಽ ಕನ್ನಡಿ ಆಗತೀವು, ನೆರಳ ಆಗತೀವು,
ಕಟ್ಟಕಡೀಕ ಏನ ಆಗತೀವಂದರ,
ಏನ ಆಗತೀವಂದರ...

ಬಾಳಗೊಂಡ : ಏನ ಏನಾ?

ಮುದುಕ : ಏನೂ ಇಲ್ಲ. ಕವಿಗಾರ ಕವಿ ಮಾಡಿ ಹೇಳೋ ಹಾಂಗ ಆತ ಅವನ ಕತಿ; ತಮ್ಮಾ ಏನ ಹೇಳಲಿ?

ಬಾಳಗೊಂಡ : ಹಾಂಗೆಲ್ಲಾ ನನಗ್ಯಾಕ ಅನ್ನಸೋದಿಲ್ಲ?

ಮುದುಕ : ಹ್ಯಾಂಗನ್ನಸಬೇಕು? ನನ್ನ ಹಣಿಮ್ಯಾಲಿಂದ ಇದೇನ ಹೇಳು?

ಬಾಳಗೊಂಡ : ಒಲ್ಯಾಗಿನ ಬೂದಿ.

ಮುದುಕ : ಇದ ನಮಗ ದೇವರ ಪರಸಾದ ಏನಪಾ.
ಏಕದಮ್ಮ ಎಷ್ಟ ದೂರ ಹ್ವಾದಿ ನೊಡು!

ಬಾಳಗೊಂಡ : ಬ್ಯಾಡೊ ಮುದುಕಾ ತಡಿಯೊ. ಒಮ್ಮೆಂದೊಮ್ಮೆಲೆ ಹೀಂಗ ತೂರಬ್ಯಾಡೊ...
ಅಥವಾ, ನಿಮ್ಮ ಜೋಡಿ ನಾ ರಾಜಿ ಯಾಕ ಮಾಡಿಕೊಳ್ಳಲಿ?
ನೀವು ಹೇಳಿಧಾಂಗ, ಹೇಳಿದಷ್ಟ, ಅಳತಿ ಮಾಡಿ
ಬೆಳ್ಯಾಕ ನಾಯೇನ ನಿಮ್ಮ ಕುಂಡದಾಗಿನ
ಹೂವಿನ ಬಳ್ಳಿ ಅಲ್ಲ. ಕಸುವಿದ್ದರ ಬೆಳದೇನು
ಇಲ್ಲಾಂದರ ಕಮರೇನು, ಏನಂತಿ?

ಮುದುಕ : ನಾನೂ ಅದನ್ನ s ಅಂತೀನೋ ತಮ್ಮ,
ನಿನ್ನ ಬೆಳಸಾಕ ನಾವೇನ ನೀರಾಗಿಲ್ಲ, ಗೊಬ್ಬರಾಗಿಲ್ಲ.
ಅದಕ್ಕs ನೀ ಇಲ್ಲಿ ಬೇರ ಬಿಡಲಿಲ್ಲ.
ಕಾಗೀ ಬಳಗದಾಗ ಕೋಗಿಲ ಹ್ಯಾಂಗಿರತೈತಿ ಹೇಳು?

ಸೂತ್ರಧಾರ : ಕೋಗಿಲ ಹುಟ್ಟಿದ್ದಾದರೂ ಕಾಗೀ ಗೂಡಿನೊಳಗs
ಅಲ್ಲೇನ? ಇದಕ್ಕೇನಂತಿ?

ಮುದುಕ : ನಿನಾಪ್ಪನ ಮತ್ತು ಅದನs ತೀಡತಾನಲ್ಲೊ,
ಕೋಗಿಲ ಬೆಳದ ಮ್ಯಾಲ ಕಾಗೀ ಬಳಗದಾಗ
ಇರತೈತೇನ ಹೇಳಂತೀನು.

ಬಾಳಗೊಂಡ : ಖರೆ, ಏ ಹಳಬಾ.

ಹಳಬ : *(ಪ್ರವೇಶ)* ಬಂದೇನ್ರಿ, ಧನಿ.

ಬಾಳಗೊಂಡ : ನನ್ನ ಬಿಳೀಕುದರಿ ಬಿಚ್ಚಿಕೊಂಬಾ ಹೋಗು

ಹಳಬ : ಇಂಥಾ ರಾತ್ರ್ಯಾಗ ಹಿಂಗs ಹೋಗತೇರಿ?

ಬಾಳಗೊಂಡ : ಮತ್ತ ಯಾವಾಗ ಹೆಂಗ ಹೋಗಬೇಕಂತಿ?

ಹಳಬ : ಬರಿಗೈಲೆ ಹಾಂಗs ಹೋಗತೇರಿ?

ಬಾಳಗೊಂಡ : ಇನ್ನೇನ ತುಂಬಿಕೊಂಡ ಹೋಗಬೇಕಂತಿ?

ಹಳಬ : ಗೌಡ್ತಿ ಕೇಳಿದರ ಏನ ಹೇಳಲಿ?

ಬಾಳಗೊಂಡ : ಬ್ಯಾರೇ ಕಡೆ ಬೇರ ಹುಡಕೋದಕ್ಕ ಹೋದಂತ ಹೇಳು.

ಹಳಬ : ದೊಡ್ಡಗೌಡ ಕೇಳಿದರ…

ಬಾಳಗೊಂಡ : ಸಣ್ಣಗೌಡ ಸತ್ತಂತ ಹೇಳು.

ಹಳಬ : ಯಾಕ ಹ್ವಾದಂತ ಕೇಳಿದರ…

ಬಾಳಗೊಂಡ : ಇರಲಿಕ್ಕೇನೂ ಕಾರಣ ಇಲ್ಲದ್ದಕ್ಕ ಹೋದಂತ ಹೇಳು.

ಹಳಬ : ನಿಮ್ಮ ಕಡೆ ಮಂದಿ ಕಾರಣ ಇದ್ದಾಗ ಬದಕತಾರೇನ್ರಿ?

ಬಾಳಗೊಂಡ : ಹೇಳಿದಷ್ಟ ಕೇಳು. ಸರಳ ಹೋಗು, ತಡೀ ಹಾಕು,
ಕುದರಿ ಬಿಚ್ಚು, ಹೋದ ಹಾದೀ ಹಿಡದ
ಎಡಕ್ಕ ಎಡಾ ಅನ್ನಬ್ಯಾಡ. ಬಲಕ್ಕ ಬಲಾ ಅನ್ನಬ್ಯಾಡಾ.
ಯಾರ ಕೇಳಿದರೇನೂ ಹೇಳಬ್ಯಾಡಾ.
ತಿಳೀತೊ ಇನ್ನೊಮ್ಮಿ ಹೇಳಲ್ಯೋ?

ಹಳಬ : ತಿಳೀತೆಪ್ಪ ತಿಳೀತು. *(ಹೋಗುವನು)*

ಮುದುಕ : *(ಎದ್ದು ಕೈಮುಗಿದು)*
ಬಾಳಗೊಂಡಾ, ಬಂದ ಕೆಲಸಂತೂ ಗಂಡಾತು.
ನಿನ್ನ ಹುಡಿಗೇರ ಮುಂದ ಆ ಕತಿ ಹೇಳೋವಾಗ
ಈ ಮುದುಕಂದಷ್ಟ ಹೇಳಾಕ ಮರೀಬ್ಯಾಡಪಾ ಮತ್ತ.

ಬಾಳಗೊಂಡ : ಏನ ಹೇಳಲಿ?

ಮುದುಕ : ಹಿಂಗ ಏನರೆ, ಹಿಹಿ ಬೀಜಧಾಂಗ ಬೆಳಿ…
ಬೀಜಧಾಂಗ ಬೆಳಿ…. *(ನಿಷ್ಕ್ರಮಿಸುವನು)*

ಬಾಳಗೊಂಡ : ಅಪ್ಪಾ ಸೂತ್ರಧಾರ.

ಸೂತ್ರಧಾರ : ಹಾಂ

ಬಾಳಗೊಂಡ : ಕಡೀದೊಂದ ಮಾತ ನಡಿಸಿಕೊಡತೀಯೇನು?

ಸೂತ್ರಧಾರ : ಏನ ಹೇಳಲ್ಲ.

ಬಾಳಗೊಂಡ : ಯಾವುದಾದರು ಹುಡಿಗಿ ಬಂದ, ನನ್ನ ಗುರುತಾ ಹೇಳಿ
ಹುಡಿಕ್ಯಾಡಿದರ, ನಿನ್ನ ದೊರಿ ಊರ ಬಿಟ್ಟ ಹೀಂಗs
ಹೋದಂತ ಹೇಳು.

ಸೂತ್ರಧಾರ : ಅಪ್ಪಾ, ಕೆಟ್ಟ ಕಾಲ ಬಂದ ಗಂಡುಳ್ಳ ಬಾಲೇರಸೈತ
ಗಂಡ ಗಂಡಸರನ್ನ ಸಿಕ್ಕಾರೊ ಸಿಗಾಕಿಲ್ಲೊ ಅಂತ
ಹುಡಿಕ್ಯಾಡಿ ತಿರಗತಾರ. ನನಗ ನಿನ್ನ ಹುಡಿಗಿ
ಗುರುತ ಏನ? ಆಕಿ ಖೂನ ಗುರುತ ಹೇಳಿದರ
ನಾನಾದರೂ ನಿನ್ನ ಸುದ್ದಿ ಹೇಳೇನು.

ಬಾಳಗೊಂಡ : ಹೂವಂದರ ಹೂವಲ್ಲ, ಮಗ್ಗಿ ಅಂದರ ಮಗ್ಗಿ ಅಲ್ಲ-
ಮುಗ್ಧ ಬಾಲಿ ಬಂದು ನನ್ನ ಗಡಿಗಿ ಹಾಲ ಕುಡದ
ಧೀರನ್ನ ಯಾರಾದರೂ ಕಂಡೀರೇನಂದರ ಅದs
ಗುರುತ ನೋಡು.

ಸೂತ್ರಧಾರ : ಅಪ್ಪಾ, ಹರದಾಡೋ ಹರೇದ ಬೆಕ್ಕಗೋಳನ್ನ
ಮುದಿಕೇರ ಸೈತ ಕದ್ದ ಕರದ ತಮ್ಮ ಹಾಲಗಡಿಗಿ
ಮ್ಯಾಲ ಮುಚ್ಚಿಕೋತಾರ. ನೀ ನೆಕ್ಕಿದ
ಗಡಿಗಿ ಗುರುತಾ ಹೆಂಗ ಹಿಡೀಲಿ?

ಬಾಳಗೊಂಡ : ಹೊತ್ತು ಮುಳಗಿತ್ತು, ಇಲ್ಲ, ಅಂಥಾ ಹೊತ್ತಿನ್ಯಾಗ
ಮುಕ್ಕಾಗದ ಗಡಿಗ್ಯಾಗಿನ ಹಾಲ ಕುಡದ ಹಾರ
ಕೊಟ್ಟ ಹೋದಾಂವೆಲ್ಲಿ-ಅಂದರ, ಅದs
ಗುರುತ ನೋಡು.

ಸೂತ್ರಧಾರ : ಹಾಂಗಿದ್ದರ ನಾನಾದರೂ ಹೇಳೇನು, ನೀನಾದರು
ನಿಶ್ಚಿಂತನಾಗಿ ಹೋಗುವಂಥವನಾಗು.

## ಅಂಕ : ಎರಡು (b)

*(ಬಾಳಗೊಂಡ ಹೊರಡಬೇಕೆಂಬುವಷ್ಟರಲ್ಲಿ ಸೂತ್ರಧಾರ ಹಾಡು ಹೇಳುತ್ತಾನೆ. ಬಾಳಗೊಂಡ ತುಸು ಹೊತ್ತು ಆ ಈ ಕಡೆಗೆ ಓಡಾಡಿ ಕೊನೆಗೆ ಏನೋ ನೆನಪಾದಂತಾಗಿ ಕುಡಗೋಲು ಮಸಿಯುತ್ತ ಕುಳಿತುಕೊಳ್ಳುವನು.)*

ಸೂತ್ರಧಾರ : ಏ ಕುರುಬರಣ್ಣಾ ಸತ್ತ್ಯುಳ್ಳ ಶರಣಾ
ಕಾಪಾಡೊ ಕುರಿಗಳನಾ
ಮಾಡುವೆ ನಮನಾ ||ಪ||

ಅರಿಯಬಾರದ ಅರಸ ಒಳಗೆ ಬಾರದೆ ಕುಳಿತ
ಒಳಹೊರಗ ಆದಾವೊ ಹೊರತ
ಹೊಲಿದ ಹೊಲಿಗೆಯ ಭೇದ ಗೊತ್ತಿಲ್ಲದಾದೇವು
ಮರತಾನೊ ದೊಡ್ಡಿಯ ಗುರುತ
ಕಳಕೊಂಡು ಹಳಹಳಿಸಿ ತಿಳಿಯದೆ ತಿರಿಗೇವ
ಮತಿಗೆಟ್ಟ ಮರುಳಾದೆವಣ್ಣ ||೧||

ಒಳಗ ಗದ್ದಿಗಿ ಮ್ಯಾಲ ಹುಲಿ ಬಂದ ಕುಂತಾವ
ತಳಕಿತ್ತು ಓಡದಿರೊ ಧೀರಾ
ಪ್ರಳಯಕ್ಕೆ ಹೊರತಾಗಿ ಹೊರಗ ಹೆಂಗರೆ ಉಳಿವಿ
ಕಾರ್ಯಕಾರಣಕಾದ ವೀರಾ
ನಮ್ಮೊಳಗ ನೀನಡಕ, ನಿನ್ನೊಳಗ ನಾವಡಕ
ಬಿಟ್ಟರೇನಿದೆ? ಬರಿಯ ಬಣ್ಣ ||೨||

ಕಂಡಕಂಡವರೀಗ ಕೈ ಮುಗದ ಕೇಳೇವ
ಕಂಡೀರೇನರಿ ನಮ್ಮ ದೊರಿಯ
ಬಿಳಿಯ ಹೊಳಪಿನ ಯಕ್ಷಿ ಕ್ಷಿತಿದಂಚಿನ ಬೆಳಕ
ಕಣ್ಣೊಳಗ ಕುಕ್ಕಿದಳಯ್ಯ
ಅಕ್ಷಿಯೊಳಗಡಿಗಿರುವ ನಿಕ್ಷೇಪವೇ ಬಾರ
ಅಳಿಸೊ ಉಳಿಸುವ ಹಕ್ಕಿನಣ್ಣ ||೩||

*(ಹಾಡು ಮುಗಿಯುತ್ತಲೂ ಹೋದ ಹಳಬ ಹಿಂದಿರುಗಿ ಬರುತ್ತಾನೆ.)*

ಹಳಬ : ಅಪ್ಪಾ, ಬಾಳಗೊಂಡಾ, ನಾನಾದರೂ ಬಂಗಾರ ಕುದರಿ ಹೊಡಕೊಂಡ ಬಂದಿದ್ದೇನ್ನೋಡು.

ಬಾಳಗೊಂಡ : ತಾ ಅಂದರ ಬಾ ಅಂತಾನಲ್ಲೊ? ಹೊಟ್ಟಿಗೇನ ಕನಿಕಿ ತಿಂತಿ? ಯಾವ ಕುದರಿ ಹೊಡಕೊಂಬಾ ಅಂದಿದ್ದೆ.

ಹಳಬ : ಬಿಳೀ ಕುದರಿ ಇರಲಿಲ್ಲಂತೀನು…

ಬಾಳಗೊಂಡ : ಅದ್ಯಾಕ ಇರಲಿಲ್ಲ?

ಹಳಬ : ಅದs ನನಗೂ ಹೊಯ್ಕಾತಂತೀನು…

ಬಾಳಗೊಂಡ : ಏನೊ ನಿನ್ನ ಗೋಳು? ಹೇಳಬಿಡ ಒಮ್ಮಿ,
ಗಟ್ಟಿ ಮನಸ ಮಾಡಿ ಕೇಳತೇನ.

ಹಳಬ : ಆ ಕತೀನs ಹೇಲತೇನೊ ಎಪ್ಪ. ನೀ ಹೇಳಿದಿ,
ನಾ ಹ್ವಾದಿನು. ಒಕ್ಕಲಗೇರ್ಯಾಗ ಹೊಕ್ಕ, ಹಾರೂಗೇರ್ಯಾಗ
ಹರದ, ನಿಮ್ಮ ಮನಿಗಿ ಹೋಗಿ ಕದ ತೆರದಿನು.
ಹಕ್ಯಾಗ ಸಣ್ಣ ಮಿಣಕ ಮಿಣಕ ಪಣತಿ. ಸಾಲ
ದನಾ ಕರ್‍ರಗ ಅಮಾಸಿ ದೆವ್ವಿನ್ಹಾಂಗ ನಿಂತಾವಲಾ!
ನಾನs ಕನಿಕಿ ಅಂಬಾವರಹಾಂಗ ಎಲ್ಲಾ ನನ್ನs
ನೋಡಬೇಕ? ಕಟ್ಟಕಡೀಕ ಮೇವಿನ ಕಟ್ಟಿ ಹಂತ್ಯಾಕ
ಕೆಂಪ ಕುದರಿ ನಿಂತಿತ್ತು, ಬಿಳೀದಿಲ್ಲ.
ಇನ್ನೇನ ಆ ಕಡೆ ನೋಡಬೇಕಂದರ-ನೋಡಪಾ-
ದೇವರ ಸರಿ ನಿನ್ನ ಮುಂದ ಹೇಳತೇನು-ಇದರ ಕರ್‍ರೆವ್ವ!
ನನ್ನಾಣಿ, ನಿರ್ವಾಣೆಪ್ಪನ ಆಣಿ, ಕೆಟ್ಟದೇವರಾಣಿಪಾ
ಕರ್‍ರೆವ್ವನs! ಕುದರಿ ತೊಡ್ಯಾಗ ಕೈಹಾಕಿ
ತಿಕ್ಕತಿದ್ದಳು! ಬೆವರ ಬಂದ ಗಡಗಡ ತೊಡಿ
ನಡಿಗಿ, ಆಡೇನಂದರ ಬಾಯಿಲ್ಲ, ಓಡೇನಂದರ
ಕಾಲಿಲ್ಲ! ಹಣಿತುಂಬ ಕುಂಕುಮ, ಎಣ್ಣಿ ಹಚ್ಚಿದ
ಹಸೀ ತಲಿ! ಬಿಟ್ಟ ಕೂದಲ ಬೆನ್ನ ದಾಟಿ ನೆಲಕ್ಕ ಚವರಿ
ಬೀಸತಿದ್ದವು! ಮೈಮಾಲ ಸೀರಿ ಐತಿ, ಇಲ್ಲ-
ಗಲ್ಲ, ಮಲಿ, ಕುತ್ತಿಗಿ, ಕೈಗೆಲ್ಲ ಸೆಗಣಿ ಹಚ್ಚಿಕೊಂಡಿದ್ದಳು!
"ಹಡದವ್ವಾ, ನೀ ತಾಯಿ ಖರೆ, ನಾ ಮಗಾ ಖರೆ
ಆದರ ನನ್ನ ಕಾಪಾಡ ಎವ್ವಾs" ಅಂದವನ
ಉದ್ದಕ ಬಿದ್ದಿನು. ಅವ್ವಗ ಕರುಣಾ ಬಂತು.
"ಕುದರಿ ನನ್ನ
ಬಾಳಣ್ಣಗ ಹೌದಲ್ಲೊ?" ಅಂದಳು. "ಹೌದೆವ್ವ"
ಅಂದಿನು. "ಬಿಳೀ ಕುದರಿ ಹೋಗೇತಿ, ಬಂಗಾರ
ಕುದರಿ ಒಯ್ ಮಗನs" ಅಂದಳು.

“ಆಗಲಿ ಹಡದವ್ವಾ” ಅಂದ ಹೊಡಕೊಂಡ
ಬಂದಿನು. ನನಗ ಜೊರಾ ಬಂದಾವೇನ್ನೋಡು.

ಬಾಳಗೊಂಡ : ದೀಡ ಪಂಡಿತ ಇದ್ದಿ, ಶರಣಂದ ಹೋಗು.
ಅಪ್ಪಾ ಸೂತ್ರಧಾರ, ನಾನಾದರು ಹೊರಟು ನಿಂತೆ.
ಇದರ ನೋಡಿದರ ಕವಲದಾರಿ. ನಾ ಹೋಗಬೇಕಾದ
ದಾರಿ ನೀನಾದರು ತೋರಿಸುವಂಥವನಾಗು.

ಸೂತ್ರಧಾರ : ಇಕಾ ಈ ದಾರಿ ಸರಳ ಹೊಲಗೇರ್ಯಾಗ ಹಾದ,
ಪಾರೀ ಮನಿ ಮುಟ್ಟಿ ಊರ ಸೇರತೈತಿ.
ಈ ದಾರಿ ಸುಡುಗಾಡದೊಳಗ ಹಾದ ಹಳ್ಳದ ಗುಂಟ
ಹರದ ಐದಾರಾಗಿ ಮೆಳಿ ಸೇರಿ ಪಾರ ಹಾಯತೈತಿ.
ಆರಿಸಿಕೊಳ್ಳೋದ ನಿಂದ ಏನಪಾ.

ಬಾಳಗೊಂಡ : ಹೋಗತೇನ ಶರಣು

*(ರಂಗದ ಎಡಬದಿಗೆ ಸೂತ್ರಧಾರನಿಗೆ ಕೈ ಮುಗಿದು ಹೊರಡುವನು. ಒಂದೆರಡು ಹೆಜ್ಜೆ ಹೋಗಿ ಹಿಂದಿರುಗಿದಾಗ ಹಳಬ ಹಾಗೆ ಬೆನ್ನುಹತ್ತಿದ್ದನ್ನು ನೋಡಿ ನಿಂತು) – ನಿಂದೇನಪಾ ಮತ್ತೆ? ಇನ್ನು ಮುಗೀಲಿಲ್ಲ ನಿನ್ನ ಕತಿ?*

ಹಳಬ : ಅಲ್ಲ, ಏನೋ ಕೇಳಬೇಕಾಗಿತ್ತಽ ಎಪ್ಪ.

ಬಾಳಗೊಂಡ : ಏನಾ?

ಹಳಬ : ನನ್ನ ಗುರುತ ಇನ್ನೂ ಹತ್ತಲಿಲ್ಲ ಅನ್ನಬಾರದ?

ಬಾಳಗೊಂಡ : ಇಲ್ಲ.

ಹಳಬ : ಅಡ, ನಿನ್ನ ಹೆಸರ ಯೆರ್ತ ನೆನಪಿಟ್ಟಾಂಗ ಅತೆಲ್ಲ.

ಬಾಳಗೊಂಡ : ಹೌದು

ಹಳಬ : ಗಬರು, ಸಣ್ಣಂದಿರತ ಅಲಾಬದಾಗ ಹುಲೀ ಸೋಂಗಾ ಹಾಕತಿದ್ದಿ ನೀನಽ ಹೌದಲ್ಲೊ?

ಬಾಳಗೊಂಡ : *(ಬೇಸರದಿಂದ)* ಹೂಂ

ಹಳಬ : ಪಂಚಮೀ ಹೊಳಿ ಏರಿಬಂದಾಗ ನಾ ನೀ ಕೂಡಿಕೊಂಡ
ಹೊಳ್ಯಾಗ ಹಂದಿ ಓಡಿಸಿ, ಅವು ದಂಡಿಗಿ ಬರಧಾಂಗ

ಕಲ್ಲ ಹೇರಿ ಹೇರಿ ಸೀಮಿ ದಾಟಿಸಿ, ಬರತಿದ್ದಿ,
ನೆನಪೈತಿ?

ಬಾಳಗೊಂಡ : *(ಕುತೂಹಲದಿಂದ)* ಹೂಂ ಮುಂದ ಹೇಳು.

ಹಳಬ : ನಿರ್ವಾಣೆಪ್ಪನ ಜಾತ್ರಿಗಿ ಇಬ್ಬರೂ ಕೂಡಿಕೊಂಡ
ಹೋಗತಿದ್ವಿ…

ಬಾಳಗೊಂಡ : ಹಾಂ ಹಾಂ ನಿರ್ವಾಣೆಪ್ಪನ ಜಾತ್ರಿಗಿ ನಾ ಮುಂದ
ನೀ ಮುಂದಂತ ಮುನ್ನೂರಾ ಹದಿನೆಂಟ
ಮೆಟ್ಟಲಾ ಓಡೋಡಿ ಏರತಿದ್ವಿ! ಜಾತ್ರಿ
ಪನಿವಾರ ತಿನ್ನತಾ ಗುಡ್ಡತುಂಬ ಓಡಾಡತಿದ್ವಿ…

ಹಳಬ : ಹುಲಿಮರಿ ತೋರಸ್ತೇನಂತ ಒಕ್ಕಲಿಗೇರ
ನಿಂಗೀನ ರಮಿಸಿ ಗವ್ಯಾಗ ಕರಕೊಂಡ
ಹೋಗಿದ್ದಿ. ಆಮ್ಯಾಲ ನಾ ಬಂದ ಹುರಪಲೆ
ನಿಂಗಿ ದನಿ ತಗದ ಅಳಲಿಕ್ಹತ್ತಿದ್ದಳು…

ಬಾಳಗೊಂಡ : ಯಾರ ಮುಂದ ಹೇಳೋದಿಲ್ಲ ಸುಮ್ಮಕಿರಂತ
ಹೇಳಿ, ನೀ ನನ್ನ ಹೊರಗ ಕಳಿಸಿದ್ದಿ….

ಹಳಬ : ಹೇ ಹೇ… ಬಲೆ ಮೋಜಿನ ದಿನಗೋಳೇನಪಾ ಅವು.
ಬಾಳೇವಂದರ ಬಗಲೆತ್ತಿ ಹೌರಗ ಕುಣಧಾಂಗಿರತಿತ್ತ!
ನಮ್ಮ ಆಟಕ ಈ ಜಗತ್ತೆಲ್ಲಾ ಸಣ್ಣ
ಅಂಗಳಾಗಿ ಸಾಲತಿರಲಿಲ್ಲ ಹೌದ? ತುಂಬಿದ
ಹೋಳಿಹಾಂಗ ಅದs ಬಣ್ಣ, ಅದs ಅರಭಾಟ,
ಅದs ಭರಪೂರದಿಂದ ಬಾಳಬೇಕಂತೈತಿ
ಮಗನ ಮನಸ್ಸು

ಬಾಳಗೊಂಡ : *(ಹಳಬನ ಹೆಗಲ ಮೇಲೆ ಕೈ ಹಾಕಿ)*
ಎಷ್ಟ ದೂರ ಓಡಿಸಿಕೊಂಡ ಹೋಗಿ ಸಿಕ್ಕ್ಯೊ -
ಹಳಬರ ಲಸಿಮ್ಯಾ ಅಲ್ಲಾ ಮಗನ ನೀ?

ಹಳಬ : ಗೌಡರ ಬಾಳ್ಯಾ ಅಲ್ಲಾ ಮಗನ ನೀ?

*(ಇಬ್ಬರೂ ಚಪ್ಪಾಳೆ ತಟ್ಟಿ ನಗಲಾರಂಭಿಸುವರು. ಮಾತು ಬರದಷ್ಟು ನಗುವರು. ಮಧ್ಯದಲ್ಲಿ ಏನೋ ಹೇಳಲು ಹೋಗಿ ಮತ್ತೆ ನಗುವರು.)*

ಹಳಬ : ಕಣ್ಣ ಮುಚ್ಚಾಟ ಆಡಿಕೋತ ಅಂದ
ಯಾರ ಮನ್ಯಾಗ ಅಡಗಿದ್ದೀ ಮಗನ?

*(ಮತ್ತೆ ನಗುವರು. ಬಾಳಗೊಂಡ ಯಾರನ್ನೋ ಅಣಕಿಸುವ ಹಾಗೆ ಎದ್ದು ಶರ್ಟನೊಳಕ್ಕೆ ಕೈ ಹಾಕಿ ತಾನು ಮೂಸಿ ನೋಡಿ ಅವನ ಮೂಗಿಗೂ ಹಿಡಿಯುವನು.)*

ಬಾಳಗೊಂಡ : ಮೈಯಾನ ಮಣ್ಣ ಹೆಂಗ ನಾರತೈತಿ *(ನಗುವನು)*

ಹಳಬ : ಅಲ್ಲೊ; ಕ್ವಾಣಾ ಹೊಡ್ಯಾಕ ಹೋಗಿ ಅದರ ಜೋಡಿ
ಕೆಸರಿನ್ಯಾಗ ಅಂದ ಹೆಂಗ ಸಿಗಬಿದ್ದಿದ್ದಿ-ನೆನಪೈತಿ? *(ನಗುವನು)*

ಬಾಳಗೊಂಡ : *(ತೊಡೆ ಬಾರಿಸಿ ನಗುತ್ತ)*
ನನಗ ಈಗಲೂ ಕೆಸರಿನ್ಯಾಗ ಕಾಲ ಹುಗಧಾಂಗ
ಆಗತೈತಿ, ಹ ಹ ಹೌದ?

ಹಳಬ : ಹಾಂಗಾದರ ಕ್ವಾಣಿನ್ಹಾಂಗ ಒಮ್ಮಿ ಒದರಲಾ ಮಗನ.

ಬಾಳಗೊಂಡ : ಏ ಸುಮ್ಮಕಿರೊ ಮಾರಾಯಾ, ಕೆಸರಿನ್ಯಾಗ ಸಿಗಬಿದ್ದಾಂಗ
ತಿಳಕೊಂಡರs ಮನಸ್ಸಿಗಿ ಒಂದ ನಮೂನಿ
ಖುಶಿ ಆಗತೈತಿ

ಹಳಬ : ಹಿಂತಾದೆಲ್ಲಾ ಬಿಟ್ಟ, ಊರ ನಂದಲ್ಲ
ಅಂಬಾವರ್ಹಾಂಗ-ರಾತ್ರೋರಾತ್ರಿ ಹೋಂಟೇದಿ,-
ಬುದ್ಧಿ ಎಲ್ಲಿಟ್ಟಿದ್ದೀಯಲೆ ಮಗನ?

ಬಾಳಗೊಂಡ : ಖರೆ, ಲಸಿಮ್ಯಾ, ನೀ ಬಂದ ಮತ್ತ
ಹಣಗಲಕ ಹಾಕಿದಿ. ತಡ ಅದರ ಮತ್ತೆಲ್ಲಿ
ಕ್ವಾಣ ಡೊಗಾಲಮಂಡೀ ಚೆಲ್ಲೀತಂತೇನ.

ಹಳಬ : ಬೇರ ಹರಕೊಂಡ ಬ್ಯಾರೇ ಕಡೆ  ಹೋಗೋದ
ಇಷ್ಟ ಸಸಾರಿದ್ದರ ಈ ಊರಾಗ ಯಾರ ಇರತಿದ್ರ
ಹೇಳು? ಈ ಮಣ್ಣೇನ ಒಂದs ಎರಡs ಮಾಡತೈತಿ?
ಇಷ್ಟs ಲೆಕ್ಕಾ ಹಾಕಲಾ, -ಬಿದ್ದ ಬೀಜ ಎಲ್ಲೆ-
ಬೆಳದ ಮರಾ ಎಲ್ಲೆ? ಸಿಡದ, ಮ್ಯಾಲ
ಬರಬೇಕಂದರ ಅದರ ಎದಿ ತುಂಬ ಬೇರ
ಬಿಟ್ಟಿರತೇವ. ಬೇಕಾದರ ಹೌದನ್ನು, ಸಾಕಾದರ ಅಲ್ಲನ್ನು.

ಬೇಕಬೇಕಾಧಾಂಗ ಒಂದ ಬಿಟ್ಟ ಒಂದ ಮಾಡೀತ
ಖರೆ, ನಮ್ಮ ಮ್ಯಾಲಿನ ಹಿಡತಾ ಬಿಡೋದಿಲ್ಲ
ಮಗಂದು. ಕಾಣಬಾರದ?-ಹೋಗತಿ ಅಂತ
ಕುದರೀ ಬಿಚ್ಚಿಕೊಂಬರೋವಾಗ ಹೇಳಿದ್ದಷ್ಟs ಆತು,
ಹೊಲೇರ ಪಾರಿ ಮೈ ತುಂಬಿ 'ನನ್ನ ತಲ್ಯಾನ
ಕೂದಲಾ ಯಾರೋ ಸಿವುಡ ಕಟ್ಟಿ ಕೊಯ್ತಾರ
ಕಾಪಾಡ್ರೋ' ಅಂತ ಚೀರಿದಳಪಾ!

ಬಾಳಗೊಂಡ : ಹೊಲೇರ ಪಾರಿ? ಆಕಿ ಮೈಯಾಗ ಬಂದಿತ್ತು?
ಏನಂದಳು? ಏನಂದಳು?

ಹಳಬ : ಈ ಗೋಕಾಂವಿ ನಾಡಿನಾಗಿನ ಕೆಟ್ಟ ಕೆಟ್ಟ
ದೇವರೆಲ್ಲ ಆಕಿ ಮೈಯಾಗ ತುಂಬತಾವೇನಪಾ.
ಯಾಕೋ ನೀ ಹೊಂಟ ಯಾಳೆ ಸುಮಾರೈತಿ,
ನಿನ್ನ ಬಿಡಬ್ಯಾಡರೆಂತ ಆಕೀನs ಹೇಳಿದಳು.

ಬಾಳಗೊಂಡ : ನೋಡ ಲಸಿಮ್ಯಾ....

ಹಳಬ : ಏ, ಅಲ್ಲಂದರ ಮತ್ತ ಅದನs ಹಾಡತಾನಲ್ಲೊ:
ಒಂದ ಮಾತ ಹೇಳತೇನ, ಬೇಕಾದರ ಕೇಳು,
ಸಾಕಾದರ ಬಿಡು: ಹೊಲೇರ ಪಾರಿ ಹೇಳಿದ್ದ
ಇಲ್ಲೀತನಕ ಒಂದ ಮಾತ ಸುಳ್ಳು ಬಂದಿಲ್ಲೇನಪಾ.
ಇದs ಈಗ ನಿನಗೊಬ್ಬ ಮುದುಕ ಭೆಟ್ಟಿ
ಆಗಿದ್ದೋ ಇಲ್ಲೊ?

ಬಾಳಗೊಂಡ : ಹೌದು.

ಹಳಬ : ನೋಡ ಹಾಂಗಾದರ, ಅಲ್ಲಿ ಕೂತಗೊಂಡs
ಅದನೆಲ್ಲ ಹೇಳಿದಳು-ಸುಳ್ಳಂತಿ? ಬ್ಯಾಡಾದವರ
ಬೇಕಾದ್ದs ಹೇಳತಾರ: ಹೇಳಿದ್ದವರನ್ನೆಲ್ಲಾ
ಕೇಳಿಕೋತ ಹ್ವಾದರ ಹೆಂಗೊ ಹುಡಗ?
ಸುಮ್ಮನ ಗಿಣಿಗಿ ಹೇಳಿಧಾಂಗ ಹೇಳತೇನ.
ನನ್ನ ಮಾತ ಕೇಳ, ಅದನ್ನೆಲ್ಲಾ ಏನ ಮಾಡತಿ?
ಮನಿಗಿ ನಡಿ...

ಬಾಳಗೊಂಡ : ನೋಡ ಲಸಿಮ್ಯಾ, ಇನ್ನ ಜುಲುಮಿ ಮಡಬ್ಯಾಡ.
ಏನೋ ಇದೊಂದ ಎಳಿತನದ ಹಳೀ ನೆನಪ
ಉಳದsದ. ಆದs ಅನ್ನೋದಕ್ಕ ಅದೊಂದಾದರೂ
ಇರಲಿ, -ನೀ ಹೋಗಿಬಿಡ.

ಹಳಬ : ಹಾಂಗಿದ್ದರ ಖರೆ ಅನ್ನು, ಸುಳ್ಳನ್ನು. ನನಗ
ನೀ ಬಾಳ್ಯಾ ಹೌಂದು, ನಿನಗ ನಾ ಲಸಿಮ್ಯಾ ಹೌಂದು.
'ಏ ನಿನಗ ನಾ ಬಾಳಗೊಂಡಲ್ಲಪಾ' ಅನ್ನು-ಹೋಗು.
ಇದು ನಿಮ್ಮ ಅಣ್ಣನ ಅಳಿಕಿ ಜಾಗಾ; ನಾ
ಹೋಗತೇನ, ಇಕಾ ಶರಣು. ಹಾದ್ಯಾಗೇನರೆ
ಹರೀದ ಸುಖ ಸಿಕ್ಕರ ಈ ಹಳಬನ್ನ ಮರಿಬ್ಯಾಡ.

*(ಹಿಂದೆ ನೋಡದೆ ಹೋಗುವನು. ಹಳಬನ ಸ್ಥಳವನ್ನು ನಿಧಾನವಾಗಿ ಬಂದ ಸೂತ್ರಧಾರನು ಆಕ್ರಮಿಸುವನು. ಬಾಳಗೊಂಡ ಅವನನ್ನು ಗಮನಿಸದೆ ಸ್ವಗತವೆಂಬಂತೆ ಆಡುತ್ತಾನೆ.)*

ಬಾಳಗೊಂಡ : ನಾ ಕೇಳೋದs ಒಂದ, ನೀವೆಲ್ಲ ಹೇಳೋದs ಒಂದ.

ಸೂತ್ರಧಾರ : ಖರೆ ಬೇರ ಹುಡುಕಬೇಕಲ್ಲ.
ಬಾಳಗೊಂಡ : ಇದ ನನ್ನ ಮಣ್ಣs ಅಲ್ಲ, ತಿಳೀತಿಲ್ಲ?
ನೋಡಲಿಲ್ಲ ಆ ಮುದಕನ್ನ? ಇಷ್ಟಿದ್ದಾಂವ
ಇಷ್ಟ ದೊಡ್ಡಾಂವಾಗಿ ಕಾಣಾ ಕಾಣಾ
ಎದರಾ ಇದರ ನೆಲಕ್ಕ ಮುಗಿಲಿಗೆ ಏಕಾಗಿ
ಬೆಳದ. ಅವನಾಡಿದ್ದೆಲ್ಲ ಖರೆ, ಮುಟ್ಟಿದ್ದೆಲ್ಲ
ಬಣ್ಣ! -ನಾ? ನಾ ಸಣ್ಣ ಸಣ್ಣಾಂವಾಗಿ
ತೆಳ್ಳಗ ಗಾಳ್ಯಾಗಿ ಸುಳಿಧಾಂಗಾಯ್ತು. ನೋಡು,
ಇಷ್ಟs ತಿಳಿ: ಕೆಲವರು ಹುಟ್ಟೋ ಮುನ್ನ
ತಮ್ಮ ದಾರಿ ನಿರ್ಧಾರಿ ಮಾಡಿಕೊಂಡs ಬರತಾರ
ಕೆಲವರು ಹುಟ್ಟಿದ ಮ್ಯಾಲ ಆರಿಸಿಕೊಳ್ಳತಾರೇನಪಾ.
ಆಮ್ಯಾಲ ಆರಿಸಿಕೊಂಡವರ ಎದಿ ತಟ್ಟಿ,
ಹೇಳತಾರ: ಇದ ನನ್ನ ಹಾದಿ, ನಾನs ಆರಿಸಿದೆ
ಅಂತ. ನನಗಿದೂ ಇಲ್ಲ. ನೆತ್ತರಿನಾಗ
ಇದ್ದು, ಒಂದಾಗಿ, ಒತ್ತಿ ಒತ್ತಡಾ ಹಾಕಿ, ನೂಕಿ
ದಾರಿ ತೋರೋ ಮೂಲ ಗುರು ಎಲ್ಲಿದ್ದಾನೊ!
ನಾ ಹಿಡಿದ ಹಾದೀ ನೋಡಿ ನನ್ನ ಹುಟ್ಟ, ಹೊಂದ
ಅಳದ ಸುರಿಯೋದಕ್ಕ ಇಷ್ಟೆಲ್ಲಾ ಮಂದಿ

ಕೂಡ್ಯಾರ. ನಮ್ಮಣ್ಣ ಸಿಕ್ಕಿದ್ದರ ಹೆಗಲ ಮ್ಯಾಲ
ಕೈ ಹಾಕಿ ತಮ್ಮಾ ಅಂತಿದ್ದ. ಇದ ಹೀಂಗ
ಅದ ಹಾಂಗ, ಅದಕ್ಕ ಇದs ನಿನ್ನ ಹಾದಿ ಅಂತಿದ್ದ.
ಈಗ? ಊರಾಗಿನ ಗಂಡಗೂಗಿ, ಹೆಣ್ಣಬೆಕ್ಕ,
ಕೆಮ್ಮಿನ ಮುದುಕರು-ಎಲ್ಲಾ ಸತ್ತು, ಜೋಡೆಳಿ
ಉಡದಾರ ಕಟ್ಟಿದ ಗಂಡಸರೆಲ್ಲಾ ಹೆಂಡರ
ಬದ್ಯಾಗ ಬಿದ್ದ ಬಡಬಡಿಸ್ತಿರಬೇಕ ಮಕ್ಕಳು!
ಕಾಣಬಾರದ? ನನ್ನ ಉಪಯೋಗಕ್ಕ ಬರೋವಂಥಾ
ಒಂದು ವಸ್ತುವೂ ಈ ಊರಾಗಿಲ್ಲ. ಮುಚ್ಚಿದ
ಕಣ್ಣ ತೆರೀಬೇಕನ್ನಸೋದಿಲ್ಲ. ಒಂದೊಂದ ಶಬ್ದ
ಅಂದರ ಸಾಕು, ಮಾತs ಮುಗಧಾಂಗ.
ನಾ ಹೇಳಬೇಕಾದದ್ದ ಏನೂ ಇಲ್ಲಧಾಂಗ,
ಅನ್ನಸ್ತದ. ನಾಲಿಗಿ ಚಟಕ್ಕಾಗಿ ಏನಾದರು
ಅಂದರೂ ಯಾರೋ ಮಾತಾಡಿಧಾಂಗ-ನಾನs
ಮಾತಾಡಿದೇ ಅಂತ ಅನ್ನಿಸೋದೇ ಇಲ್ಲ.
ನಗಲೊ? ಬಯಲಾಟದ ಪದಾ ಹೇಳಿ ಕುಣೀಲೊ?
ನನ್ನಮೂಗ ನಾನs ಹಿಡಿದ ಅಳಲೊ?
ಮೈತುಂಬ ಗುಲ್ಲ ಕೊಟ್ಟಕೊಳ್ಳಲೊ?
ರಾಮೂ ರಾಮಣ್ಣಾs ರಾಮಗೊಂಡಾss
ನನ್ನ ಕರಳ ಕಿತ್ತ ಮಾಲಿ ಹಾಕಬೇಕಂತೇನ
ಎಲ್ಲಿದ್ದಿಯೋ? ನನ್ನ ಎದಿ ಮ್ಯಾಲ ಭೂತ
ಬಂದ ಬಯಲಾಟ ಮಾಡತಾವ ಕಾಪಾಡೋ
ಅಣ್ಣಾ-ರಾಮಣ್ಣಾs….

*(ಬಾಳಗೊಂಡ ಎರಡೂ ಕೈ ಮೇಲೆತ್ತಿ ಕಿರುಚುತ್ತಿದ್ದಾಗಲೇ ದೊಡ್ಡಾಟದ 'ತಾಂ ತಕದಿನ ತೋಂ ತಕದಿನ ತಾಂ ತಕದಿನ ತಾ| ತಯಾ| ತೋಂ ತಕದಿನ ತಾ|' ಎಂಬ ಧ್ರುವ ದೂರದಿಂದೆಂಬಂತೆ ಕೇಳಿಸಿ ಬರಬರುತ್ತ ಸ್ಪಷ್ಟವಾಗುತ್ತದೆ. ತಾಳಕ್ಕನುಗುಣವಾಗಿ ದೊಡ್ಡಾಟದ ಸ್ತ್ರೀಪಾತ್ರದಂತೆ ಲಾಸ್ಯವಾಡುತ್ತ ಒಬ್ಬ ಯಕ್ಷಿಣಿ ಬಂದು ಧ್ರುವ ಮುಗಿದೊಡನೆ ನರ್ತನದಲ್ಲಿ ಮುಕ್ತಾಯಮಾಡಿ ನಿಂತುಕೊಳ್ಳುತ್ತಾಳೆ. ಬಾಳಗೊಂಡ ಅವಳು ಕಾಣಿಸಿದೊಡನೆ ಚಕಿತನಾಗಿ ಭಯಭಕ್ತಿಯಿಂದ ನೋಡುತ್ತಿದ್ದು ಅವಳು ನಿಂತೊಡನೆ ಮೊಣಕಾಲೂರಿ ನಮಸ್ಕರಿಸುತ್ತಾನೆ.)*

ಬಾಲಗೊಂಡ : ಕಣ್ಣಲ್ಲಿ ಬೆಳಕಾಗಿ
ತುಳುಕುವ ಬಿಳಿಯ ದೇವಿ, ನೀನಾರೆಂಬ
ಕುರುಹು ಹೇಳೌ ತಾಯೆ, ಸೌಖ್ಯಪ್ರದಾಯೆ.

ಯಕ್ಷಿಣಿ : ಅಪ್ಪಾ ಬಾಲಕ, ಧೀರನಾದ ನಿಮ್ಮಣ್ಣ ರಾಮನ ಪೂಜ್ಯ
ಪಾದಕ್ಕೆ ನಮೋ ಎಂದು ಬದುಕಿದ ಓರ್ವ
ಯಕ್ಷಿಣಿ ಎಂದು ಭಾವಿಸೈ ಕಂದಾ,
ನಿನ್ನ ಮಾತೆನಗೆ ಚಂದಾ

ಬಾಲಗೊಂಡ : ಸಂದೇಹಕ್ಕೆ ನಿಸ್ಸಂದೇಹವಾಗಿ ಹೊಳೆವ ತಾಯೇ
ನನ್ನ ಒಳಗನರಿವ ಹದನ ಹೇಳಿ,
ಸಾವವನ ಬದುಕಿಸೌ ತಾಯೇ
ಸೌಖ್ಯಪ್ರದಾಯೆ.

ಯಕ್ಷಿಣಿ : ನಿಮ್ಮಣ್ಣ ನಿನಗೊಂದು ಒಸಗೆಯನ್ನು ಇತ್ತಾನು.
ಸೆರಗೊಡ್ಡು ಕಂದಾ,-
ಮಾಣಿಕವಿದು. ಉತ್ತಮಾಂಗದಲಿ ಇದ ಧರಿಸಿ
ಹಾಲಗಡಿಗೆಯ ಮುಗ್ಧೆಯ, ಹಾಸಿಗೆ ಮಾಡಿ
ಸಹವಾಸ ಮಾಡೆ, ಅಂತ್ಯದ ತಿಳಿ ಬೆವರು
ಮಳೆಯಾಗಿ ಸುರಿಯುವುದು. ತುದಿಯಲ್ಲಿ
ತಾನೆ ಬಂದು ನಿನ್ನ ನಿಲವ ತೋರುವನು ರಾಮ.
ಅಲ್ಲಿಯ ವರೆಗೆ ಇದನಾಚರಿಸು, ಜೋಕೆಯಿಂದಿರು,
ಹರಕೆ; ಬರುವೆ ಕಂದಾ
ನಿನ್ನ ಕೃತಿಯೆನಗೆ ಚಂದಾ.

*(ಬಾಳಗೊಂಡ ಅವಳು ಕೊಟ್ಟ ರತ್ನವನ್ನು ಸ್ವೀಕರಿಸಿ ಕಣ್ಣಿಗೊತ್ತಿಕೊಂಡು 'ಆಗಲಿ ತಾಯೇ ಸೌಖ್ಯಪ್ರದಾಯೆ' ಎಂದು ಹೇಳಿ ಮಣಿಯುತ್ತಿದ್ದಂತೆಯೇ 'ಲಾಲಿ | ಲಾಲಿಮ| ಲಾಲಿಮ| ಲಾಲಿಮ |' ಎಂಬ ಲಾಲಿಮ ಧ್ರುವ ಕೇಳಿಸುತ್ತದೆ. ಯಕ್ಷಿಣಿ ನರ್ತಿಸುತ್ತ ಮಾಯವಾಗುತ್ತಾಳೆ. ಬಾಳಗೊಂಡ ರತ್ನ ಸಹಿತ ಎರಡೂ ಕೈ ಹೊತ್ತುಕೊಂಡು ರಂಗದ ಬಲಭಾಗಕ್ಕೆ ಹೋಗುತ್ತಾನೆ. ಈವರೆಗೆ ಯಾರ ಗಮನಕ್ಕೂ ಬಾರದೆ ಅಡಗಿಕೊಂಡ ಮುದುಕ, ಮುದಿಗೌಡ ರಂಗದ ಮಧ್ಯಕ್ಕೆ ಬಂದು ಬಾಳಗೊಂಡ ಹೋದ ದಿಕ್ಕನ್ನೇ ನೋಡುತ್ತ ಏನೋ ಎಣಿಕೆ ಹಾಕಿದಂತೆ ಗುಣಿಸಿ ತಕ್ಷಣ ಪರಿಹಾರ ಕಂಡಂತೆ ವಿರುದ್ಧ ದಿಕ್ಕಿನಲ್ಲಿ ಮಾಯವಾಗುತ್ತಾನೆ.)*

## ಅಂಕ : ಮೂರು (a)

*(ಸರಿರಾತ್ರಿಯ ಸಮಯ. ನೋಡಿದೊಡನೆ ಭಯಂಕರವಾಗಿರುವ ಮೂವರು ಸ್ತ್ರೀಯರು ರಂಗದ ಮಧ್ಯದ ಗದ್ದಿಗೆಯ ಮೇಲೆ ಕುಳಿತಿದ್ದಾರೆ. ರಂಗದ ಮುಂಭಾಗದಲ್ಲಿ ಸೂತ್ರಧಾರ ಕಾಣಿಸಿಕೊಂಡು ಅವರನ್ನು ನೋಡುತ್ತಾನೆ.)*

ಸೂತ್ರಧಾರ : ಆಟ ಅರ್ಧಾಕ ಬಂದರೂ ಹೊಸಾ ಮಂದಿ
ಬರೋದೇನ ನಿಂದರಲಿಲ್ಲ. ಬರೋ ಮಂದಿ
ಮುಗದ ಹಿಂದ ಸರೀಬೇಕಂದರ ಮತ್ತ
ಮೂರ ಮಂದಿ ಇಲ್ಲೆ ಬಂದ ಕುಂತಾರ.
ನೋಡಾಕ ದೆವ್ವಿನ್ಹಾಂಗ ಕಾಣತಾರ, ಇವರು
ಯಾರಿರಬಹುದು? ಒಬ್ಬರ ಹಣೀಮ್ಯಾಲ
ಕುಂಕುಮ ಇಲ್ಲ,  -ಮಿಂಡೇರಂತೂ ಹೌದ?
ನೋಡಾಕ ಇದ್ದಲಿ ಹಾಂಗ ಕಂಡರೂ ಜಳ
ಇಲ್ಲೀತನಕಾ ತಾಗತೈತಂದ ಮ್ಯಾಲ, ಯಾರೋ
ದೊಡ್ಡ ಮಂದೀನs ಇರಬೇಕು; ಮಾತಾಡಿಸಿ
ನೋಡೋಣು, -ಅವ್ವಾ ತಾಯಂದಿರಾ ತಾವು
ಬಂದಂಥವರು ದಾರು? ಇಂಥಾ ಕತ್ತಲಿ
ಯಾಳೇದಾಗ ಇಲ್ಲಿಗಿ ಬಂದ ಕಾರಣೇನು?
ಚಂದದಿಂದ ಹೇಳುವಂಥವರಾಗಿರಿ.

*(ಸುಮ್ಮನೆ ಅವರು ಒಬ್ಬರನ್ನೊಬ್ಬರು ನೋಡುತ್ತ ಕುಳಿತಿರುವರು.)*

ಅಡ! ಹೆಸರ ಕೇಳಿದ ಯಾಳೇನ ಚಲೋ
ಇಲ್ಲೇನ ಮಣ್ಣ! ಅವ್ವಾ ತಾಯಂದಿರಾ
ಕಣ್ಣಿಗಿ ದೊಡ್ಡವರ್ಹಾಂಗ ಕಾಣತೇರಿ; ಹೆಸರ
ಕೇಳೋದರಾಗ ಏನಾರ ಎಡವಟ್ಟ ಆಗಿದ್ದರ
ಹೊಟ್ಯಾಗ ಹಾಕ್ಕೊಂಡ, ತಮ್ಮ ನಾಮಾಂಕಿತವೇನೆಂದು
ಶರಣಂತೇನು, ಹೆದರಬ್ಯಾಡಂತ ಹರಸಿ
ತಿಳಿಸುವಂಥವರಾಗಿರಿ.

೧ನೆಯವಳು : ನಮ್ಮ ಹೆಸರ ಕೇಳೋವಂಥಾ ನೀ ದಾರು?
ಮೊದಲು ಹೇಳುವಂಥವನಾಗು ಕಂದಾ,
ನಿನ್ನ ಮಾತೆನಗೆ ಚಂದಾ.

ಸೂತ್ರಧಾರ : ತಾಯೀ ತಮ್ಮಂಥಾ ತಿಳಿದವರು ಸೂತ್ರಧಾರ
ಅಂತಾರು, ತಿಳೀದವರು ಮೇಟೀತಾಳ ಅಂತಾರು
ಎರಡೂ ಅಲ್ಲದವರು ಹೋಗುಬಾರೊ ಪರಬೂ
ಅಂತಾರು. ನಿಮಗ ತಿಳಿದ ಹೆಸರಲೆ ಕರೆದು
ನಿಮ್ಮ ನಾಮಾಂಕಿತ ಹೇಳುವಂಥವರಾಗಿರಿ.

೧ನೆಯವಳು : ಸೂತ್ರಧಾರ, ಹೇಳಲೇಬೇಕೇನು?

ಸೂತ್ರಧಾರ : ಹೇಳಿದರ ನನಗೂ ತಿಳಿದೀತು, ಕೂತಂಥ
ನಾಕ ಮಂದಿಗಾದರು ತಿಳಿದೀತು?

೧ನೆಯವಳು : ಹಾಂಗಿದ್ದರ ಸೂತ್ರಧಾರಾ, ಕೇಳುವಂಥವನಾಗು,

*(ಕೆಳಗಿನ ಪದ್ಯವನ್ನು ಮಾತಾಡುವ ಧಾಟಿಯಲ್ಲಿ ಹೇಳಬೇಕು.)*

ಆಯ್ತಾರಮಾಸಿ ಪುರಮಾಸೆ ಕತ್ತಲಿ |
ಗಚ್ಚಿನ ಗುಡ್ಯಾಗ ದೀಪಿಲ್ಲ, ಬೆಳಕಿಲ್ಲ
ನಿನ್ನಿ ಮೊನ್ನಿ ಹರೇಕ ಬಂದೆ
ಕಣ್ಣ ಹಾರಿಸಿ ಹುಸಿ ನಗಿ ನಕ್ಕೆ
ನೆರಿಮನಿ ರಾಯ ಮೀಸೀ ಕುಣಿಸಿ
ಕೂಕುಮ ಹಚ್ಚಿ ಮದಿವ್ಯಾದ
ಹೊಸ ಸೊಸಿಯಾಗಿ ನಡ್ಯಾಕ ಹೋದೆ
ಹೊಸಾ ಹಾಸಿಗಿ ಮಗಮಗ ಮಗ್ಗಿ
ಮಗ್ಗಲದಾಗ ಗನ ಗಂಡಾ| ನನ ಗಂಡಾ
ಕಣ್ಣಿನಾಗ ಚೂರಿ ಇಟಗೊಂಡ
ಮಗ್ಗಲ ಗಂಡನ ಮೈತುಂಬಿರಿದೆ
ಕೈಯ ಉಗರ ಕುಡಗೋಲಾ| ಕುಡಗೋಲಾ
ಕಾಲಿನೊಳಗ ಮುಳ್ಳಿನಾಂವಿಗಿ
ಗಂಡನ ಮೈಯ ಕಚಪಚ ತುಳಿದೆ
ಹೆದರಿದ ಗಂಡನ ಹರಣಾ ಹಾರಿ
ಕೋಣನ ಮೈಯ ಸೇರ್ಯಾವ
ಕೋಣಾ ಕಡಿದು ಜೀವಾ ಹಿಂಡಿ
ಹಾಸಿಗಿ ತುಂಬ ಹಸಿರಕ್ತ| ಹಸಿರಕ್ತ
ರಗತದ ಸುತ್ತ ಒಡ್ಡ ಕಟ್ಟಿ
ಬತ್ತಿಯಾದೆ ಕಾಲ ಊರಿ
ನೆತ್ತಿಯ ದೀಪ ಹೊತ್ತಿಸಿಕ್ಯಾರಿ
ಮಿಂಡರ ಕರೆದೆ ಕೈಮಾಡಿ ಕೈಮಾಡಿ
ಮಿಂಡ ಬಂದಾ ದೀಪಾ ಕಳದಾ
ಅಕ್ಕರತೀಲೆ ಏನೇನಂದಾ
ನೋಡಬ್ಯಾಡ ಕಣ್ಣ ತೆರದ
ತೆರದರ ನಾ ಸುಂಟರಗಾಳಿ | ಸುಂಟರಗಾಳಿ

ಹತ್ತ ಹುಣಿವಿ ಹತ್ತಮವಾಸಿ
ಕಣ್ಣ ತೆರದ ಕಂಡೇನ
ಗಂಡನಲ್ಲ ಮಿಂಡನಲ್ಲ
ಹಳೀ ದೆವ್ವ ಹಂತೇಲಿತ್ತ
ರಗತದ ಕೂಕುಮ ಹಚ್ಚಿತ್ತ
ರಗತದ ಕೂಕುಮ ಹಚ್ಚಿತ್ತ

ಸೂತ್ರಧಾರ : ತಾಯೀ ನಿಮ್ಮ ಕಥೀ ಆದರೂ ನಮ್ಮ
ಗೌಡ್ತೀ ಕಥೀ ಹಾಂಗೈತಿ;
ನೀವು ದುರಗವ್ವನವರಲ್ಲ?

*(ಹೌದೆಂಬಂತೆ ಕತ್ತು ಹಾಕುವಳು.)*

ತಾಯಿ, ನಿಮ್ಮ ಹೆಸರೇನಂಬೋದು ನನಗಾದರು
ತಿಳಿದುಬಂತು. ಇನ್ನ ನಿಮ್ಮ ನಾಮಾಂಕಿತವೇನೆಂದು
ಚಂದದಿಂದ ಹೇಳುವಂಥವರಾಗಿರಿ.

ಜನೆಯವಳು : ಸೂತ್ರಧಾರ, ನಾನು ಕೊಮರಾಮನ ತಾಯಿಯೆಂದು
ಭಾವಿಸುವಂಥವನಾಗು.

ಸೂತ್ರಧಾರ : ತಾಯೀ, ಯಾವ ಕೊಮರಾಮ, ಏನ ಕತಿ
ಎಲ್ಲಾ ಬಿಡಿಸಿ ಹೇಳುವಂಥವಳಾಗು.

*(ಈ ಹಾಡನ್ನೂ ವಿಶೇಷ ರೀತಿಯಲ್ಲಿ ಮಾತಾಡಬೇಕು.)*

ಜನೆಯವಳು : ದಿಕ್ಕನಾಳಿದ ಮಗ ದಂಡನಾಳಿದ ಮಗ
ಹೆಬ್ಬೂಲಿಯಂಥ ಗಂಡಮಗ
ಹುಟ್ಟಿದೆರಡೇ ಗಂಡಮಗ
ಹುಟ್ಟಿದೆರಡೇ ದಿನಕ ಪಟ್ಟಣವ ತಿರುಗೀದ
ಪಟ್ಟಣದ ಹುಡಿಗೇರ ಎಳದ ಮಗ ||

ಹೋಗತ ಹೊನ್ನವ ಮುಡಿದ ಬರತ ಬನ್ನಿಯ ಮುಡಿದ
ಕಂಡಲ್ಲಿ ಕರಿಬೇವ ಮುಡಿದ
ಹಾದೀ ಹುಡಿಗಿಯನೆಳೆದ ಬೀದಿ ಬಾಲಿಯನೆಳೆದ
ಸಂದಿಗೊಂದಿಯ ಸುಂದರಿಯನೆಳೆದ ||

ಪುಂಡನ ಪುಂಡಾಟಕ ಹಿಂಡ ಮಂದಿ ಕೂಡ್ಯಾರ
ಕಂಡಲ್ಲಿ ಹಿಡಿದಾರ ಕಲ್ಲ
ಎಣಿಸಿ ಐನೂರ್ಮಂದಿ ಸಾವಿರ ಕೈಗೋಳ
ಕೈಗೊಂದ ಕೊಡಲಿ ಕುಡಗೋಲ ||

ಸವರ್ಯಾರ ಧೀರನ್ನ ತರದಾರ ಕೂಸಿನ್ನ
ಕಡದಾರ ಹಿಡಿಹಿಡದ ಎಳಕನ್ನಾ
ಕೈ ತೊಳದ ಕನ್ನಡಿ ಕಂಡೇನ ಅಂದಾರ
ಸತ್ತಾಂವಾ ಅವನಲ್ಲ ನಾವೇನ ||

ದಿಕ್ಕನಾಳಿದ ಮಗ ದಂಡನಾಳಿದ ಮಗ
ಹೆಬ್ಬೂಲಿಯಂಥ ಗಂಡಮಗ
ಹೆಬ್ಬೂಲಿಯಂಥ ಗಂಡಮನಗ ತಾಯಿ
ದಿಟ್ಣಾದೇವಿಯು ನಾನು ತಿಳಿಯೊ ಮಗ ||

ಸೂತ್ರಧಾರ : ಹಡದವ್ವಾ ಇದಾದರೂ ಇನ್ನೂ ಆಗದ ಕತಿ; ಅವ್ವಾ,
ನೀವು ದಿಟ್ಣಾದೇವಿ ಅನ್ನೋದು.
ನನಗಾದರು ತಿಳೀತು, ಕುಂತ ಬುದ್ಧಿವಂತರಿಗಾದರು
ತಿಳೀತು. ತಾಯಿ, ಇನ್ನ ಮ್ಯಾಲ ನಿಮ್ಮ ನಾಮಾಂಕಿತ
ಏನೆಂದು ಚಂದದಿಂದ ತಿಳಿಸುವಂಥವರಾಗಿರಿ.

೨ನೆಯವವಳು : ಸೂತ್ರಧಾರ, ನಾ ಅಂದ ಆಡಾಕಿಲ್ಲ.

ಸೂತ್ರಧಾರ : ಬಲ್ಹಾಂಗ ಹೇಳು.

೨ನೆಯವವಳು : ರಾಗ ಹಚ್ಚಿ ಹಾಡಾಕಿಲ್ಲ.

ಸೂತ್ರಧಾರ : ತಿಳಧಾಂಗ ಹೇಳು.

೨ನೆಯವವಳು : ಸೂತ್ರಧಾರ,

ಸೂತ್ರಧಾರ : ತಾಯೀ,

೨ನೆಯವವಳು : ಇಂದ ಯಾವಾರ!

ಸೂತ್ರಧಾರ : ಸೋಮಾರ

೧ನೆಯವವಳು : ಯಾಳೆ ಎಷ್ಟು?

ಸೂತ್ರಧಾರ : ಸರ್ವತ್ತು

೧ನೆಯವವಳು : ನಿಂತ ನೋಡ ಎದುರಿಗೇನೈತಿ?

ಸೂತ್ರಧಾರ : ಗೌಡ್ರ ಮನಿ

೧ನೆಯವವಳು : ಏನೇನ ಕಾಣತಿ?

ಸೂತ್ರಧಾರ : ಗಪ್ಪಗಾರ! ಒಂದ ಸಪ್ಪಳಿಲ್ಲ.. ಗೌಡ್ತಿ ಕಣ್ಣಿನ್ಹಾಂಗ
ಜಗಲಿ ಮ್ಯಾಲೊಂದ, ದನದ ಹಕ್ಕ್ಯಾಗೊಂದ
ಪಣತಿ. ಅಲ್ಲೇ ಕಟ್ಟೀಮ್ಯಾಲ ಗೌಡ ಮಲಗ್ಯಾನ,
ಬಾಳಗೊಂಡ ಮಲಗ್ಯಾನ… ನಾಳೆ ಹರಿವತ್ತಿನ
ಎಳಿಬಿಸಲೆಲ್ಲಾ ಬಾಳಗೊಂಡನ ತುಟ್ಯಾಗ
ತುಳಕ್ಯಾಡತೈತಿ! ನೆತ್ತ್ಯಾಗ ಒಂದಳತಿ ಉರಿಯೋ ದೀಪ-
ಉದ್ದಕ ತೋದ ಬತ್ತೀಹಾಂಗ ಬಿದ್ದಾನ!

೧ನೆಯವವಳು : ದೀಪಲ್ಲೊ ಬಾಳಾ, ಜಕ್ಕಜಲದಿ ಬಂದ ಅಕ್ಕರತೀಲೆ
ರತ್ನದ ಹರಳ ಕೊಟ್ಟಾಳ; ರತ್ನಂದರ
ಅಂತಿಂಥಾ ರತ್ನ ಅಲ್ಲ, ಹಂತ್ಯಾಕ ಅದನ್ನ ಇಟಕೊಂಡ
ಖರೆ ಹೆಂಗಸನ್ನ ಹಾಸಿಗಿ ಮಾಡಿ ಮಲಗಿದರೆ
ಬೆವರ ಸುರಧಾಂಗ ಮಳಿ ಬರತೈತೊ ಬಾಳಾ.

ಸೂತ್ರಧಾರ : ನಿನ್ನ ಮಾತ ಕೇಳಿ ಮಳ್ಯಾಗ ನೆನದಷ್ಟ
ಖುಸಿ ಆತ ತಾಯೀ,

೧ನೆಯವವಳು : ಸೂತ್ರಧಾರ ಮತ್ತೇನ ನೋಡತಿ?

ಸೂತ್ರಧಾರ : ಮುದಿಗೌಡ ಕಣ್ಣ ಕಿಸದ! ಸಂಶೇಧಾಂಗ ಎದ್ದ!
ನೆರಳಾಗಿ ಬೆಳೆದ! ಕತ್ತಲ್ಯಾಗ ಬಾಲಗೊಂಡನ
ಮೈಮ್ಯಾಲ ಬಿದ್ದು ರತ್ನ ತಗೊಂಡ! ತನ್ನ
ತಲ್ಯಾಗಿಟ್ಟಕೊಂಡ! ನಡಮನಿಗಿ ಹೋಗಿ
ಹೊರಸ ತುಂಬ ಕೈಯಾಡಿಸಿ ಹೊರಗ ಬಂದ.
ದನದ ಹಕ್ಕಿಗಿ ನಡದಾ… ಹಕ್ಕ್ಯಾಗ...
ಹಡದವ್ವಾ, ಖರೆ ಹೇಳಿದರ ಕೇಳತಿ, ಸುಳ್ಳ

ಹೇಳಿದರ ಕೇಳತಿ, ಊರ ಗೌಡ್ತಿ ಹಕ್ಕಿತುಂಬ
ಏಕಾಗಿ ನಿಂತಾಳ! ಮೈತುಂಬ ಕೂಕುಮ!
ಎಣ್ಣಿ ಹಚ್ಚಿದ ಹಸೀ ತಲಿ, ಬಿಟ್ಟ ಕೂದಲ ಬೆನ್ನ ದಾಟಿ
ನೆಲಕ್ಕ ಚೆವರಿ ಬೀಸತಾವ! ಗೌಡ್ತೀ ಆ ಕಡೆ
ಕೆಂಪ ಕುದರಿ, ಈ ಕಡೆ ಬಿಳೀ ಕುದರಿ,
ಬಲಕ್ಕ ಬಂಗಾರ ತೊಡಿ, ಎಡಕ್ಕ ಬೆಳ್ಳೀ ತೊಡಿ-
ನಡಕ್ಕ ಹೋಗಿ ಗೌಡ ನಿಂತಕೊಂಡಾ… ರತ್ನದ
ಹರಳ ಕಣ್ಣಾಗಿಟ್ಟಕೊಂಡ, ಇಟ್ಟಕೊಂಡವನ
ಯೋಳಪಟ್ಟಿ ಹುಲಿ ಆದ, ಆದವನ
ರಾಕ್ಷೇಸಾಗ… ಇಟ್ಟುಕೊಂಡವನ, ಆದವನ……...
ಗೌಡ್ತಿ ತೊಡಿ ಏರಿದ!…

*(ಒಳಕ್ಕೆ ಗೌಡ್ತಿ ಚಿಟ್ಟನೆ ಚೀರಿದ ಸದ್ದು ಜೊತೆಗೆ "ಯಾರ ಯಾರಂದ? ಕಳ್ಳ ಯಾವನಲ್ಲೆ?" ಎಂದು ಬಾಳಗೊಂಡ ಕೂಗಿದ ಸದ್ದು. ತುಸು ಹೊತ್ತು ನೀರವ..)*

ಸೂತ್ರಧಾರ : ಮುದಿಗೌಡ ಬಿಳೀ ಕುದರಿ ಏರಿ ಓಡಿಸಿದಾ.
ಗೌಡ್ತಿ ಕಾಡಗಿ ಜ್ವಾಳಧಾಂಗ ಮೋತಿ ಮಾಡಿ,
ಕೆಂಪ ಕುದರಿ ಮೈ ತುಂಬ ಕೈಯಾಡಿಸಲಿಕ್ಹತ್ತಿದಳು!
ಕುದರೀ ಲದ್ದಿ ಮೈತುಂಬ ಹಚ್ಚಿಕೊಂಡಳು!
ಆಹಾ! ಏನ ಚೆಲಿವಿ ಗೌಡ್ತಿ! ಗುಡ್ಡದೆಲ್ಲವ್ವ
ಗುಡಿ ಬಿಟ್ಟ ಹೊರಗ ಬಂಧಾಂಗ, ಜಾತ್ರಿ ಆಡಿ
ಬಂಡಾರ ಬಳಕೊಂಥಾಂಗ, ತಲೀ ಏನ
ಒಲೀತಾಳ! ನಡ ಏನ ಮಣೀತಾಳ! ಅಷ್ಟ
ದೂರಿದ್ದರೂ ಇದs ಹರಗಿದ ಎರಿ ಹೊಲಧಾಂಗ
ನಾರತಾಳೇನ! ನಮ್ಮವ್ವ ನೋಡಿದವರ
ಕಣ್ಣಾಗ ಹಾಕಿ ಮುಚ್ಚಕೋಬೇಕ! ಅಡಾ!
ಅಲ್ಲೆ ತಿರಗಲಿಕ್ಹತ್ತಿದಳು! ಅರೆ, ಎದ್ಯಾಗ
ಕೈ ಹುಗದ ಕುಣೀಲಿಕ್ಹತ್ತಿದಳು!
ಹಾಡಲಿಕ್ಹತ್ತಿದಳು!….

*(ಎಲ್ಲವ್ವನ ಭಕ್ತರು ರಂಡಿಹುಣ್ಣಿವಿ ದಿನ ಬಾರಿಸುವಂಥ ವಾದ್ಯ ಕೇಳಿಸಿ ಹಾಡಲಾರಮಭಿಸುತ್ತಾಳೆ. ಸೂತ್ರಧಾರ ಮತ್ತು ಮೂರೂ ದೇವತೆಗಳೂ ನಿಧಾನವಾಗಿ ಮಾಯವಾಗುತ್ತಾರೆ. ಗೌಡ್ತಿ ನೆರಳಿನಂತೆ ಆಗೀಗ ನರ್ತನದ ಭಂಗಿಯಲ್ಲಿ ಕಾಣಿಸಿಕೊಳ್ಳುತ್ತಾಳೆ.)*

ಗೌಡ್ತಿ : ನಾ ಕುಣೀಬೇಕ ಮೈ ಮಣೀಬೇಕ ಕಾಲ್ದಣೀಬೇಕ ತಾಯಿ!
ನವಿಲಿನ್ಹಾಂಗ, ಎಳಿ ಮಣಿಕಿನ್ಹಾಂಗ, ತಿರತಿರಗಿಧಾಂಗ ಬಗರಿ!

ತೊಡೀ ತೆರೆದು ತಲಿ ಬಿಚ್ಚಿ ಕೈಯ ಎದಿ ಮಿದಿವಿನಾಗ ಹುಗದು
ಬಗಲ ಬೆವತು ಅಹ ನಾರಬೇಕು ಗಿಜಗಳಿಕಿ ಸಿಂದಿಹಣ್ಣು||
ಕಾದ ತಗಡು ಈ ತೊಗಲಿನ್ಯಾಗ ಹೊತ್ತೇತಿ ಕಾಡ ಬೆಂಕಿ
ಸಂದಿಗೊಂದಿ ಬುಗುಬುಗು ಅಂದು ತಲಿಗೂದಲುರಿಯ ಜ್ವಾಲಿ
ಸುಡಸುಡಽ ಇಂಥ ಈ ಸಪ್ಪ ಬಾಳೆ ನಿಂತೇನ ದೀಪಕಂಬ!
ಬಣ್ಣಬಣ್ಣದಽ ನೆರಳ ತಿರಗತಾವ ಊರ ಕೇರಿ ತುಂಬ.

ಬಾಳಗೊಂಡ : *(ಕೈಯಾಡಿಸುತ್ತ ಬರುತ್ತಾನೆ.)*
ಏನ, ಎಂತ ಎಂದೂ ಗೊತ್ತಾಗಾಣಿಲ್ಲ. ನನ್ನ
ನಾ ಚಿವುಟಿಕೊಂಡರೂ ಯಾರನ್ನೋ ಚಿವುಟಿಧಾಂಗ
ಅನ್ನಸ್ತಽದ. ಯಾವಾಗ ಬೆಳಕ ಹರದ
ನಮ್ಮ ಗುರುತ ನಾವ ಹಿಡೀತೀವೊ!
ಮನಿ ನಮ್ಮದಾದರೂ ಎಷ್ಟ ಹೆದರಿಕಿ
ಬರ್‍ತಿಽದಂತೀನಿ. ಈ ಕಟ್ಟಿ, ಈ ದನಾ
ಒಂದ ಸಲ, ತಪ್ಪಿ ಸಹಿತ ಹಗಲಿ
ನೋಡಲಿಲ್ಲಲ್ಲ ನಾನು. ಈಗೊಂದ ಕನ್ನಡಿ
ಸಿಕ್ಕಿದ್ದೆ ಹೆಂಗ ಕಾಣತಿದ್ದೆನೊ,…..

ಗೌಡ್ತಿ : ಕಣ್ಣ ಕಾಡಿಗೀ ಕೆನ್ನಿಗಿಳಿಧಾಂಗ ಮೂಡತಾವ ನೆನಪ
ಕೌದಿಯೊಳಗ ಹುಡಕ್ಯಾಡಿ ಮೂಸತೇನ ಮತ್ತ ಹಳೀ ನಾತ
ಜೋಡ ನಾಗರಾ ತಿಡೀ ಬೀಳತಾವ ಕನಸಿನ್ಯಾಗ ಬಂದಾ
ಏನಾಡತಾವ ತಳಕ್ಯಾಡತ್ಯಾವ ರೆಂಟೀಯ ಸಾಲ ಹಿಡದಾ.

ಬಾಳಗೊಂಡ : ಅಡ! ಕಾಲಾಗೇನಿದಾ? ಕಾಲಿಗಿ ಥಂಡಿ ಹತ್ತಿ,
ಕಾಲ ಕರಗಿ, ನಡಾ ಕರಗಿ, ಎದಿ, ಮುಖ ಅಳ್ಳಕ
ಕತ್ತಲ್ಯಾಧಾಂಗ, ಮನಿ ತುಂಬ ತೆಪ್ಪ ಹೊತ್ತ
ಹರದಾಡಿಧಾಂಗ-ತೆಪ್ಪದಾಗ ಯಾರೋ ಎದ್ದ-
ಕುಂತರಲ್ಲ ಯಾರವರಾ? ನಾ ಇದನ್ನಽ
ಹುಡಿಕ್ಯಾಡತಿದ್ದೇನೇನ?

ಗೌಡ್ತಿ : ಬೆವರ ಆಗಿ ಹರದಾಡತೇನು ಇಡಿ ಹೊಲಾ ತುಂಬಿಕೊಂಡಾ
ಹಸಿಗೆ ಹಸೀ ಬೆರೆತಾಗ ಅಯ್ ಶಿವನ ಏಳತಾವ ನವಿರಾ
ಬೆಳಿ ಏಳತೈತಿ ತೆನಿಗೊಂದ ಹಕ್ಕಿ ನಗತಾವ ಒಂದ ಸವನಾ
ಕಣ್ಣ ತೆರೆದರೇನೈತಿ ಹಾಳು ಮುದಿರಾತ್ರಿ ಅಯ್ಯ ಶಿವನ!

ಬಾಳಗೊಂಡ : ಹೆಣ್ಣಧ್ವನಿ, ಹಿಂದ ಕೇಳಿದ ಧ್ವನಿ, ಮ್ಯಾಲಿಂದ
ಮ್ಯಾಲ  ಎದ್ಯಾಗ ಕೇಳಿಸೋ ಧ್ವನಿ! ಈ ಧ್ವನಿ
ಹುಟ್ಟಿದ ಎದ್ಯಾಗ ನನ್ನ ಹಳಿ ಬೇರ
ಅಳಗ್ಯಾಡತಾನ, ಯಾರದಿದಾ? ಹಾಲ ಕೊಟ್ಟ
ಹಾರ ಬೇಡಿದ ಹುಡಿಗಿ ಈಕೀನs ಇರಬೇಕೇನ?
*(ಉತ್ಸಾಹಿತನಾಗಿ)*
ಸಿಕ್ಕಲೇ ಮಗನ ಬಾಳಗೊಂಡಾ! ಬಿಳೀಕುದರಿ,
ಜರದ ರುಮಾಲ. ಚಿಗರ ಮೀಸ್ಯಾಗ ಯಾಸಿ ನಗಿ,
ಗಡಿಗಿ ಹಾಲ ಕುಡದ ಹಾರ ಕೊಟ್ಟ ಹೋದಾಂವ
ನೀನs ಅಲ್ಲೆನಲ್ಲೆ?

ಗೌದ್ತಿ : ಕಡೀಬೇಕ ಅಹ ಕಚ್ಚಬೇಕ ಹಿಂಗಪ್ಪಬೇಕೊ ನಾನಾ
ಗಿಣೀ ಹಣ್ಣಿಗೀ ಜೋತ ಬಿದ್ದಾಂಗ ಎಳಿಬೇಕೊ ನಿನ್ನ
ತೆಕ್ಕಿಮುಕ್ಕ್ಯಾಗ ನೆಗ್ಗಬೇಕೊ ಮೀಸಲದ ಮಿಂಡ ಬಾರೊ
ಮಿಂಡಿ ಬಿದರ ನಿಂತೇನೊ ತೆರೆದು ಬಿರುಗಾಳಿಯಾಗಿ ಸೆರೊ

ಬಾಲಗೊಂಡ : ಬಾಳಗೊಂಡ ಬರೋ ದಿನ ಹಾಲಗಡಿಗಿ ಹಿಡಕೊಂಡ
ಬರತಿದ್ದಿ ನೀನs ಹೌದಲ್ಲೊ? ನನಗದು
ಗೊತ್ತಿತ್ತು, -ಒಂದಿಲ್ಲ ಒಂದ ದಿನ ನೀ
ಸಿಕ್ಕs ಸಿಗತಿ, ಬಂದs ಬರತಿ ಅಂತ.
ನೋಡಬಾರದ? ನಿನ್ನ ಹಾಲ ಕುಡದ ಹಾರ
ಕೊಟ್ಟವನ ಹಿಡೀಬೇಕ ಹಿಡೀಬೇಕಂತ ಹಟಗಾಸಿ
ಹುಡಕ್ಯಾಡತೇನು-ಇಷ್ಟ ದಿನ ತಪ್ಪಿಸ್ಯಾಡಿದ.
ಅದಕ್ಕ ನನಗ ನಿನ್ನ ಗರ್ಜ ಇತ್ತು. ನೀ
ಬಂದ ನಿಂತರ ಸಾಕು, ನಿನ್ನ ತೊಡ್ಯಾಗಿನ
ಬೆವರ ಮೂಸಿ ನೋಡಿ ಅಲ್ಲೇ ಮೂಡತಾನಂತ
ಗೊತ್ತಿತ್ತ ನನಗ. ಖರೆ ಆಯ್ತೊ ಇಲ್ಲೊ?
ಸಿಕ್ಕೋ ಇಲ್ಲೊ? ಆ ಸೂತ್ರಧಾರ ಬಂದ
ಈಗ ನನ್ನ ಹೆಸರ ಕೇಳಲಿ, ಜೋಡೆಳಿ
ಉಡದಾರ ಮುಟ್ಟಿಕೊಂಡ ಹೇಳತೇನ;
ಮಗನೇ ನನ್ನ ನಾಮಾಂಕಿತವೇನೆಂದರೆ….

ಗೌದ್ತಿ : ನಿನ್ನ ಬಸವಿ ಬಸವಳಿಯತೇನೋ ಬಾ ಮೀಸೆ ಹೊತ್ತ ದೊರೆಯೇ
ಎಲ್ಲೆಲ್ಲಿ ಹಿಡದರಲ್ಲಲ್ಲಿ ಬೆಣ್ಣಿ ಕರಗುವೆನು ತೋಳಿನೊಳಗೆ

ಕೋಳೀ ಒಣಗೀಯ ಹೋಳಿನಂಥ ತುಟಿಗಲ್ಲ ಕಡಿಯೊ ಗೆಣೆಯಾ
ಘಾಸಿಯಾಗಿ ಕನಸಿನಲಿ 'ಮಾವಾ' ಅನ್ನುವೆನೊ ಮೀಸಲೊಡೆಯ

ಬಾಳಗೊಂಡ : ಛೇ! ನಾ ಗೌಡಲ್ಲ, ಕಾಣ್ಸಾಣಿಲ್ಲೇನ? ಕಣ್ಣಾಗ
ಪಂಜ ಹಚ್ಚಿಕೊಂಡ, ಹೋರಿ ಇಷ್ಟ್ಯಾಕ ಧಡಪಡ
ಮಾಡತದsನೊ? ದೂರ್ಯಾಕ ನಿಂತಿ? ಸನೇಕ
ಬಾರಲ್ಲ, ಅಂಥಾಂಗ ನಿನ್ನ ಹೆಸರ ಕಮಲಿ
ಅಂತ ನಿನ್ನಿ ಮೊನ್ನಿ ಗೊತ್ತಾಯ್ತು, ನಿನ್ನ
ನೋಡಬೇಕಂತ ಎಷ್ಟ ತಡಕಾಡಿದೆ ಅಂತಿ?
ನಾ ಆಗಲೆ ಹೇಳಲಿಲ್ಲ-ನಾ ನೀ ಸೇರೋ
ಯಾವುದೋ ಒಂದ ಮೂಲ್ಯಾಗ ಬಾಳಗೊಂಡ
ಸಿಗತಾನಂತ? ಈಗ ಬೇಕಾದರ ಯಾರ ಹೆಸರಿನ್ಯಾಗ
ಎಷ್ಟೆಷ್ಟ ಅಕ್ಷರ ಅದಾವಂತ ಕೇಳು,-ನಂದ
ನಿಂದಷ್ಟs ಅಲ್ಲ, ಕುಂತ ಮಂದೀ ಖೂನ
ಗುರುತ, ವಿಳಾಸ ಕೇಳು, ಥಟ್ಟನೆ ಉತ್ತರ
ಕೊಡ್ತೀನಿಲ್ಲ, ನೋಡಲ್ಲ. ನೀ ಬೇಕಾದರ ನನ್ನ
ಎದಿ ಸೀಳೀ ಕಡ್ಡೀ ಕೊರದ ನೋಡು-ಮೂಲಿ
ಮೂಲ್ಯಾಗೆಲ್ಲ ನಿನ್ನ ಹೆಸರ! ನೀ ಅಲ್ಲಿ ನಿಂತ
ಹಾಡಿದರ ಇಲ್ಲಿ ನನ್ನ ಒಳಗ ಪಾತಾಳಗಡ
ಇಳಧಾಂಗಾಯ್ತು-ಇದಕೇನಂತಿ?

## ಅಂಕ : ಮೂರು (b)

*(ಗೌಡ್ತಿ ಹಾಡತೊಡಗಿದರೂ ಬಾಳಗೊಂಡ ಹಾಗೇ ಮಾತು ಮುಂದುವರಿಸುವನು.)*

ಗೌಡ್ತಿ : ಹಾಳಬಾಂವ್ಯಾಗ ನೀರ ಸೆಲಿ ಝುಮ್ಮಂತ ಒಡೆದು ಬರಲಿ
ಕೆಲಗ ಹಾಕಿ ನೀ ಕುಟ್ಟೋ ನನ್ನ! ಏ ನಾದೊ ನನ್ನ!
ಲೇ ಮಾಡೊ ಜಿಬ್ಬಿ ಜಿಬ್ಬಿ
ಅಲ್ಲಿತನಕ ತೊಡಿ ಬೆವರುತನಕ ನವಿರೇಳುತನಕ ತೆನಿ ಮೂಡುತನಕ
ನಾ ಕುಣೀಬೇಕ, ಮೈ ಮಣೀಬೇಕ ಕಾಲ್ದಣೀಬೇಕ ತಾಯಿ
ಹುಚ್ಚಿಯಾಂಗ, ಮೈ ತುಂಬಿಧಾಂಗ ಬೆದಿಮಣಿಕಿನ್ಹಾಂಗ ಆಗಿ.

ಬಾಳಗೊಂಡ : ಮನ್ನಿ ಜಕ್ಕಜಲದಿ ರತ್ನ ಕೊಟ್ಟ ಕೂಡಲೆ
ನನಗ ಯಾರ ನೆನಪ ಆಯ್ತಂತಿ? ರತ್ನಂದರ

ಬರಿ ರತ್ನಲ-ಮಳಿ ಸೂತ್ರ!  ಅದಕ್ಕs
ಲಸಿಮ್ಯಾನ ಕರದ ನಿಮ್ಮ ಮನಿಗಿ ಕಳಿಸಿ
ಅದಾಳs ಹೆಂಗ? ಬಾ ಅಂತಾಳೇನಂತ ಕೇಳಿಕೊಂಬರಾಕ
ಕಳಿಸಿದ್ದೆ. ಮಗ ಇನ್ನs ಬರಲಿಲ್ಲ. ಆಯ್ತು
ನೀನs ಬಂದೆಲ್ಲ. ಈ ರತ್ನ…

(ತಲೆ ಹಿಡಿದುಕೊಂಡು ಗಡಬಡಿಸುವನು.)

ರತ್ನ…. ರತ್ನ ಎಲ್ಲಿ? ಅವ್ವಾ?

*(ಒಳಕ್ಕೆ ಓಡುವನು. ಒಳಗಿನಿಂದಲೂ ಮಾತು ಕೇಳಿಸುವದು)*

ರತ್ನ ಎಲ್ಲೀ ಅಂದೆ. ಮನ್ಯಾವರೆಲ್ಲಾ ಎಲ್ಲಿ,
ಸತ್ತರೇನಂತೀನಿ. ಅವ್ವಾss…..

*(ಗೌಡ್ತಿ ತಲೆಗೂದಲು ಜಾಡಿಸುತ್ತ ಬರುವಳು. ಬಾಳಗೊಂಡ ಅವಳೆದುರು ಬಂದು "ಅವ್ವಾ, ನನ್ನ ರತ್ನ ಎಲ್ಲಿ?" ಎಂದು ಕೇಳಿದಾಗ ಗೌಡ್ತಿ ಆತನನ್ನೇ ನೋಡುತ್ತಾ ಸುಮ್ಮನೆ ನಿಂತುಕೊಳ್ಳುವಳು.*
*'ಮುದಿಗೌಡ ಎಲ್ಲಿ?' ಎಂದು ಕೇಳಿ ಉತ್ತರಕ್ಕಾಗಿ ಕಾಯದೆ ಅವಸರದಿಂದ ಓಡಿಹೋಗುತ್ತಾನೆ. ಗೌಡ್ತಿ ನಿಧಾನವಾಗಿ ಮಾಯವಾಗುತ್ತಾಳೆ. ಅಷ್ಟೇ ನಿಧಾನವಾಗಿ ಸೂತ್ರಧಾರ ಕಾಣಿಸಿಕೊಂಡು ಮಾತಾನಡುವನು. ಅವನ ಮಾತು ಮುಗಿಯುತ್ತಿರುವಂತೆಯೇ ಮೂರು ದೇವತೆಗಳು ಮೂಡುತ್ತಾರೆ.)*

ಸೂತ್ರಧಾರ : ಬಾಳಗೊಂಡ ಅವಸರದಿಂದ ಬಂಗಾರ ಕುದರಿ
ಬಿಚ್ಚಿದ… ತಡಿ ಹಾಕಿ ಏರಿದ.. ಲಗಾಮ
ಜಗ್ಗಿ ಓಡಿಸಿದ… ತಾಯೀ ಊರ ಗತಿ
ಏನು? ನನ್ನ ಗತಿಯೇನು? ಇನ್ನ ಮ್ಯಾಲ ನಿಮಗ
ನಿವsದಿ ಯಾರ ತರತಾರ? ಜಾತ್ರಿ ಯಾರ
ಮಾಡತಾರ? ಗೌಡ ಎಲ್ಲಿ ಓಡಿದ?
ಬಾಳಗೊಂಡ ಎಲ್ಲಿ ಓಡಿದ?

೨ನೆಯವವಳು : ಬಾಳಾ, ಮುಂದಿಂದ ನೆನದರ ಇನ್ನೂ ಭಯ
ಬರತೈತಿ, ಯಾಕ ನೋಡೇನಂತಿ?

ಸೂತ್ರಧಾರ : ಹಾಂಗಾದರ ನಮ್ಮ ನಶೀಬದಾಗ ಒಂದ
ಗೊತ್ತ ಗುರಿ ಇಲ್ಲs ಏನು?

೨ನೆಯವವಳು : ಅಷ್ಟ ಆತುರ ಇದ್ದರ ಬೆನ್ನಹತ್ತಿ ಬಾ

*(ರಂಗವನ್ನು ಒಂದು ಸುತ್ತ ಪ್ರದಕ್ಷಿಣೆ ಹಾಕಿ ಬರುವಳು. ಹೊಲೇರ ಪಾರಿ ಹೊರಸಿನ ಮೇಲೆ ಎಲಿ ಅಡಿಕೆ ಜಿಗಿಯುತ್ತ ಕುಳಿತಿರುವಳು.)*

ಸೂತ್ರಧಾರ : ಅಡ! ಹೊಲಿಗೇರಿಗ್ಯಾಕ ಬಂದಿವಿ? ಇಷ್ಟ
ಯಾಳೆ ಆದರೂ ಯಾರೋ ಹೊರಸಿನ ಮ್ಯಾಲ
ಹಾಂಗs ಕೂತಾರ, ಯಾಕಿದ್ದೀತು? ನಾ ಈಕಿ
ಜೋಡಿ ಎರಡ ಮಾತ ಮಾತಾಡಲಿ?

*(ಎರಡನೆಯವಳು ಆಡಬಹುದೆಂದು ಸೂಚಿಸುವಳು. ಮೂವರು ಮರೆಯಾಗುವರು.)*
*ಯಾರ ಯಾರವರಾ? ಹೊಲೇರ ಪಾರ್ಯೇನ?*

ಪಾರಿ : ಹಲ್ಲ ಬಿದ್ದ ಸೂಳೇರ ಗುರುತಾ ಯಾರ ಯಾಕ
ಹಿಡಿದಾರಲಾ ಬಿಡು. ನಿಂದಾರ ಏನ ತಪ್ಪ?

ಸೂತ್ರಧಾರ : ದೆವ್ವ ಅಡ್ಡಾಡೊ ಯಾಳೇದಾಗ ಹಿಂಗ ಒಂದs
ಕುಂತರ ಥಟ್ಟನ ಗುರುತ ಹೆಂಗ
ಸಿಗಬೇಕು? ಅದರಾಗ ಕೆಟ್ಟ ದೆವ್ವಿನಂಥಾಕಿ ನೀ.
ಉಳದವರದೆಲ್ಲಾ ಒಂದ ಹರಿಕಿ ಆದರ ನಿಂದs
ಒಂದು. ಹೇಳ ಇಂಥಾ ಕತ್ತಲ್ಯಾಗ ಇಲ್ಯಾಕ
ಕೂತಿ, ಏನ ಕತಿ? ಎಲಿ ತಿಂದ ರಂಗಲಾಲ
ಆಗೇದಿ ಅಂದರೇನು? ಕಾಡಿಗಿ ಹಚ್ಚೇದಿ
ಅಂದರೇನು? ಮುದಿಕ್ಯಾದರೂ ಇನ್ನs ನಿನ್ನ
ಹುಳಿ ಮುರೀಲಿಲ್ಲ ಬಿಡು.

ಪಾರಿ : ಪರಬೂ ನಾ ಇಂದ ಹೆಂಗ ಕಾಣತೇನೊ?

ಸೂತ್ರಧಾರ :  ಇದ್ದಷ್ಟರಾಗ ಚಂದ ಕಾಣತಿ ಅನ್ನಲಾ.

ಪಾರಿ : ಏ ಹೇಳಲಾ.

ಸೂತ್ರಧಾರ : ಮತ್ತ ಹೇಳ್ನೆಲ್ಲ-

ಪಾರಿ : ನನಗಿಂದ ಭಾಳ ಖುಶಿಮೋಜಿ ಆಗೇತ್ಯs

ಸೂತ್ರಧಾರ : ಹಿಂದಿಲ್ಲ, ಮುಂದಿಲ್ಲ ಖುಶಿಮೋಜಿ ಅಂದರ
ನನಗೇನ ತಿಳೀಬೇಕು? ಸವಿಸ್ತಾರ ಕಥನಾ
ಮಾಡಿ ಹೇಳಿದರ ತಿಳಿದೀತು.

ಪಾರಿ : ಹೊಯ್ಂದs; ನೀ ಏನ ಎಡ್ನೇದಾಂವೇನ ಬಿಡ.
ನನ್ನ ಮಗಳ ಕಮಲೀನ ನೋಡಿಯೇನಲಾ?

ಸೂತ್ರಧಾರ : ನೋಡದೇನು? ಮನ್ನಿಮನ್ನಿ ಹಾಲಗಡಿಗಿ
ಹಿಡಕೊಂಡ ಕರ್ರೆವ್ವಗ ಎರ್ಯಾಕ ಹೊರಟಿದ್ದಳು....

ಪಾರಿ : ಹೂಂ ಹೊಯ್ಂದs ಬಾಳಗೊಂಡ ಬರಲಿಲ್ಲ?
ಅದs ದಿನಾ ನನ್ನ ಮಗಳಿಗಿ ನಾನs ಅಕ್ಕಡಿ
ಹಾಲ ತುಂಬಿದ ಗಡಿಗಿ ಕೊಟ್ಟ 'ಕರ್ರೆವ್ವಗ
ಎರದ ಬಾ ಮಗಳs' ಅಂದಿನು. 'ಹೂಂ ಎವ್ವಾ'
ಅಂದಳು. ಹಾದ್ಯಾಗ ಅದ್ಯಾವದೋ ಬಿಳೀ
ಕುದರಿ ಸರದಾರಂತ, ಹೊತ್ತ ಮುಣಗಿದ
ಯಾಳೇದಾಗ ಬಂದ, ಗಡಿಗಿ ಹಾಲೆಲ್ಲ ಕುಡದ
ಗುರತಿಗಿ ಮುತ್ತಿನ ಹಾರ ಕೊಟ್ಟ ಹೋದನಂತ
ಹೇಳಿ, ಹಾಡಿಕೋತ ಹ್ವಾದ ಮಗಳು ಅಳಕೋತ
ಬಂದ ಮನಿಹೊಕ್ಕಳಪಾ! ಅಂದ ನನಗೇನಾ
ಮಗಳ ತುಟಿ ಬಿಚ್ಚಿ ಎವ್ವಾ ಅನ್ನಲಿಲ್ಲ.
ಒಂದ ಯಾಕಿಲ್ಲ. ಒಂದ ಎಂತಿಲ್ಲ. ಮುತ್ತಿನ
ಸರಾ ಎದಿಗಿ ಒತ್ತಿಕೊಂಡ ಒಂದಳತಿ
ಅತ್ತs ಅಳತಿತ್ತು! ಮಗಳ ಮೈನೆರೆದಾಗ
ಮಂದೀ ಕಣ್ಣ ಹತ್ತಿ ಮೂರ ದಿನಾ ಏರಿದ
ಉರಿ ಇಳಿದಿರಲಿಲ್ಲ. ಖರೆ, ಇಷ್ಟ ಮೆತ್ತಗಾಗಿರಲಿಲ್ಲ.
ಮುಂಚಿನ ಅದರ ಸಡಗರೇನs ನಮ್ಮಪ್ಪಾ!
ಎವ್ಎವ್ ಎವ್ವಂತ್ಹೇಳಿ ಗಿಣೀಹಾಂಗ
ಒಳಗೊಮ್ಮಿ ಹೊರಗೊಮ್ಮಿ ಕರದs ಕರೀತಿತ್ತು!
ಆಜು ಬಾಜೂ ಸೂಳೇರೆಲ್ಲ ನೆಲಾ ಸವರಿ
ಲಟಿಕಿ ಮುರೀಬೇಕ! ಇದs ಮುದಿಗೌಡ
ಮನಿಗಿ ಬಂದರ ಕಮಲಿ ಮಲಗಿದ್ದರೂ
ಲಟಲಟ ಮುದ್ದು ಕೊಡತಿದ್ದ! ಆಡೂ
ಮಗಳು ಆಟ ಮರತರ ಏನಾಗಬ್ಯಾಡಲಾ?

ಸೂತ್ರಧಾರ : ಆಗೋದ ಆಗೋದ s ಮತ್ತ.

ಪಾರಿ : ನನಗೂ ಒಂದ ಹೊಯ್ಕ ಆತನ್ನಲಾ. ಗುಡದವ್ವ
ಏನ ನಿನ್ನ ಆಟ? ನಿನ್ನ ಹರಿಕಿ ಮುಟ್ಟಲಿಲ್ಲ?

ಕಾಲಾಗ ಸಗತಿ ಇಲ್ಲದ್ದಕ್ಕ ಕುಣಿಯೋದ
ಬಿಟ್ಟರ, ಸಿಟ್ಟಾದೇನ ಹಡೆದವ್ವಾ? ನಾಳಿನ
ಮುತ್ತೋದಿ ಹುಣಿವಿಗಿ ಕಮಲೀನ ಕರಕೊಂಡ
ಬರತೇನಂತ ಹರಿಕಿ ಹೊತ್ತಿನಪಾ. ಮೂರ
ಹಗಲಾತ, ಮೂರ ರಾತ್ರಿ ಆತ, ಕಡೀಕಂದರ
ಬಾಯಿ ಬಿಟ್ಟಳು! ಆದ ಹಕೀಕತ್ತೆಲ್ಲಾ
ಆಕಿ ಬಾಯಲೆ ಕೇಳಿನು. ಅಂದs ರಾತ್ರಿ
ಕನಸಿನ್ಯಾಗ ಒಂದ ಎಳಕ ಹುಡುಗ-ಕೆಂಪ
ಈಟೀಟ ಜಡಿ, ಜಡ್ಯಾಗೊಂದ ಎಳಿ
ಸೂರ್ಯಾನಿಟಗೊಂಡ, ಮಲ್ಲಿಗಿ ಹೂವಿನ್ಹಾಂಗ
ನಕ್ಕೋತ ಬಂದ ನೋಡs!

ಸೂತ್ರಧಾರ : ಅಡಡಡ!

ಪಾರಿ : ಹೂಂನs! ಇದರಾಗ ಒಂದs ವಾಕ್ಕೇವ ತಪ್ಪಿದ್ದರ
ಗುಡದವ್ವ ನೋಡಿಕೊಳ್ಳಲಿ. ಬಂದs! ಸ್ವಾಮಾರ
ರಾತ್ರಿ ಬಂದ ಹಾರ ತೋರಿಸಿ ನಿನ್ನ ಮಗಳ
ಕೂಕುಮದ ಮ್ಯಾಲ ಬಂಡಾರ ತೂರತೇನಂತ
ಹೇಳಿ ಗಪ್ಪಗಾರ ಆದಪಾ! ಎವ್ವಾs
ಗುಡ್ಡದೆಲ್ಲವ್ವ, ಕರಿಮಾರಿ ಕರ್ರೆವ್ವ
ತೆಗ್ಗಿನ ಲಗಮವ್ವ, ಗುಡ್ಡದ ನಿರವಾನಿ-
ನೋಡಪಾ, ಎಚ್ಚರಾಗಿ, ಗಮ್ಮನ ಬೆವತು,
ಮೈ ಮಳ್ಯಾಗಿನ ಮಸಾರಿ ಹಾಂಗ ನಾರತಿತ್ತು!
ಎದ್ದ ಮಗಳ ಮೋತಿ ನೋಡಿತು, ನನ್ನ
ಸವತಿ ಎಲ್ಲಾ ಕಂಡಾವರ್ಹಾಂಗ ಏನೋ
ಬಡಬಡಿಸಿ ನಗತಿತ್ತು! ಎವ್ವಾ ಗುಡ್ಡದ ಮಾಯೀ,
ಈ ಕನಸ ಖರೆನೋ ಸುಳ್ಳೋ ನೋಡೋಣಂತ
ಇಂದ ಸ್ವಾಮಾರ ಕಮಲಿ ಹಣಿಗಿ ಕೂಕುಮ
ಹಚ್ಚಿ ಕುಂತಿನು, ಕುಂತಿನು; ಹಳಬರ
ಲಸಿಮ್ಯಾ ಬಂದ. ಬಾಳಗೊಂಡ ಬರಬೇಕಂತಾನ
ಕರತರಲೇನ ಅನ್ನಾನ್‌ತ್ಲೆ ನನಗೂ ಹೆಂಗೆಂಗೊ
ಆತ ಅನ್ನಲಾ! ಹೀಂಗ ಒಂದ ಹೋಳ
ಎಲಿ ಅಡಿಕಿ ಹಾಕ್ಕೊಂಡ ಕುಂತೀದೇನು,-
ಬಿಳೀಕುದರಿ ಏರಿ ಬಾಳಗೊಂಡ ಬರತಾನಲಾ…

ಸೂತ್ರಧಾರ : ಈಗ ಒಳಗ ಬಾಳಗೊಂಡ ಇದಾನು?

ಪಾರಿ : ಹೂಂ ಯಾಕ?

ಸೂತ್ರಧಾರ : ನೆತ್ತ್ಯಾಗ ರತ್ನ ಇತ್ತು?

ಪಾರಿ : ಹೆಂಗ ಥಳಥಳ ಗುಡದವ್ವನ ಮೂಗಬಟ್ಟಿನ್ಹಾಂಗ
ಹೊಳೀತಿತ್ತು!

ಸೂತ್ರಧಾರ : ಕುದರಿ ಎಂಥಾದಿತ್ತು?

ಪಾರಿ : ಬಿಳೀ ಕುದರಿ, ಅಲ್ಲಿ ಕಾಣ್ತಾಣಿಲ್ಲೇನಲಾ?

ಸೂತ್ರಧಾರ : ದೇವರs ಇದs ಕಣ್ಣಲೆ ಮುದಿಗೌಡ
ಬಿಳೀ ಕುದರಿ ಏರಿದ್ದ ನೋಡಿದೇನು, -ಇದೇನಾತು?
ತಾಯೀ….

*(ಹಿಂದೆ ಆ ದೇವತೆಗಳು ಅಪ್ರತ್ಯಕ್ಷರಾಗಿದ್ದಲ್ಲಿಗೆ ಹೋಗುವನು. ಅದೇ ಹೊತ್ತಿನಲ್ಲಿ ಬಾಳಗೊಂಡ ಪ್ರವೇಶಿಸುವನು.)*

ಬಾಳಗೊಂಡ : ಹೊಲೇರ ಪಾರವ್ವನ ಮನಿ ಇದs ಏನ?

ಪಾರಿ : ಹೊಯ್ಂದಿದs. ಯಾರವರಾ? ಅಯ್ಯs! ಅಯ್ಯs!
ಒಳಗಿದ್ದಾಂವ ಹೊರಗ ಯಾವಾಗ ಬಂದಿ? ಇದೇನ
ಚಂದ ಬಯಲಾಟ ಎಪ್ಪಾ?

*(ಬಾಳಗೊಂಡ ಅವಸರದಲ್ಲಿ ಒಳಗೆ ಪ್ರವೇಶಿಸಬೇಕೆಂದಾಗ ಸೂತ್ರಧಾರ ಓಡಿಬಂದು ತರುಬಿ ಆಶ್ಚರ್ಯಚಕಿತನಾಗುತ್ತಾನೆ.)*

ಸೂತ್ರಧಾರ : ಅಪ್ಪಾ, ಕೈಯಾಗ ಕುಡಗೋಲ ಹಿಡಿಕೊಂಡ,
ಕೆಂಪ ಕುದರಿ ಏರಿ ಬಂದಂಥಾ ಧೀರಾ
ನೀನು ದಾರು? ನಿನ್ನ ನಾಮಾಂಕಿತವೇನು?

ಬಾಳಗೊಂಡ : ಹೊತ್ತಿಲ್ಲ, ಗೊತ್ತಿಲ್ಲ ಹೆಸರೇನಂತ, ತಗೀಯಲೇ…

*(ಒಳಗೆ ಕಮಲಿ ಚಿಟ್ಟನೆ ಚೀರುವಳು. ಬಾಳಗೊಂಡ ತುಸು ಹೊತ್ತು ಅಧೀರನಾಗಿ, ಕೊನೆಗೆ ಕುಡಗೋಲು ಹಿಡಿದು ನಿರ್ಧಾರದಿಂದ ಒಳಕ್ಕೆ ಓಡುವನು.*
*'ಹಿಡೀರಿ, ಹಿಡೀರಿ ಆ ಕಳ್ಳನ್ನ! ಏ ಮಗನ ಏs' ಎನ್ನುವ ಅವನ ಧ್ವನಿ ಒಳಗಿನಿಂದ ಕೇಳಿಬರುತ್ತದೆ. ಮುದಿಗೌಡ ಬಗಲಿಲ್ಲ ಅಂಗಿ, ರುಮಾಲು ಹಿಡಿದು ರಂಗದ ಒಂದು ಬದಿಯಿಂದ ಇನ್ನೊಂದು ಬದಿಗೆ ಓಡುವನು. ಬಾಳಗೊಂಡ ಒದರುತ್ತ ಬೆನ್ನು ಹತ್ತುವನು. ಅವರಿಬ್ಬರೂ ದೂರ ಹೋದು*

*ದನ್ನು ಅವನ ಒದರುವಿಕೆಯೇ ಸೂಚಿಸುತ್ತದೆ. ಕಮಲಿ ಹುಚ್ಚಿಯಂತೆ ಚೀರುತ್ತ ಬಂದು ತಾಯನ್ನಪ್ಪುವಳು. ಪಾರಿಯ ಮೈಯಲ್ಲಿ ಎಲ್ಲವ್ವ ತುಂಬಿ ಕಣ್ಣು ಕಿಸಿದು ಭಯಂಕರವಾಗಿ ಕುಣಿಯುತ್ತ ರಂಗದ ಹಿಂಭಾಗಕ್ಕೆ ಹೋಗುವಳು. ಕಮಲಿ ಅಸಹಾಯಕತೆಯಿಂದ ಎಲ್ಲ ಕಡೆಗೆ ನೋಡಿ ನಿರಾಸೆಯಿಂದ ಮೂರ್ಛೆಹೋಗುತ್ತಾಳೆ. ಹಿಂದಿನ ಮೂರೂ ದೇವತೆಗಳೂ ಸೂತ್ರಧಾರನೊಡನೆ ಮುಂಭಾಗದಲ್ಲಿ ಕಾಣಿಸಿಕೊಳ್ಳುತ್ತಾರೆ. ಸೂತ್ರಧಾರ ಕೈಮುಗಿದು-)*

ಸೂತ್ರಧಾರ : ತಾಯೀ, ಮುಷ್ಟಿಗಿ ಒಳಗ ಮುಚ್ಚಿಕೋಬ್ಯಾಡ
ಏನಿದರ ಗೂಢಾರ್ಥ? ಒಡದ ಹೇಳ. ಗೌಡ
ರತ್ನ ತಗೊಂಡದ್ದ ಖರೆ, ಬಿಳೀ ಕುದರಿ
ಏರಿದ್ದ ಖರೆ, ಇನ್ನೊಬ್ಬ ಬಾಳಗೊಂಡ ಯಾರಾ?

೧ನೆಯವವಳು : ಸೂತ್ರಧಾರ. ರತ್ನದ ಹರಳ ತೆಗೆದುಕೊಂಡು
ಮುದಿಗೌಡ ತಾನs ಬಾಳಗೊಂಡ ಆಗಿ
ಕಮಲಿ ಮನಿಗಿ ಬಂದ. ಕಳಕೊಂಡದ್ದ
ಅರಿವಾಗಿ ಬಾಳಗೊಂಡ ಎದ್ದ ಹುಡಿಕ್ಯಾಡೋವಾಗ
ಹಳಬರ ಲಸಿಮ್ಯಾ ಸಿಕ್ಕ, ಅಂವಗ ಹೊಯ್ಕಾಗಿ
'ಪಾರಿ ಮನ್ಯಾಗಿದ್ದಾಂವ ಇಲ್ಲಿ ಹೆಂಗ ಬಂದಿ?'
ಅಂತ ಕೇಳಿದ. ದೆವ್ವಂತ ಲಸಿಮ್ಯಾ ಓಡಿ
ಹೋಗೋವಾಗ ಅವನ್ನ ಹಿಡದ ಪಾರೀ ಮನಿ
ಸಮಾಚಾರ, ಹಾದಿ ಎಲ್ಲಾ ಕೇಳಿ ಇಲ್ಲಿಗಿ ಬಂದ.
ಕಂದಾ ಈಗಲಾದರೂ ನನ್ನ ಗುರುತು ನಿನಗಾಯಿತೇನು?

ಸೂತ್ರಧಾರ : ತಾಯೀ ನೀವು ಲಗಮುವ್ವನವರಂತ ನಮಗೆಲ್ಲ
ತಿಳಿದ ಬಂಧಾಂಗಾತು. ಆದರ ಇಂಥಾ ದೊಡ್ಡಮಂದಿ
ಹಿಂಗ್ಹೆಂಗ ಗುಡೀ ಬಿಟ್ಟ ಯಾಕ ಬಯಲಿಗಿ ಬಿದ್ದಿರಿ?
ತಿಳಿಸುವಂಥವರಾಗಿರಿ.

೧ನೆಯವಳು : ನಿಮ್ಹಾಂಗ ನಾವೂ ಅನಾಥರಾಗಿದೀವೊ ಬಾಳಾ,
ಯಾವುದಾದರೂ ಮೂಲಿಯೊಳಗಿನ ಸರದಾರ ಬಂದು
ಕಾಪಾಡ್ಯಾನೇನಂತ ನೋಡುತಿದ್ದೇವ ನೋಡು.
ಸೂತ್ರಧಾರ, ಅಲ್ಲಿ ಯಾಕೊ ಬೆಂಕೀ ಸುತ್ತ
ಮಂದಿ ಕುಣೀತಾರ ಯಾಕಿದ್ದೀತು? ಮೂರ ಗುಂಪಿ
ಏನವು? ಯಾಕ ಹಾಡತಾರ?

ಸೂತ್ರಧಾರ : ಅದ? ಊರಾಗಿನ ಮೂರ ಮಂದಿ ಮುತ್ತೈದೇರ
ಸೇರಿ ಕರಿ ಆಕಳ ಸೆಗಣಿ ತಂದು, ಪಾರಂಬಿ

ಕರ್ರೆವ್ವನ ಮುಂದ ಮೂರ ಕುಳ್ಳ ಬಡದ್ದಾರ.
ಮೂರ ಹಗಲಿ ಮೂರ ರಾತ್ರೀ ಒಳಗ ಆ
ಕುಳ್ಳಿನಾಗ ಹುಳಾ ಬಿದ್ದರ, ಮಳಿ ಬರತೈತಂತ
ನೇಮ ಐತಿ. ಇಂದಮಾಸಿ, ಬೆಳಿಗ್ಗಿ
ಅವಧಿ ಮುಗದು ಪಾರೀ ಕೈಯಿಂದ
ಪೂಜಿ ಮಾಡಿಸಿ ಕೆದರಿ ನೋಡತೇವು.
ಊರ ಮಂದೆಲ್ಲ ಅದಕ್ಕs ಅಲ್ಲಿ ಸೇರ್ಯಾರ.
ಆಯ್ತು ಇನ್ನೇನ ಬೆಳ್ಳಿಚಿಕ್ಕಿ ಮೂಡೋ ಹೊತ್ತ
ಬಂತು, ನಾನೂ ಅಲ್ಲಿಗೇ ಹೋಗಿ ನಮ್ಮ
ನಶೀಬ ನೋಡತೇನು. ಹುಳಾ ಬೀಳದಿದ್ದರ
ಗುಳೇಕಟ್ಟಿಕೊಂಡ ಬ್ಯಾರೇ ಕಡೆ ಹೋಗತೇವು.

ಮೂವರು : ಹಾಂಗಿದ್ದರ ಸೂತ್ರಧಾರ ನಾವು ಬರುವಂಥವರಾಗುತ್ತೇವೆ.

ಸೂತ್ರಧಾರ : *(ನಮಿಸಿ)* ಆಗಲಿ ತಾಯಂದಿರಾ ಬರುವಂಥವರಾಗಿರಿ

*(ಹೋಗುವರು. ಸೂತ್ರಧಾರನೂ ಹೋಗುವನು. ದೂರದಿಂದ 'ಹೊಯ್ಯೋ ಹೊಯ್ಯೋ ಮಳೆರಾಯಾ' ಎಂಬ ಗೀತ ಅಸ್ಪಷ್ಟವಾಗಿ ಕೇಳಿಬರುತ್ತದೆ. ಕುಣಿಯುತ್ತಿದ್ದ ಪಾರಿ ನಿಲ್ಲಿಸಿ 'ನಿನ್ನ ತಾಯೀ ಗುಳದಾಳಿ ಕಾಪಾಡೊ ರಾಮಾ' ಎಂದು ಚೀರುತ್ತಿರುವಂತೆ ತೆರೆ.)*

## ಅಂಕ : ನಾಲ್ಕು

ಸೂತ್ರಧಾರ ಮತ್ತು ಜನರು:

ಹೊಯ್ಯೊ ಹೊಯ್ಯೊ ಮಳೆರಾಯಾ
ಹೊಯ್ಯೊ ಹೊಯ್ಯೋರೇ ||ಪ||

ಈಗ ಬರತೇನಂತ ಹೇಳಿ ಹೋದವನೆಲ್ಲಿ
ನೀ ಎಲ್ಲಿ ನಿನ್ನ ಹಾದೆಲ್ಲಿ |
ನೆಲ ಬಿರಿತು ಪಾತಾಳ ಬಿಸಿಯುಸಿರ ಹಾಕೀತು
ಹಸಿರೆಂಬೊ ಶಬುದ ಮರೆಯಾಗಿ |
ಮರುಗುವ ಮಣ್ಣೀನ ಮೈಯಾನ ಹಸಿ ಅರಿ
ತೊಡಿಯ ಬೆಂಕಿಯ ಮರೆತೆ ಮಳೆರಾಯಾ ||
ಸುರಿಯೊ | ಪಾತಾಳ ತುಳುಕಲಿ ಮಳೆರಾಯಾ ||೧||

ಕೆರೆ ಬಾವಿ ತಳ ಒಣಗಿ ಬರಿ ಮೂರ ಹನಿ ನೀರು
ಒಂಟಿ ತಾರಿಯ ನೆರಳು ಮಾಡ್ಯಾವ |
ಹೆಚ್ಚೀನ ಹೊಳಿಗೋ||ಳ ಬರಿ ಬಚ್ಚಲಾದಾವ
ಮರಿಮೀನು ಹೊಟ್ಟೀಯ ಹೊಸದಾವ |
ಮೈ ತೊಗಲ ಕಪ್ಪಾನ ಕಂಬಳಿ ಮಾಡೇವ
ಗುರಚೀಯ ತಿರಿಗೇವ ಮಳೆರಾಯಾ
ಸುರಿಯೊ| ಪಾತಾಳ ತುಳಕಲಿ ಮಳೆರಾಯಾ ||೨||

*(ಹಾಡುತ್ತ ಕುಣಿದು ಮುಗಿದಾದನಂತರ ಹೊತ್ತಿಸಿದ ಬೆಂಕಿಯ ಸುತ್ತ ಕೆಲವರು ಕಾಸಿಕೊಳ್ಳುತ್ತ ಕೆಲವರು ಚಿಲುಮೆ, ಚುಟ್ಟಾ ಸೇದುತ್ತ ಮನಸ್ಸಿಗೆ ಬಂದಂತೆ ಕುಳಿತುಕೊಳ್ಳುವರು. ಮೊದಮೊದಲು, ಮಾತಾಡುವವರು ಇನ್ನೊಬ್ಬರು ತಮ್ಮ ಮಾತು ಕೇಳುತ್ತಿದ್ದಾರೆಂಬುದರ ಅರಿವಿಲ್ಲದೇ ಆಡುವರು. ಉಳಿದವರೂ ನಿಷ್ಕಾಳಜಿಯಿಂದ ಇರುತ್ತಾರೆ. ಮುಂದೆ, ಇನ್ನೊಬ್ಬರು ಕೇಳುತ್ತಿದ್ದಾರೆ ಎಂದು ಗೊತ್ತಾದಾಗ ವಿನಾಕಾರಣ ಮೈಪರಚಿಕೊಳ್ಳುತ್ತಾರೆ.)*

ಗುರ್ಯಾ : ಇನ್ನೂ ಬೆಳಕ ಹರೀಲಿಲ್ಲ?

ಇರಿಪ್ಯಾ : ಕೋಳಿ ಕೂಗೇತಿ ಹೌಂದಲ್ಲ?

ಗುರ್ಯಾ : ಕೋಳಿ ಕೂಗಿದರೂ ಬೆಳಕ ಹರೀಲಿಲ್ಲ

ಯಮನ್ಯಾ : ಬೆಳ್ಳಿಚಿಕ್ಕಿ ಮೂಡೇತಿಲ್ಲ?

ಗುರ್ಯಾ : ಬೆಳಕ ಹರ್ಯಾಕ ಏನೇನ ಬೇಕದೆಲ್ಲಾ
ಆಗೇತಪಾ, ಆಕಳಿಸಿದಿವಿ, ಕಣ್ಣ ತಿಕ್ಕೊಂಡಿವಿ,
ಮೈ ಮುರದಿವಿ…

ಎಲ್ಲ್ಯಾ : ಬೆಳಕಾಗೂ ಕಾಲಕ್ಕ ಆಗಲಿ ಬಿಡ್ರಪಾ,
ಅಷ್ಟೇನ ಅವಸರ? ಮುಂದೇನೇನ ಹೋನಾರ
ಕಾದsತ್ಯೋ!

ಗುರ್ಯಾ : ಅಲ್ಲೊ, ಬರಬೇಕಾದವರೂ ಬರೋ ಕಾಲಕ್ಕ
ಬರಬಾರದಂದರ…?

ಇರಿಪ್ಯಾ : ಈ ಗೊತ್ತ ಮುಟ್ಟಾಕಂತ ಹೊಂಟವರು ತ್ವಾಡೆ
ಮಂದಿ ಹೊಲಗೇರಿಗಿ, ಇನ್ನ ತ್ವಾಡೆ ಮಂದಿ
ಸುಡಗಾಡಕ, ಗೌಡ್ರ ಮನೀಗೆ ಹ್ವಾದರಂತ
ಹೇಳಲಿಲ್ಲs ಅಂವ? ನನಗ ಗೊತ್ತಿತ್ತಪಾ,-

ಈ ಹಾದಿ ಯಾವ ಗೊತ್ತಿಗಿ ಮುಟ್ಟಸಾಣಿಲ್ಲ,
ಭಾಳಾದರ ಸುಡಗಾಡಕ ಒಯ್ಯತೇತಿ, ಅಂತ.
ನೋಡಲಿಲ್ಲs ಮನ್ನಿ? ಹಾಡಾಹಗಲಿ ಅಡೀಗಿ
ಸೆಗಣೀ ಒಗದ ಬರಾಕ ಹ್ವಾದ ಹುಡಿಗಿ
ಸುಡಗಾಡಗಟ್ಟಿಗಿ ಹೋಗಿದ್ದಳಂತ!

ಯಮನ್ಯಾ : ಎಲ್ಲೆಲ್ಲಿ ದೆವ್ವೆಲ್ಲಾ ಅಲ್ಲೆ ಬಂದ ಸೇರತಾವೊ ಎಪ್ಪ!
ಮನ್ನಿ ಮದ್ದಿನದಾಗ ಥೇಟ ಮುದಿಗೌಡನ್ಹಾಂಗs
ಆಗಿ, ನನ್ನ ಹೇಂತೀನ್ನ ಮೂರಬರೆ ಕೈಮಾಡಿ
ಕರೀತಂತ, ಏನ ಮಾಡತಿ| ಏನೊ
ಗಟ್ಟಿವಾನಿ, ರಾಮಗೊಂಡ ಅಂತ ಕೂಗಿದರ
ಗಪ್ಪಗಾರ! ಅದs ಸಿಟ್ಟ ನಮ್ಮ ಗಬ್ಬದೆಮ್ಮಿ
ಮ್ಯಾಲ ಹಾಕಿತು ಮಗಂದು! ಇದs
ಮುದಿಗೌಡ 'ರೂಪಾಯಿ ತೀನಸೆ, ಕರಿ ಕಂಬಳಿ
ಗದ್ದಿಗಿ ಮ್ಯಾಲ ಎಣಿಸಿ ಕೊಡತೇನ ಮಗನs
ಈ ಎಮ್ಮಿ ನನಗ ಕೊಡ' ಅಂದಿದ್ದ.
ಮುಂದಿನ ಹೋನಾರ ಯಾರಿಗ್ಗೊತ್ತಾ? ಮೇಯಾಕ
ಹ್ವಾದ ಎಮ್ಮಿ ಮನಿಗಿ ಬರಲಿಲ್ಲ

ಗುರ್ಯಾ : ಅವು ಬಿದ್ದಾವಂತಿ?

ಎಲ್ಲ್ಯಾ : ಮಾತಾಡಾಕ ನಿನಗ ಮತ್ತೊಂದ ಮಾತs
ಇಲ್ಲೇನಪಾ?

ಗುರ್ಯಾ : ಅಂಥಾಂಗ ಮನ್ನಿ ರಾತ್ರಿ ಗೋಕಾಂವಿ ನಾಡಿನ್ಯಾಗ
ರಗತದ ಮಳಿ ಬಿತ್ತಂತೊ. ಯಾವುದೊ ಊರ
ತಳವಾರ ರಾತ್ರಿ ಎದ್ದ ನೋಡಿದಂತs-
ಮಿಂಚಿನ್ಯಾಗ ಬರೀ ಕೆಂಡs ಬೀಳತಿದ್ದುವಂತ!
ಅಂಜಿ ಕಣ್ಣ ಕಿಸದಾಂವ ಮತ್ತು ಮುಚ್ಚಲಿಲ್ಲಂತ!

ಇರಿಪ್ಯಾ : ಒಟ್ಟ ಹುಟ್ಟಿದ್ದs ದೊಡ್ಡ ತಪ್ಪೇನಪಾ.

ಯಮನ್ಯಾ : ಏ ನನಗೂ ಮೊದಲ ಬಲೆ ಸಿಟ್ಟ ಬರತಿತ್ತೇನಪಾ.
ಸಿಟ್ಟ ಬಂದಾಗೊಮ್ಮೆ ಕಾಲ ಕೆದರಿತಿದ್ನು,
ದೆದರಿದಾಗೊಮ್ಮಿ ತಗ್ಗ ಬಿದ್ದು, ಬಿದ್ದ ತಗ್ಗ

ಗೋರಿ ಹಾಂಗ ಕಾಣತಿತ್ತು. ಅದಕ್ಕs ಈಗ
ನನ್ನ ಹೇಂತೀ ಮ್ಯಾಲ ಸೈತ ಸಿಟ್ಟಿಗೇಳೋದಿಲ್ಲ ನಾ.

ಗುರ್ಯಾ : ಸಿಟ್ಟಿಗೇಳದಿದ್ದರ ಅವು ಬಿದ್ದಾವಂತಿ?

ಎಲ್ಲ್ಯಾ : ಏ ಅಲ್ಲೊ ದಾಸ ಅಂದರ ಮತ್ತ ಅದನs
ಹಾಡತಾನಲ್ಲೊ?

ಗುರ್ಯಾ : ಖರೆ, ಆ ಪರಿಸ್ಯಾನ ಅಂವs ಕೊಲ್ಲಿಸಿದನಂತಲ್ಲೊ.

ಇರಿಪ್ಯಾ : ಯಾಂವ ಯಾಂವ? ಆ ಮುದುವನ??

ಎಲ್ಲ್ಯಾ : ಆ ಆ ಅರೆದವನ್ಹಾಂಗ ಆಡತಾನ್ನೋಡೋ.

ಇರಿಪ್ಯಾ : ನನಗ ಗೊತ್ತೈತಿ ಖರೆ. ಎಷ್ಟ ಬರೆ ಕೇಳಿದರೂ
ಮತ್ತ ಕೇಳೋಹಾಂಗs ಆಗತೈತಿ. ಕೇಳಿದಾಗೊಮ್ಮಿ
ನಾ ಸತ್ತ್ಹಾಂಗs ಆಗತೈತಿ, ಅಂಥಾಂಗಂವ
ಹೆಂಗ ಸತ್ತ?

ಗುರ್ಯಾ : ಪರಿಸ್ಯಾ ಮುದಿಗೌಡನ ಹಂತ್ಯಾಕ ಹೋಗಿ
'ಆಕಳಾ ಹಾರಸಾಕ ಹೋರಿ ಬಿಡ್ರಿ ಗೌಡ್ರ' ಅಂದ.
ಮುದಿಗೌಡ ಹೋರಿ ಬಿಟ್ಟ ಯಾಡ್ರೂಪಾಯಿ
ಕೇಳಿದ. ಫರಿಸ್ಯಾ ಮಗಾ 'ನಾ ಪಟ್ಟದಲ್ಲಿ
ಕೊಡಾಣೆಲ್ಲಂ'ತ ಹಾರ್ಯಾಡಿದ.

ಇರಿಪ್ಯಾ : ಆ ಪರಿಸ್ಯಾಂದ ತಪ್ಪಲ್ಲೇನ ಮತ್ತ?

ಗುರ್ಯಾ : ಏ ಅಷ್ಟ ಲಗು ಅಳದ ಸುರೀಬ್ಯಾಡೊ.
ಹೋರಿ ಬರೋಬರಿ ಹಾರಿದರ ಯಾಡ್ರೂಪಾಯಿ
ಕೊಡಬೇಕ ಖರೆ, ಹಾಂಗs ಮೂಸಿ ನೋಡಿ
ಗದ್ದಾ ಊರಿದರ?

ಇರಿಪ್ಯಾ : ಅದೂ ಖರೇನs. ನಾವಂದರ ಅವನ
ಹೊಲದಾಗಿನ ಪುಂಡಿಪಲ್ಲೆ ಇದ್ಹಾಂಗೇನಪಾ.
ಬೇಕಾದರ ಇಡತಾನು, ಬ್ಯಾಡಾದರ ಚೆಂಡಿ
ಚಿವುಟತಾನು.

ಗುರ್ಯಾ : ಮಾರಾಯ ಪರಿಸ್ಯಾ ಸಾಯೂತ್ಲೆ ನಾ ಇನ್ನೊಮ್ಮೆ
ಸತ್ಹಾಂಗಾತ! ಊರಾಗ ಇಷ್ಟ ಪಾಪ ಇದ್ದರ
ಬೀಳೋವು ಬಿದ್ದಾವಂತಿ?

ಎಲ್ಯಾ : ಹೇಳಬ್ಯಾಡೊ ಎಪ್ಪಾ, ನನಗದು ನೆನಪಾದರ
ಸಾಕು ಯಾರೋ ನನ್ನ ಹುರಿಮಾಡಿ
ಹೊಸಧಾಂಗ ಆಗತೈತಿ.

ಯಮನ್ಯಾ : ನನಗರೆ ನಾಯಿ ಮುಂದಿನ ಮಾಂಸಧಾಂಗ,
ಅದರ ಜೊಲ್ಲಲೆ ನನ್ನ ಮೈ ಒದ್ದಿ
ಆಧಾಂಗ ಆಗತೈತಿ.

ಎಲ್ಯಾ : ಅದಕs ನನ್ನ ಕನಸಿನಾಗ ನಂದಿಕಂಬ
ಮುರಧಾಂಗಾತ

ಯಮನ್ಯಾ : ಮತ್ತ ನನ್ನ ಕನಸಿನಾಗ? ಅದನsಟ
ಹೇಳತೇನ ಕೇಳೋ ಎಪ್ಪ! ಒಬ್ಬ
ಮುದುಕ ಆಕಾಸ ಹಿಡಿದ ಹಿಂಗ ಝಾಡಿಸಿದರ
ತಾರಿಕ್ಕಿ ಬುಳುಬುಳು ಉದರಿಧಾಂಗಾತ.

ಇರಿಪ್ಯಾ : ಹಿಂಗ ಉದರಿ ಬಿದ್ದ ತಾರಕ್ಕಿ ಅವs
ಆಗಿ ಬಿದ್ದರ?...

ಗುರ್ಯಾ : ನಂದಿಕಂಬ ಬ್ಯಾರಿ ಮುರದೈತೆಲ್ಲೊ, ಅದಕೇನರೆ
ಆಧಾರ ಬೇಕಲಾ,-

ಇರಿಪ್ಯಾ : ಆ ಮುದೋಡ್ಯಾ ಗೊಟ್ಟಕ್ಕಂತಾನೊ ಏನೊ.

ಗುರ್ಯಾ : ಹಿಡದ ಝಾಂಡಸಾಂವ ಹೆಂಗ
ಗೊಟಕ್ಕಂತಾನೋ?

ಇರಿಪ್ಯಾ : ಆಕಾಸ ಹಿಡದ ಝಾಡಿಸಿಕ್ಯಾರ ಗೊಟಕ್ಕಂದರ?

ಯಮನ್ಯಾ : ಹಿಂತಾವೆಲ್ಲಾ ಹೊಲೇರ ಪಾರಿಗ್ಯನs ಗೊತ್ತೇನಪಾ.
ಪಾರೀನ ಕರತರಾಕ ಇನ್ನೂ ಯಾರೂ

ಹೊಗಲಿಲ್ಲೇನೊ? ಹೋಗಲೇ ಸೀಪ್ಯಾ, ಆಕಿಗಿ
ಎಚ್ಚರಾಗಿ ಪೂಜಿಗೀಜಿ ಮಾಡಿಕೊಬೇಕ ಹೋಗೊ.

*(ಅವನು ಎದ್ದು ಹಾಗೆ ಹೆದರಿ ನಿಲ್ಲುವನು)*

ದೊಡ್ಡ ದೊಡ್ಡ ಮಾತ ಮಾತಾಡತಿ ಹೋಗಾಕs
ಗಂಡಸ. ಅಂಜಿಕಿ ಬಂದರ ಹಾಡಿಕೋತ ಹೋಗು.

*(ಅವನು ಹೋಗುವನು. ಅವನಿಗೆ ಚೀರಿ ಹೇಳುತ್ತ)*

ಏ, ಆಕಿ ಪೂಜಿ ಮಾಡಿದ ನೀರ ಮಡೀಲೆ
ತರೋವಾಗ ಯಾರೂ ಮುಟ್ಟಿ ಮೈಲಿಗಿ
ಮಾಡಧಾಂಗ ಕರಕೊಂಬಾ ಮತ್ತ. ಪೂಜಿ
ನೀರ ಯಾರರ ಮುಟ್ಟಿದರ ಭಾಳ ಕೆಟ್ಟ,
ಊರಿಗೇನರೆ ಬಂತs ಅಂತ ತಿಳಿಕೊಳ್ಳೋದ…

*(ಮತ್ತೆ ಪಕ್ಕದವರಿಗೆ ಸಾಮಾನ್ಯ ಧ್ವನಿಯಲ್ಲಿ ಹೇಳುವನು)*

ಹೆಂತೆಂತಾವೆಲ್ಲಾ ಹೇಳತಾಳ ಇದನ್ನ
ಬಿಟ್ಟಾಳು? ಇದಕ್ಕೇನರೆ ಒಂದು ಅರ್ಥ
ಹೇಳ್ಯಾಳಂತೇನ ನಾ. ನೀ ಏನಂತಿ?

ಗುರ್ಯಾ : ಆಕಿ ಹೇಳಿದರ ಬಿದ್ದಾವಂತಿ?

ಯಮನ್ಯಾ : ಬೀಳಾಕಿಲ್ಲಂತಿ?

ಗುರ್ಯಾ : ಹೆಂಗ ಬೀಳಾಕಿಲ್ಲಂತಿ?

ಯಮನ್ಯಾ : ಯಾಕ ಬಿದ್ದಾವಂತಿ?

ಚೆನಬಸ್ಯಾ : ಕಾಕಾ ಏನ ಬೀಳೂವ?

ಎಲ್ಲ್ಯಾ : ನಿನ ಹೆಪ್ಪನ, ಸಣ್ಣಾಂವದಿ ನಿನಗ್ಯಾಕ
ಬೇಕಿದೆಲ್ಲಾ? ಹಲ್ಲಾಗ ನಾಲಿಗಿ ಇಟಗೊಂಡ
ಸುಮ್ಮನ ಕುಂತರಾಯ್ತು ಇದನ ಕೇಳಬೇಕು,
ಇದನ ಕೇಳಬಾರದು ತಿಳಿಯಾಣಿಲ್ಲಾ? ಹೊಟ್ಟಿಗೇನ
ಕನಿಕಿ ತಿಂತಿ? ಬೀಳೂವಿದ್ರ ಬಿದ್ದಾವು,

ಬಿಡೂವಿದ್ರ ಬಿಟ್ಟಾವು! ನಮ್ಮ ನಶೀಬ
ಯಾರರೆ ಕಸಕೋತಾರೇನ? ನಶೀಬದಾಗs ಇದ್ದರ
ಗೌಡನ ಪಾಪೇನ ಮಾಡೀತ? ನಮ್ಮ ಪಾಪೇನ
ಮಾಡೀತ? ಯಾಕಪಾ?

ಗುರ್ಯಾ : ಹೂಂ… ಒಟ್ಟ ಎದಕೆಲ್ಲ ನಶೀಬ ಬೇಕಂತಿ?

ಯಮನ್ಯಾ : ಅಲ್ಲೇನ ಮತ್ತ?

ಇರಿಪ್ಯಾ : ನಶೀಬದಾಗಿನ ಭರೋಸ ಹೋಗೇತ್ರೆಪಾ,
ಅದs ಖೊಟ್ಟಿ ಇದ್ದರ ಹೆಂಗಾ?

ಯಮನ್ಯಾ : ಹಾಂಗಿಲ್ಲಾ- ಹೀಂಗಿಲ್ಲಾ-ಏ ನಮ್ಮ ನಶೀಬ
ಖೊಟ್ಟಿ ಅಂತ ಅಂಜಸ್ತಿ ಏನೋ ನೀ?
ಗೆಜ್ಜ್ಯಾಗಿನ ಹುರುಕ ಕೆರಕೋವಾಗ ನನ್ನ ಹೇಂತಿ
ನೋಡಿದರs ಹೆದರಿಲ್ಲ, ನಿನ್ನ ಮಾತಿಗಿ
ಹೆದರತೇನೇನೊ?

ಇರಿಪ್ಯಾ : ಹೋಗಲೇ ಕುರಸಾಲ್ಯಾ. ಒಂದ ದಿನ ಹೇಂತಿನ
ಓಣಿಗಿ ತಂದ ಬಡ್ಯಾಕಾಗಿಲ್ಲ, ಬಡಿವಾರ ಹೇಳತಾನ,
ಬಲ್ಲಿನ ಹೋಗೊ.

ಎಲ್ಲ್ಯಾ : ನಮ್ಮ ನಶೀಬ ಖೊಟ್ಟಿ ಇದ್ದದ್ದ ನಿನಗ
ಹ್ಯಾಂಗ ಗೊತ್ತಾತಲೇ? ತಿಂದರ ಹೊಟ್ಟ್ಯಾಗ
ಬೆಣ್ಣಿ ಕರಗಾಣಿಲ್ಲ, ದೊಡ್ಡ ದೊಡ್ಡ ಮಾತ
ಮಾತಾಡತಿ? ಹೀಂತಾ ಮಕ್ಕಳ ಚರ್ಮಾ
ಸುಲದ ತೂಗ ಹಾಕಬೇಕ.

ಯಮನ್ಯಾ : ಮಾರಾಯಾ, ಇವನ ಸಲುವಾಗಿ ಮನ್ನಿ
ರಾತ್ರಿ, ನನ್ನ ಹೇಂತಿ ಖಾಲಿ ಚೇಲ ಆಗ್ಯಾನಂತ
ಬೈಲಿಲ್ಲs ನನಗ?

ಇರಿಪ್ಯಾ : ಏ ಯಾಂವೇನ ಮಾಡತೇರ್ಯೊ?
ಹೇಳತೇನ್ಯಾಕ ಹೇಳತೇನ, ಕೇಳೊ ಹುಡುಗ;
ನಮ್ಮ ನಶೀಬ ಖೊಟ್ಟಿ ಇದ್ದದ್ದ ಖರೆ, -ಈ
ಸೆಗಣಿ ಗುಂಪಿನ್ಯಾಗ…

ಎಲ್ಲ್ಯಾ : *(ನಡುವೇ ತಡೆದು)* ಏ ಕೈಮುಗದ ಕುಂಡೀ
ಎಳೀತೇನೋ ಮಾರಾಯಾ. ಮೊದಲs ಊರ ತುಂಬ
ರಂಡಿಮುಂಡೇರs ಕಾಣತಾರಂತ ಹೊಲೇರ
ಪಾರಿ ಅಂತಿದ್ಳು; ಅಂತಾದರಾಗ ಇಂತಾದೊಂದು!
ಆ ಸಬುದ ನನ್ನ ಕಿವಿಮ್ಯಾಲ ಬಿಳಬಾರದಪಾ
ದೇವರ. ಅದನ ಮರೀಬೇಕಂತ ಮಲಗಿ
ಏಳಬಾರದಂದರ ಮತ್ತ ಬೆಳಗ ಬರತೈತಿ,
ಮತ್ತ ಚೆಂಜಿ ಮತ್ತ ಬೆಳಗ… ಯಾಕೊ
ನಿನ್ನ ಮೋತಿ ಹೆಸರಾಗೇತೆಲ್ಲೊ?

ಇರಿಪ್ಯಾ : ನನ್ನ ಮೋತಿ ಯಾಕ ಹಸರ ಕಂಡೀತ ಬಿಡಲೇ.
ರಂಡಿಮುಂಡೇರ ಕಾಣತಾರಂತ. ಅದ್ಯಾಕ
ನನ್ನ ಹೇಂತಿ ರಂಡಿಮುಂಡಿ ಹಾಂಗ ಕಂಡಳಂತ
ಹೇಳಲಾ, ಮುಚ್ಚಿ ಯಾಕ ಇಟಕೋತಿ?
ನಿನ್ನ ಮುಂದ ಪಾರಿ ಏನೇನ ಹೇಳ್ಯಾಳೆಲ್ಲಾ
ಗೊತ್ತೈತಿ, ಹೇಳಲೇನಾ? ನೋಡ್ರೆಪಾ:
ಮನ್ನಿ ಹೊಳ್ಯಾಗ ನಾ ಜಳಕಾ ಮಾಡಾಕ ಹತ್ತಿದ್ನು
ಹೊಲ್ಯಾರ ನಿಂಗಿ ತೊಡೀ ಕಾಣೋ ಹಾಂಗ
ಕಚ್ಚೀಹಾಕಿ ಸೀರೀ ಒಗ್ಯಾಕ ಹತ್ತಿದ್ಳು.
ಯಾವ ಮಾಯಲೇನೊ, ಆಕಿ ಸೀರಿ ಕಳೀತು,
ಗಬಕ್ಕನ ಕಲ್ಲಪಡಿ ಮರೀಗಿ ಕೂತಳಪಾ.
ನಾ ಇಕಡೆ ಮೋತಿ ಮಾತಿನು. ಮತ್ತ
ಎಲ್ಲಾ ಕಾಣೂ ಹಾಂಗ ಎದ್ದನಿಂತ 'ಸಿಳ್ಳ
ಹಾಕಾಕ ಬರಾಣಿಲ್ಲೇನಲಾ ಕುರಸಾಲ್ಯಾ'
ಅಂದ್ಳು. ನಾ ಮಾನವಂತ ಮಗ ಹುಸಾ ಅನ್ನಲಿಲ್ಲ.
ಬಡಬಡಾ ಸೀರೀ ಉಟಕೊಂಡ ಬಂದ್ಳು, ಎಲಿ
ತಿಂದ ನನ್ನ ಕಡೆ ಮೋತಿ ಮಾಡಿ ಮೂರ ಬರೆ
ಉಗಳಿದಳು. ಆಗೂ ನಾ ಸುಮ್ಮಕ ಇದ್ನು.
'ನೀ ದನಾ ಅಂತ ತಿಳೀಲ್ಯೊ ಕಸಾಬಂತ
ತಿಳೀಲ್ಯೊ?' ಅಂದ್ಳು, 'ದನಾ ಅಂತ ತಿಳಕೊ'
ಅಂದಿನು. ಅಟ್ಟಕs 'ನಿನ ಹೇಂತಿ ರಂಡಿಮುಂಡಿ
ಆಗ್ಯಾಳ ಹೋಗಲಾ ಕುರಸಾಲ್ಯಾ; ಅಂದಳು,
ಹೋದಳಪಾ! ಆಕಿ ಪಾರೀ ಮುಂದ ಆಡ್ಯಾಳ,
ಪಾರಿ ಇವನ ಮುಂದ ಗೊಜ್ಜಿಕೊಂಡಾಳ, ಅದನ್ನ

ಇಂವ ಇಲ್ಲಿ ಬಂದ ಕಾರಿಕೊಂಡ. ನಂದೇನರೆ
ತಪ್ಪೈತೇನ ಇದರಾಗ?

ಗುರ್ಯಾ : ಹಳೀ ಚೇಲ ಹಗಲೆಲ್ಲ ಯಾಂವ ಹಾಸಿಗೋತಾನ ಬಿಡಲೇ.

ಯಮನ್ಯಾ : ನಮಗೆಲ್ಲ ಮಳೀ ಚಿಂತಿ, ಆಕೀಗಿ ಮಿಂಡರ ಚಿಂತಿ!

ಎಲ್ಯಾ : ಮಲಗು ಹೊರಸಾ, ಮಗ್ಗಲ ಗೆಣ್ಯಾನ
ಬಿಟ್ಟರ ಆಕೀಗೇನ ತಿಳೀತೈತಿ ಬಿಡೊ.

ಯಮನ್ಯಾ : ಮತ್ತ ಇಂವ ಯಾಕ ಬಾಯಿ ಹಾಕಬೇಕ ಕೇಳಲಾ.

ಇರಿಪ್ಯಾ : ನಾ ಏನ ಅನ್ನಬಾರದ ಅಂದಿನು ಬಿಡಲಾ. ನಾ
ಅಂದ ಆಡೋದರಿಂದ ಸೆಗಣಿ ಗುಂಪಿನ್ಯಾಗ
ಹುಳಾ ಬೀಳೂವಿದ್ರೇನ ಬಿಡತಾವು?

ಎಲ್ಯಾ : ಏ ಏ ಆಡಬ್ಯಾಡೊ, ಆಡಬ್ಯಾಡೊ,
ಮಗನ, ನೀ ಯಾರನ್ನೂದ
ನನಗ ಗೊತ್ತೈತೊ. ಸಾಲಿ ಪುಸ್ತೇಕದಾಗ
ನಿಮ್ಮಪ್ಪನ ಹೆಸರಿದ್ದರೇನಾತ, ನಿನ್ನ ಮೋತಿ
ಮ್ಯಾಲ ನಿನ್ನಖರೇ ಅಪ್ಪನ ಹೆಸರ
ಬರದೈತಲೇ! ನಿಮ್ಮವ್ವನ ಕೊಳ್ಳಾಗಿನ
ಗೆಜ್ಜಿಟಿಕ್ಕೆ ಯಾರ ಕೊಟ್ಟದ್ದು ಕೇಳಿಕೊಂಬಾ,
ಆಮ್ಯಾಲ ಮಾತಾಡು, ಹೌದಂತೀನು.

ಇರಿಪ್ಯಾ : ನನಗ ಕಲಸಾಕ ಬರತಿ? ನಿನ್ನ ಎಲುವ
ಪುಡಿ ಪುಡಿ ಮಾಡೇನ ಮಗನ. ನೀ ಏನ
ಸುದ್ಧ ಇದ್ದೀಯಲೆ? ನಿಮ್ಮಪ್ಪನ ಗುರುತ
ಇಲ್ಲದ್ದಕ್ಕs ಅಲ್ಲೇನ, ‘ನಾ ಯಾರ ಗೊತ್ತೈತಿ?’
ಅಂತ ಹೊಲೇರ ಕಮಲೀನ ಕೇಳತಿದ್ದಿ?
ಲಡ್ಡುಪಿಶಿಕ್ಯಾ, ಹೆಂತಾಂವರ ಆಗವಲ್ಯಾಕ
ನಮ್ಮಪ್ಪನ ಹೆಸರಾರ ಗೊತ್ತೈತಿ ನಮಗ.
ಅದೂ ಮರತರ ಲಜ್ಜಿಗೆಟ್ಟ ಮುದಿಗೌಡನ
ಹೆಸರಾರ ಹೇಳತೀವು, ನಿನಗೇನೈತೊ? ನಾಲಿಗ್ಗಿ

ಎಲುವಿಲ್ಲಂತ ಗಲಗಲ ಮಾತಾಡತಾನ, ಮೀಸಿ
ಕಿತ್ತ ಕೈಯಾಗ ಕೊಟ್ಟೇನ ಲುಚ್ಚ್ಯಾ.

ಎಲ್ಲ್ಯಾ : ಯಾರಿಗಿ ಲುಚ್ಚ್ಯಾ ಅಂದಿಯೊ ನೀ? ನನಗ
ಲುಚ್ಚ್ಯಾ ಅನ್ನಾವ ನೀ ಯಾರ? ಗುಂಡನ?
ಗಜಗನ?

ಗುರ್ಯಾ : ನೀ ಯಾಕಿಷ್ಟ ಮನಸ್ಸಿಗಿ ಹಚಿಕೋತೀ ಬಿಡೊ.
ನಿನಗ ಅಂದದ್ದೇನ, ನನಗ ಅಂದದ್ದೇನ,
ಎಲ್ಲಾ ಒಂದs ಅಲ್ಲ? ಮನ್ನಿ ಆ ಸೂಳಿಮಗ್ಗ
ಮುಕಳಿ ಮ್ಯಾಲೊಂದು ಕುರುವಾಗೇತಿ, ಆ
ಕುರುವಿನ್ಯಾಗಿಂದ ಮಾತಾಡತಾನಂವ. ಹಿಂತಾ
ಮಾತ ಇನ್ಹೆಂಗ ನಾರಬೇಕು?

ಎಲ್ಯಾ : ಏ ಕುರುವ? ಏನ ಕುರುವ?

ಗುರ್ಯಾ : ಮನ್ನಿ ಹರೀವತ್ತ ಎದ್ದ ಕನ್ನಡಿ ನೋಡಿದಾನ,-
'ಕನ್ನಡ್ಯಾಗಿಂದ ನನ್ನಾಂಗಿಲ್ಲ ಇಂವ್ಯಾರ?' ಅಂತ
ಹೇಂತೀನ ಕೇಳ್ಯಾನ. 'ಊರಾಗ ಇಷ್ಟ ಮಂದಿ
ಅದಾರ, ಅದರಾಗ ಯಾಂವರೆ ಒಬ್ಬನಂತ
ತಿಳಕೊಳ್ಳಾ' ಅಂತ ಹೇಂತಿ ಹೇಳಿದರ ಆ
ಸಿಟ್ಟ ನಮ್ಮ ಮ್ಯಾಲ ತೀರಿಸಿಕೊಳ್ತಾನ, ಸೂಳೀಮಗ.

ಇರಿಪ್ಯಾ : ಸೂಳೀಮಗಾ ಅಂತ ಯಾರಿಗಂದ್ಯೋ ನೀ? ಮಗನs,
ನಮ್ಮವ್ವ ಹಾದರ ಮಾಡಿದ್ದ ಕಣ್ಣಮುಟ್ಟ
ನೋಡೀದೀ ನೀ? ಇಂದ ಏನಂಬೂದ
ನನಗ ನಿನಗ ಒಮ್ಮಿ ಆಗಿ ಹೋಗಲಿ, ಸೆಗಣಿ
ಗುಂಪಿನ್ಯಾಗ ಹುಳಾ ಬಿದ್ದರೆಷ್ಟು, ಬಿಟ್ಟರೆಷ್ಟು.
ಬಿದ್ದರ ಊರಾಗಿದ್ದೇವು, ಬಿಟ್ಟರ ಊರ ಬಿಟ್ಟೇವು.

*(ಉಳಿದವರು ಅವನನ್ನು ತಡೆಯಬೇಕೆಂದು ಪ್ರಯತ್ನಿಸಿದರೂ ಕೇಳದೆ ಎದ್ದುನಿಂತು ಮಾತಾಡುವನು.)*

ಇಂದ ತೀರಿ ಹೋಗಲಿ, ಇಂದ ನಿನ್ನ
ರಗತಾ ಕುಡದರs ಹೌದನ್ನ ಮುದೋಡ್ಯಾ…

*(ಗುರ್ಯಾನ ಮೇಲೆ ಹಾರಿ ಅವನ ಕುತ್ತಿಗೆ ಹಿಚುಕಲು ಹೋಗುವನು. ಎಲ್ಲರೂ ಅವರಿಬ್ಬರನ್ನು ಬಿಡಿಸಿಕೊಂಡು ಬೇರೆ ಬೇರೆ ನಿಲ್ಲಿಸಲೆತ್ನಿಸಿದರೂ ಆಗದೆ ರಂಗದ ತುಂಬ ಗದ್ದಲ ವ್ಯಾಪಿಸುತ್ತದೆ. ಆಗ ಈವರೆಗೆ ಯಾರ ಗಮನಕ್ಕೂ ಬರದೆ ಮೂಲೆಯಲ್ಲಿ ಕುಳಿತಿದ್ದ ಮುದುಕ ಕುಳಿತಲ್ಲಿಂದಲೇ ಚೀರುವನು. ಅವನು ಇನ್ನಾರೂ ಆಗಿರದೆ ಎರಡನೆಯಂಕದಲ್ಲಿ ಬಾಳಗೊಂಡನಿಗೆ ಭೆಟ್ಟಿಯಾದ ಮುದುಕನೇ ಆಗಿರುತ್ತಾನೆ. ಹಣೆತುಂಬ ಭಂಡಾರ ಹಚ್ಚಿ ಮೈತುಂಬ ಕಂಬಳಿ ಹೊದ್ದುಕೊಂಡು ಎಡಗೈಯಲ್ಲಿ ತತ್ರಾಣಿ ಹಿಡಿದಿರುತ್ತಾನೆ. ದೇವರು ತುಂಬಿದಂತೆ ಚೀರುತ್ತಾನೆ.)*

ಮುದುಕ : ಏ s s s ಏs… *(ಎಲ್ಲರೂ ಸ್ತಬ್ಧರಾಗುವರು)*
ಸೆಗಣಿ ಗುಂಪಿನ್ಯಾಗ ಹುಳ ಬೀಳತಾವಲೇ
ಮಗನsss….

*(ಎಲ್ಲರೂ ಜಗಳ ಮರೆತು ಅವನ ರಟ್ಟೆಯಲ್ಲಿ ಹೈಹಾಕಿ ಭಯಭಕ್ತಿಯಿಂದ ಮುಂದೆ ಕರೆದು ತಂದು ಕೂಡ್ರಿಸಿ ಅವನ ಸುತ್ತಲೂ ಕುಳಿತುಕೊಳ್ಳುವರು.)*

ಎಲ್ಯಾ : ಏನೇನೂ ಅಂಜಿಕಿಲ್ಲದ ಹುಳ ಅಂತಾನ್ನೋಡೊ!

ಯಮನ್ಯಾ : ಹುಳಾ ಬೀಳತಾವ ಅಂತಾನ್ನೋಡೊ!

ಗುರ್ಯಾ : ಇವನ ಮೈಯಾಗ ಯಾವುದೋ ದೇವರ
ತುಂಬೇತೇನ ನೋಡೊ!

ಇರಿಪ್ಯಾ : ಸುಮ್ಮಕಿರ್ರೆಪಾ, ಗುಡ್ಯಾಗಿನ ದೇವರ್ಹಾಂಗ
ಮಾತಾಡತಾನು, ಒಂದೀಟ ಬಾಯ್ಮುಚ್ಚಿ ಕೇಳ್ರಿ.
ಆಡ ಮಾತಾಡ ಮುದುಕಾ.

ಎಲ್ಯಾ : ಇಂವನ್ನ ಗುಡ್ಯಾಗಿಟ್ಟ ಪೂಜಿ ಮಾಡಬೇಕಂತೇನ
ನಾ, ನೀಯೇನಂತಿ? ನೋಡಬಾರದ? ಮಲ್ಲಿಗಿ
ಹೂ ಉದರಿಧಾಂಗ ಮಾತಾಡತಾನ,
ಮಾತಾಡ ಎಜ್ಜಾ, ಮಾತಾಡ.

ಮುದುಕ : ನನ್ನs ನೋಡ್ರೆಲ್ಲ,-ಹಳಿ ಮನಿಶ್ಯಾ.
ಹದ್ದಿಗಾದಷ್ಟು ವಯಸ್ಸಾಯ್ತು. ಮಣಕಾಲದಾಗ
ತಲೀ ಹಾಕಿ ಕುಂಡ್ರೂ ಕಾಲ ಏನಪಾ.
ಕುಂತಟ್ಟರಾಗs ನಾ ಹರೇದಾವಂತ ಯಾಕ
ತಿಳಿಕೋಬಾರದು? ತಿಳಕೊಂಡರ ಒಳಗ ಇಳೀಬೇಕಲಾ!
ಅದಕ್ಕ ಸಾದೂರ ಕೇಳಿನು, ಶರಣರಾದರು,
ಸಿದ್ದರಾದರು, ಕಡೀಕಂದರ ನಿರ್ವಾಣೆಪ್ಪನ ಗುಡ್ಡದಾಗ
ಪಾರೀ ಹಾಂಗ ಆಗಿಬಂದ ‘ಇದನ್ನ ಕುಡೀ

ಮಗನ' ಅಂತ ಪಾರಂಬಿ ಕರ್‍ರೆವ್ವ ಬಂದ
ಕೊಟ್ಟಳು. ಕುಡೀತೇನು,-ಇಲ್ಲಿ ಹರೆ,
ಅಲ್ಲಿ ಹರೆ, ಕೈಯಾಗ ಹರೆ, ಕಾಲಾಗ ಹರೆ,
ಎಲ್ಲೆಲ್ಲಾ ಹರೇನs ಹರೆ, ಚಿಗರ ಮೀಸ್ಯಾಗ
ಯಾಸಿ ನಗಿ, ವಾರಿರುಮ್ಯಾಲ ಸುತಕೊಂಡ
ಬಿಳೀ ಕುದರಿ ಏರಿ ಸರದಾರ ಬರತಾನಲಾ!
ಇಂವ್ಯಾರಪಾ ಅಂತ ನೋಡತೇನು: ನಾನs!
ಹರೇದ ಹುಡಿಗೇರ ಹಾಲಗಡಿಗಿ ಹಿಡಕೊಂಡ
ಹಾದೀ ತರಿಬಿ ಕರದs ಕರೀತಾವ!...
ಮಾಮಾ ನನ್ನ ಹಾಲ ಕುಡಿ, ಮಾಮಾ
ನನ್ನ ಹಾಲ ಕುಡಿ!

ಯಮನ್ಯಾ : ಎಜ್ಜಾ ನಂಗsಟ ಕೊಡೊ.

*(ಮುದುಕ ತತ್ರಾಣಿ ಕೊಟ್ಟನಂತರ ಬಾಯಿಗೆ ಹಚ್ಚಿ ಕುಡಿಯುವನು. ಅಷ್ಟರಲ್ಲಿ ಇನ್ನೊಬ್ಬನು ಕೈಚಾಚಿದಾಗ ಅವನಿಗೆ ಕೊಟ್ಟು ಅದಕ್ಕೆ ಕೈಮುಗಿಯುವನು. ಅವನೊ ತೆಗೆದುಕೊಳ್ಳುವಾಗೊಮ್ಮೆ ಇನ್ನೊಬ್ಬನಿಗೆ ಕೊಡುವಾಗೊಮ್ಮೆ ಅದಕ್ಕೆ ನಮಿಸುವನು. ಹೀಗೆ ಎಲ್ಲರೂ ಕುಡಿಯುತ್ತಿರುವಾಗಲೇ ಮಾತು ಆರಂಭವಾಗುತ್ತದೆ. ಇನ್ನು ಮೇಲೆ ಎಲ್ಲರೂ ಕುಡುಕರಂತೆ ಆಡುತ್ತಾರೆ.)*

ಮುದುಕ : ಅಲ್ಯೋ? ಈ ಸೆಗಣಿ ಗುಂಪಿನ್ಯಾಗ ಹುಳಾ
ಬಿದ್ದಾವಂತ ಯಾಕ ತಿಳಕೊಬಾರದು?

ಯಮನ್ಯಾ : ಏನ ಬೀಜಮಾತ ಆಡಿದ್ಯೋ ನಮ್ಮಪ್ಪಾ!
ಬರೇ ಹುಳಾ ಯಾಕ ಇನ್ನೂ ಏನೇನ
ತಿಳಿಕೊಳ್ಳೋಣ ಹೇಳೊ ನಮ್ಮಪ್ಪಾ!
ಸೆಗಣಿ ಗುಂಪಿನ್ಯಾಗ ಹುಳಾ ಬಿದ್ದೂವ... ಫಳಫಳ
ಮಳಿ ಬಂದ, ಸಳಸಳ ಬೆಳಿ ಎದ್ದ-ಮಣಕಾಲ
ಮಟ-ನಡಮಟ-ಎದಿಮಟ-ಗೌಡ್ತೀ
ಮಾರಿಹಾಂಗ ತೆನಿ ಅರಳಿ, ನತ್ತಿನ್ಹಾಂಗ
ಕಾಳ ಮೂಡಿ, ಸೀರೀ ಹಾಂಗ ಗರಿ ಹಾರ್ಯಾಡಿ
ಆಹಾ.... ಎಜ್ಜಾ ಇನ್ನೊಮ್ಮಿ ನೀನs ಹೇಳೊ,
ಬರಿಬರಿ ನೀನs ಮಾತಾಡೊ.

ಎಲ್ಲ್ಯಾ : ಕುಡದ ಸೆರೆ ಕುತಿಗಿ ಮಟ ಇಳೀತಪ!

ಗುರ್ಯಾ : ಎದಿಮಟ ಇಳೀತಪಾ!

ಇರಿಪ್ಯಾ : ಮಣಕಾಲಮಟ ಇಳೀತಪಾ!

ಮುದುಕ : ಹರೇದ ಹುಡಿಗೇರ ಹಾಲಗಡಿಗಿ ಹಿಡಕೊಂಡ
ಕರದs ಕರೀತಾವ: ಮಾಮಾ ನನ್ನ ಹಾಲ
ಕುಡಿ, ಮಾಮಾ ನನ್ನ ಹಾಲ ಕುಡಿ.
ಎಷ್ಟ ಕುಡಿದಿ!

ಗುರ್ಯಾ : ಏನ ಗೊತ್ತಿಗಿ ಹಚ್ಚಿ ಮಾತಾಡ್ತೀನೊ
ಮುದುಕ? ನನ್ನ ಗುಂಡಗಡಿಗ್ಯಾಗಿನ ಲಿಂಗ
ಮಾತಾಡಿಧಾಂಗ ಮಾತಾಡ್ತಿಯಲ್ಲೊ!

ಎಲ್ಲ್ಯಾ : ಏನ ಆಡತಿ! ಏನ ಮಾತಾಡ್ತೀನೊ! ನನಗ
ನೋಡಪಾ ನಿನಗ ಅಜ್ಜಾ ಅನ್ನೋವಷ್ಟ,
ಹಂಗ್ಯಾಕ, ಒಮ್ಮೊಮ್ಮಿ ಅಪ್ಪಾ ಅನ್ನೋವಷ್ಟ
ಅಕ್ಕರತಿ ಬರಾಕ ಹತ್ತೇತಿ, ಏನ ಮಾಡಲಿ?
ನೀ ಓ ಅನ್ನು ಬಿಡು, ಸಾಯೂದರೊಳಗ
ನಾ ಒಮ್ಮೆರೆ ಕರದs ಬಿಡಾಂವ ಮತ್ತ.
ನನ್ನ ಹೇಂತೀನ ಬಿಟ್ಟ ಇನ್ನೂ ತನಕ
ಒಬ್ಬರಿಗೂ ಸುಳ್ಳಬಿದ್ದಿಲ್ಲ, -ಹಂ... ಇದs
ಹೊಲೇರ ಸೀತಿ ಬರೇ ಒಂದ ಬೋರಮಳ
ಬೇಡಿದರ ಅರ್ಧಾ ಹೊಲಾ ಮಾರಿ ಅಚ್ಚೇರ
ಬಂಗಾರ ಹಾಕಿದ ಗಂಡಮಗಾ ನಾ!
ಕೊಳ್ಳಿಗಿ ಒಜ್ಜಿ ಆಗಿ ಹೆಜ್ಜಿಗೊಮ್ಮಿ
ಕಾಲ ಬಿದ್ದ 'ಮಾಮಾ' ಅಂತಿದ್ಳು,-ಇವನ್ನ
ಕೇಳ ಬೇಕಾದರ, ಅಲ್ಲೇನಪಾ?

ಇರಿಪ್ಯಾ : ನನ್ನ ಬಗಲಾಗ ಯಾರೋ ಕೈ ಹಾಕಿ
ನಗಿಸಿಧಾಂಗ ಆಗತೈತಲ! ಆಟ ಮಾಡೋಣು.
ನೀ ಚಿಮಣಾ ಆಗೋ

ಯಮನ್ಯಾ : ಹಾ ಪ್ರಿಯತಮಾ! ನಿಂಗ್ಯಾತರಿಂದಾಯ್ತು ಭ್ರಮಾ?

ಗುರ್ಯಾ : ಜಗತ್ತೆಲ್ಲ ನಿನ್ನಿ ಹುಟ್ಟಿ ನಾವೆಲ್ಲ ಇದs
ಹುಟ್ಟಿದ್ದೀವಂತಪಾ, ಹಾ? ಏನ ಜಗತಪಾ?
ಏನ ಜಗತಪಾ!

*(ಕೈಯಲ್ಲಿ ಪಾತ್ರೆ ಹಿಡಿದ ಪಾರಿ ಪ್ರವೇಶಿಸಿ ಇವರ ಸ್ಥಿತಿ ನೋಡಿ ಚಕಿತಳಾಗಿ)*

ಪಾರಿ : ಅಯ್ ಶಿವನ! ಇದೇನ ಮಾಡತಾವs
ಮೂಳಗೋಳ? ಮುಟ್ಟಿ ಮೈಲಿಗಿ ಮಾಡೀ
ತಗೀಯತ್ತ!

ಎಲ್ಲ್ಯಾ : ಅರೆ! ಹಾಲಿನ ಹುಡಿಗಿ ಬಂದ ಅಡ್ಡ
ನಿಂತಳಪಾ! ಮಾಮಾ ನನ್ನ ಹಾಲ ಕುಡಿ,
ನನ್ನ ಹಾಲ ಕುಡಿ.

*(ಪಾರಿಯ ಬೆನ್ನು ಹತ್ತುವನು. ಉಳದವರೂ ಬೆನ್ನುಹತ್ತುತ್ತಾರೆ.*
*'ನನ್ನ ಹಾಲಕುಡಿ ಮಾಮಾ ನನ್ನ ಹಾಲ ಕುಡಿ' ಎಂದು ಎಲ್ಲರೊಂದಿಗೆ ರಂಗವನ್ನು ಒಂದೆರಡು ಸುತ್ತು ಓಡಾಡಿ ತಪ್ಪಿಸಿಕೊಳ್ಳಲೆತ್ನಿಸುವಳು.)*

ಯಮನ್ಯಾ : ಸಕ್ಕರಿಗೊಂಬಿ ಆಗ್ಯಾಳ ನೋಡೊ!

ಇರಿಪ್ಯಾ : *(ಅವಳನ್ನು ಹಿಡಿದು ಬಿಟ್ಟು)* ಬೆಣ್ಣಿಮುದ್ದಿ
ಆಗ್ಯಾಳ ನೋಡೊ!

*(ಪಾರಿ ಹಿಡಿದ ಒಬ್ಬನ ಕೈ ಬಿಡಿಸಿಕೊಂಡು ಥೂ ಎಂದವನ ಮುಖದ ಮೇಲೆ ಉಗುಳಿ ಓಡಿ ಹೋಗುವಳು. ಉಳಿದವರೆಲ್ಲ.*
*'ನನ್ನ ಹಾಲ ಕುಡಿ ನನ್ನ ಹಾಲ ಕುಡಿ' ಎಂದು ಬೆನ್ನುಹತ್ತಿ ಹೋಗುವರು. ಸೂತ್ರಧಾರ ಮತ್ತು ಮುದುಕ ಇಬ್ಬರೇ ಉಳಿಯುವರು.)*

ಮುದುಕ : ಯಾಕ, ಏನಂತಿ?

ಸೂತ್ರಧಾರ : ಅಪ್ಪಾ, ನನಗ ಹಸೀನೂ ಒಂದ; ಬಿಸೀನೂ
ಒಂದs. ನನ್ನೇನ ಕೇಳತಿ?

ಮುದುಕ : ಈಗ ಬಾಳಗೊಂಡ ಬಂದ ನನ್ನ ಕೇಳಿದರ
ಪಡುವ ದಿಕ್ಕಿನ್ಯಾಗಿನ ಅಡಿವ್ಯಾಗ ಇರತೇನಂತ
ಹೇಳು, ಏನ ಹೇಳತಿ?

*(ಇಷ್ಟು ಹೇಳಿ ಮುದಿಗೌಡ ಹೊರಟುಹೋಗುವನು. ಸೂತ್ರಧಾರ ಪ್ರೇಕ್ಷಕರನ್ನುದ್ದೇಶಿಸಿ ಮಾತನಾಡುವನು.)*

ಸುತ್ರಧಾರ : ಬಾಲಕಾ,
ಪಡುವ ದಿಕ್ಕಿನಾಗೊಂದು ಕೆಂಪುಸಮುದ್ರ,
ಸಮುದ್ರದಾಗೊಂದು ಹಸಿರು ನಡುಗಡ್ಡೆ.
ನಡುಗಡ್ಡದೊಳಗೊಂದ ದಟ್ಟ ಅಡವಿ,
ಅಡಿವ್ಯಾಗೊಂದು ಬಣ್ಣದ ಅರಮನಿ ಐತಿ,

ಅರಮನಿ ಹೊರಗಡೆ ಒಂದು ರಣಹದ್ದು
ಒಂದು ಕಾಲಾಗ ಚಿನ್ನದ ತಕ್ಕಡಿ,
ಇನ್ನೊಂದು ಕಾಲಾಗ ಬಂದೂಕ ಐತಿ.
ಅರಮನಿ ಹೊರಗ ಚೌರ್ಯಾಂಸಿ ಲಕ್ಷ
ಮಿಕಗಳನ್ನ ಬ್ಯಾಟಿ ಆಡಿಕೊಂಡು
ರಾಜ್ಯಭಾರ ಮಾಡತೈತಿ. ನೀನಾದರೂ ಅಲ್ಲಿಗೆ ಹೋಗಿ
ಭೇಟಿ ಮಾಡುವಂಥವನಾಗು.

## ಅಂಕ : ಐದು

ಸೂತ್ರಧಾರ:
ಕೇಳೊ ಹಡದಪ್ಪ ಮಾತಾ
ಅಣ್ಣ ಹ್ವಾದಾನೊ ಎತ್ತಾ
ಕೈಯಾರೆ ಮುಗಿವೆನು ಕಾಲಾರೆ ಬೀಳುವೆನು
ಕೊಲ್ಲಬ್ಯಾಡಯ್ಯಾ ವ್ಯರ್ಥಾ.
ಬಣ್ಣದ ಘನ ಕರಗಿ
ನೆರಳಾಗಿ ಹರಿದಾವೊ
ನಾನಲ್ಲದನ್ಯವು| ಅಲ್ಲದ ಭಿನ್ನವು
ಮೂಡಿ ಮುಳುಗುವವಯ್ಯಾ
ಹಿಂದನರಿಯದ ಮೂಢ
ಮುಂದೇನ ತಿಳಿವೇನೊ
ತಿಳಿದು ತಿಳಿಸುವ ಗುರುವ| ಅರಸಿ ಅಲೆದಾಡುವೆನೊ
ಉಳಿಸೊ ಅಲ್ಲಿಯತನಕ.

*(ಸೂತ್ರಧಾರನ ಹಾಡು ಮುಗಿದು ಲಾಲಿಮ–*
*ಧ್ರುವ ದೀರ್ಘವಾಗಿ ನಡೆಯುತ್ತದೆ. ಅದು ಪ್ರಾರಂಭವಾದೊಡನೆ ಬಾಳಗೊಂಡ ಕುಡಗೋಲು ಹಿಡಿದುಕೊಂಡು ಬರುತ್ತಾನೆ. ಅವನಿಗೆ ಎದುರಾಗಿ ಮುದಿಗೌಡನೂ ಬರುತ್ತಾನೆ. ಲಾಲಿಮಧ್ರುವ ಮುಗಿಯುವತನಕ ಬಾಳಗೊಂಡ ಗೌಡನನ್ನೇ ದಿಟ್ಟಿಸಿ ನೋಡುತ್ತ ಅವನಲ್ಲಿ ಏನನ್ನೋ ಹುಡುಕುತ್ತಿರುವಂತೆ ನೋಡುತ್ತಿರುತ್ತಾನೆ. ಗೌಡ ಮೀಸೆ ತಿರುವುತ್ತ ನಗುತ್ತಿರುತ್ತಾನೆ. ಹುಡುಕುತ್ತಿದ್ದವನು ಸಿಕ್ಕನೆಂಬಾಗ ಬಾಳಗೊಂಡ ಬಹಳ ಉತ್ಸಾಹಿತನಾಗುವದಿಲ್ಲ. ದೃಶ್ಯದ ಅಂತ್ಯಕ್ಕೆ ಬಾಳಗೊಂಡನ ಮುಖದ ಮೇಲೆ ಶವದ ಕಳೆ ಬಂದು ಮುದಿಗೌಡ ವಿಶೇಷ ಕಾಂತಿ ಹೊಂದುತ್ತಾನೆ. ಅವನ ನಗೆ, ನಿಲುವುಗಳೆಲ್ಲ ವಿಶೇಷ ಪ್ರಭಾವ ಬೀರುವಂತಿರುತ್ತವೆ.)*

ಬಾಳಗೊಂಡ : ಚಕಮಕ್ಕಿ ಕಲ್ಲ ಕಡಧಾಂಗ ಭೆಟ್ಟಿ
ಆದೀವು, -ಇಂದ ಸಿಕ್ಕಿ ಬಾರೊ ಗೆಣೆಯಾ!
ಹಿಡೀಬೇಕ ಹಿಡೀಬೇಕಂತ ಎಷ್ಟ ಓಡಾಡಿದೆ,

ಎಂದಿನಿಂದ ಕುಡಗೋಲ ಮಸದೆ! ಆದರ
ಸಿಕ್ಕೆಂತ ಒಮ್ಮೆಲೆ ಕೊಲ್ಲೋದಿಲ್ಲ; ನಾಕ
ಮಾತ ಅವ ಏನಪಾ, ಮೊದಲs ಕೊಂದ
ಬಿಟ್ಟರ ಆ ನಾಕ ಮಾತಿಗಿ ಹೂಂ ಅನ್ನಾಕ
ಯಾರ ಸಿಗೋದಿಲ್ಲ ಆಮ್ಯಾಲ. ಬ್ಯಾರೇ
ಮಾತಾಗಿದ್ದರ ನಡೆದಿರೋದು ಅನ್ನಲಾ! ಆದರ
ಒಂದಷ್ಟ ಮಾತ ಹಿಮಗ ಇರತಾವಲ್ಲ,
ಹಿಂತಾವ ಇರತಾವಲ್ಲ, -ಅವನ್ನ ನಾನ s
ಹೇಳಬೇಕು, ನೀನs ಕೇಳಬೇಕು. ಯಾಕಂದಿ,
ನಾ ಹೇಳಿದಾಗ ನನ್ನ ಒಳಗ ಅಳಿಗ್ಯಾಡೋವಂಥಾ
ಸವಾಲ ಕೇಳಾಂವ ನೀ ಒಬ್ಬನs. ಅಸಲ
ಜವಾಬ ಕೊಡಬೇಕಂತ ಒಳಗ ಕೈಹಾಕಿ
ಹುಡಿಕ್ಯಾಡತೇನ ನೋಡು- ಆ ದಣಿವಿನ್ಯಾಗ
ಒಂದ ರೀತಿ ಸಮಾಧಾನ ಆಗತದ, ಏನಪಾ.
ಅದಕ್ಕs ನಿನ್ನ ಅಂಥಲ್ಲಿ ಹಿಡೀಬೇಕ,
ಇಂಥಲ್ಲಿ ಹಿಡಿಬೇಕ, ಮಾತಾಡೋವಾಗ
ಹಿಡೀಬೇಕ-ಹೆಂಗಸರ ಜೋಡಿ ಇದ್ದಾಗ
ಹಿಡೀಬೇಕ-ಎಷ್ಟ ಏನ, -ಹಿಡಿದ
ಕುಡಗೋಲಿಗಿ ನನ್ನ ನಾಡಿ ಎಷ್ಟ ಸಲ
ಬಡೀತದ ಅಷ್ಟ ಯುಕ್ತಿ ಹೊಳದೂವೇನಪಾ.
ಮಂದೀ ಬಾಯಿಲೆ ಹೌದನ್ನಿಸಿಕೊಳ್ಳಲಿಕ್ಕೆ
ಹಾಂಗೆಲ್ಲಾ ಯುಕ್ತಿ ಮಾಡಿದೇಂತ ಇಟ್ಟಕೊ.
ಮಾಡಿದ ವಿಚಾರ ನಡದ ಆಗಮಾಡಲಿಕ್ಕೆ
ನಮ್ಮಂಥವರಿಗೆಲ್ಲಾ ಎಲ್ಲಿ ಆಗತದ ಹೇಳು?
ಅದಕ್ಕs ನಾವ ಆಡೋದs ಒಂದು, ಅದು
ಇರೋಧs ಒಂದು. ಇಷ್ಟs ತಿಳಿಯಲ್ಲ,-
ನಿನ್ನ ಹೆಸರೇನಂತ ಮನ್ನಿ ಆ ಸೂತ್ರಧಾರ
ಕೇಳಿದರ, ನಾ ಹೇಳಬೇಕನ್ನೂದರಾಗ ಚಾಳದಾಗಿನ
ಮಂದಿ ಹೊರಗ ಬಂದ ಜಗಳಾಡಿಧಾಂಗ
ಒಳಗಿನಿಂದ ಹತ್ತಹದಿನೈದ ಮಂದಿ ಹೊರಗ
ಬಂದ ತಮ್ಮ ತಮ್ಮ ಹೆಸರ ಹೇಳಾಕ
ಹತ್ಯಾರಲಾ! ಒಬ್ಬನ ಹೆಸರ ನನಗ
ಗೊತ್ತಿಲ್ಲ! ಯಾಂವ ಕಸಾಬಂತಾನ! ಯಾಂವ

ಕೊಳ್ಳೀದೆವ್ವ ಅಂತಾನ! ನನಗs ಗೊತ್ತಿಲ್ದs
ನನ್ನೊಳಗ ಇವರೆಲ್ಲಾ ಇದ್ದಾರ್ಹ್ಯಾಂಗಾ? ಹಾಂಗಾದರ
ನನ್ನ ಖರೆ ಹೆಸರ ಯಾವದಾ? ಅದಕ್ಕs
ನಾಕ ಮಂದ್ಯಾಗ ನನ್ನ ಹೆಸರ ಬರಬೇಕಾದರ,
ಹಿಂಗ ಬಂದ ಹೆಸರ ನನಗ ತಿಳೀಬೇಕಾದರ
ನಿನ್ನಂಥವನ್ನ ಬಂಟತನ ಮಾಡಿ ಕೊಲ್ಲಬೇಕಾಗಿತ್ತು
ಏನಪಾ! ನಿನ್ನs ಯಾಕಂತ ಕೇಳ-ಹೇಳತೇನ.

ಗೌಡ : ಅದನ್ನಷ್ಟ ನೀನs ಕೇಳಿಕೊಂಡ ಹೇಳಿಬಿಡಲ್ಲ.

ಬಾಳಗೊಂಡ : *(ಕೇಳದವನಂತೆ)*
ಮನ್ನಿರಾತ್ರಿ ಅರಿನಿದ್ದ್ಯಾಗ ಒಂದ ಟಕಳಿ
ಬಿದ್ಹಾಂಗಾಯ್ತೇನಪಾ! ಮನಿ ಬಾಗಲಾ ಹಾಕಿ
ಕಿಟಕಿ ಮುಚ್ಚೇದೇನು, ಪಡಸಾಲ್ಯಾಗೊಂದು
ಬಾಂವಿ ಆದ್ಹಾಂಗಾಯ್ತು ಬಾಂವ್ಯಾಗ ಪಾತಾಳಗಡ
ಇಳಿಬಿಟ್ಟ ಹೀಂಗ ನಿಂತಿದ್ದೆ, -ಯಾರೊ
ಹಿಂದಿನಿಂದ ಬಂದು ಬೆನ್ನಮ್ಯಾಲೆ ಧಂ
ಅಂತ ಗುಮ್ಮಿದರಪ! ಯಾರಂತ ತಿರುಗಿ
ನೋಡಿದರ ಒಳೇ ಚಂದ ದೇವಿ!
ತಾಯೀ! ಅನ್ನೂದರಾಗಂದರ-ಎಚ್ಚರಾಯ್ತು!
ರತ್ನs ಇಲ್ಲ! ನೀನs ತಗೊಂಡ ಪಾರೀ
ಮನಿಗಿ ಹೋದದ್ದು ಆಮ್ಯಾಲ ಗೊತ್ತಾಯ್ತು!
ನಿನ್ನ ಮ್ಯಾಲ ಇಟ್ಟ ಬಂಧಾಂಗ-ನಿನ್ನ ಕರದ
ಶಾಬಾಶ್ ಅನ್ನೂ ಹಾಂಗೂ ಆಯ್ತು. ಅಂದs
ಸರ್ವತ್ತಿನಾಗ ಕಮಲೀ ಮನಿಗಿ ಹೋಗಬೇಕಂತ
ತಾಳೇಹಾಕಿ, ಲಸಿಮ್ಯಾನ ಕಳಿಸಿ, ಅಂವ
ಕೇಳಿಕೊಂಡ ಬರಲೆಂತ ಕುಂತೆ, ಅಲ್ಲೆ
ಜರಾ ನಿದ್ದಿ ಬಂದ ಮಗ್ಗಲಾದರ, ನನ್ಹಾಂಗಾಗಿ ನನಗಿಂತ
ಮೊದಲs ಹೋಗೀದೀ ನೋಡೊ! ಏನನ್ನಲಿ
ನಿನ್ನ ಬುದ್ಧಿಗಿ? ಅದಕ್ಕs ಆ ದಿನ
ನಿರ್ಧಾರ ಮಾಡಿಬಿಟ್ಟೆ-ನಿನ್ನ ಕೊಂದರs
ನನ್ನ ಹೆಸರ ಬರೋದಂತ. ಹಂಗ್ಯಾಕ ನಗತಿ?

ಗೌಡ : ತಮ್ಮಾ, ನಾಲಿಗೆ ಐತೆಂತ ಬದಿಕೀದಿ
ನೋಡ ನೀನು. ಏನ ಮಾತಾಡ್ತೀ
ಏನ ಮಾತಾಡ್ತೀ-ಮಾರಾಯಾ ಆಟ
ಸುರುವಾದಾಗಿಂದ ನೋಡತೇನು,-ಒಂದ
ನಮನಿ ಕಪ್ಪೀಹಾಂಗ ವಟವಟ ಎತ್ತ
ಹ್ಯಾದರೂ ಬಿಡವಲ್ಲಿ.

ಬಾಳಗೊಂಡ : ಮುದುಕಾ. ಬಂಟರು ಏನ ಮಾತಾಡಿದರೂ
ಅದೆಲ್ಲಾ ಕುಡಗೋಲ ಮಸದ ಸಪ್ಪಳಂತ
ತಿಳಕೊ.

ಗೌಡ : ಕಡ್ಯಾಣಿಲ್ಲ ಕೊಸ್ಯಾಣಿಲ್ಲ ಬರೀ ಕುಡಗೋಲ
ಮಸದರ ಬಂತೇನ ಹೇಳಲಾ. ನೀ
ಹುಟ್ಟಿದಾಗಿನಿಂದ ಕೊಲ್ಲತೇನ ಕೊಲ್ಲತೇನ
ಅಂದಷ್ಟ ಮಂದಿನ್ನ ನಾ ಕೊಂದ
ಹಾಕೀದೇನ ಏನಪಾ. ಆದರ ಎಡಗೈ
ಮಾಡಿದ್ದ ಬಲಗೈಗಿ ಗೊತ್ತಿಲ್ಲ. ನಿನ್ಹಾಂಗ
ಬರೇ ಮಾತಲೆ ಕಡಿಯೋದಾಗಿದ್ದರ
ಕಟಕರ ಗಿಣಿ ಈ ನಾಡಿಗೇ ಪುಢಾರಿ
ಆಗತಿತ್ತು, ತಿಳೀತೇನ? ಹುಚ್ಚಾ, ಮನಿಗಿ
ಹೋಗಿ ದೀಪಾ ಹಚ್ಚು, ಗ್ವಾಡೀಮ್ಯಾಲ
ನೆಳು ಬೀಳತೈತಿ ನೋಡು, ಅದನ್ನ
ಕಡೀ ಹೋಗು. ಛೀ ನೀ ಅಂದರ
ನನಗ ದುಪ್ಪಟ್ಟ ಕರುಣಾ ಬರಾಕ
ಹತ್ತಿತಲ್ಲೊ, -ಒಂದಪಟು ನೀ ನನ್ನ
ಖಾಸ ಮಗಾ ಆದದ್ದಕ್ಕ; ಇನ್ನೊಂದ
ಪಟ್ಟ ನೀ ಇಂಥಾ ರೋಗಿ ಇದ್ದದ್ದಕ್ಕ.

ಬಾಳಗೊಂಡ : ಇಂಥಾ ಸುಳ್ಳ ಇನ್ನೂ ನಂಬತೇನಂತ
ತಿಳಿದಿದ್ದೀಯೇನ? ನೀ ರಾಕ್ಷಸ-ಹುಲಿಯಾಗಿ
ನಮ್ಮಪ್ಪನ್ನ ಕೊಂದಿ, ನಮ್ಮಪ್ಪನ ಹಾಂಗs
ಆಗಿ ಊರಾಳಿದಿ -ಇದ ನನಗ
ಗೊತ್ತಿಲ್ಲಂದಿ

ಗೌಡ : ಏ ಬೇಶ್ ಬೇಶ್! ನೀ ಭಾಳ ಭಾಳ
ತಿಳಕೊಂಡೀಯಪ! ಸಾಲೀಮಾಸ್ತರ
ನಿನ ಮುಂದ ಝುಕ್ಕಿಸಿದ ಅನ್ನಬಾರದ?
ಚಪ್ಪಾಳಿ ಬಡದ ನಗೂ ಮಾತ ಯಾಕ
ಆಡತೀಯೋ? ಬಾಳಗೊಂಡಾ ಈ ರಾಕ್ಷಸ
ಅಂದರ...

ಬಾಳಗೊಂಡ : ಇಕಾ ನಂದಾ ನಿಂದಾ ಹೆಸರ ಒಂದ
ಉಸರಿನ್ಯಾಗ ಆಡಬ್ಯಾಡ...

ಗೌಡ : ಮತ್ತ ಬಾಯಿ ಬಾಯಿ ಬಿಡತಾನಲ್ಲೊ.
ಹಿಂತಾ ಮಾತ ನಿನ್ನ ಬಾಯಿಗಿ ಒಪ್ಪಾಣೆಲ್ಲ
ತಮ್ಮ. ಇನ್ನ ಬ್ಯಾರೇ ಮಾತ ಕಲಿ ನೀ.
ಪಾರೀ ಮನ್ಯಾಗ ಒಬ್ಬ ಲಾಲ್ಯಾ ಇದ್ದಾನ
ನೋಡೊ, ಅವನ ಕೈಯಾಗ ನಾಕ ದಿನಾ
ನುರಿ; ಕೊಡಾ ಹೆಂಗ ಹೊರಬೇಕು,
ಕೈ ಹೆಂಬ ಬೀಸಬೇಕು, ಅಮಾಸಿ
ಹುಣಿವಿ ದಿನ ಎಲ್ಲವ್ವನ ಗುಡ್ಡದಾಗ
ಹೆಂಗ ಕುಣೀಬೇಕು, ಗಂಡಸರ ಜೋಡಿ
ಹೆಂಗ ಮಾತಾಡಬೇಕು-ಎಲ್ಲಾ ಕಲಸ್ತಾನ
ಅಂವ. ಥೂ ನಿಮ್ಮವ್ವ ನಿನ್ನ ಹಡಿಯೋ
ಬದಲಿ ಇಷ್ಟ ದೊಡ್ಡದೊಂದ ಹೂಂಸ
ಬಿಡಬಾರದS, ನಾಕ ಮಂದಿ ಮೂಗ
ಮುಚ್ಚಿಕೋತ್ತಿದ್ದರು!

ಬಾಳಗೊಂಡ : ಮುದುಕಾ... ಮುದುಕಾ...
ಮಿತಿಮೀರಿ ಬೆಳಿಲಾಕ ಹತ್ತೀದಿ.

ಗೌಡ : ನೀ ನನ್ನ ಕಡ್ಯಾಕ ಬಂದ ಹುರಪಲೆ
ನನಗೇನ ಖುಶಿ ಆಗಿತ್ತು! ಎಷ್ಟಂದರೂ
ಬೀಜ ನಂದು! ನಿನ್ನ ಕೈಯಾಗ ನಾ
ಸತ್ತರೂ ಹಲ್ಲಿ ಜೊಲ್ಲಿನ್ಹಾಂಗ ಒಳಗೊಳಗS
ಊರ ಮಂದಿ ಹೊಟ್ಯಾಗ ಜನ್ಮಜನ್ಮಾಂತರ
ಬೆಳೀಬೇಕ, ಸಾಯುವಾಗ 'ನಾ ಸತ್ತರೂ
ಅಮಾಸಿ ನಿಲ್ಲಾಣೆಲ್ಲೊ ಮಗನS' ಅಂತ

ಒಂದ ಕವನಾ ಕವಿ ಮಾಡಿ ಹಾಡಬೇಕ,-
ನಿಶ್ಯಾನ್ಯಾಗಿ ಮೆರೀಬೇಕ-ಅಂತ ಏನೇನ
ಕನಸ ಕಂಡಿದ್ನೇನಪಾ! ಆದರ ನೀ
ನನ್ನಂಥಾ ನರಮನಿಶ್ಯಾಗ ಹುಟ್ಟಿದಾಂವಲ್ಲ–
ಬರೀ ಮಾತಿಗಿ ಹುಟ್ಟಿದಾಂವ! ಕಡಿಯೋದಂದರ
ಬಾಯಾಗಿರೋದಿಲ್ಲೊ ಕೂಸs ರಗತದಾಗಿರತೈತಿ!
ಎದ್ಯಾಗ ಬರಕೊ ಈ ಮಾತು. ಹಾಂಗs
ಇದನ್ನಷ್ಟ ತಿಳಕೊ: ನಿನ್ನ ಒಳಗ
ರಗತ ಮಾಂಸ ಇಲ್ಲs ಇಲ್ಲ, ಬರೀ
ರೋಗಿಷ್ಟರ ಉಗಳ ತುಂಬೇತಿ, ಹೋಗು
ಜಬರ ಮಾಡತಾನ ಜಬರ.

ಬಾಳಗೊಂಡ : ಮುದುಕಾ ನನ್ನ ಖಾಲೀ ಮಾಡಿ ನೀನs
ತುಂಬಿಕೊಳ್ಳಾಕ ಹತ್ತೀದಿ...

ಗೌಡ : ಬಾಯ್ಮುಚ್ಚಲೇ, ನನಗೇನ ಅರ್ಥಾ ಆಗೇತ್ಯೋ
ನಿಂದ ತುಂಬಿಕೊಳ್ಳಾಕ? ನಾ ಒಮ್ಮಿ
ಕಕ್ಕಿದಷ್ಟ ನೀ ಜೀವಮಾನ ತಿನ್ನಾಕಿಲ್ಲ.
ಮಗಾ ಮನ್ನಿ ಹುಟ್ಟಿ ನಿನ್ನಿ ಕಣ್ಣ
ತೆರದ್ದಾನು, ಇಂದ ತನ್ನ ಐಸಿರಿ ನನಗ
ದಾನಾಮಾಡಾಕ ಬಂದಾನ! ಹೋಗಲೇ
ಕುರುಸಾಲ್ಯಾ. ಚಿತ್ರದಾಗಿನ ಹಣ್ಣ ನೀ,-
ನೋಡಿದರ ಬಾಯಾಗ ನೀರ ಬರತಾವು,
ತಿನ್ನಾಕಿಲ್ಲ. ಹೋಗು, ಆ ಹೊಳಿ ಅಗಸ್ಯಾಗ
ಸಾಣಿಕಲ್ಲಾಗಿ ಕುಂತಕೊ. ನೀರ ತರೋ
ಹೆಂಗಸರು ಹೋಗಬರೋವಾಗ ನದರ
ಮಸ್ಯಾಕರೆ ಆದೀತು.

ಬಾಳಗೊಂಡ : ಮುದುಕಾ ನನ್ನ ಮಾತ ನೀನs
ಆಡಲಿಕ್ಹತ್ತೀದಿ...

ಗೌಡ : ಹೌಂದ್ಯಾಕ ಹೌಂದ, ಹೌಂದಂದರ ಹೌಂದ.
ಹೌಂದೇನ ಹೌಂದ. ಏನ ಮಾಡಾಂವಾ?
ಕಮಲಿ ಮೀಸಲಾ ನೀ ಮುರದ ಬಂದಿ,
ನಾ ಉಂಡ ಬಂದಿನು. ರತ್ನ ನಿನ್ನ

ಹಂತ್ಯಾಕ ಐತೆಂದರು, ಕದ್ದಿನು. ಹೆಜ್ಜಿ
ಹೆಜ್ಜಿಗಿ ನಿನ್ನ ತಾಕತ್ತಿಗಿ ಸವಾಲ
ಹಾಕಿದ್ನು. ನಾ ಇಷ್ಟ ಮಾತಿನಾಂವಲ್ಲ-
ಆದರ ಇಂಥ ಮಗನ್ನ ಹಡದ್ನೆಲ್ಲಾ
ಅಂತ ಭಾಳ ತ್ರಾಸ ಆತ ನನಗ.
ಒಂದ ದಿನಾ ಆ ಪರಿಬ್ಯಾಗ ಬಾಳಗೊಂಡ
ನನ್ನ ಮಗಾ ಅಂತ ಹೇಳಾಂವಿದ್ನು.
ಆದರ ಇನ್ನ ಹೇಳಾಣಿಲ್ಲ, ಅಪ್ಪನ
ಹೆಸರ ಇಲ್ಲದs ಸಾಯ್ಹೋಗ ನಡಿ.

ಬಾಳಗೊಂಡ : *(ಚೀರಿ)*
ಮುದುಕಾss…..

ಗೌಡ : ಒಳಗಿನ ಶಿರಾ ಹರದೀತ, ಯಾಕಾದರೂ
ಚೀರತೀಯೊ? ಚಂದಾಗಿ ನಾಕ ಮಂದಿ
ಹೌಂದನ್ನೋ ಹಾಂಗ ಜಗಳಾ ಸೈತ
ಮಾಡಾಕ ಬರಾಣಿಲ್ಲಲ್ಲೊ, ಕಾ ನೋಡ
ಗಂಡಸರ ಸುತ್ತೋ ಈ ರುಂಬಾಲ
ತಗೋತ್ತೇನು, ಬಳಿ ಒಪ್ಪಿಧ್ಹಾಂಗ
ಈ ಕೈಗಿ ಕುಡಗೋಲ ಒಪ್ಪಾಣಿಲ್ಲ, ಅದನ್ನ
ತಗೋತೇನು…

*(ರುಂಬಾಲು ಕುಡುಗೋಲು ಕಸಿದುಕೊಂಡು ಕೊನೆಗೆ ಬಾಳಗೊಂಡನ ಭುಜ ತಟ್ಟಿ ಹೇಳುತ್ತಾನೆ.)*

ನೋಡಿಲ್ಲಿ – ಕಾ ಹೋಗತೇನು –
ಏನ ಮಾಡತಿ? ಒಂದ ಮಾತ
ಹೇಳಿರತೇನುಳ ಇನ್ನ ಆ ಹಳಿ ಬಡಿವಾರ
ಬಿಟ್ಟಬಿಡ.

*(ಗೌಡ ಹೊರಡುವನು. ತಕ್ಷಣವೆ ಬಾಳಗೊಂಡ ಗೌಡನ ಎದೆ ಹಿಡಿದು ತರುಬುತ್ತಾನೆ.)*

ಬಾಳಗೊಂಡ : ನೀ ನನ್ನ ತಂದಿ ಖರೆ?

ಗೌಡ : ಯಾಕ?

ಬಾಳಗೊಂಡ : ಖರೆ ಏನ ಹೇಳೊ.

ಗೌಡ : ಹೇಳದಿದ್ದರ ಅಳತಿಯೇನ ಮತ್ತ? ಅಪ್ಪನ
ಗುರುತ ಮಾಡೋದರಿಂದ ಸಿಗತೈತಿ, ಬರೀ
ಆಡಿ ಹಾಡಿಕೊಂಡ ಅಳೋದರಿಂದ
ಸಿಗಾಣಿಲ್ಲೇನಪಾ, ನಿನ ಮುಂದ ನಿಂತರ
ಪುರಾಣಿಕನ್ಹಾಂಗ ಮತ್ತೊಂದ ಕತಿ
ಹೇಳಾಂವ ನೀ, ಹೋಗ ಮನಿಗಿ ಹೋಗ.
ಹೋಗಪಾ ಶ್ಯಾಣ್ಯಾ…

*(ಮಕ್ಕಳನ್ನು ರಮಿಸಿದಂತೆ ಬಾಳಗೊಂಡನ ಗದ್ದ ತೀಡಿ ಅಣಕಿಸುತ್ತ ಹೊರಡುವನು)*

ಬಾಳಗೊಂಡ : ನನ್ನ ರುಂಬಾಲ, ರತ್ನ, ಕುಡುಗೋಲ ಸುಮ್ಮನ
ಕೊಡೋ ಏ…

*(ಗೌಡ ಅಣಕಿಸುವ ಹಾಗೆ ಬಯಲಾಟದ ಗತ್ತಿನಲ್ಲಿ ಬಾಳಗೊಂಡನ ಸುತ್ತ ನರ್ತಿಸುವನು. ಬಾಳಗೊಂಡ ಮೇಲಿನ ಮಾತನ್ನು ಮತ್ತೆ ಮತ್ತೆ ಚೀರುವನು. ಮುದುಕ ಲಕ್ಷಿಸದೇ ಹೊರಡುವನು. 'ಸುಮ್ಮನ ಕೊಡೋ ಗೌಡಾ— ಎಪ್ಪಾ ಕೊಡೋ-*
*ಎಂದು ಚೀರಿ ಅಲ್ಲಿಯೇ ಆ ಮಾತು ಹೇಳುತ್ತಲೇ ಕಲ್ಲಿಗಾಗಿ ಹುಡುಕಿ ಒಂದು ದೊಡ್ಡ ಕಲ್ಲುಸಿಕ್ಕನಂತರ ಆ ಕಲ್ಲಿನಿಂದ ಮುದುಕನ ಮೇಲೆ ಹೇರುವನು. ಮುದುಕ ಚೀರಿ ನರಳಿ ಸಾಯುವನು. ಅವನು ಚೀರಿ ನರಳುತ್ತಿರುವಾಗ ಬಾಳಗೊಂಡ ಅಪ್ರತಿಭನಾಗಿ ಸಂಕಟವನ್ನುಭವಿಸಿ ಕೊನೆಗೆ ಹುಚ್ಚನಂತೆ ಆಡುವನು.)*

ಬಾಳಗೊಂಡ : ತಿಳೀತಿಲ್ಲ? ತೋರಿಸಿದೆನಿಲ್ಲ?
ಮಾಡಿದೆನಿಲ್ಲ?

*(ಹೀಗೆನ್ನುತ್ತಲೇ ಮುದುಕನ ರುಂಬಾಲು ತೆಗೆದು ತನ್ನ ತಲೆಯ ಮೇಲಿಟ್ಟುಕೊಂಡು ಕುಡಗೋಲು ರತ್ನ ತೆಗೆದುಕೊಂಡು ಗೌಡನ ಶವವನ್ನು ಚೀಲದಲ್ಲಿ ತುಂಬಿ ಬೆನ್ನಮೇಲಕ್ಕೆ ಹೊರುವನು.)*

ಬಾಳಗೊಂಡ : ಸೂತ್ರಧಾರ

ಸೂತ್ರಧಾರ : ಹಾ

ಬಾಳಗೊಂಡ : ನನ್ನ ಬೆನ್ನಮ್ಯಾಲಿಂದೇನು?

ಸೂತ್ರಧಾರ : ಕರ್ಮದ ಗಂಟು.

ಬಾಳಗೊಂಡ : ಇದನ್ನ ಊರ ಮುಂದಿನ ಹಾಳಬಾಂವ್ಯಾಗ
ಒಗದ ಒಳಕಾ ಮಾಡಿ ಬರತೇನು.
ಅಷ್ಟರಾಗ ಹೊಲೇರ ಕಮಲಿ ಬಂದ ನಮ್ಮ

ದನದ ಹಕ್ಕ್ಯಾಗ ಮೇವಿನ ಕಟ್ಟೀಮ್ಯಾಲ
ಕಾದಿರಬೇಕಂತ ತಿಳಿಸುವಂಥವನಾಗು.

ಸೂತ್ರಧಾರ : ನಾನಾದರೂ ತಿಳಿಸುತ್ತೇನೆ. ನೀನಾದರೂ ಹೋಗುವಂಥವನಾಗು.

*(ಲಾಲಿಮ-ಧ್ರುವ ಕೇಳಿಸುತ್ತದೆ. ಬಾಳಗೊಂಡ ನಿಷ್ಕ್ರಮಿಸುವನು.)*

ಸೂತ್ರಧಾರ :

ಹಾರಿ ಹಾರೈಸುವೆ| ಹಲವ ಹಂಬಲಿಸುವೆ
ತೋರೆಲೊ ಕರುಣಾ| ಬಾರೊ ಮೋಹನಾ ||ಪ||

ಹೊಕ್ಕು ಹೊರಬಂದಂಥ ಅರಳುಮಲ್ಲಿಗಿ ಹೂವ
ಮದಾ ಮೂಸಿ ಕೈ ತುರಿಸಿ ಉರುಪ ಹೆಚ್ಚಿಸದಾಂವಾ
ನನ್ನ | ನುಡುವ ತೊಡುವಂಥ ಶ್ರೀಮಂತ
ಏ ಧೀಮಂತಾ | ಹಾ ದೊರೆಯೆ ||೧||

ಲಜ್ಜಿ ನಾಚಿಕಿ ಮಾನ ಕಳಚಿ ಬರಿಮೈಯಾದೆ
ನೆನಪಾಗಿ ಸರ್ವಾಂಗ ಗುಡಿಗಟ್ಟಿ ನಿಲ್ಲುವೆ
ಹೊಟ್ಟಿ | ಬಗಿದು ಒಳಗಿಟ್ಟುಕೊಳ್ಳುವೆನೊ |
ನವಿರೇಳುವೆನೊ | ಹಾ ದೊರೆಯೆ ||೨||

ಎಸಗುವ ಎಸಕದ ಹೆಸರ ಗೊತ್ತಿರದಾಂವಾ
ಉಲಿದುಲಿದು ನಿಂತಲ್ಲಿ ಸಂತೀಯ ಮಾಡಾಂವಾ
ಇಂಥಾ | ಮಾತಿನ ಪಾತಕವ್ಯಾಕೊ |
ಎಂಜಲ ಬದುಕೊ | ಹಾ ದೊರೆಯೆ ||೩||

ಎಡವೀದಂಥಾ ಗೊತ್ತ ಮರೆತು ಅರಸುವಿಯೆತ್ತ
ವಾಕಿನಿಂದಲೆ ವಸ್ತು ಹಿಡಿವೆನೆಂಬುವುದೆತ್ತ
ನಿನ್ನ | ಸಂದೇಹದೊಳು ದೇಹ ಮರತಿ |
ದೇಹ ಮರತಿ | ಹಾ ದೊರೆಯೆ ||೪||

ಚರ್ಮಸ್ಪರ್ಶಕೆ ಒಳಗೊ ಸ್ಪರ್ಶ ಚರ್ಮಕೆ ಒಳಗೊ
ಚಕಮಕಿ ಕಿಡಿಯೊಳಗ ನನ್ನ ನಿನ್ನಯ ಅರಿವೊ

ಹುಟ್ಟಿ | ಹೊಂದಿ ಬಂದೇವೊ ಈ ಶಾಪ |
ಬಿಡದ ಶಾಪ | ಹಾ ದೊರೆಯೆ ||ಋ||

*(ಸೂತ್ರಧಾರನ ಹಾಡು ಅರ್ಧಕ್ಕೆ ಬಂದಿರುವಾಗ ಬಾಳಗೊಂಡ ಬಂದು ಮತ್ತೆ ನೇಪಥ್ಯದಲ್ಲಿಗೆ ಹೋಗುತ್ತಾನೆ. ಹಾಡು ಪೂರ್ತಿ ಮುಗಿದು ಸೂತ್ರಧಾರ ಸರಿದಾರ ಮೇಲೆ ಬಾಳಗೊಂಡ ಅತ್ಯಂತ ದಣಿದವನಾಗಿ ರಂಗದಲ್ಲಿರುವ ಗದ್ದಿಗೆಯ ಮೇಲೆ ಬಂದು ಕುಳಿತುಕೊಳ್ಳುತ್ತಾನೆ. ದೂರದಲ್ಲಿ 'ಮಳಿ ಮಳಿ ಮಳಿ ಮಳಿ ಬಂತಯೋ... ಬೀಸಿ ಬಂತಯೋ ಸೂಸಿ ಬಂತಯೋ' ಎಂಬ ಅನೇಕ ಉತ್ಸಾಹದ ಧ್ವನಿಗಳು ಕೇಳಿ, ಬರಬರುತ್ತ ಸ್ಪಷ್ಟವಾಗುತ್ತವೆ. ಹೊಲೇರ ಕಮಲಿ ಸಂಭ್ರಮದಿಂದ ಪ್ರವೇಶಿಸುವಳು)*

ಗೌಡ್ತಿ : ಬೆವರ ಬಂದ ನನ್ನ ಮೈ ಘಮಘಮಾ
ಹೆಂಗ ನಾರತೈತಿ ನೋಡ್ರೇ...
ಎಂದೂ ಬಾರದ ಬೆವರ ಹೆಂಗ ಇಳೀತೈತಿ
ನೋಡ್ರೇ... ನೋಡ್ರೇ...

*(ರಂಗದ ಆ ಈ ಕಡೆಗೆ ಓಡಾಡಿ ಬೆವರು ಒರೆಸಿಕೊಳ್ಳುತ್ತ ಸಡಗರ ಮಾಡುತ್ತ ಸಂಭ್ರಮಿಸುತ್ತಾಳೆ.)*

ಸೂತ್ರಧಾರ : (ಸಂಭ್ರಮದಿಂದ ಪ್ರವೇಶಿಸಿ)
ರಾಮಗೊಂಡ! ರಾಮಗೊಂಡ ಬಂದಾ!
ನಿಮ್ಮನ್ನ ನೋಡಬೇಕಂತಾನ ಒಳಗ
ಕರೀಲ್ರಿ?

*(ಬಾಳಗೊಂಡ ಬೇಡವೆಂಬಂತೆ ಕಣ್ಣುಮುಚ್ಚಿಕೊಂಡೇ ಸನ್ನೆ ಮಾಡುವನು.*
*'ಮಳಿ ಮಳೀ ಮಳೀ' ಎಂದು ಹೊರಗೆ ಜನ ಕಿರುಚುತ್ತಿದ್ದಾರೆ. ಸೂತ್ರಧಾರ ಪ್ರೇಕ್ಷಕರಿಗೆ ನಮಿಸುತ್ತಿರುವಾಗ ತೆರೆ.)*

* * *

# ಹುಲಿಯ ನೆರಳು

## ಮುನ್ನುಡಿ

ಚಂದ್ರಶೇಖರ ಕಂಬಾರರ ನಾಟಕಗಳ ಬರೆವಣಿಗೆಯಲ್ಲಿರುವ ಇಬ್ಬಂದಿತನ ಅವರ ಸಾಹಿತ್ಯಿಕ ವ್ಯಕ್ತಿತ್ವದಲ್ಲಿ ಒಂದು ಸಮಸ್ಯೆಯೂ ಹೌದು, ಅವರ ನಾಟಕಗಳಲ್ಲಿಯ ಶಕ್ತಿಕೇಂದ್ರವೂ ಹೌದು. 'ಋಷ್ಯಶೃಂಗ', 'ಜೋಕುಮಾರಸ್ವಾಮಿ', 'ಕಾಡುಕುದುರೆ', 'ಸಿರಿಸಂಪಿಗೆ', ಇಂಥ ಕೃತಿಗಳು ಒಂದು ಗುಂಪಿಗೆ ಸೇರಿದ್ದರೆ, ಅವರ 'ಚಾಳೇಶ', 'ಜೈಸಿದ ನಾಯಕ', 'ಹರಕೆಯ ಕುರಿ' ಇವು ಇನ್ನೊಂದು ಗುಂಪಿಗೆ ಸೇರಿದ್ದರೆ, ಅವರ 'ಚಾಳೇಶ', 'ಜೈಸಿದ ನಾಯಕ', 'ಹರಕೆಯ ಕುರಿ' ಇವು ಇನ್ನೊಂದು ಗುಂಪಿಗೆ ಸೇರಿದ ಕೃತಿಗಳಾಗಿವೆ. ಎರಡನೆಯ ಗುಂಪಿನ ನಾಟಕಗಳ ಆಸಕ್ತಿ ಬಹಿರ್ಮುಖವಾದದ್ದು, ಅವುಗಳ ಮುಖ್ಯ ವಸ್ತುವೆಂದರೆ ಸಮಕಾಲೀನವಾದ ರಾಜಕೀಯ. 'ಸಾಂಬಶಿವ ಪ್ರಹಸನ'ದಂಥ ಕಲ್ಪತೆಯ ವೇಷತೊಟ್ಟ ನಗೆನಾಟಕದಲ್ಲಿ ಕೂಡ ನಿರೂಪಿತವಾಗಿರುವದು ಇತಿಹಾಸದ ಸಂದರ್ಭದಲ್ಲಿ ಪ್ರಕಟವಾಗುವ ನಾಗರಿಕ

ಜೀವನವಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ ರಾಜಕೀಯ ಪ್ರಜ್ಞೆಯಿಂದ ಮನುಷ್ಯನಿಗೆ ಬಿಡುಗಡೆಯಿಲ್ಲ ಎಂಬ ಮಾತು ಈಗ ಸರ್ವಗ್ರಾಹ್ಯವಾಗಿದೆ. ಅಂದ ಮೇಲ ಕಂಬಾರರ ಈ ಕೃತಿಗಳಲ್ಲಿಯ ರಾಜಕೀಯದ ಅಭಿವ್ಯಕ್ತಿ ಸಹಜವಾಗಿದೆ. ಈ ನಾಟಕಗಳಿಗೆ ಅವುಗಳ ಬೆಲೆಯೂ ಇದೆ. ವಿಡಂಬನದ ತೀಕ್ಷ್ಣತೆಯಿಂದಾಗಿ ಈ ಕೃತಿಗಳ ಪ್ರಭಾವ ಬಹುಕಾಲ ಬಾಳುವಂಥ ಸಾಮರ್ಥ್ಯವನ್ನು ಪಡೆದಿದೆ.

ಆದರೆ ಮೊದಲ ಗುಂಪಿಗೆ ಸೇರಿದ ನಾಟಕಗಳ ರೀತಿ ಸಂಪೂರ್ಣ ಬೇರೆಯಾಗಿದೆ. ೧೯೭೨ರಲ್ಲಿ ಕಂಬಾರರ 'ಜೋಕುಮಾರ ಸ್ವಾಮಿ'ಯ ಪ್ರದರ್ಶನ ಬೆಂಗಳೂರಲ್ಲಿ ಮೊದಲ ಸಲ ಆದಾಗ ಅದನ್ನು ಕಣ್ಣಾರೆ ಕಂಡವರಲ್ಲಿ ನಾನೂ ಒಬ್ಬವನಾಗಿದ್ದೆ. ಆ ಹೊತ್ತಿಗಾಗಲೇ ಕಂಬಾರರ 'ಋಷ್ಯಶೃಂಗ'ದ ಪರಿಚಯ ನನಗಾಗಿತ್ತು. 'ಜೋಕುಮಾರ ಸ್ವಾಮಿ'ಯ ಹಸ್ತಪ್ರತಿಯನ್ನೂ ಓದಿ ಮುಗಿಸಿದ್ದೆ. ಅಲ್ಲದೆ 'ಸಂಗ್ಯಾಬಾಳ್ಯಾ' ಬಾಲ್ಯದಿಂದಲೇ ನನ್ನ ಕಣ್ಣು ಸೆಳೆದ ನಾಟಕವಾಗಿತ್ತು. ಇಷ್ಟಾಗಿಯೂ 'ಜೋಕುಮಾರ ಸ್ವಾಮಿ'ಯ ಅಂದಿನ ಪ್ರದರ್ಶನದ ಪ್ರಭಾವ ಅಭೂತ ಪೂರ್ವವಾಗಿತ್ತು. ಕಳೆದುಕೊಂಡಿದ್ದ ರಂಗಭೂಮಿಯನ್ನು ಜೀವಂತವಾಗಿ ತಿರುಗಿ ಪಡೆದದ್ದನ್ನು ಅಂದಿನ ಪ್ರೇಕ್ಷಕರು ಅನುಭವಿಸಿದ್ದರು. ಅದನ್ನು ಜಾನಪದ ರಂಗಭೂಮಿ ಎಂದು ಗುರುತಿಸಲಾಯಿತು. ಆದರೆ ಈ ಜಾನಪದ ರಂಗಭೂಮಿ ಬೆಂಗಳೂರಿನಂಥ ಅತ್ಯಂತ ಆಧುನಿಕವಾದ ನಗರದ ಪ್ರೇಕ್ಷಕರನ್ನು ಹೇಗೆ ಆಕರ್ಷಿಸಿತು? ಇದು ಇಂದಿಗೂ ವಿಚಾರ ಮಾಡಬೇಕಾದ ವಿಷಯವಾಗಿದೆ. ನಮ್ಮ ಹಳೆಯ ಸಂಸ್ಕೃತ ನಾಟಕಗಳ ರಂಗಭೂಮಿಗೂ ನಮ್ಮ ಜಾನಪದ ರಂಗಭೂಮಿಗೂ ವ್ಯತ್ಯಾಸವಿದೆಯೆ? ಅದಕ್ಕೂ ಮುಂದೆ ಹೋಗಿ ಇನ್ನೊಂದು-ಆದರೆ ಈ ಪ್ರಶ್ನೆಗೆ ಸಂಬಂಧಿಸಿದ ಪ್ರಶ್ನೆಯನ್ನೂ ಕೇಳಬಹುದು-ನಮ್ಮ ಪುರಾಣಗಳಿಗೂ ಮತ್ತು ಜಾನಪದ ದಂತಕತೆಗಳಿಗೂ ವ್ಯತ್ಯಾಸವಿದೆಯಾ? ವ್ಯತ್ಯಾಸವಿದೆ ಮತ್ತು ವ್ಯತ್ಯಾಸವಿಲ್ಲ ಎಂದು ಉತ್ತರ ಹೇಳಬೇಕಾಗುತ್ತದೆ. ನಮ್ಮ ಜಾನಪದ ರಂಗಭೂಮಿ ಸಂಸ್ಕೃತ ರಂಗಭೂಮಿಯ ಅನೇಕ ತಂತ್ರಗಳನ್ನು ಸಮಯಗಳನ್ನು ಬಳಸಿಕೊಂಡಿದೆ, ಮತ್ತು ತನ್ನ ಕೆಲವು ತಂತ್ರ ವಿಶೇಷಗಳನ್ನು ಸಂಸ್ಕೃತ ರಂಗಭೂಮಿಗೆ ದಾನ ಮಾಡಿದೆ. ಅಲ್ಲದೆ ಈ ಎರಡೂ ರಂಗಭೂಮಿಗಳ ಸೈದ್ಧಾಂತಿಕ ತಳಹದಿ ಒಂದೇ ಆಗಿದೆ. ಈ ರಂಗಭೂಮಿಗಳು ಪಡೆದಿದ್ದ ಸಂಸ್ಕಾರಗಳು ಬೇರೆ ಬೇರೆಯಾಗಿರುವದರಿಂದ ಅವುಗಳಲ್ಲಿ ವ್ಯತ್ಯಾಸವೂ ಇದೆ. ಕಂಬಾರರು ಇಂಥ ಒಂದು ರಂಗಭೂಮಿಯನ್ನು ಬದುಕಿಸಿಕೊಟ್ಟರು.

ಈ ಸಂಗತಿಗಿಂತ ಹೆಚ್ಚು ಮಹತ್ವದ್ದಾಗಿರುವದು ಕಂಬಾರರ ನಾಟಕಗಳ ಅರ್ಥಪೂರ್ಣತೆ. 'ಹೇಳತೇನ ಕೇಳ' ಎಂಬ ತಮ್ಮ ಮೊದಲ ಕಥನ ಕವನದಲ್ಲಿ ಕಂಬಾರರು ತಮ್ಮ ಮೂಲಭೂತವಾದ ಪುರಾಣ ಕತೆಯನ್ನು ನಿರೂಪಿಸಿದರು. ಈ ಪುರಾಣತೆ ಅವರ ಋಷ್ಯಶೃಂಗ ಮೊದಲಾದ ಮೊದಲ ಗುಂಪಿನ ಎಲ್ಲ ನಾಟಕಗಳಿಗೆ ವಸ್ತುವನ್ನು, ಪಾತ್ರಗಳನ್ನು ಅಲ್ಲದೆ ಅರ್ಥವಂತಿಕೆಯನ್ನು ಕೊಟ್ಟಿದೆ. ಕಥನ ಕಾವ್ಯದಲ್ಲಿ ಮೂಡಿ ಬಂದದ್ದು ಹಲವು ನಾಟಕಗಳಲ್ಲಿ ಬೆಳವಣಿಗೆಯನ್ನು ಪಡೆದ ಈ ಕತೆ 'ಹುಲಿಯ ನೆರಳು' ನಾಟಕದಲ್ಲಿ ಪರಾಕಾಷ್ಠೆಯನ್ನು ಮುಟ್ಟಿದೆ. ಕಾಲಾನುಕ್ರಮದಲ್ಲಿ ಈ ನಾಟಕ ಮೊದಲು ಬರಬೇಕಾಗಿತ್ತು. 'ಋಷ್ಯಶೃಂಗ' ಆಮೇಲೆ ಬರಬೇಕಾಗಿತ್ತು. 'ಹುಲಿಯ ನೆರಳು' ನಾಟಕದ ರಾಮಗೊಂಡ 'ಋಷ್ಯಶೃಂಗ' ನಾಟಕದ ಬಾಳಗೊಂಡನ ಅಣ್ಣ. ಅವನ ಬಲಿ ಆದ ಮೇಲೆ ಬಾಳಗೊಂಡನ ಕತೆ ಪ್ರಾರಂಭವಾಗುತ್ತದೆ. ಇದು ಕಥಾನುಕ್ರಮ. ಆದರೆ ಪುರಾಣಕತೆ ಕೂಡ ಹೊಸ ಅರ್ಥವಂತಿಕೆಗೆ ಇಂಬುಗೊಡಲು ಬೆಳೆಯುತ್ತ ಹೋಗುವದರಿಂದ ನಾಟಕಗಳಲ್ಲಿ ಈ ಕ್ರಮ ವಿಪರ್ಯಸ್ತವಾಗಿದೆ.

ಪುರಾಣಿಕತೆ ಮತ್ತು ಜಾನಪದ ಕತೆ ಇವುಗಳ ನಡುವಿನ ವ್ಯತ್ಯಾಸ ಕಣ್ಣಿಗೆ ಕಾಣುವಷ್ಟು ಸ್ಪಷ್ಟವಾಗಿದ್ದರೂ ಅದು ತಾತ್ವಿಕ ವ್ಯತ್ಯಾಸವಲ್ಲ. ಪುರಾಣದಲ್ಲಿ ನಡೆಯುವುದೆಲ್ಲ ಜಾನಪದ ಕತೆಯಲ್ಲಿ ಪ್ರಾದೇಶಿಕ ಪರಿಸರದಲ್ಲಿ ಸಣ್ಣ ಪ್ರಮಾಣದಲ್ಲಿ ನಡೆಯುವುದೆಲ್ಲ ಜಾನಪದ ಕತೆಯಲ್ಲಿ ಪ್ರಾದೇಶಿಕ ಪರಿಸರದಲ್ಲಿ ಸಣ್ಣ ಪ್ರಮಾಣದಲ್ಲಿ ನಡೆಯುತ್ತದೆ. 'ಹೇಳತೇನ ಕೇಳ'ದ ಕತೆ ನೋಡಲಿಕ್ಕೆ ಜಾನಪದ ಕತೆ, ಆದರೆ ಸತ್ವದಲ್ಲಿ ಪುರಾಣಕತೆ. ಪುರಾಣ ಕತೆಯ ವಿಶ್ವರಚನೆ ಇದಕ್ಕಿಲ್ಲ. ಇಲ್ಲಿಯ ದೇವಾನುದೇವತೆಗಳು ಪಾರಂಬಿ ಕರ್ರೆವ್ವ ಮತ್ತು ಗುಡ್ಡದ ನಿರವಾನಿ. ಎರಡೂ ನೆಲಕ್ಕಂಟಿಕೊಂಡ ಸ್ಥಿರ ದೇವತೆಗಳು. ರಾಕ್ಷಸನ ನಿಜ ಸ್ವರೂಪ ನಮಗೆ ಗೊತ್ತಿಲ್ಲ. ಆದರೆ ಅವನ್ನು ಕಾಣಿಸಿಕೊಳ್ಳುವುದು ಸತ್ತ ರಾಯಗೊಂಡನ ರೂಪದಲ್ಲಿ. ಕತೆಯಲ್ಲಿ ಅವನು ಪ್ರತಿನಾಯಕನಾಗಿದ್ದರೂ ಅವನ ಕೆಲಸ ಮಾತ್ರ ಸುಳ್ಳು ನಾಯಕನದು. ರಾಕ್ಷಸ ಜೀವನಕ್ಕೆ ವಿಮುಖವಾದ ಶಕ್ತಿಯನ್ನು ಪ್ರತಿನಿಧಿಸುತ್ತಾನೆ. ಅವನಿಗೆ ಮೂಲದಲ್ಲಿ ಅಸ್ತಿತ್ವವಿಲ್ಲದಿರುವುದರಿಂದ (ಉಪನಿಷತ್ತು ಹೇಳುವ ಅಸತ್) ಅವನು

ಒಮ್ಮೆ ಹುಲಿಯಾಗಿ, ಇನ್ನೊಮ್ಮೆ ಸುಳ್ಳುನಾಯಕನಾಗುತ್ತಾನೆ. ವೃಕ್ಷ ಮತ್ತು ಪರ್ವತಗಳ (ಇವು ಸ್ಥಿರದೇವತೆಗಳು) ಅಚಲ ಸ್ಥಿತಿಗೂ ಸುಳ್ಳುನಾಯಕನ ಚಲನ ಶೀಲತೆಗೂ ಇರುವ ವಿರೋಧ ಮಹತ್ವದ್ದಾಗಿದೆ. ಇಲ್ಲಿ ನಾಯಕರು ಮೂರು ಜನ-ರಾಯಗೊಂಡ, ರಾಮಗೊಂಡ ಮತ್ತು ಬಾಳಗೊಂಡ. ಮೊದಲಿನವನು ಸತ್ತುಹೋದರೆ ಬಾಳಗೊಂಡ. ಇದ್ದೂ ಸತ್ತಂತಿರುತ್ತಾನೆ. ಇವರ ಪರಾಕ್ರಮ ಮತ್ತು ಇವರ ಕಾಮ ಜಗತ್ತನ್ನು ಬದುಕಿಸಿಕೊಳ್ಳಬೇಕು. ನಾಯಕರ ಭಾವನುಭಾವಗಳು ಸುಳ್ಳುನಾಯಕನ ಭಾವಾನುಭಾವಗಳಿಗಿಂತ ಭಿನ್ನವಾಗಿವೆ. ಅವರ ನಡುವಿನ ಸಂಘರ್ಷದ ಸೋಲು ಗೆಲುವಿನಗಿಂತ ಈ ಭಿನ್ನತೆ ಹೆಚ್ಚು ಮಹತ್ವದ್ದೆಂದು ಕಾಣುತ್ತದೆ. ರಾಕ್ಷಸ, ಹುಲಿ, ಸತ್ತಗೌಡ-ಈ ರೂಪಾಂತರ ನಾಯಕರಿಗಿಲ್ಲ. ಪಾರಂಬಿ ಕರ್ರೆವ್ವ ಮತ್ತು ಗುಡ್ಡದ ನಿರವಾನಿಯಂತೆ ನಾಯಕರಿಗಿರುವದು ಒಂದೇ ರೂಪ, ವೈಭವದಿಂದ ಬಾಳಿದ್ದ ರಾಯಗೊಂಡ ಹುಲಿಯೊಡನೆ ಹೋರಾಡಿ ವೀರನಾಗಿ ಸತ್ತ. ಹುಲಿಯ ಹಾಲನ್ನು ತಂದ ರಾಮಗೊಂಡನೂ ವೀರನೇ. ಆದರೆ ರಾಮಗೊಂಡನಿಗೆ ತನ್ನ ಇನ್ನೊಂದು ರೂಪದ ಸುಳಿವು ಸಿಕ್ಕಿದೆ. ಬಾಲಗೊಂಡನಿಗೆ ತಾನು ನಿಜವೋ ಇನ್ನೊಂದು ರೂಪವೇ ನಿಜವೋ ಎಂಬ ಭ್ರಮೆ ಕಾಡಿ ಮುಕ್ಕಿದೆ. ಕಣ್ಣಿಗೆ ಕಾಣದ ರಾಕ್ಷಸ ಹುಲಿಯಾಗಿ, ತಂದೆಯಾಗಿ ಬಸಿರಿನಲ್ಲಿ ಮೊಳೆತ ಇನ್ನೊಂದು ಗರ್ಭ ಮುಂದೆ ಬಾಳಗೊಂಡನಾಗಿ ಮಾಯೆಯ ಸಂಬಂಧಗಳು ದೃಗ್ಬಂಧವಾಗಿ, ದಿಬ್ಬಂಧವಾಗಿ ಕಾಡುತ್ತವೆ, ಈ ಗೊಂದಲದಲ್ಲಿ, ಕಣ್ಣಟ್ಟಿನಲ್ಲಿ ಸತ್ಯವನ್ನು ತಿಳಿಯಬೇಕೆನ್ನುವ ಛಲ ಎಲ್ಲರನ್ನೂ ಕಾಡುತ್ತದೆ. 'ಋಷ್ಯಶೃಂಗ' ಮತ್ತು 'ಹುಲಿಯ ನೆರಳು' ಈ ಎರಡೂ ನಾಟಕಗಳಲ್ಲಿ ಹೀಗೆ ಸತ್ಯದ ಹುಡುಕಾಟ ಪ್ರಮುಖ ವಸ್ತುವಾಗಿಬಿಟ್ಟಿದೆ.

ತಮ್ಮನ್ನು ಹುಟ್ಟಿಸಿದ ತಂದೆ-ತಾಯಿಯರನ್ನು ಅರಿತುಕೊಳ್ಳುವ ಹಂಬಲ, ಹೋರಾಟಗಳು ಸತ್ಯವನ್ನು ತಿಳಿಯುವ ಕ್ರಿಯೆಗೆ ರೂಪಕವಾಗುತ್ತವೆ. ಬಾಳಗೊಂಡ ಮತ್ತು ರಾಮಗೊಂಡರ ಛಲ ಎಡಿಪಸ್ ಮತ್ತು ಹ್ಯಾಮ್ಲೆಟ್‌ರ ಛಲಕ್ಕಿಂತ ಬೇರೆ ಏನಲ್ಲ. ಸಂದಿಗ್ಧವಾದ ಹುಟ್ಟು ಕೇವಲ ಸಾಮಾಜಿಕ ಸಮಸ್ಯೆಯಾಗಬೇಕಿಲ್ಲ. ಅದು ತಾತ್ವಿಕ ಸಮಸ್ಯೆಯೂ ಹೌದು. ಎಡಿಪಸ್ ಮತ್ತು ಹ್ಯಾಮ್ಲೆಟ್‌ರಲ್ಲಿ ಅದು ಸತ್ಯದ ಅನ್ವೇಷಣೆಯ ರೂಪಕವಾಗುತ್ತದೆ. ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುವ ದುರಂತದಲ್ಲಿ ಹುಟ್ಟುವ ಪ್ರಶ್ನೆಯೊಂದರೆ-ತಾನು ಯಾರ ಮಗ? ಮತ್ತು ತಾನು ಹುಟ್ಟಿದ್ದು ಒಬ್ಬ ವ್ಯಕ್ತಿಯಿಂದಲೋ? ಅಥವಾ ಇಬ್ಬರಿಂದಲೋ? ಇವು ಮೂಲಭೂತವಾದ ಪ್ರಶ್ನೆಗಳು. ಸಣ್ಣ ಹುಡುಗನಿಗೆ ದನಿ ಒಡೆದು ಪ್ರಾಯ ಬಂದಾಗ ಒಬ್ಬನಿದ್ದವನು ಇಬ್ಬರಾದ ಅನುಭವ ಬರುತ್ತದೆ. ನೆಲದ ಮೇಲೆ ಬಿದ್ದ ನೆರಳು, ಕನ್ನಡಿಯೊಳಗಿನ ಪ್ರತಿಬಿಂಬ, ಕತ್ತಲೆಯ ಏಕಾಂತದಲ್ಲಿ ತನಗೇಕೇಳಿಸುವ ತನ್ನ ದನಿ -ಇವೆಲ್ಲ ವ್ಯಕ್ತಿಯ ಇಮ್ಮಡಿ ರೂಪಗಳು. ಅಸ್ತಿತ್ವದ ಒಡಲಲ್ಲಿ ಅನಿವಾರ್ಯವಾಗಿ ಹುಟ್ಟುವ ಸಮಸ್ಯೆಗಳು ಇವಾಗಿವೆ. ಮನುಷ್ಯನ ಹುಟ್ಟಿಗೂ ಬೆಳೆಯುವ ಅವನ ವ್ಯಕ್ತಿತ್ವಕ್ಕೂ ಇರುವ ಸಂಬಂಧ ಕಾರ್ಯ ಕಾರಣ ಸಂಬಂಧವಲ್ಲ. ಅದರಂತೆಯೇ ಮನುಷ್ಯ ಮತ್ತು ದೇವರ ಸಂಬಂಧವೂ ಅಲ್ಲ.

'ಹುಲಿಯ ನೆರಳು' ನಾಟಕದ ವಿಶೇಷತೆಯೆಂದರೆ ಕೇವಲ ಸತ್ಯ ಶೋಧನೆ ಅಲ್ಲ. ಈ ನಾಟಕದ ನಾಯಕ ರಾಮಗೊಂಡ ಸತ್ಯದ ಸ್ವರೂಪಕ್ಕಾಗಿ ಹಂಬಲಿಸುತ್ತಾನೆ. 'ಅಪ್ಪಾ, ಸೂರ್ಯನ್ನ ಮೀರಿದ ಬೆಳಕಿನ ಸ್ವಾಮಿ, ಈ ಲೋಕವನ್ನ ಅಖಂಡ ಸತ್ಯವಾಗಿ ತೋರಿಸೋ ತಂದೇ... ನೆರಳಿಲ್ಲದ ಸತ್ಯ ತೋರಿಸೋ ತಂದೇ'-ಇದು ರಾಮಗೊಂಡನ ಪ್ರಾರ್ಥನೆಯಾಗಿದೆ. ಎಡಿಪಸ್ ಅಪೋಲೋ ದೇವರಿಗೆ ಇದೇ ರೀತಿಯ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಇಡೀ ಲೋಖವನ್ನು ಅಖಂಡ ಸತ್ಯವಾಗಿ ತೋರಿಸೋ ತಂದೇ... ನೆರಳಿಲ್ಲದ ಸತ್ಯ ತೋರಿಸೋ ತಂದೇ'- ಇದು ರಾಮಗೊಂಡನ ಪ್ರಾರ್ಥನೆಯಾಗಿದೆ. ಎಡಿಪಸ್ ಅಪೋಲೋ ದೇವರಿಗೆ ಇದೇ ರೀತಿಯ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಇಡೀ ಲೋಕವನ್ನು ಅಖಂಡ ಸತ್ಯವಾಗಿ ತೋರಿಸುವ ನೆರಳಿಲ್ಲದ ಸತ್ಯ ಇವರಿಗೆ ಬೇಕಾಗಿದೆ. ಆದರೆ ಇಂಥ ಛಲಗಾರರು ಸತ್ಯದ ಬಹುರೂಪಿತ್ವವನ್ನು ಕಡೆಗಣಿಸುತ್ತಾರೆ. ಎಡಿಪಸ್, ಹ್ಯಾಮ್ಲೆಟ್, ರಾಮಗೊಂಡ ಇವರೆಲ್ಲ ಗಂಡಸರು-ಇವರ ಕಣ್ಣಿಗೆ ಕಾಣುವ, ಬುದ್ಧಿಗೆ ತಿಳಿಯುವ ಸತ್ಯದ ಸ್ವರೂಪ ಒಂದೇ ಆಗಿದೆ. ಇವರಿಗೆ ಬೇಕಾಗಿರುವದು ಬೆಳಕಿನ ಸತ್ಯ. ಇವರಿಗೆ ಕತ್ತಲೆಯ ಸತ್ಯ ಕಣ್ಣುಕಟ್ಟಾಗುತ್ತದೆ. ಮಾಯೆಯಾಗುತ್ತದೆ. ಮಾನವ ಸಂಬಂಧಗಳು ತೊಡತೊಡಕಾಗಿ ಬಾಳುವೆ ಒಂದು ಒಗಟಾಗುತ್ತದೆ. ತಾಯಿಯಾದವಳು ಹೆಂಡತಿಯಾಗಿ, ಕಕ್ಕನಿದ್ದವನು ಅಪ್ಪನಾಗಿ ಅಪ್ಪನಾದವನು ಸತ್ತು ಭೂತವಾಗಿ, ರಂಗಹೊಯ್ದ ನೆಲದ ಮೇಲೆ ಅಶರೀರ ವಾಣಿಗಳು ಕಣಿ ಹೇಳುತ್ತವೆ. ಈ ನಾಯಕರು ತೊಡಕಿಲ್ಲದೆ ಸರಳವಾದ, ನೆರಳಿಲ್ಲದ ಸತ್ಯವನ್ನು ಬೇಡತೊಡಗುತ್ತಾರೆ.

‘ಹುಲಿಯ ನೆರಳು’ ನಾಟಕದ ವಿಶೇಷತೆಯಿರುವದು ಈ ಸಮಸ್ಯೆಯನ್ನು ಗುರುತಿಸುವದರಲ್ಲಿ ಎಂದು ನನಗೆ ತೋರುತ್ತದೆ. ಹುಲಿಯನ್ನು ಸೋಲಿಸಿ ಹಾಲುತಂದ ರಾಮಗೊಂಡ ಯಕ್ಷಿಣಿಯಿಂದ ಕನ್ನಡ, ಕೀಲುಕುದುರೆ ಮತ್ತು ಕೊಂಬುಗಳನ್ನು ಪಡೆದು ಸತ್ಯದ ದರ್ಶನಕ್ಕಾಗಿ ಸಿದ್ಧನಾಗುತ್ತಾನೆ. ಇವುಗಳ ಸಹಾಯದಿಂದ ಸತ್ಯವನ್ನು ಕಾಣಬಹುದು, ಆದರೆ ಅದು ಸತ್ಯದ ಆಂಶಿಕ ದರ್ಶನ. ಅವನ ಎದುರಿಗಿರುವ ತಾಯಿ ಸಮಗ್ರ ಸತ್ಯವನ್ನು ತೋರಿಸಲು ಸಿದ್ಧಳಾಗಿದ್ದಾಳೆ. ತನ್ನನ್ನು ಕೊಲ್ಲದೆ, ಒಳಗಿನ ಗರ್ಭವನ್ನು ನಾಶ ಮಾಡದೆ ಅದು ಸಾಧ್ಯವಿಲ್ಲ ಎಂದು ಹೇಳುತ್ತಾಳೆ. ಹುಟ್ಟು ಸಾವುಗಳ ನಡುವಿನ ಒಳಸೂತ್ರವನ್ನು ಕೊಯ್ಯದೆ ಪೂರ್ಣ ಸತ್ಯ ಕಾಣುವುದಿಲ್ಲ. ರಾಮಗೊಂಡ ಮತ್ತು ಸತ್ಯ ಇವುಗಳ ನಡುವೆ ತಾಯ ಹೊಟ್ಟೆಯೊಳಗಿನ ಗರ್ಭ ಅಡ್ಡಗೋಡೆಯಾಗಿ ನಿಂತಿದೆ. ‘ಕಾಣುವ ಈ ಕುರುಡು, ಕಾಣsದ ಆ ಕುರುಡು, ಕಂಡೇನು ಕಾಣದಿದ್ದೇನೆ. ಏಳಮ್ಮ ಮಲಗಿರುವ ತಾಯಿ ಪೃಥಿವೀ’ ಎಂದ ಮಧುರಚನ್ನರಿಗೆ ಈ ಸಮಸ್ಯೆಯ ಅರಿವಾಗಿತ್ತು. ಈ ನಾಟಕದಲ್ಲಿಯ ಗೌಡಿತಿ ಸಚರಾಚರನ್ನರಿಗೆ ಈ ಸಮಸ್ಯೆಯ ಅರಿವಾಗಿತ್ತು. ಈ ನಾಟಕದಲ್ಲಿಯ ಗೌಡಿತಿ ಸಚರಾಚರವನ್ನೆಲ್ಲ ಗರ್ಭದಲ್ಲಿಟ್ಟುಕೊಂಡು ಸತ್ಯಕ್ಕೆ ಬೆನ್ನುಕೊಟ್ಟು ನಿಂತ ಪೃಥಿವಿಯಾಗಿ ನಾಟಕವನ್ನೆಲ್ಲ ವ್ಯಾಪಿಸಿದ್ದಾಳೆ. ಮೂವರು ಗೌಡರು, ಒಬ್ಬ ರಾಕ್ಷಸ ಈ ಶಕ್ತಿಯ ಎದುರು ನತಮಸ್ತಕರಾಗಿರುವದು ಈ ನಾಟಕದ ದರ್ಶನವಾಗಿದೆ.

ಕಂಬಾರರ ಈ ನಾಟಕವನ್ನು ನಾನು ಕಂಡ ರೀತಿ ಇದು, ಈ ಮಾತು ಮಹತ್ವದ್ದಾಗಿ ನನಗೆ ತೋರಿದ್ದರಿಂದ ಅದರ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಕಂಬಾರರ ನಾಟಕದ ಭಾಷೆ, ಪಾತ್ರರಚನೆ, ಗುಂಗುಹಿಡಿಸುವ ಹಾಡುಗಳು ಇವುಗಳ ಬಗ್ಗೆ ಬರೆಯುವದು ಅಷ್ಟೊಂದು ಮಹತ್ವದ್ದಾಗಿ ನನಗೆ ಕಾಣಲಿಲ್ಲ. ಈ ನಾಟಕ ಪ್ರಜ್ಞೆಯನ್ನು ಕಲಕುವ ನಾಟಕ. ಒಂದು ಜಾನಪದ ಕತೆಯ ವಸ್ತುವನ್ನು ರೂಪಕವನ್ನಾಗಿ ಮಾಡಿಕೊಂಡು ಮನುಷ್ಯನ ಅಸ್ತಿತ್ವದ ಸತ್ಯವನ್ನು ಹುಡುಕುವ ನಾಟಕ ಇದು. ಕನ್ನಡ ನಾಟಕ ಇಲ್ಲಿಯವರೆಗೆ ಸಾಧಿಸಿರುವ ಹಲಾವರು ಸಿದ್ದಿಗಳ ಪಂಕ್ತಿಗೆ ಈ ನಾಟಕದ ಸಿದ್ದಿಯನ್ನು ಹೊಸದಾಗಿ ಸೇರಿಸಬೇಕು. ನಮ್ಮ ನಾಟಕಕಾರರಲ್ಲಿ ಚಿಕ್ಕವರಾದ ಕಂಬಾರರ ಈ ಪ್ರಯತ್ನ ನಿಜವಾಗಿ ಅಭಿಮಾನಕರ ಮತ್ತು ಅಭಿನಂದನೀಯವಾಗಿದೆ.

**ಕೀರ್ತಿನಾಥ ಕುರ್ತಕೋಟಿ**

ಧಾರವಾಡ

ಫೆಬ್ರುವರಿ ೧೯೬೦

(ಮೊದಲ ಆವೃತ್ತಿಯಿಂದ)

# ಪಾತ್ರಗಳು

ಗೌಡ

ರಾಮಗೊಂಡ

ಕರಿಯಜ್ಜ

ಪ್ರಭು

ಬಾಳ್ಯಾ

ಇರಿಪ್ಯಾ

ಬಸ್ಯಾ

ಗೌಡ್ತಿ

ಪಾರಿ

ಶಾರಿ

ಯಕ್ಷಿಣಿ

ಭೂತ

ಹುಡುಗಿ

ಮುದುಕಿ ೧,೨.

ಮುದುಕ

ಮರಕಟುಕ ೧,೨,೩,೪.

ಮೇಳ ೧,೨,೩,೪.

ಸೂತ್ರಧಾರ

ಡಂಗುರದವರು

ಇತ್ಯಾದಿ

## ಪ್ರಾರ್ಥನೆ

ಮೊದಲೀಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲಾ ನಮ್ಮ ನಮನಾ|
ಕಲಿಯುಗದೊಳಗಿನ ಕೆಥೆಯ ವಿಸ್ತಾರವ
ತಿಳಿಸಿ ಹೇಳೇವು ಕೇಳಬೇಕ್ರಿ ಜನಾ ||

ಕೂಡಿ ಕುಂತ ದೈವಕ್ಕ ಕೈ ಮುಗದ ಹೇಳತೇವು
ಮರೆಯಿತಿ ಮುಂದ ಬಂದ್ರ ಚೂರ ಕಸರಾ |
ಎಪ್ಪಾ ಸ್ವಾಮಿ ಗುರುದೇವ ತಪ್ಪ ಮರೆತು ಒಪ್ಪಕೊಡ
ನೆಪ್ಪಿನಾಗ ಇಡೋ ಹಾಂಗ ಸರ್ವರಾ ||

ಏ ಎಪ್ಪಾ ಸರಸೋತಿ ತಾಳಕ್ಕ ನಲಿವಾಕಿ
ನಾಲೀಗಕ್ಷರ ಕಲಿಸ ಐದಾರಾ |
ಹಿರಿಯರ ಪಿರತೀಗಿ ಸರಿದೊರೆ ಸಮನಿಲ್ಲ
ಕೇಳಾವರ ಮ್ಯಾಲಿರಲಿ ನಿರಂತರಾ ||

ಕತಿ ಹೇಳತೇವ್ರಿ ಮುಂದಿಂದಾ
ಇರು ! ಗುರುವೆ ನಾಲಿಗೆಯ ಹಿಂದಾ
ಆಗ | ದಿರಲಿ ಒಂದು ಸಹ ಕುಂದಾ
ನಾವು | ನಿಮ್ಮ ಕರುಣದ ಕಂದಾ

ಗೌಡ್ತಿ ಬ್ಯಾನೀ ತಿಂದ ಗಂಡ ಹಡೆದ ಗಂಗಾಳ ಹೊಡೆದ
ಐದೇರೆಲ್ಲ ಜೋ ಅಂದ ಕತಿ ನಿವಳಾ
ಹೇಳತೇವು ಕೇಳ್ರಿ ಜನಾ ನಿಮ ಮುಂದ ಕತಿಯೊಂದ
ನಮ್ಮ ಮುಂದ ಕುಂಡ್ರಿ ಹಿಂಗ ತೆರೆದ ಮನಾ ||

## ಹದ್ದಿನ ಕಣ್ಣು ಹರಿದಾಡತಾವ ನಿನ್ನ ಮ್ಯಾಲ

ಸೂತ್ರಧಾರ : ನಾವಾಗ ಸಣ್ಣವರು, ಮಣ್ಣಾಟದಲ್ಲಿ ಮೈ ಮರೆತಿದ್ದಾಗ
ಸಿಡಿದ ಮದ್ದಿನ ಹಾಂಗ ಹೊಡೆದ ಡಂಗುರ ಕೇಳಿ
ತಬ್ಬಿಬ್ಬಾಗಿ ಸ್ತಬ್ಧರಾದಿವಿ. ಡಂಗರು ಬಂತು:

ಸುತ್ತೇಳು ಬಳಗದ ಕುಳವಾಡಿಗಳ ಕೇಳಿರಿ:
ಈಗಿಂದೀಗ ಬರ್ರಿ ಅರಮನೆಗೆ ಎಲ್ಲ,
ನಾಯಕರ ಆಜ್ಞೆಯಿದು, ಕೈಯಲ್ಲೇನಿದ್ದರೂ
ಚೆಲ್ಲಿ ಬರ್ರಿ.

ಬಗೆಬಗೆಯ ಲಗುಬಗೆಯಿಂದ, ಮಾತಿಲ್ಲದೆ ದೌಡಾಯಿಸುವ
ಹಿರಿಕಿರಿಯರನ್ನ -ಚೆಳ್ಳೆ ಮಿಳ್ಳೆಗಳು ನಾವು
ಬೆಂಬತ್ತಿ ನುಗ್ಗಿದ್ದೆವು ವಾಡೆಯ ಗೋಡೆಯೊಳಕ್ಕೆ,
ಗದೆಯಂಥ ಭುಜದ ಗೌಡರ ತೋಳಾಸರೆಗೆ.
ಸಾಗಿಹೋಗಿ ಬಾಗಿ ನಿಂತ ಜನ ಬೆರಗಿನ ಗರ
ಹೊಡೆದು ಗೊಂಬೆಗಳಾದರು.
ಬೆನ್ನ ಹಿಂದೆ ಕೈ ಕಟ್ಟಿದ ಗೌಡರು ಹಿಂದೆ ಮುಂದೆ
ಚಲಿಸಿದರು.

ಹಟ್ಟಿಗೆ ಅವರು ಒಡೆಯರಾದರೆ ಕಣ್ಣೊಳಗೆ
ಚಿಂತೆ ಆಳುತ್ತಿತ್ತು. ಹೇಳಿದರು:

ಹೋಶೀಯರ್: ಕಿವಿಗೊಟ್ಟು ಕೇಳಿರಿ ಹಟ್ಟಿಯ ಕುಳಗಳೇ
ಬರಲಿದ್ದಾನೆ ಹದ್ದನೇರಿ ಪಡುವಣದ ಖಳನಾಯಕ,

ಕ್ಷಣದಲ್ಲಿ ಮರದೆಲೆ ಎಣಿಸುವಾತ
ಮೆದುಳನ್ನೆ ತಿಂದು ಬದುಕಬಲ್ಲಾತ.,
ನೆಲ ಮುಗಿಲಿಗೆ ಒಡೆಯನಾಗಿ, ದೇವರ ಜೊತೆ
ಹುಡುಗಾಟವಾಡ ಬಯಸುವಾತ,

ರಾಜ್ಯ ವಿಸ್ತರಿಸುತ್ತ, ನಮ್ಮ
ಹಳ್ಳೀಯ ದರೋಡೆಗೆ ಹೊಂಚಿನಿಂತ ಹೊಟ್ಟೆಬಾಕ ಬಕ.
ಹೆಂಗಸರೆಲ್ಲ ಮನೆಯೊಳಕ್ಕಿರಲಿ,
ಹಣಿಕಿ ಹಾಕಿದರೂ ದಂಡ ಶಿಕ್ಷೆಗಳುಂಟೆಂದು ತಿಳಿದಿರಲಿ.
ಗಂಡಸರು ಆಯುಧಗಳ ಬಚ್ಚಿಟ್ಟಿರಲಿ.
ಸಂದೇಹ ಬರುವಂತೆ ಯಾರೂ ನಗದಿರಲಿ,
ಕಣ್ಣಿನ ಕಪಟ ಪ್ರಕಟವಾಗದ ಹಾಗೆ ಅಭಿನಯವಿರಲಿ.

ಹಳ್ಳಿಯ ಯಾವ ಮೂಲೆಗೇ ಬರಲಿ
ಕರೆತನ್ನಿ ಅರಮನೆಗೆ.
ಲೆಕ್ಕ ಚುಕ್ತ ಮಾಡುವವರು ನಾವು, ನೀವಲ್ಲ.

ಆದರೆ ಹಟ್ಟಿಯ ಹೊರಗಡೆ ಕುದುರೆಯ ಖುರಪುಟ
ಕೇಳಿಸಲೇ ಇಲ್ಲ. ಗೌಡರ ಹುಬ್ಬೇರಿ ಕಣ್ಣಗಲವಾದದ್ದು
ಸಣ್ಣಗಾಗಲೇ ಇಲ್ಲ. ಯಾಕೆಂದರೆ ಅಂದುಕೊಂಡದ್ದೊಂದೂ-
ನಡೆಯಲೇ ಇಲ್ಲ:
ಆದರೆ ಆ ದಿನ ರಾತ್ರಿ
ಏಳು ಪಟ್ಟೆಯ ಹುಲಿಯೊಂದು ಹಟ್ಟಿಗೆ ಬಂದು
ಗರ್ಜಿಸಿದ್ದು ಕೇಳಿಸಿತು. ಆದ ಕೇಳಿ ಗೌಡರು
ಗಹಗಹಿಸಿ ನಕ್ಕು ಬೇಡರ ಕರೆದು
ಬೇಟೆಯಾಡಿರೆಂದು ಅಪ್ಪಣೆ ಮಾಡಿದರು.

ಆದರಿದೇ ಬೇರೆ ಹುಲಿ. ಕೊಟ್ಟಿಗೆಯ ದನ ತಿಂದು,
ಹಟ್ಟಿಯ ಕೂಸು ಕುನ್ನಿಗಳ ತಿಂದು ಅಟ್ಟಿಸಿ
ಕಾಡಿತು. ಕೊನೆಗೆ ಗೌಡರೇ ಬೇಟೆಗೆಂದು
ಸಿದ್ದರಾದರು. ಬಿಲ್ಲು ಬಾಣ ಬಲೆಗಳು ಸಿದ್ಧವಾದವು.
ಕೊಂಬು ಕಹಳೆ ಹಲಗೆಗಳ ದನಿ ದಿಕ್ಕಡರಿತು.
ಗೌಡರು ಬೇಟೆಗೆ ಹೊರಟು ನಿಂತರು.

*(ಮೇಳ ಹಿಂದೆ ಸರಿದು ಗೌಡನ ಮನೆ ಕಾಣಿಸುತ್ತದೆ. ಗೌಡ ಬೇಟೆಯ ತಯ್ಯಾರಿ ನಡೆಸಿದ್ದಾನೆ. ಹೊರಗಡೆಯಿಂದ ಮಕ್ಕಳ ಆಟದ ಹಾಡು ಕೇ*

*ಳಿಸುತ್ತದೆ*

**ಬ್ಯಾಡ ಬ್ಯಾಡ ಹೋಗಬ್ಯಾಡ**
**ನನ್ನ ಮರಿ | ಗೂಡ ಬಿಟ್ಟು ಹೋಗಬ್ಯಾಡ |**
**ಹೊಂಚಿ ನಿಂತಿದ್ದಾನ ಬೇಡ**
**ಬಿಲ್ಲು ಬಾಣ ಗುರಿ ಹಿಡಿದಿದಾನ ನೋಡ ||**

ಗೌಡ್ತಿ : *(ಹೊರ ಬರುತ್ತಾ )* ಗೌಡಾ ಕೇಳಿದಿ?

ಗೌಡ : ಏನು?

ಗೌಡ್ತಿ : ಆಗಲೇ ಹೊಂಟು ನಿಂತೀಯೇನು?

ಗೌಡ : ಬ್ಯಾಟಿಗಾರರೆಲ್ಲಾ ತಯ್ಯಾರಾಗಿ ಕಾಯಾಕ ಹತ್ಯಾರ.

ಗೌಡ್ತಿ : *(ನೆನಪಾಗಿ)* ಅಯ್ ಶಿವನ! ನಾ ಇನ್ನs ಆರತೀ ಬೆಳಗಿಲ್ಲ.

ಗೌಡ : ಲಗು ಬೆಳಗು

ಗೌಡ್ತಿ : ಬ್ಯಾಟಿಗಿ ನೀ ಹೋಗಾಕs ಬೇಕೇನು?

ಗೌಡ : ನೀನs ನೋಡ್ತಿ: ದಿನಾ ದನಾಕರಾ ತಿನ್ನಾಕ ಹತ್ತೇತಿ. ಹೊರಕೇರ್ಯಾಗಿನ ನಾಕೈದ ಕೂಸ ತಿಂದೈತಿ. ಮಂದಿ ಯಾರೂ ಮನೀಬಿಟ್ಟು ಹೊರಬೀಳಧಾಂಗ ಆಗೇತಿ.

ಗೌಡ್ತಿ : ಬ್ಯಾಡರ್ನ ಕಳಿಸಿದರ ಆಗಾಣಿಲ್ಲೇನು?

ಗೌಡ : ಒಂದು ವಾರದಿಂದ ಅವರೆಲ್ಲಾ ಹಗ್ಗ ಬಲಿ ಹಿಡಕೊಂಡು ಕಾಡ ತುಂಬ ಅಡ್ಡಾಡಿದರೂ ಸಿಗುವೊಲ್ದು; ಕಾಣಬಾರದ?

ಗೌಡ್ತಿ : ನಿನ್ನಿ ರಾತ್ರಿ ನನಗ ಭಾಳ ಕೆಟ್ಟ ಕನಸ ಬಿದ್ದಿತ್ತು.

ಗೌಡ : ಬ್ಯಾಟಿ ಆಡಿ ಬಂದ ಮ್ಯಾಲ ಕೇಳ್ತೀನಿರು.

ಗೌಡ್ತಿ : ಈಗs ಕೇಳಿದರೇನಾಗತೈತಿ?

ಗೌಡ : ಲಗು ಹೇಳ ಹಂಗಾದರ, ಏನೇನ ಕನಸ ಕಂಡಿ?

ಗೌಡ್ತಿ : ಪಾರಂಬಿ ಕರ್ರೆವ್ವನ ಜಾತ್ರಿ ಆಗತಿತ್ತು. ನೀನು ಮತ್ತ ರಾಮಗೊಂಡ ಕೆಂಪ ರುಂಬಾಲ ಸುತ್ತಿಕೊಂಡು, ಹೊಸ ಅಂಗಿ ಹಾಕ್ಕೊಂಡ ಕೊರಳಾಗ ಮಾಲೀ ಹಾಕ್ಕೊಂಡು ತೇರಿನಾಗ ನಕ್ಕೋತಾ ಕುಂತಿದ್ರಿ. ಎಲ್ಲಾ ಮಂದಿ ಕುಡಿದವರ್ಹಾಂಗ ಕುಣಿದಾಡತಿದ್ದರು, ಆಮ್ಯಾಲಂದರ ಕೋಣ ಕಡ್ಯಾಕ ಹೋದ್ರಿ. ಕೋಣದ ಬದಲಿ..ನನಗ ಅಂಜಿಕಿ ಬರತೈತಿ….

ಗೌಡ : ಕನಸ ಹೇಳಾಕೂ ಹೆದರತೀಯಲ್ಲ. ಮುಖ ನೋಡಿಕೋಬಾರದ? ಬಿಳಚಿಕೊಂಡೈತಿ ! ಮುಂದೇನಾಯ್ತು ಹೇಳು.

ಗೌಡ್ತಿ : ಮುಂದ ಕೋಣ ಕಡಿಯೋ ಬದಲಿ ರಾಮಗೊಂಡನ್ನ ಕಡಿದಿರಿ ! ಕರ್ರೆವ್ವನ ಗುಡಿ ಬಿರಕ ಬಿಟ್ಟು, ಬಿರಿಕಿನಾಗಿಂದ ರಕ್ತ ಚೆಲ್ಲಂತ ಸಿಡೀತು. ನನಗ ನನ್ನ ಎದೀನs ಸೀಳೀಧಾಂಗ ಆಗಿ ಚೀರಿ ಎಚ್ಚರಾದೆ. ನೋಡಿದರ ಪಕ್ಕದಾಗ ನೀ ಅದೇನ ಕನಸ ಕಾಣತಿದ್ದೆಯೋ ಹ ಹಾ ಹಾ ಅಂತ ನಗಾಕ ಹತ್ತಿದ್ದಿ!

ಗೌಡ : ಹ ಹಾ ಹಾ… ಹೆದರಿದ್ದೀಯಲ್ಲಾ! ಇರು, ಬ್ಯಾಟಿ ಆಡಿ ಹುಲಿ ತರತೇನಿ. ಅದರ ಎದೆಗುಂಡಿಗಿ ತಿನ್ನು, ಹೆದರಿಕಿ ಹೋಗತೈತಿ. ಆಮ್ಯಾಲ ಕನಸಿನ ಅರ್ಥ ಮುದುಕಪ್ಪನ್ನ ಕೇಳೋಣು.

ಗೌಡ್ತಿ : ಇದೊಂದು ದಿನ ಬ್ಯಾಡರ್ನ ಬ್ಯಾಟಿಗಿ ಕಳಿಸಿದರ ಆಗಾಣಿಲ್ಲೇನು?

ಗೌಡ : ಊರಗಾರಿಕಿ ಹಿರಿಯಾ ಆಗಿ ಹಿಂದ ಕುಂತರ ಮಂದಿ ಏನಂದಾರು? ಹುಲಿ ಬ್ಯಾಟಿ ನನಗೇನು ಹೊಸದ? ನಾ ಕೊಲ್ಲೋದ ಇದs ಮೊದಲನೇ ಹುಲಿಯೇನು? ನೋಡ್ತಾ ಇರು, -ಹೊತ್ತು ಮುಳುಗೋದರೊಳಗ ಮೆರೂಣಿಗಿ ಮಾಡಿಕೊಂಡು ಹುಲಿ ತಂದರಾಯ್ತೋ ಇಲ್ಲೋ?

ಗೌಡ್ತಿ : ನನ್ನ ಮಾತಂದ್ರ ನಿನಗ ದರಕಾರs ಇಲ್ಲ.

ಗೌಡ : ಹೆಂಗಸಿನ ಮಾತೇನ ಕೇಳೋದು? ಗರಿ ಗರಕ್ಕಂದರ 'ಅಯ್ ಶಿವನ!' ಅಂತ ಎದಿ ಕಳಕೊಳ್ತಿ. ತಿರುಗಾ ಮುರುಗಾ ನಾಯಿ ಅಂಥಾದ್ದೊಂದ ಹುಲಿ; ಬ್ಯಾಟಿ ಆಡಿ ಬರತೀನಿ ಅಂದರ ಕನಸ ಹೇಳಿಕೊಂಡು ಚಿಂತೀ ಮಾಡಾಕ ಹತ್ತೀದಿ. ನಡಿ ಒಳಗ ನಡಿ.

ಗೌಡ್ತಿ : ಆರತಿ ಬೆಳಗತೇನಿರು.

*(ಒಳಗೆ ಹೋಗುವಳು. ಜನರ ಗುಂಪು ಬರುವುದು.)*

ಇರಿಪ್ಯಾ : ಎಪ್ಪಾ ಕರ್ರೆವ್ವ ಕಬೂಲಿ ಕೊಡವೊಲ್ಲಳು.

ಗೌಡ : ಅಂದರ?

ಇರಿಪ್ಯಾ : ಕರೀಮುದುಕ ಹರ್ಯಾಗಿಂದ ತಾಯೀ ಮುಂದsಕುಂತಾನ್ರಿ! ತಾಯಿ ಕಬೂಲಿ ಕೊಡವಲ್ಲಳು : ಇವ ಏಳವೊಲ್ಲ.

ಗೌಡ : ನಿಮಗೂ ಬುದ್ದಿಯಿಲ್ಲ, ಮುದುಕಪ್ಪಗೂ ಬುದ್ದಿಯಿಲ್ಲ. ಬ್ಯಾಟಿ ಆಡೋದಕ್ಕೂ ತಾಯೀ ಕಬೂಲಿ ಕೇಳ್ತಾರೇನ್ರೊ?

ಇರಿಪ್ಯಾ : ಇದು ಭಾಳ ದೊಡ್ಡ ಹುಲಿ ಅಂತ್ರಿ! ಯೋಳಪಟ್ಟಿ ಅದಾವಂತ!

ಗೌಡ : ಬಾರಾಪಟ್ಟಿ ಹುಲೀ ಮುಂದ ಏಳಪಟ್ಟಿ ಹುಲಿ ಎದಕ್ಕಾದೀತಲೆ? ಏ ಸಿಂಗ್ಯಾ, ಕಾಳೀ ಊದೋ ಮಗನs. ಹುಲಿ ಎಲ್ಲಿದ್ದರೂ ಕೇಳಿ ಅಂಜಿ ಹೇತ್ಕೋ ಬೇಕು, ಹಾಂಗ ಊದು.

*(ಸಿಂಗ್ಯಾ ಕಹಳೆ ಊದುವನು. ಅಷ್ಟರಲ್ಲಿ ರಾಮಗೊಂಡ ಉತ್ಸಾಹದಿಂದ ಬರುವನು.)*

ರಾಮಗೊಂಡ : ಎಪ್ಪ, ಬ್ಯಾಟೆಗಿ ನಾನೂ ಬರತೀನಿ.

ಗೌಡ : ಈ ಸಲ ಬ್ಯಾಡ ತಗಿ, ಇನ್ನೊಮ್ಮಿ ಬಂದೀಯಂತ. ಆಕಿಗೇನೋ ಕೆಟ್ಟ ಕನಸ ಬಿದ್ದೈತಂತ. ಹೋಗಿ ಸಮಾಧಾನ ಮಾಡು.

*(ಗೌಡ್ತಿ ಆರತಿಯಿಲ್ಲದೇ ಬರುವಳು.)*

ಗೌಡ : ಬರತೀನಿ.

*(ಗೌಡ ತನ್ನ ಪರಿವಾರ ಸಮೇತ ಹೋಗುವನು. ಗೌಡ್ತಿ ಅವರು ಹೋದ ದಿಕ್ಕನ್ನೇ ನೋಡುತ್ತಿರುವಳು. ಮೆಲ್ಲನೆ ಮಕ್ಕಳಾಟದ ಹಾಡು ಕೇಳಿಸು*

*ವುದು*

**ಬ್ಯಾಡ ಬ್ಯಾಡ ಹೋಗಬ್ಯಾಡ**
**ನಮ್ಮ ಮರಿ| ಗೂಡ ಬಿಟ್ಟು ಹೋಗಬ್ಯಾಡ ||**
**ಕಟ್ಟಿದಾವ ದಟ್ಟ ಮೋಡ**
**ಮೋಡದಾಗ | ತೂಗ್ಯಾಡತಾವ ಕರಿನೆರಳ ||**
**ಮ್ಯಾಲ ನೋಡ ಹಾಳ ಹದ್ದಾ**
**ಹದ್ದಿನ ಕಣ್ಣು | ಹರಿದಾಡತಾವ ನಿನ್ನ ಮ್ಯಾಗ ||**

ಗೌಡ್ತಿ : ರಾಮಗೊಂಡಾ….

ರಾಮಗೊಂಡ : ಯಾಕಬೆ?

ಗೌಡ್ತಿ : ಆ ಹುಡಿಗೇರಿಗೆ ಇಲ್ಲಿ ಆಡಬ್ಯಾಡಂತ ಹೇಳು ಹೋಗು.

ರಾಮಗೊಂಡ : ಆಡಿದರ ಆಡಿಕೊಳ್ಳಲಿ ಬಿಡಬೇ.

ಗೌಡ್ತಿ : ಹಾಂಗಿದ್ದರ ಬ್ಯಾರೇ ಆಟ ಆಡರಿ ಅಂತ್ಹೇಳು.

ರಾಮಗೊಂಡ : ಆಡಿದರೇನಾಯ್ತಬೇ? ಆ ಹಾಡು ಕೇಳಾಕ ಭಾಳ ಚೆಂದೈತಿ.

ಗೌಡ್ತಿ : ಹೇಳಿದಷ್ಟು ಕೇಳು.

*(ರಾಮಗೊಂಡ ಹೊರಗೆ ಹೋಗಿ ಮಕ್ಕಳನ್ನು ಬೆದರಿಸುವನು. ಹಾಡು ನಿಲ್ಲುತ್ತದೆ. ರಾಮಗೊಂಡ ಒಳಗೆ ಬಂದು " ನಾ ಗುಡೀ ಕಡೆ ಹೋಗಿ ಬರ್ತೀನಬೇ" ಎಂದು ಹೇಳಿ ಹೋಗುವನು. ಹೊರಗಿನಿಂದ ಪಾರಿ ಬರುವಳು.)*

ಗೌಡ್ತಿ : ಪಾರೀ, ಗುಡಿ ಕಡೆ ಹೋಗಿದ್ಯೇನು?

ಪಾರಿ : ಹೌಂದೆವ್ವ.

ಗೌಡ್ತಿ : ಕರಿಯಜ್ಜ ತಾಯೀ ಮುಂದ ಇನ್ನೂ ಹಾಂಗs ಕುಂತಾನಂತ ಹೌಂದ?

ಪಾರಿ : ಹೌಂದೆವ್ವ, ಯಾಕೋ ತಾಯಿ ತೊಯ್ದು ಹೊರಸಿನ್ಹಾಂಗ ಬಿಗಿದುಕೊಂಡು ಕುಂತಾಳ. ವಾಕ್ಯ ಆಗವೊಲ್ದು. ಗೌಡ ಅದ್ಯಾಕಷ್ಟು ಅವಸರ ಮಾಡಿ ಬ್ಯಾಟಿಗಿ ಹೋದ?

ಗೌಡ್ತಿ : ಬ್ಯಾಟಿಗಿ ಹೊಂಟಾಗೆಲ್ಲ ತಾಯೀ ವಾಕ್ಯ ಕೇಳ್ತಾರೇನಗ?

ಪಾರಿ : ಕೇಳಾಕಿಲ್ಲ ಖರೆ, ಆದರ ಕರೀಮುದುಕಗ ಅದೇನೋ ಭಾಳ ಕೆಟ್ಟ ಕನಸ ಬಿದ್ದಿತ್ತಂತ. ಅದಕ್ಕs ತಾಯೀ ವಾಕ್ಯ ಆಗೋತನಕ ಬ್ಯಾಟಿಗಿ ಹೋಗಬ್ಯಾಡ ಗೌಡಾ-ಅಂತ ಹೇಳಿಕಳಿಸಿದ್ದ.

ಗೌಡ್ತಿ : ಈ ಗಂಡಸರಿಗೆ ಬುದ್ಧಿ ಎಂದ ಬಂದೀತೋ? ನನಗೂ ಕೆಟ್ಟ ಕನಸು ಬಿದ್ದಿತ್ತು. ಹೋಗಬ್ಯಾಡ ಗೌಡಾ ಅಂದೆ. ‘‘ಹೆದರೀದಿ, ಹುಲಿ ಎದಿಗುಂಡಿಗೆ ತಿಂದೀಯಂತ ಇರು; ಗಾಬರಿ ಹೋಗತೈತಿ’’ ಅಂತಂದ ಹೋದ. ಆರತಿ ಬೆಳಗಬೇಕಂದರ ದೀಪ ಆರಿಹೋಯ್ತು. ಬ್ಯಾಡಂತ ಹೇಳಾಕ ಹೊರಗ ಬರೂದರೊಳಗ ಹೊಂಟ್ಹೋದ. ಏನ ಮಾಡ್ಲಿ? ಪಾರಂಬಿ ಕರ್ರೆವ್ವನs ಕಾಪಾಡಬೇಕು.

ಪಾರಿ : ಕಾಡಿನ ತುಂಬ ಕರ್ರೆವ್ವನ ಆಳಿಕಿ ಐತಿ ; ಏನಾದೀತು ಬಿಡs ಎವ್ವಾ. ಆದರೂ ಇದೊಂದ ದಿನ ಗೌಡ ತಡದಿದ್ದರ ಚಲೋ ಇತ್ತು.

ಗೌಡ್ತಿ : ಜೀವದಾಗ ಯಾಕೋ ಮುಳು ಮುಳು ಅಂತೈತಿ. ಏನ ಮಾಡಿದರೂ ಸಮಾಧಾನ ಆಗವೊಲ್ಲದು. ಇವ ಬ್ಯಾಟಿ ಆಡಿ ಮನೀಗಿ ಬಂದರ ಸಾಕು; ಕರ್ರೆವ್ವಗ ಬೆಳ್ಳೀ ಕಣ್ಣ ಮಾಡಿಸಿಕೊಡ್ತೀನಿ.

ಪಾರಿ : ಮಾಡಸೀಯಂತ ಯಾಕ ಚಿಂತೀ ಮಾಡ್ತಿ. ಬಿಡ ಎವ್ವ. ಒಂದ ತಪ್ಪ ಮಾಡಲಿಲ್ಲ, ಒಂದ ದೇವರ ಮರೆತಿಲ್ಲ. ಬೆಂಕ್ಯಾಗಿನ ಬಂಗಾರದಂಥಾಕಿ. ತಾಯಿ ನಿನ್ನ ಮಾತ ನಡಿಸಿಕೊಡದ s ಹೆಂಗಿದ್ದಾಳು? ಗೌಡ ಬಂದsಬರತಾನ, ನಿಶ್ಚಿಂತ ಇರು.

* * *

## ಹುಲಿ ಉಗುರು ರುಂಬಾಲದ ರುಂಡ

ಮೇಳ : ಬ್ಯಾಟಿಗಂತ ಗೌಡ ಬಂದನೋ
ಕೊಂಬು ಕಹಳೆ |
ದಂಡು ದಳ ಸಹಿತ ಬಂದನೋ ||

ಹುಲಿಯ ಹುಡುಕಿ ಹುಯ್ಯಲಿಟ್ಟರೋ
ಮಿಕಗಳೆಲ್ಲ |
ಗವಿಯ ಸೇರಿ ಅಡಗಿ ಕುಂತವೋ ||

ಕಾಡಿನಲ್ಲಿ ಬೊಬ್ಬೆಯಿಟ್ಟರೋ
ಕಾಡದೇವರೆಲ್ಲ |
ಎದ್ದು ಬೆರಗುಗೊಂಡರೋ ||

*(ಇಬ್ಬರು ವಿಚಿತ್ರ ವೇಷದ ಮುದುಕಿಯರ ಪ್ರವೇಶ)*

ಮುದುಕಿ ೧ : ಸಿಕ್ಕನ ?

ಮುದುಕಿ ೨ : ಇನ್ನೇನು ಸಿಗೋ ಹೊತ್ತು.

ಮುದುಕಿ ೧ : ಕಾಡಿಗೆ ಹೌಸೀನs ಇಲ್ಲ. ಹೂ ಚಿಗುರು ಬಾಡಿ, ಗಿಡ ಮರ ಜೋಲುಮುಖ ಹಾಕ್ಯಾವ

ಮುದುಕಿ ೨ : ನೆಲದ ಪುಣ್ಯ ಆರಿ ನೀರಡಿಸೇತಿ; ರಗತ ಬಿದ್ದರ ಧಗಿ ಆರಿತೋ ಏನೋ! ಯಾರೋ ಬಂಧಾಂಗಾಯ್ತು; ಹುಲೀ ಹೆಜ್ಜಿ ಇರಬೇಕೇನ?

ಮುದುಕಿ ೧ : ಅಲ್ಲ, ಬ್ಯಾಡರು. ಗೌಡ ಕುದುರೀ ಹತ್ಯಾನ.

ಮುದುಕಿ ೨ :  ಕಾಡ ತುಂಬ ಅವರs ತುಂಬ್ಯಾರ. ಮುಖಾಮುಖಿ ಆಗವೊಲ್ದು.

ಮುದುಕಿ ೧ : ಈಗ ಕತ್ತಲಾಗಬೇಕು. ಅಂದರ ಇಬ್ಬರೂ ಮುಖಾಮುಖಿ ಆಗತಾರ.

ಮುದುಕಿ ೨ : ನೆರಳ ಕಂಡರೂ ಸಿಕ್ಕಿಬೀಳತಾರ. ಸಿಕ್ಕಿಬಿದ್ದರ ನೆತ್ತರ ನೆಲಕ್ಕ ಬೀಳತೈತಿ.

ಮುದುಕಿ ೧ : ಕತ್ತಲಾದರ ನೆರಳು ಬೀಳೋದs ಇಲ್ಲ. ಆಮ್ಯಾಲ ಹಿಡಿಯೋದಕ್ಕಾಗಾಣಿಲ್ಲ.

ಮುದುಕಿ ೨ : ಕತ್ತಲಾಗಲಿ, ಬೆಳಕಿರಲಿ. ಇಬ್ಬರೂ ಮುಖಾಮುಖಿ ಆಗೆ ಆಗತಾರ. ಇಬ್ಬರೂ ಜಿಪುಣರು. ನೆಲಕ್ಕ ನೆತ್ತರ ಚೆಲ್ಲತಾರೋ, ಇಲ್ಲಾ ತಾವs ಕುಡೀತಾರೋ!

ಮುದುಕಿ ೧ : ಹೆಣ ಬಿದ್ದರ ನಮಗೂ ಅಷ್ಟಿಷ್ಟು ಮಾಂಸ ಸಿಕ್ಕೀತು.

ಮುದುಕಿ ೨ : ಅದೂ ನಂಬಿಕೀದಲ್ಲ ಬಿಡು. ಗೆದ್ದವ ಸತ್ತವನ ಹೆಣ ಹೊತ್ತುಕೊಂಡು ಹೋದರ?

ಮುದುಕಿ ೧ : ನಾವಿಬ್ಬರೂ ಮಣ್ಣ ತಿನ್ನಬೇಕಷ್ಟ….

ಮುದುಕಿ ೨ : ಶ್ಯೂ! ಸಪ್ಪಳ ಕೇಳಿಸ್ತ?

ಮುದುಕಿ ೧ : ಒಣಗಿದೆಲಿ ಸರಸರ ಅಂತಾವ…

ಮುದುಕಿ ೨ : ಕುದರೀ ಹೆಜ್ಜೀ ಸಪ್ಪಳ!

ಮುದುಕಿ ೧ : ಹುಲೀದಿರಬೇಕು!

ಮುದುಕಿ ೨ : ಹೌದು ಹುಲೀದೇ!

ಮುದುಕಿ ೧ : ಅವ ಕುದರೀ ಹತ್ಯಾನ. ಸುತ್ತ ಬ್ಯಾಡರಿದ್ದಾರ.

ಮುದುಕಿ ೨ : ಅದರ ಕರಿ ಮುದಕನ ಮಾತು ಮೀರಿ ಬಂದಾನ, ಮರೀಬ್ಯಾಡ.

ಮುದುಕಿ ೧ : ಅವ ಹುಟ್ಟಾ ಬ್ಯಾಟೆಗಾರ. ಕೈಯಾಗ ಬಿಲ್ಲು ಬಾಣ ಅದಾವ.

ಮುದುಕಿ ೨ : ಆದರ ಅವನ ಹೇಂತಿ ಆರತಿ ಬೆಳಗಬೇಕಂತ ದೀಪ ಹೊತ್ತಿಸಿದರ ಹೊತ್ತಿದ ದೀಪ ಆರಿಹೋದವು. ಮರೀಬ್ಯಾಡ. ಅಕಾ! ಕುದುರೀ ಹೆಜ್ಜೀ ಸಪ್ಪಳ! ಅಲ್ಲಾ?

ಮುದುಕಿ ೧ : ಹೌದು, ಕಾಡಿನಾಗ ಹಾದೀ ತಪ್ಪಿ ಬ್ಯಾಡರೊಂದು ಕಡೆ ಇವನs ಒಂದು ಕಡೆ ಆಗ್ಯಾರ.

ಮುದುಕಿ ೨ : ಅಯ್ಯಯ್ಯ! ಇಕಾ ಇಕಾ ಬೆಳಕಂಜಿ ಓಡಿಹೋಯ್ತು! ಕಾಡು ಕಣ್ಣು ಮುಚ್ಚಿಧಾಂಗ ಕತ್ತಲಾಯ್ತು! ಇನ್ನು ತಡ ಆಗಾಣಿಲ್ಲ.

ಇಬ್ಬರು : *(ಕುಣಿಯುತ್ತ)*

**ಕತ್ತಲೆ ಕತ್ತಲೆ|**
**ಕರೀ ಕತ್ತಲೆ**
**ಬೆತ್ತಲಾಗಿ | ಸುರೀ ಕತ್ತಲೆ**
**ನೋಡೋ ಕಣ್ಣ ಮೆತ್ತೋ ಕತ್ತಲೆ**
**ಮಿನುಗೋ ಚುಕ್ಕಿ | ಮುಚ್ಚೋ ಕತ್ತಲೆ**
**ಇದ್ದವರೆಲ್ಲ| ಇದ್ದಲ್ಲಿರಲಿ**
**ಕಗ್ಗೊಲೆಗ್ಯಾರೊ | ಒದಗದೆ ಇರಲಿ**
**ಕಾಡೂ ಕತ್ತಲೆ | ಕಣ್ಣೂ ಕತ್ತಲೆ**
**ದಿಕ್ಕೂ ಕತ್ತಲೆ | ಮುಗಿಲೂ ಕತ್ತಲೆ**
**ಹೋ ಹೋ ಕತ್ತಲೆ ಕತ್ತಲೆ |...**

ಮುದುಕಿ ೧ : ನನಗೊಂದs ದುಃಖ ಅಂದರ ಕತ್ತಲೆಗೆ ಕಣ್ಣೇ ಇಲ್ಲ.

ಮುದುಕಿ ೨ : ಅದರ ಕಿವಿ ಅವ! ಎದೀ ಐತಿ! ಎದ್ಯಾಗ ನೋವಿರತಾವ. ನೋವಿನಾಗ ಕತಿ ಇರತಾವ. ಶ್ಯಾ! ಇಬ್ಬರೂ ಒಂದs ಕಡೆ ಬಂದು ಅಡಗ್ಯಾರ. ಯಾರು ಸಪ್ಪಳ ಮಡಿದರೂ ಇನ್ನೊಬ್ಬರು ಕೊಲ್ಲತಾರ.

ಮುದುಕಿ ೧ : ಯಾರೂ ಸಪ್ಪಳ ಮಾಡವೊಲ್ಲರು. ಕಾಡೂ ಸತ್ತಬಿದ್ದಿರಬೇಕು, ಒಂಚೂರೂ ಸದ್ದಿಲ್ಲ.

ಮುದುಕಿ ೨ : ತಡಿ ತಡಿ! ಇಬ್ಬರೂ ಹೆಂಗ ಹೊಂಚತಾರ ನೋಡು!

ಮುದುಕಿ ೧ : ಇವರೊಳಗ ಸಾಯೋರ್ಯಾರು?

ಮುದುಕಿ ೨ : ನಾ ಹೇಳದಿದ್ದರೂ ಸಾಯೋರೇ ಸಾಯೋದು.

ಮುದುಕಿ ೧ : ನಿನ್ನ ತಲ್ಯಾಗ ಬರೀ ಸಾವು ತುಂಬೇತಿ.

ಮುದುಕಿ ೨ : ಅಲ್ಲ, ರಕ್ತ ತುಂಬೇತಿ. ಯಾಕಂದರ ಥಂಡಿ ಹತ್ತೇತಿ. ಈಗೊಂದಿಷ್ಟು ಬಿಸಿ ರಕ್ತ ಸಿಕ್ಕರ…..

ಮುದುಕಿ ೧: ಒಂದು ಹಕ್ಕೀನೂ ಎಚ್ಚರಿಲ್ಲ. ಗಾಳಿಗಿ ಉಸಿರಗಟ್ಟೇತಿ, ಉಸಿರಾಡ್ತಾನೇ ಇಲ್ಲ. ಅಯ್ಯೋ ಅಯ್ಯೋ! ನನಗ ನೋಡಾಕ ಆಗೋದಿಲ್ಲ.

ಮುದುಕಿ ೨ : ನಿನ್ನಮುದ್ದು ಕಣ್ಣನ್ನ ಮುಚ್ಚಿಕೋ ಚಿನ್ನ. ಈಗ ನಡೆಯೋದು ಕೊಲೆ. ಅದನ್ನ ನೋಡಿ ಮೊದಲs ಹೊಲಸಾಗಿರೋ ನಿನ್ನ ಕಣ್ಣನ್ನ ಇನ್ನಷ್ಟು ಕೊಳೆ ಮಾಡಿಕೋಬೇಡ. ಇಕಾ ಇಕಾ ! ಹೋಯ್! ಸಿಕ್ಕ ! ಸಿಕ್ಕ ಹುಲಿ ಉಗುರು! ರುಂಬಾಲದ ರುಂಡ! ಹೊಯ್!….. ಬಿತ್ತು! ಬಿತ್ತು!

(ಅಸಹಾಯಕನಾದ ಗೌಡ ಕಿರುಚಿದ ಸದ್ದು.)

## ಕಾದೇವೋ ಸ್ವಾಮಿ ಕಾದೇವೋ

ಮೇಳ :

**ಕಾದೇವೋ ಸ್ವಾಮಿ ಕಾದೇವೋ**
**ತಡೆಹಿಡಿದ ಬಿಕ್ಕಾಗಿ ಕಾದೇವೋ**
**ಕಚ್ಚೇದ ತುಟಿಯಾಗಿ ಕಾದೇವೋ**
**ರೆಪ್ಪೀಯ ಚಾಲನೆಗೆ ಕಾದ ಕಣ್ಣೀರಾಗಿ**
**ಮುರಿದ ಮನದವರಾಗಿ ಕಾದೇವೋ ||**

ಸೂತ್ರಧಾರ : ನಾವಿಲ್ಲಿ ಕಾಯುತ್ತಿದ್ದೆವು.
ಈಗ ಊರಲ್ಲಿದ್ದವರು ಹೆಂಗಸರು, ಮಕ್ಕಳು, ಮುದುಕರು ಮಾತ್ರ.

ನಾವೆಲ್ಲರು ಕಾಯುತ್ತಿದ್ದೆವು.
ನಮ್ಮ ತಲೆ ತುಂಬ ಯೋಚನೆಗಳಿದ್ದವು.
ಯೋಚನೆಗಳ ತುಂಬ ಅನುಮಾನಗಳಿದ್ದವು.
ಹಿಂದೆಂದೂ ಹಿಂಗಾಗಿರಲಿಲ್ಲ. ಎಂಥಾ ಬಾರಾಪಟ್ಟಿ ಹುಲಿ
ಬ್ಯಾಟಿ ಆಡಿದರೂ ಹೊತ್ತು ಮುಳುಗೋದರೊಳಗೆ ಎಲ್ಲಾರು
ವಾಪಸಾಗತಿದ್ದರು. ಈಸಲ ಮಾತ್ರ ಅವರು ಬಂದಿರಲಿಲ್ಲ.

ದಾರೀ ನೋಡೇವಂದರ ನಮಗ ಕಣ್ಣಿರಲಿಲ್ಲ
ಯಾಕಂದರ ಚುಚಿದರ ಬೆರಳು ಸಿಗಬೀಳುವಂಥಾ
ಕತ್ತಲೆ ಹೊರಗಿತ್ತು, ಕರಿಯಜ್ಜ ಕರ್ರೆವ್ವನ ಗುಡ್ಯಾಗ
ಕುಂತಾವ ಇನ್ನೂ ಎದ್ದಿರಲಿಲ್ಲ.

ಗೌಡ್ತಿ ತೊಲೆಬಾಗಿಲ ಹಿಡಕೊಂಡು ನಿಂತಾಕಿ
ಒಳಗ ಹೋಗಿರಲಿಲ್ಲ.
ಎಲ್ಲಾರು ನಿಟ್ಟುಸಿರ ಬಿಡತಿದ್ದರು. ಯಾರಿಗ್ಯಾರೂ
ಸಮಾಧಾನ ಮಾಡತಿರಲಿಲ್ಲ. ಯಾಕಂದರ
ಸಮಾಧಾನ ಮಾಡೋ ಸ್ಥಿತಿ ಒಳಗಿರಲಿಲ್ಲ.
ಕಡೀಕೂ ಕರ್ರೆವ್ವ ಕಾಪಾಡಿದಳು ಅಂದಿವಿ...
*(ಒಬ್ಬೊಬ್ಬರೇ ಬೇಟೆಗಾರರು ಬರುವರು.)*

ಮೇಳ : ಯಾಕೋ ಇಷ್ಟೊತ್ತಿನ ತನಕ?

ಒಬ್ಬ : ಏನು ಮಾಡೋದು, ಬ್ಯಾಟಿ ಆಡ್ತ ಆಡ್ತ ಕತ್ತಲಾದದ್ದು ತಿಳೀಲಿಲ್ಲ.

ಮೇಳ ೨ : ಬ್ಯಾಟಿ ಸಿಕ್ಕಿತ ?

ಒಬ್ಬ : ಸಿಕ್ಕಿತೋ  ಇಲ್ಲೋ, ಮತ್ತ ನಾಳೆ ಹೋಗಬೇಕೋ ಏನೋ.

ಮೇಳ ೧ : ಗೌಡ್ರು ಬಂದರ?

ಇನ್ನೊಬ್ಬ : ಕಾಡಿನಾಗ ಎಲ್ಲೋ ತಪ್ಪಿಸಿಕೊಂಡರು. ಅವರನ್ನ ಹುಡುಕೋದರೊಳಗೆ ಕತ್ತಲಾಯ್ತು. ಬ್ಯಾಟಿ ಆಡತ್ತಿದ್ದರೋ ಹಂತಿ ತಿರಗತಿದ್ದರೊ ಒಂದೂ ಗೊತ್ತಾಗಲಿಲ್ಲ. ಕರದಿವಿ, ಒದರ್ಯಾಡಿದಿವಿ – ಏನಂದರೂ ಗೌಡ್ರ ಸುಳಿವು ಸಿಗಲಿಲ್ಲ, ಹುಡುಕ್ತಾ ಹುಡುಕ್ತಾ ಅಡ್ಡಾಡುವಾಗ ಊರು ಸಿಕ್ಕಿತು. ಬಂದಿವಿ. ಕೆಲವರು ಇನ್ನೂ ಹುಡುಕ್ಯಾಡಾಕ ಹತ್ಯಾರ. ಏನ ಮಾಯೇನೋ ಏನ ಮಾಟವೋ ಹಿಂದೆಂದೂ ಹಿಂಗ ಆಗಿರಲಿಲ್ಲ.

*(ಒಬ್ಬೊಬ್ಬರೇ ಮಾಯವಾಗಿ ರಂಗಭೂಮಿ ಖಾಲಿಯಾಗುವುದು.)*

ಸೂತ್ರಧಾರ : ಎಲ್ಲಾರು ಬಂದ ಮ್ಯಾಲೆ ಗೌಡರು ಬಂದರು.
ದಣಿದಿದ್ದರು.
ಬೆನ್ನಿನ ಮ್ಯಾಲೇನೋ ಹೊತ್ತುಕೊಂಡು ಬಂದಿದ್ದರು.
ಬ್ಯಾಟೀ ಹುಲಿ ಇದ್ದಿದ್ದೀತು ಅಂದಿವಿ.
ಇರಲಾರದು ಅನ್ನಿಸಿತು.
ಯಾಕಂದರ ಊರ ಹೊರಗಿನ ಹಾಳ ಬಾವ್ಯಾಗ
ಅದನ್ನ ಚೆಲ್ಲಿ ಬಂದರು.
ಒಂದು ಕಹಳೆ ಕೂಗಿಲ್ಲ.
ಬಾಜಾಬಜಂತ್ರಿ ಇಲ್ಲ.
ಹುಲಿ ಬೇಟಿ ಸಿಕ್ಕಿತು ಅಂತಿಲ್ಲ.
ಸಿಗಲಿಲ್ಲ ಅಂತಿಲ್ಲ.
ಕಳ್ಳನ ಹಂಗ ಬಂದು ಮನಿ ಹೊಕ್ಕರು.
ಅವರು ಬಂದ ರೀತಿಯಲ್ಲೆ ನಾವು ಸ್ವೀಕರಿಸಿದಿವಿ.

*(ಗೌಡ ಬರುವನು, ಗೌಡ್ತಿ ಬಂದು ಸ್ವಾಗತಿಸುವಳು.)*

ಗೌಡ್ತಿ : ಅಯ್ ಶಿವನ! ಬಂದೆಯಾ? ಬಾ! ನೀ ಹೋದಾಗಿನಿಂದ ಜೀವದಾಗ ಜೀವ ಇರಲಿಲ್ಲ. ಸುತ್ತೂ ದೇವರಿಗೆಲ್ಲ ಹರಿಕೆ ಹೊತ್ತಿದ್ದೆ. ತಾಯಿ ಕಾಪಾಡಿದಳು.

*(ಗೌಡ ದಣಿದವನಂತೆ ಕೂರುವನು.)*

ಒಳಗ ನಡೀಯಲ್ಲ. ದಣಿದಿದ್ದೀ ಎಣ್ಣೀ ಹಚ್ಚಿ ಎರೀಲೇನು?

*(ಗೌಡ ಅವಳಿಗೂ ಕೂರುವಂತೆ ಸನ್ನೆ ಮಾಡುವನು. ಮತ್ತು ಇದೇ ಮೊದಲ ಸಲವೆಂಬಂತೆ ಮನೆಯನ್ನೂ ಅವಳನ್ನೂ ನೋಡುವನು. ಅಷ್ಟರ ಲ್ಲಿ ರಾಮಗೊಂಡ ಬರುವನು. ಗೌಡ ಅವನನ್ನು ಇವನ್ಯಾರು ಎನ್ನುವಂತೆ ನೋಡುವನು.)*

ರಾಮಗೊಂಡ : ಎಪ್ಪಾ, ಹುಲಿ ಸಿಕ್ಕಿತ?

ಗೌಡ : ಹೂ.

ರಾಮಗೊಂಡ : ಎಲ್ಲಿ ಐತಿ?

ಗೌಡ : ಹಾಳ ಬಾವ್ಯಾಗ ಎಸದ ಬಂದೆ.

ರಾಮಗೊಂಡ : ತರಬೇಕಾಗಿತ್ತು ನೋಡತಿದ್ದೆ.

ಗೌಡ : ಕೆಟ್ಟ ಹುಲಿ ಅದು, ಅದನ್ನೋಡಿ ನೀ ಏನ ಮಾಡತಿದ್ದೆ?

*(ರಾಮಗೊಂಡ ಹೊರಗೆ ಹೋಗುವನು.)*

ಗೌಡ್ತಿ : ಮೈ ತಿಕ್ಕಲೇನು?

ಗೌಡ : ಬ್ಯಾಡ.

ಗೌಡ್ತಿ : ಬ್ಯಾಡ ಬ್ಯಾಡ ಅಂದರ ನನ್ನ ಮಾತ ಮೀರಿ ಹೋದಿ. ನೀ ಹೋಗೋವಾಗ ಆರತ್ಯಾಗಿನ ದೀಪ ಆರಿತು. ಅದಕ್ಕ ಹೆಂಗೋ ಏನೋ ಅಂತ ಜೀವಾ ಕೈಯಾಗ ಹಿಡಕೊಂಡ ಕುಂತಿದ್ದೆ.

ಗೌಡ : ನನಗ ನೆನಪs ಇಲ್ಲ.

ಗೌಡ್ತಿ : ನಾ ನಿನಗ ಹೇಳಿದ್ದರಲ್ಲೇನು ನೆನಪಿರೋದು ?

ಗೌಡ : ಹೌಂದಲ್ಲ!

ಗೌಡ್ತಿ : ಬಾವ್ಯಾಗ ಯಾಕ ಒಗದ ಬಂದಿ ? ಎದೆಗುಂಡಿಗಿ ತರತೀನಿ ತಿಂದೀಯಂತ ಹೇಳಿದ್ದಿ.

ಗೌಡ : ಹೌಂದ?

*(ಅವಳ ಹತ್ತಿರ ಹೋಗಿ)*

ಹುಲಿ ಅಲ್ಲ, ರಾಕ್ಷಸ ಅದು. ಮೋಸ ಮಾಡಿ ಕೊಲ್ಲಾಕ ಬಂದ. ದೇವರ ದಯೆ, ನಿನ್ನ ತಾಳೀ ಪುಣ್ಯ ಅಮತಿಟ್ಟಕ; ಬಜಾವಾಗಿ ಅದನ್ನ ಕೊಂದ ಬಂದೆ. ಅದಕ್ಕs ಅದರ ಸಾವಾಸ ಬ್ಯಾಡಂತ ಬಾವ್ಯಾಗ ಎಸದ ಬಂದೆ. ನಾಳೆ ಡಂಗುರ ಸಾರಬೇಕು.

ಗೌಡ್ತಿ : ಏನಂತ?

ಗೌಡ : ಹಾಳ ಬಾವ್ಯಾಗ ಯಾರೂ ಹಣಿಕಿ ಹಾಕಬ್ಯಾಡ್ತೀ ಅಂತ. ಯಾರಿಗ್ಗೊತ್ತು – ಮೊದಲs ರಾಕ್ಷಸ. ಯಾವ ಮಾಯೇದಿಂದ ಯಾರನ್ನ ಹಿಡೀತಾನೋ? ಕೊಂದವನ ಸಂತಾನಂತೂ ಹಣಕಿ ಹಾಕಲೇಬಾರದು. ಬಾವೀ ಕಡೆ ಹೋಗಬ್ಯಾಡಂತ ನಿನ್ನ ಮಗನಿಗೆ ತಾಕೀತ ಮಾಡು.

ಗೌಡ್ತಿ : ನೀ ಹೇಳಿದ್ದ ಕೇಳಿದರs ನಡುಕ ಹುಟ್ಟತೈತಿ, ನಾಳೆ ಕರ್ರೆವ್ವಗ ಒಂದು ಕುರಿ ಕೊಡೋಣೇಳು.

*(ಹೊರಗೆ ಹೆಂಗಸೊಂದು "ನನ್ನ ಕೂಸು ನನ್ನ ಕೂಸು" ಎಂದು ಚೀರಿ ಅಳುವುದು ಕೇಳಿಸುತ್ತದೆ.)*

ಗೌಡ : (ಹೆದರಿ) ಯಾರಿಗೇನಾಯ್ತು?

ಗೌಡ್ತಿ : ಏನಾಯ್ತೋ ಏನೋ! ಹೊರಗ ಎಂಥಾ ಕತ್ತಲಂತಿ. ರಾಮಗೊಂಡ ಮತ್ತ ಯಾಕ ಹೊರಗ್ಹೋದ? ರಾಮಾ ರಾಮಾ-

(ರಾಮಗೊಂಡ ಒಳಕ್ಕೆ ಬರುವನು.)

ಯಾರಿಗೇನಾಯ್ತೋ ಮಗ?

ರಾಮಗೊಂಡ : ಕುರುಬರ ಗುಳ್ಳವ್ವನ ಮಗ ಉಸಿರಾಡೋದ ಮರತ್ಯೆತಂತ, ಕರಿಯಜ್ಜನ ಹಂತ್ಯಾಕ ತಗೊಂಡು ಹೋದ್ಲು.

ಗೌಡ್ತಿ : ಹೌಂದ? (ಗೌಡನಿಗೆ) ನೀನೂ ನೋಡಾಕ ಹೋಗ್ತೀಯೇನು?

ಗೌಡ : ನಾ ಯಾಕ ಹೋಗಲಿ? (ರಾಮಗೊಂಡನಿಗೆ) ತೊಲಿಬಾಗಿಲಾ ಹಾಕೇತಿಲ್ಲ ನೋಡು, ಹಾಕದಿದ್ದರೆ ಹಾಕ್ಕೊಂಡು ಒಳಗ ಬಾ.

(ಗೌಡ್ತಿ ಆಶ್ಚರ್ಯದಿಂದ ಗೌಡನನ್ನೇ ನೋಡುವಳು.)

## ಆ ರಾತ್ರಿ ಏನೇನೋ ತಂದಿತ್ತು

ಸೂತ್ರಧಾರ : ಊರಿಗೂರs
ಕತ್ತಲಾಗ ಅಡಗಿಬಿಟ್ಟಿತ್ತು.
ಆ ರಾತ್ರಿ ಏನೇನೋ ತಂದಿತ್ತು.
ಸಂಶಯ ತಂದಿತ್ತು, ಸೋಲು ತಂದಿತ್ತು.
ಎಂದೆಂದೂ ಮಾಗದ ನೋವು ತಂದಿತ್ತು.
ಸಕಾಲಕ್ಕ ಮುಂಜಾನೆಯೇನೋ ಬಂತು.
ಆದರ ಹೊಸ ಮುಂಜಾನೆ ಹೊಸ ಆಸೆ ತರಲಿಲ್ಲ.

ಊರಿನ ಮ್ಯಾಲ ಯಾವುದೋ ಮಾಯೆ
ಕವಿಧಾಂಗ ಮಂಜು ಬಿದ್ದಿತ್ತು,
ಇದ್ದಷ್ಟ ಬೆಳಕಿನಾಗ ಕನ್ನಡಿ ನೋಡಿದಿವಿ.
ಎಲ್ಲಾ ಅದಲ ಬದಲಿ ಆಗಿತ್ತು.
ಹುಡುಗರು ಮುದುಕರಾಗಿದ್ದರು.
ಹೋರಿಗಳು ಎತ್ತಾಗಿದ್ದವು.
ಮನಸ್ಸು ಮನಸ್ಸಿನ ನಡುವೆ ಅಡ್ಡಗೆರೆ ಮೂಡಿದ್ದವು.
ಮನೆ ಮನೆ ನಡುವೆ ಅಡ್ಡಗೋಡೆ ಎದ್ದಿದ್ದವು.
ನಮ್ಮ ನೆರಳು ನೋಡಿ ನಮಗs ಆಶ್ಚರ್ಯ ಆಗತಿತ್ತು:
ಇವು ನಮ್ಮ ನೆರಳೇನು ಅಂತ –
ಇದು ನಮ್ಮ ಊರೇನು ಅಂತ –
ನಾವೆಲ್ಲ ನಾವೇನು ಅಂತ!

ಡಂಗರುದವ : ಕೇಳ್ರೆಪೋ ಕೇಳ್ರಿ, ಇಂದಿನಿಂದ ಯಾರೂ ಊರ ಹೊರಗಿನ ಹಾಳ ಬಾವ್ಯಾಗ ಹಣಿಕಿ ಹಾಕಬಾರದು. ಹಣಿಕಿ ಹಾಕಿದರ ಗೌಡರು ದಂಡ ಶಿಕ್ಷಾ ಮಾಡತಾರ್ರೆಪೊ….

*(ಇರಿಪ್ಯಾ, ಬಸ್ಯಾ ಮಾತಾಡುತ್ತ ಕುಳಿತಿರುವರು.)*

ಇರಿಪ್ಯಾ : ಊರಿಗೇನೋ ಕೆಡಗಾಲ ಬಂದೈತಿ!

ಬಸ್ಯಾ : ಹೌಂದೋ ಏನೋ! ಅಜ್ಜನ ಮಂತ್ರ ಹುಸಿಹೋದದ್ದನ್ನ ನಾ ಇಲ್ಲೀತನಕ ನೋಡಿದ್ದಿಲ್ಲ ಬಿಡು.

ಇರಿಪ್ಯಾ : ಯಾಕ, ಏನಾಯ್ತು?

ಬಸ್ಯಾ : ಬೇಕಾದಂಥ ಉಸಿರು ಸಿಕ್ಕಿರಲಿ, ಅಜ್ಜ ಮಂತ್ರ ಹಾಕಿದರ ತಿರಿಗಿ ಬರತಿತ್ತು. ನಿನ್ನಿ ಗುಳ್ಳವ್ವನ ಕೂಸಿಗೆ ಅಜ್ಜ ಮೂರ ಸಲ ಮಂತ್ರ ಹಾಕಿದರು ಜೀವ ಬರಲಿಲ್ಲ!

ಇರಿಪ್ಯಾ : ಗುಳ್ಳವ್ವನ ಕೂಸು ಸತ್ತ ಹೋಯ್ತು?

ಬಸ್ಯಾ : ಮಣ್ಣ ಮಾಡಿ ಇಕಾ ಇಲ್ಲಿಗೇ ಬಂದೆ. ಅದೇನೋ ಡಂಗುರ ಸಾರತಿದ್ದರಲ್ಲ?

ಇರಿಪ್ಯಾ : ಹಾಳ ಬಾವ್ಯಾಗ ಯಾರೂ ಹಣಿಕಿ ಹಾಕಬಾರದಂತ.

ಬಸ್ಯಾ : ಯಾಕ?

ಇರಿಪ್ಯಾ : ಕೊಂದ ಹುಲಿ ಅದರಾಗ ಎಸದ ಬಂದರಾಂತ ಗೌಡರು.

ಬಸ್ಯಾ : ಹಂಗಾದರ ಹುಲಿ ಕೊಂದರ ಗೌಡ್ರು? ನನಗ್ಗೊತ್ತs ಇರಲಿಲ್ಲ ಬಿಡು. ನಿನ್ನಿ ರಾತ್ರಿ ಅದೇನ ಹೊಯ್ಕ ಕಂಡಿನೋ ಮಾರಾಯಾ! ರಾತ್ರಿ ಉಚ್ಚೀ ಹೊಯ್ಯಾಕಂತ ಎದ್ದಿದ್ದೇ ಹೊಯ್ ಹೊಯ್ಯ್ಯುದರಾಗ ನಾಕೈದ ಉಲ್ಕಿ ನಮ್ಮೂರ ಮ್ಯಾಗs ಬೀಳಬೇಕ! ಎಲಾ ತಾಯಿ! ಏನ ಕೆಡಗಾಲ ಬಂತವಾ ಅಂತ ಮ್ಯಾಲ ನೋಡತೀನಿ, ಆಕಾಶ ಹಿಡಿದು ಯಾರೋ ಅಲ್ಲಾಡಿಸಿಧಾಂಗ, ಎಲ್ಲಾ ಚುಕ್ಕಿ ತೊಟ್ಟು ಕಳಚಿ ನಮ್ಮೂರ ಮ್ಯಾಲs ಬಿದ್ದಾಂಗಾಯ್ತು!... ಇರಿಪ್ಯಾ ಇದರರ್ತ ಏನಿದ್ದೀತು?

ಇರಿಪ್ಯಾ : ಇನ್ನೇನಿದ್ದೀತೋ, ಊರ ಮುಳುಗಿ ಸತ್ಯಾನಾಸ ಆಗತೈತಿ ಅಷ್ಟ.

ಬಸ್ಯಾ : ನಿನಗ ಹಂಗ್ಯಾಕನಿಸ್ತು?

ಇರಿಪ್ಯಾ : ಯಾಕೋ ನಂಗೊತ್ತಿಲ್ಲಪ್ಪ.

(ಇಬ್ಬರೂ ಮರೆಯಾಗಿ ಸೂತ್ರಧಾರ ಕಾಣಿಸಿಕೊಳ್ಳುವನು.)

# ಚಿಗುರೋ ದಯ ಚಿವುಟಿದರು

ಸೂತ್ರಧಾರ : ಅದಾಗಿ ಆರು ತಿಂಗಳಾಗಿತ್ತು.

ದಿನ ಕಳೆದಂತೆ ದೊಡ್ಡ ಆಶ್ಚರ್ಯಗಳು ನಮಗಾಗಿ ಕಾದಿದ್ದವು. ಹಿಂಡುಹಿಂಡಾಗಿ ಬಂದರ ಬೆರಗಿಗೆ ಸಾಯತೀವಂತಲೋ ಏನೊ ಒಂದೊಂದಾಗಿ, ಹಿಂದೆ ಮುಂದಾಗಿ, ಸಾಲಾಗಿ ಸಾಗಿ ಬಂದು ಎದೀಗೊದ್ದು ಒಳಗೆ ಹೆಜ್ಜೆ ಮೂಡಿಸಿ ಹೋಗತಿದ್ದುವು.

ಗೌಡರು ನಮ್ಮ ಗುರತ ಹಿಡೀತಿರಲಿಲ್ಲ.
ಯಾವ್ಯಾವ್ದೋ ಹೆಸರಿನಿಂದ ಕರೀತಿದ್ದರು.
ನಮ್ಮ ಹೆಸರು ಅವರಿಗೆ ನೆಪ್ಪಿರಲಿಲ್ಲ.
ಅವರು ಕರೆಯೋ ಹೆಸರು ನಮಗ ಸಮ್ಮತ ಇರಲಿಲ್ಲ.
ಕರೆದಾಗೆಲ್ಲ ಹೆದರಿ ಅವರ ಕಡೆ ನೋಡತಿದ್ದಿವಿ.
ಸಂಶೇದಿಂದ ಅವರೂ ನೋಡತಿದ್ದರು ಮತ್ತು ರೇಗತಿದ್ದರು.

ಮನಸ್ಸಿನಾಗs ಕೇಳತಿದ್ದಿವಿ: ಹಿಂಗ್ಯಾಕ್ರಿ ಗೌಡರ? ಅಂತ.
ಆದರ ಅವರ ಉತ್ತರಾ ಕೊಡ್ತಾನs ಇರಲಿಲ್ಲ.
ಖರೇ ಹೇಳಬೇಕಂದರ.
ನಾವೀಗ ಸಣ್ಣವರಾಗಿ ಉಳಿದಿರಲಿಲ್ಲ.
ಆಗಲೇ ಕಥೆಗಳಾಗಿದ್ದಿವಿ.

ವಾಡೇದೊಳಗೆ ರಾತ್ರಿ ಮೊದಲಿನ್ಹಾಂಗ ಬೆಳಕು
ಇರತಿರಲಿಲ್ಲ. ಮ್ಯಾಲಿನ ದೇವರು ಹಣಿಕಿ ಹಾಕಿದರೂ
ಕಾಣಧಾಂಗ, ಎಲ್ಲೆಲ್ಲಿಯ ಕತ್ತಲೆಲ್ಲಾ ಅಲ್ಲೇ ಬಂದು
ರಾಶಿಯಾಗಿತ್ತು.
ಸುತ್ತಲಿನ ಕೆಟ್ಟ ದೆವ್ವಗಳೆಲ್ಲ ಅಲ್ಲಿಗೇ ಬಂದು
ಕುಹಕಗಳನ್ನ ಪಿಸಗುಡತಿದ್ದುವು.
ದುಃಸ್ವಪ್ನ ಕಂಡಾಗ ಕೂಸ ಚೀರತಾವಲ್ಲಾ-
ಹಾಂಗ ವಾಡೇದಾಗಿನಿಂದ ಒಮ್ಮೊಮ್ಮಿ ಗೌಡ್ತಿ
ಚೀರಿದ್ದು ಕೇಳಸ್ತಿತ್ತು.
ಆದರ,
ಆ ತಾಯಿ ಕನಸಿನಾಗ ನಮಗ ಪ್ರವೇಶ ಇರಲಿಲ್ಲ.

ಈಗ ನಮಗಿದ್ದ ಆಶ್ರಯ ಒಂದೇ – ಕರಿಮಾಯಿ ಮರ.
ನಮಗೆಲ್ಲೋ ಗಾಯವಾಗಿತ್ತು, ಅದರ ಮ್ಯಾಲ
ಪಾರಂಬಿ ನೆರಳು ಕವಿದು ಅದು ಕಾಣದ ಹಾಂಗ

ಮಾಡತಿತ್ತು. ನೆರಳ ಬಿಟ್ಟ ಹೊರಗಡೆ ಬಂದರ ಸಾಕು
ಗಾಯದ ಭಯ ನಮ್ಮನ್ನ ಮುಕ್ತಿ ತಿಂತಿತ್ತು.
ಅದರ ಗೌಡರಿಗೆ ಇದೂ ಸರಿಬರಲಿಲ್ಲ.
ನಾವೆಲ್ಲಾ ಸೇರಿ ಸಂಚ ಮಾಡತೀವಂದರು.
ಪಾರಂಬಿ ಮರದಡಿ ಹೊಂಚಿ ನಿಂತೇವಂದರು.
ಚಿಗುರೋ ದಯ ಚಿವುಟಿಬಿಟ್ಟರು.

*(ಪಾರಂಬಿ ಮರದ ಬಳಿ ಕರಿಯಜ್ಜ ಚಿಂತೆ ಮಾಡುತ್ತಾ ಕೂತಿದ್ದಾನೆ. ರಾಮಗೊಂಡ ಬರುತ್ತಾನೆ.)*

ರಾಮಗೊಂಡ : ಯಜ್ಜಾ

ಕರಿಯಜ್ಜ : ಹೂ

ರಾಮಗೊಂಡ : ಆಕಾಶ ಕಡಕೊಂಡ ಮೈಮ್ಯಾಲ ಬಿದ್ಧಾಂಗ ಕುಂತೀಯಲ್ಲ. ಯಾಕೆ?

ಕರಿಯಜ್ಜ : ತಿಳೀವೊಲ್ದಪ.

ರಾಮಗೊಂಡ : ಏನ ತಿಳೀವೊಲ್ಲದು?

ಕರಿಯಜ್ಜ : ಏನೇನೂ.

ರಾಮಗೊಂಡ : ಅಂದರ?

ಕರಿಯಜ್ಜ : ಯಾಕೋ ಜೀವದಾಗ ಆರಾಮಿಲ್ಲೋ ತಮ್ಮಾ. ಎದಿ ಬಿರಧಾಂಗ ಆಗೇತಿ, ಕಣ್ಣು ಸಮ ಕಾಣವೊಲ್ಲು. ಎದರಿದ್ದವರೆಲ್ಲ ಎರಡೆರಡ ಕಾಣಸ್ತಾರ.

ರಾಮಗೊಂಡ : ಸೊಪ್ಪ ಹಿಂಡಿಕೊಂಡರ ಸಮ ಆದೀತು ಬಿಡು.

ಕರಿಯಜ್ಜ : ನಾ ಇಂದ ಸಾಯತೀನೋ ಏನೊ.

ರಾಮಗೊಂಡ : (ಭಯ ಮತ್ತು ಆತಂಕಗಳಿಂದ) ಏನೇನೋ ಮಾತಾಡ್ತಿ ಬಿಡೆಜ್ಜ ನೀನು.

ಕರಿಯಜ್ಜ : ತಮ್ಮಾ, ಹೋಗಿ ತಾಯಿಗಿ ನಮಸ್ಕಾರ ಮಾಡಿ ಬಾ.

ರಾಮಗೊಂಡ : ನಾ ಇನ್ನೂ ಜಳಕಾ ಮಾಡಿಲ್ಲ.

ಕರಿಯಜ್ಜ : ಇರಲಿ, ತಾಯೀ ದರ್ಶನ ಮಾಡಿಕೊಂಡ ಬಾ.

*(ರಾಮಗೊಂಡ ಹೋಗುವನು. ಹೋಗಿ ನಮಸ್ಕರಿಸಿ ಅಲ್ಲಿಂದಲೇ ಯಜ್ಜಾ ಎಂದು ಚೀರುತ್ತ ಬರುವನು. ಕರಿಯಜ್ಜ ಬರುವನು. ಕರಿಯಜ್ಜ ಕಣ್ಣೀರು ಸುರಿಸುತ್ತಿರುವನು.)*

ರಾಮಗೊಂಡ : ಯಜ್ಜಾ! ತಾಯೀ ಮೂರ್ತಿ ಒಡದೈತಿ!

ಕರಿಯಜ್ಜ : ..........

ರಾಮಗೊಂಡ : ಏನಾರ ಮಾತಾಡೆಜ್ಜಾ, ಕರಿಮಾಯೀ ಮೂರ್ತಿ ಬಿರದೈತಿ! ಅಪ್ಪಗ ಹೇಳಿ ಬರಲೇನು?

ಕರಿಯಜ್ಜ : ಏನೂ ಆಗಾಣಿಲ್ಲ. ನಿಮ್ಮಪ್ಪಗ ಹೇಳಿದರ ಒಡೆದದ್ದು ಒಂದಾಗತೈತಿ? ಇಂಥಾದ್ದೇನೋ ಆಗತೈತಿ ಅಂತ ನನಗನಿಸಿತ್ತು. ನಮ್ಮಂಥ ಭಕ್ತರಿದ್ದೂ ಎದಕ್ಕ ಬಂತು? ಹಂದಿನ ಕಾಲದಾಗ ತಾಯೀ ಭಕ್ತರಿದ್ದರು. ಪಾರಂಭಿ ಮರ ಮಾತಾಡಸ್ತಿದ್ದರು. ಗುಡ್ಡ ಗರ್ಜನಿ ಮಾಡೋ ಹಾಂಗ ಮಾತಾಡತಿದ್ದರು! ನಾವೂ ಇದ್ದೀವಿ, ತಾಯಿ ಬಿರದದ್ದನ್ನು ನೋಡ್ತಾ ಕುಂತೀವಿ!

*(ಇರಿಪ್ಯಾ ಬರುವನು. ರಾಮಗೊಂಡ ಇರಿಪ್ಯಾನಿಗೆ)*

ರಾಮಗೊಂಡ : ತಾಯೀ ಮೂರ್ತಿ ಬಿರದೈತಿ!

ಕರಿಯಜ್ಜ : ಏನಂದಿ?

ರಾಮಗೊಂಡ : ಹೋಗಿ ನೋಡಿ ಬಾ!

*(ಇರಿಪ್ಯಾ ಸಂದೇಹದಿಂದ ಹೋಗುವನು. ಹೆಣ ಕಂಡ ಗಾಬರಿಯಲ್ಲಿ ಓಡಿ ಬರುವನು.)*

ಇರಿಪ್ಯಾ : ಗೌಡರ್ನ ಕರಕೊಂಬರತೀನಿ.

ರಾಮಗೊಂಡ : ಅಜ್ಜ ಬ್ಯಾಡಂತಾನ.

ಇರಿಪ್ಯಾ : ಅದೂ ಖರೆ.

*(ಅಷ್ಟರಲ್ಲಿ ನಾಲ್ವರು ಮರ ಕಡಿಯುವವರು ಬರುವರು.)*

ಮರಕಟುಕ ೧ : ಪಾರಂಬಿ ಮರ ಅಂದರ ಇದs ಏನ್ರಿ?

ರಾಮಗೊಂಡ : ಹೌದು, ಯಾಕ?

ಮರಕಟುಕ ೧ : ಇದನ್ನ ಕಡ್ಯಾಕ ಕಳಿಸ್ಯಾರ ಗೌಡ್ರು.

ರಾಮಗೊಂಡ : ಯಾವೂರವರು ನೀವು?

ಮರಕಟುಕ ೨ : ಬೆಳಗಾವಿ ಸಿಟಿ ಕಡೆಯವರು.

ರಾಮಗೊಂಡ : ಅದಕ್ಕs ಇಷ್ಟ ಧೈರೆ ಮಾಡೀರಿ. ನಾನು ಗೌಡನ ಮಗ ರಾಮಗೊಂಡ-

ಮರಕಟುಕ ೨ : ನಮಸ್ಕಾರ್ರಿ.

ರಾಮಗೊಂಡ : ನಾ ಹೇಳತೀನಿ ಪಾಪಸ್ ಹೋಗ್ರಿ.

ಮರಕಟುಕ ೨ : ಅಪ್ಪ ಮರ ಕಡೀರಿ ಅಂತಾನ. ಮಗ ಬ್ಯಾಡ ಅಂತಾನ. ನಾವು ನೋಡ್ರೀ – ಕೂಲಿಯವರು. ಕೆತ್ತಂದರ ಕೆತ್ತವರು, ಮೆತ್ತಂದರ ಮೆತ್ತವರು. ಕೆತ್ತಲಿಕ್ಕೂ ಕೂಲಿ, ಮೆತ್ತಲಿಕ್ಕೂ ಕೂಲಿ. ಈಗೇನು ಮರ ಕಡೀರಂತೀರೋ ಬ್ಯಾಡಂತೀರೋ?

ರಾಮಗೊಂಡ : ಹೇಳಲಿಲ್ಲಾ, ವಾಪಸ್ ಹೋಗ್ರಿ ಅಂತ?

ಕರಿಯಜ್ಜ : ಸೊಥಾ ಗೌಡರs ಕಳಿಸಿದರೇನ್ರಪ?

ಮರಕಟುಕ ೧ : ಹೌದು, ಬೇಕಾದರ ಕೇಳಿ ಬರ್ರಿ. ಇಲ್ಲದಿದ್ದರ ಆನೆಯಂಥಾ ಮರ ಕಡ್ಯಾಕ ನಮಗೇನು ಕೈಚಪಲೇನು? ಕೆಲಸಿರಲಿಲ್ಲ ಅಂತ ಒಪ್ಪಿಕೊಂಡೀವಿ. ಇಲ್ಲದಿದ್ದರ ಎಂಥಾ ಮರ ಕಡಿಯೋ ದಕ್ಕ ದಿನಕ್ಕ ಒಬ್ಬಾವಗ ನಾಕಾಳಿನ ಕೂಲಿ ಕೊಡಬೇಕು.

ಕರಿಯಜ್ಜ : ಅನಾದಿ ಕಾಲದಿಂದಲೂ ಬಂದ ಮರ ಇದು. ಆಗಿನಿಂದಲೂ ತಾಯಿ ಇದರ ಬುಡದಾಗ ನೆನೆದಾಳ. ಆಳೋ ತಾಯಿ, ನಂಬಿದೋರಿಗೆ ನಿಜ ತೋರಿಸೋ ತಾಯಿ, ಆಕೀ ಮರ ಕಡಿಯೋದಕ್ಕ ಹೇಳತಾನಂದರ ನಿಮ್ಮಪ್ಪಗ ಏನೋ ಆಗಿರಬೇಕು. ಸೊಥಾ ತಾಯೀನs ಬಿರದ್ದಾಳ, ಇನ್ನು ನಿಮ್ಮಪ್ಪನಿಗಾದರೂ ಏನ ಹೇಳಾಕಾದೀತು? (ಮರಕಟುಕನಿಗೆ) ಏನಪ್ಪಾ, ಸೊಥಾ ಗೌಡರs ಕಳಿಸಿದರ?

ಮರಕಟುಕ ೧ : ಮುಂಗಡ ಕೂಲಿ ಸಹಿತ ಕೈಯಾಗ ಹಿಡಕೊಂಡು ಬಂದೀವಿ. ವಾಪಸ್ ಹೋದರ ಬಿಟ್ಟಾರೇನ್ರಿ? ನೀವs ಹೋಗಿ ಗೌಡರನ್ನ ಕೇಳಬಾರದ?

ರಾಮಗೊಂಡ : ಯಜ್ಜಾ, ನಾ ಮನೀಗಿ ಹೋಗಿ ಕೇಳಿ ಬರಲೇನು?

ಕರಿಯಜ್ಜ : ಧರೆಯ ಮ್ಯಾಲಿನ ಧರ್ಮ ಆರಿಹೋಗೇತ್ಯೋ ತಮ್ಮಾ! ಮೊದಲಾದರ ನಿಮ್ಮಪ್ಪ ಎದ್ದಾಗ ತಾಯೀ ಅಂತಿದ್ದ. ಬಿದ್ದಾಗ ತಾಯೀ ಅಂತಿದ್ದ. ಮಗ್ಗಲಾದರೂ ತಾಯೀ ಅಂತಿದ್ದ. ಹುಲಿ ಬ್ಯಾಟಿಗಿ ಹೋಗಿಬಂದಾ ನೋಡು, – ತಾಯೀನ್ನ ಕಸಕಡ್ಡಿ ಮಾಡಿಟ್ಟ. ಯಾವ ಭೂತ ಅವನೊಳಗ ಹೊಕ್ಕೈತೋ, ಇಲ್ಲಾ ಕಲಿಕಾಲ ಅವರ ಮೈ ತುಂಬೈತೋ, ನನ್ನ ಗುರುತ ಹಿಡೀವೊಲ್ಲ, ತಾಯೀ ಗುರುತಾ ಹಿಡೀಲಾರದವನು ನನ್ನ ಗುರುತ ಹೆಂಗ ಹಿಡಿದಾನು?

ಇರಿಪ್ಯಾ : ಹೌಂದ ಹೌಂದು, ಅವರ ಕಣ್ಣ ನೋಡಿದರ ನನಗ ಅಂಜಿಕಿ ಬರತೈತಿ. ಹೊಂಚಿದ ಚೂರಿಯಂಥಾ ಅವರ ಕಣ್ಣಿನ ನದರ ಬಿದ್ದಲ್ಲೆಲ್ಲಾ ನನ್ನ ಮೈಗಿ ತೂತ ಬಿದ್ದಾಂಗ ಅನಸತೈತಿ.

ಕರಿಯಜ್ಜ : ಅವ ಏನು ಮಾಡಿದರೂ ಒಳಗೊಳಗೆ ನಗತಾನ ಅಂತ ಅನಸತೈತಿ.

ಇರಿಪ್ಯಾ : ಈಗ ಪಾರಂಬಿ ಮರ ಕಡೀತಾರ: ಏನ ಮಾಡೋಣು?

ಕರಿಯಜ್ಜ : ನ್ಯಾಯ ಮಾಯವಾತಿಯೇ ತಾಯಿ!
ಪೂರಾ ಎಲ್ಲಾ ಅರೆಬರೆ ಆಗಿ ಹಂಚಿ ಹೋಧಾಂಗ,
ಉರಿಯೋ ಸೂರ್ಯ ಗಾಳಿಗಿ ಗಕ್ಕನ ಆರಿಧಾಂಗ ಅನಸತೈತಿ.
ಬೈಗೂ ಬೆಳಗೂ ಎಲ್ಲಾ ಕಾಲ ಒಂದs ಆಗಿ
ಕಣ್ಣ ರೆಪ್ಪೀ ಮ್ಯಾಲ ಹರದಾಡಿಧಾಂಗ ಅನಸತೈತಿ!
ಕಾಂಬೋದೆಲ್ಲ ಖಾಲಿ ಆಗಿ
ಅನಿಸಿದ್ದೆಲ್ಲ ನಿಜ ಆಗಿ
ಗಾಳಿಗೆ ಆಕಾರ ಬಂದೊ-
ಆಕಾಶ ನೀಲಿಗೆ ನಕ್ಷತ್ರವಾದೋ-
ಸುತ್ತೂ ದಿಕ್ಕಿನ ದೆವ್ವ ಬಂದು ಮರದ ಮ್ಯಾಲೆ
ನೆರಳ ಮಾಡಿ ನಿನ್ನ ಖರೆ ಕಾಣಧಾಂಗ
ಮಾಡ್ಯಾವs ತಾಯೀ!
ತಾಯೀ, ಎಲ್ಲಿದ್ದೀ? ಹೊರಗ ಬಾರs ಎವ್ವಾ!

*(ಮರದೊಳಗಿಂದ ಸುಮಾರು ೮ ವಯಸ್ಸಿನ ಪುಟ್ಟ ಹುಡಿಗಿಯೊಬ್ಬಳು ಖುಶಿ ಖುಶಿಯಾಗಿ ನಗುತ್ತ ಬರುವಳು. ಕರಿಯಜ್ಜ ಅವಳು ಕರಿಮಾಯಿ ಯೆಂದೇ ತಿಳಿದು ಭಾವುಕನಾಗುವನು. ಆ ಹುಡುಗಿ ಪಾರಂಬಿಮರ ನೋಡುತ್ತಾ ಅಣಕಿಸುವಳು.)*

ಹುಡುಗಿ : ಅಯ್ಯ, ನಿನ್ನ ಐಸಿರಿಯೆ! ಕೆಳಗೂ ಬೇರು, ಮ್ಯಾಗೂ ಬೇರು!
ಕೆಳಗ ನೆಲದಾಗೂ ಬೇರು
ಮ್ಯಾಲ ಆಕಾಶದಾಗೂ ಬೇರು!
ನೆಲದಾಗಿನ ಬೇರಿನಿಂದ ನೀರು ಕುಡೀತಾಳ
ಆಕಾಶದ ಬೇರಿನಿಂದ ಗಾಳಿ ಕುಡೀತಾಳ,
ಕೆಳಗಿನ ಬೇರಿಗೆ ನೀರಿಲ್ಲಾ ನೀರಿಲ್ಲಾ
ಮ್ಯಾಗಿನ ಬೇರಿಗೆ ಗಾಳಿಲ್ಲಾ ಗಾಳಿಲ್ಲಾ.

*(ಚಪ್ಪಾಳೆ ತಟ್ಟುತ್ತಾ ಕುಣಿದಾಡುವಳು.)*

ಕರಿಯಜ್ಜ ; ತಾಯಿ ಬಂದಳು! ತಾಯಿ ಬಂದಳು!!

ಮರಕಟುಕ ೧ : ಏನಪಾ, ಇವಳು ನಿನ್ನ ತಾಯೀನ?

ಕರಿಯಜ್ಜ : ಹೌದು. ಪಾರಂಬಿ ಕರ್ರೆವ್ವ! ಕರಿಮಾಯಿ ಈ ಹುಡುಗಿ ರೂಪದಿಂದ ಬಂದಾಳ! ಹೇಳು ತಾಯೀ, ಪರಂಬಿ ಮರ ಕಡೀಬ್ಯಾಡಂತ ಹೇಳು.

ಮರಕಟುಕ ೨ : ಛೇ ಛೇ ! ಏಳೀ ಕೂಸು, ಅಧೆಂಗಪ ನಿನ್ನ ತಾಯಿ ಆಗತಾಳ?

ರಾಮಗೊಂಡ : ಸುಮ್ಮನ ಕೇಳ್ರೆಲೇ.

ಕರಿಯಜ್ಜ : ಎಳೀ ಕೂಸಲ್ಲ ಅವಳು – ತಾಯಿ, ಕರಿಮಾಯಿ, ಜಗದಂಬಿ, ಕರ್ರೆವ್ವ! ಗುಂಡು ತೇಲಿಸುವಾಕಿ, ಬೆಂಡು ಮುಳುಗಿಸೋವಾಕಿ, ಮಹಾಮಾಯಿ!

ಮರಕಟುಕ ೧ : ಇವನೊಳ್ಳೆ ಕರಿಮಾಯೀ ಚೇಲಾ ಗಂಟ ಬಿದ್ನಪಾ. ಅಪಾ, ನಿನ್ನ ತಾಯೀನ್ನ ಮಾತಾಡಸ್ತೀನಿ ಇರು. ಏ ಏ ಹುಡುಗಿ, ಇಲ್ಲಿ ಬಾ. ನಿನ್ನ ಹೆಸರೇನು?

ಹುಡುಗಿ : ತಾಯಿ.

ಮರಕಟುಕ ೧ : ಇಲ್ಲಿಗ್ಯಾಕ ಬಂದಿ?

ಹುಡುಗಿ : ಕರಿಯಜ್ಜ ಕರೆದ.

ಮರಕಟುಕ ೨ : ನಾವು ಈ ಮರ ಕಡೀಬೇಕಂತೀವಿ. ನೀ ಏನಂತಿ?

ಕರಿಯಜ್ಜ : ಬ್ಯಾಡಂತ ಹೇಳು ತಾಯಿ.

ಹುಡುಗಿ : ಬ್ಯಾಡ.

ಮರಕಟುಕ ೩ : ಕಡದರ ಏನ ಮಾಡತಿ?

ಕರಿಯಜ್ಜ : ಸುಡತೀನಂತ ಹೇಳು ತಾಯೀ.

ಹುಡುಗಿ : ಸುಡತೀನಿ.

ಕರಿಯಜ್ಜ : ಕೇಳಿದಿರೇನ್ರೋ ಕೇಳಿದಿರೇನ್ರೋ? ಈ ಮರಕ್ಕ ಒಂದ ಏಟ ಹಾಕಿದರೂ ನಿನ್ನ ಸತ್ಯ ತೋರಸ್ತೇನಂತ ಹೇಳು ತಾಯೀ.

ಹುಡುಗಿ : ನನ್ನ ಸತ್ಯ ತೋರಸ್ತೀನಿ.

ಮರಕಟುಕ ೪ : ತಾಯೀ, ನಿನ್ನ ವಯಸ್ಸೆಷ್ಟು?

ಹುಡುಗಿ : ಎಂಟು. ನಾ ಇನ್ನೂ ದೊಡ್ಡೋಳಾಗಿಲ್ಲ.

ಮರಕಟುಕ ೪ : ಹಾಂಗಿದ್ದರ ನೋಡು, ಈಗ ಈ ಮರ ಕಡೀತೀವಿ. ಕಡಿದು ಅದರಾಗಿಂದ ನಿನಗೊಂದು ಕೀಲಕುದರೀ ಮಾಡಿಕೊಡ್ತೀವಿ. ನೀನು ರಾಜಕುಮಾರಿ. ಅದರ ಮ್ಯಾಲ ಕುಂತು ಆಕಾಶದಾಗ ಹಾರತಿ! ಹಾರ್ತ ಹಾರ್ತಾ ಕೆಳಗಿನ ಹೊಲ, ಮರ, ಗಿಡ, ಹೊಳಿ, ಗುಡ್ಡ ನೋಡತಿ. ಅಲ್ಲಿ ನಿನ್ನ ಎದುರಿಗೆ ಒಂದು ಗಿಣಿ ಹಾರಿ ಬರತೈತಿ! ಅದನ್ನ ಕುದರೀ ಮ್ಯಾಲ ಕೂರಿಸಿಕೊಂಡು ಮಾತಾಡತಿ!

ಹುಡುಗಿ : ರಾಜಕುಮಾರ ಬರಾಣಿಲ್ಲೇನು?

ಮರಕಟುಕ ೪ : ಬರದೇನು? ಗಿಣೀನೇ ರಾಜಕುಮಾರ!

ಹುಡುಗಿ : ಥೂ! ಗಿಣೀ ಜೋಡಿ ಹೆಂಗ ಮದುವೆ ಆಗೋದು?

ಮರಕಟುಕ ೧ : ಗಿಣೀ ಮ್ಯಾಲ ಕೈ ಆಡಸ್ತೀಯಲ್ಲ, ನೋಡಿದರ ಅದರ ನೆತ್ತೀಮ್ಯಾಲೆಂದು ಮುಳ್ಳಿದೆ! ಮೆಲ್ಲಗೆ ಮುಳ್ಳು ಕೀಳಬೇಕು. ಕಿತ್ತೆಯೋ ಗಿಣಿ ಹೋಗಿ ರಾಜಕುಮಾರ ಆಗತಾನ!

ಹುಡುಗಿ : ಅವ ಏನೇನೆಲ್ಲಾ ಆಗತಾನ?

ಮರಕಟುಕ ೧ : ದೆವ್ವ ಆಗತಾನ! ರಾಕ್ಷಸ ಆಗತಾನ ! ದೇವರಾಗತಾನ ! ಬೇಕಾದರ ಗಿಣಿ ಆಗತಾನ! ಹುಲಿ ಆಗತಾನ !

ಹುಡುಗಿ : ಅದೆಲ್ಲ ನಾನೂ ಆಗಬೇಕು. ನನಗೆ ರಾಜಕುಮಾರ ಬೇಕು.

ಮರಕಟುಕ ೪ : ಅದೂ ಆದೀತು. ಅದೆಲ್ಲ ಅವನ ಮುಖವಾಡ. ಬೇಕಂದರ ಅವನ್ನ ಕಳಚಿ ನಿನಗೂ ಕೊಡತಾನ. ಅದರ ಅವನ್ನ ನೀ ಒಂದರ ಮ್ಯಾಲೊಂದು ಮುಖದ ಮ್ಯಾಲ ಹಾಕ್ಕೊಂಡಿ ಅಂದರ, ರಾಜಕುಮಾರ ನಿನ್ನ ಕಣ್ಣಿಗೆ ಕಾಣೋದs ಇಲ್ಲ. ನೀ ಒಬ್ಬಂಟಿ ಆಗತಿ.

ಹುಡುಗಿ : ನನಗ ರಾಜಕುಮಾರ ಬೇಕು.

ಮರಕಟುಕ ೧ : ರಾಜಕುಮಾರ ಬೇಕಂದರ ನೀ ರಾಜಕುಮಾರಿ ಆಗಬೇಕು.

ಹುಡುಗಿ : ಆಗತೀನಿ, ನನಗ ರಾಜಕುಮಾರ ಬೇಕು.

ಮರಕಟುಕ ೧ : ರಾಜಕುಮಾರ ಬೇಕಂದರ ನೀ ರಾಜಕುಮಾರಿ ಆಗ ಕೀಲ ಕುದರಿ ಹತ್ತಬೇಕು.

ಹುಡುಗಿ : ಕೀಲಕುದರಿ ಹತ್ತತೀನಿ.

ಮರಕಟುಕ ೧ : ಕೀಲಕುದರಿ ಬೇಕಂದರ ಮರ ಕಡೀಬೇಕು. ಕಡಿಯೋಣವ?

ಹುಡುಗಿ : ಕಡೀರಿ ಹಂಗಾದರ.

ಕರಿಯಜ್ಜ : ತಾಯೀ! ತಾಯೀ! ಏನ ಹೇಳಿದೆ ತಾಯಿ!

ಹುಡುಗಿ : ನನಗ ರಾಜಕುಮಾರ ಬೇಕು.

ಮರಕಟುಕ ೩ : ನಿನ್ನ ತಾಯಿ ಅಪ್ಪಣೆ ಆಯ್ತು, ಇನ್ನು ಮರ ಕಡೀಭೌದಲ್ಲ?

ರಾಮಗೊಂಡ : ತಾಳಜ್ಜ, ಅಪ್ಪನ್ನ ಕರಕೊಂಬರತೀನಿ *(ಓಡಿಹೋಗುವನು)*.

ಮರಕಟುಕ ೧ : ಮರ ಕಡಿದು ಕೀಲಕುದರೀ ಮಾಡಿ ಕರೀತೀವಿ. ಅಲ್ಲೀತನಕ ಎಲ್ಲಾದರೂ ಆಡಿಕೋ ಹೋಗು. ಬರ್‍ರೆಪ.

*(ಹುಡುಗಿ ಕುಣಿಯುತ್ತಾ ಹೋಗುವಳು. ಮರ ಕಡಿಯುವವರು ಮರ ಕಡಿಯತೊಡಗಿದಂತೆ ಕರಿಯಜ್ಜ ಮರದ ಹಾಗೇ ಕುಸಿಯುವನು.)*

# ಮೂಡಿದ ನೆರಳು

ಮೇಳ : ಏ ಕುರುಬರಣ್ಣಾ!
ಸತ್ಯುಳ್ಳ ಶರಣಾ
ಕಾಪಾಡೊ ಕುರಿಗಳನಾ | ಮಾಡುವೆ ನಮನಾ ||ಪ||

ಗಿರಿವ ಏರಿಗೆ ಬಂದು ಕುರಿ ಹಿಂಡು ನಿಂತಾವ
ಕೋಲು ಕುರುಬನ ಕಾವಲಿರದೆ
ನಿಲ್ಲಲಾರೆವು ಶಿವನೆ ಸುಳಿಯಲಾರೆವೊ ಮುಂದೆ
ದಮ್ಮಯ್ಯ ದಯವಾಗೊ ತಂದೆ.
ಹಳೆಯ ದೊಡ್ಡಿಯ ಗುರುತ ಮರತೇವೊ ಕಳಕೊಂಡು
ಮತಿಗೆಟ್ಟು ಮರುಳಾದೇವಣ್ಣಾ||

ಪಡುವಣದ ಹುಲಿರಾಯಾ ಕುರಿಯ ವೇಷವ ಧರಿಸಿ
ನಮ್ಮೊಳಗ ತಾರ್ತಕವಾದ
ಕಲ್ಯಾಣದ ಬೆಳಕಾರಿ ಪ್ರಳಯದಲಿ ನಿಂತೇವೊ
ಬ್ಯಾಟಿಗೊಂಬುವ ಮಿಕದ ಹಾಂಗ
ಸಂದೇಹ ಸುಳಿದಾವು ಎಲ್ಲರ ಯಾರೊ ಕರಣಾ
ಹುಲ್ಲು ತಿನ್ನುವ ಕುರಿ ಹಲ್ಲುಗುರು ಮಸೆದಾವೊ
ಕದಗಳಿಲ್ಲದ ದೊಡ್ಡಿಯೊಳಗಾ||

*(ಸ್ಮಶಾನ, ಇರಿಪ್ಯಾ, ಬಸ್ಯಾ, ಪ್ರಭು ಗೋರಿಯ ಹತ್ತಿರ ಕೂತಿದ್ದಾರೆ.)*

ಬಸ್ಯಾ : ಚಂದ್ರನಿಗೇನು ರೋಗ ಬಂತೊ, ಮೂಡೇ ಇಲ್ಲ.

ಬಾಳ್ಯಾ : ಮೂಡಿದರೂ ಬೆಳಕ ಚೆಲ್ಲೋದs ಇಲ್ಲ. ಹಗಲಿ ಸೂರ್ಯನಂಥಾ ಸೂರ್ಯ ಕೂಡಾ ಕೊಳತ ಹಣ್ಣಿನ್ಹಾಂಗ ಕಾಣತಾನಂದರ!

ಬಸ್ಯಾ : ಭೂಮಿಗೂ ಜ್ವರ ಬಂದಾವೇನ್ನೋಡೋ ಮಾರಾಯಾ, ಇಷ್ಟ ರಾತ್ರಿ ಆದರೂ ಇನ್ನೂ ಬೆಚ್ಚಗೈತಿ.

ಪ್ರಭು : ಕರಿಯಜ್ಜ ಸತ್ತದ್ದ ನೋಡಿ ರಾಮಗೊಂಡ ಹುಚ್ಚಾಗ್ಯಾನ.

ಬಾಳ್ಯಾ : ಹೌಂದ್ದೌಂದು, ಪಾಪ, ರಾಮಗೊಂಡ ಯಾವತ್ತೂ ಮುದುಕನ ಹಂತ್ಯಾಕ ಇರತಿದ್ದ. ಘನ ಮಾತಾಡವರು ಇಬ್ಬರೂ. ರಾತ್ರಿ ದೆವ್ವ ಓಡಾಡೊ ಯಾಳೆ ಆದರೂ ಇಬ್ಬರೂ ಮಾತಾಡ್ತ ಪಾರಂಬಿ ಮರದ ಹಂತ್ಯಾಕs ಕುಂತಿರತಿದ್ದರು.

ಬಸ್ಯಾ : ಮುದುಕ ಸತ್ತನಲ್ಲ, ನಮ್ಮಪ್ಪನ್ನ ಎರಡನೇ ಬಾರಿ ಕಳ ಕೊಂಢಾಂಗಾಯ್ತು! ಮರ ಕಡೀದಿದ್ದರ ಮುದುಕ ಇನ್ನೆರಡ ದಿನ ಬದಿಕಿರತಿದ್ದನೋ ಏನೊ!

ಇರಿಪ್ಯಾ : ಆ ಹುಡುಗಿ ಬಂದಾಗ ಖರೆ ಖರೆ ಕರಿಮಾಯೀನs ಹಾಂಗ ಬಂದಳಂತ ನಾ ತಿಳಕೊಂಡೆ

ಬಸ್ಯಾ : ನಾನೂ ಹಾಂಗs ಅಂದಕೊಂಡೆ, ಯಾರು ಆ ಹುಡಿಗಿ?

ಇರಿಪ್ಯಾ : ಯಾರೂ ಅಲ್ಲ ತಗಿ, ನಮ್ಮ ಊರಾಗ ಆ ಹುಡುಗೀನ್ನ ನೋಡೇ ಇಲ್ಲ ನಾನು.

ಬಸ್ಯಾ : ಮತ್ತ ಹೆಂಗ ಬಂದಳು?

ಇರಿಪ್ಯಾ : ಹೆಂಗೇನು – ಕರಿಮಾಯೀನs ಇರಬೇಕು.-

ಬಸ್ಯಾ : ಕರಿಮಾಯಿ ಆದರ ಮರ ಕಡಿಯೋನ ಮಾತಿಗಿ ಮರುಳಾಗತಿದ್ದಳ?

ಬಾಳ್ಯಾ : ಹಂಗೇನೂ ಅನಬ್ಯಾಡಪೋ, ಗೌಡ ದೇವರಿಗೂ ಮೋಸ ಮಾಡಬಲ್ಲ.

ಇರಿಪ್ಯಾ : ನೀ ಏನs ಹೇಳು, ಕರಿಯಜ್ಜನ್ಹಾಂಗ ವಿನಾಕಾರಣ ಸತ್ತವರನ್ನ ನಾ ಕಂಡಿಲ್ಲಪ್ಪ.

ಪ್ರಭು : ಅಧೆಂಗ ವಿನಾಕಾರಣ ಅಂತೀಯೋ? ಪಾರಂಬಿ ಮರ ಕಡೀ ಬ್ಯಾಡರಿ ಅಂತ ಸತ್ತ. ನಮ್ಮ ಹಕ್ಕೊಳಬಳ್ಳೀ ಮ್ಯಾಲ ಕುಡಗೋಲ ನೆರಳಾಡತಾವಂತ ಹೇಳಿ ಸತ್ತ, ಇನ್ನ ಹೆಂಗ ಸಾಯಬೇಕಪ? ಉಳಿದವರ್ಹಾಂಗ ಹುಳೀಮಜ್ಜಿಗಿ ಕುಡಿದಿದ್ದಕ್ಕ, ನೊಣ ಕಚ್ಚಿದ್ದಕ್ಕ ಸತ್ತನೇನು? ಬೇಕಾದರ ಇದಕ್ಕೆಲ್ಲ ಗೌಡನs ಕಾರಣ ಅನ್ನು ಒಪ್ಪತೀನಿ.

ಬಾಳ್ಯಾ : ಗೌಡನ ದರ್ಬಾರಂದರ ಹೆಂಗಂದಿ? ಸುಡಗಾಡಧಾಂಗ. ಅವ ಅದರ ರಾಜಾ. ನಾವೆಲ್ಲ ಅರ್ಧ ಸುಟ್ಟ ಹೆಣ. ಅವ ಚಪ್ಪಾಳೆ ಹೊಡದ ಕೂಡಲೇ ನಾವೆಲ್ಲಾ ಅವನ ಮುಂದ ಹೋಗಿ ಕೂರುತೀವಿ. ಅವ ಏನೇನೋ ಮಾತಾಡತಾನ. ನಮಗೊಂದೂ ತಿಳಿಯಾಣಿಲ್ಲ, ಆದರ ನಮ್ಮ ಕತ್ತ ನಮಗೂ ಗೊತ್ತಾಗಂಧಾಂಗ ತೂ ಗ ತಾ ವ. ಖರೆ ಅಂತೀಯ, ಸುಳ್ಳಂತೀಯ?

ಬಸ್ಯಾ : ಖರೆ, ದೆವ್ವಿನಂಥಾ ದೆವ್ವ ಸಹಿತ ಗೌಡನ ಮುಂದ ನಿಲ್ಲಾಕ ಹೆದರತಾವೋ ಏನೋ!

ಪ್ರಭು : ಕರಿಯಜ್ಜ ಒಬ್ಬಾವನs ಗೌಡನೆದುರಿಗೆ ಮಾತಾಡತಿದ್ದ ಆದರ ಅವನೂ ಹೆಣಧಾಂಗ ಕಾಣತಿದ್ದ. ಆದರ ಅವಗ ನಮಗ ಫರ್ಕ ಇಷ್ಟ: ಅವ ತಾಜಾ ಹೆಣಧಾಂಗ ಕಾಣತಿದ್ದ.

ಇರಿಪ್ಯಾ : ಒಂದು ಚಿಕ್ಕೀನೂ ಕಾಣವೊಲ್ದಲ್ಲೊ ಮಾರಾಯಾ. ಅವೂ ಕಣ್ಣ ಮುಚ್ಚಿ ಮಲಗ್ಯಾವೋ ಏನೊ!

ಬಸ್ಯಾ : ಗೌಡ ಬಂದ, ಸುಮ್ಮನ ಕುಂತಕ.

*(ಎಲ್ಲರೂ ಸುಮ್ಮನೆ ಕೂರುವರು. ರಾಮಗೊಂಡ ಬರುವನು.)*

ರಾಮಗೊಂಡ : ಪರಬೂ ಇನ್ನೂ ಹೆಣ ತರಲಿಲ್ಲೇನೋ?

ಪ್ರಭು : ಎಲಾ ಶಿವನೇ! ನೀ ಗೌಡ ಅಂತ ತಿಳಕೊಂಡಿವಲ್ಲೋ ಮಾರಾಯಾ!

ರಾಮಗೊಂಡ : ಕಣ್ಣು ನೆತ್ತಿಗೆರ್ಯಾವೇನಲೇ?

ಇರಿಪ್ಯಾ : ನನಗೂ ಅದs ಹೊಯ್ಕ್ಯಾತಂದರ! ಔನಡ, ಕತ್ತಲಿ, ಪಾಟೀ ಮ್ಯಾಗಿನ ಅಕ್ಷರ ಅಳಿಸಿಧಾಂಗ ಎಲ್ಲಾ ಗುರುತು ಅಳಿಸಿ ಹಾಕೇತಿ, ಕಾಣಬಾರದ? ಹೋಗಲಿ, ಹೆಣ ಯಾಕ ತರಲಿಲ್ಲ? ನೀನ s ಹೊರಸಿಕೊಂಡ ಬರ್ತಿಯಂತ ನಾವಿಲ್ಲಿ ಕಾದ ಕುಂತಿವಿ!

ರಾಮಗೊಂಡ : ಆ ಕಡೆ ನಾ ಹೋಗಲಿಲ್ಲ, ಸೀದಾ ಇಲ್ಲಿಗೇ ಬಂದೆ. ಯಾಕ, ಅಲ್ಲಿ ಯಾರೂ ಇಲ್ಲೇನು?

ಪ್ರಭು : ಬಂದಾರು ತಡಿ, ಮುದುಕನ್ನ ಉಳಿಸಿಕೊಳ್ಳಾಕ ಆಗಲಿಲ್ಲ. ಅವನ ಹೆಣ ಆದರೂ ಚಂದ ಮಾಡೋಣು. ಏ ಇರಿಪ್ಯಾ, ಬಸ್ಯಾ ಇಬ್ಬರೂ ಹೋಗಿ ಹೆಣ ತರತೀರೇನು? ಬೇಕಾದರ ಬಾಳ್ಯಾನ್ನೂ ಕರಕೊಂಡ ಹೋಗ್ರಿ.

ಬಸ್ಯಾ : ನೀವಿಬ್ಬರೂ ಇಲ್ಲೆ ಇರ್ರಿ ಹಂಗಾದರ.

*(ಇರಿಪ್ಯಾ, ಬಸ್ಯಾ ಮತ್ತು ಬಾಳ್ಯಾ ಹೋಗುವರು. ತುಸು ಹೊತ್ತು ನೀರವ)*

ರಾಮಗೊಂಡ : ಪರಬೂ

ಪ್ರಭು : ಹೂ

ರಾಮಗೊಂಡ : ನನಗೂ ಸಾಯಬೇಕನಸತೈತಿ.

ಪ್ರಭು : ಥೂ ಒಳಿತನ್ನು.

ರಾಮಗೊಂಡ : ಕರಿಯಜ್ಜನ್ನ ನಾವs ಕೈಯಾರೆ ಕೊಂದಿವಂತ ಅನ್ನಿಸೋದಿಲ್ಲೇನು?

ಪ್ರಭು : ಖರೆ ಹೇಳಬೇಕಂದರ ನಿಮ್ಮಪ್ಪನs ಕೊಂದ. ಮರ ಕಡೀದಿದ್ದರ ಮುದುಕ ಬದುಕಿರತಿದ್ದ.

ರಾಮಗೊಂಡ : ನೀವೆಲ್ಲ ಯಾಕ ಸುಮ್ಮನಿದ್ದಿರಿ?

ಪ್ರಭು : ಅದs ತಿಳೀವೊಲ್ಲು.

ರಾಮಗೊಂಡ : ಖರೆ ಹೇಳತೀನೋ ಪರಬು. ನನಗೇನಾಗ್ಯೆತೋ ತಿಳೀವೊಲ್ಲು. ಏನೇನೋ ಭಾವನೆ ಉಕ್ಕತಾವ. ಅವಕ್ಕೆಲ್ಲಾ ಮೂಕನಾಗೀನಿ. ಥಣ್ಣಗಾಗ್ಯಾವ. ಬಿಸಿರಕ್ತ ನಾಲಿಗೆಗೆ ಹಾಡು ಕಲಿಸತೈತಂತ, ನನಗೋ ಬೈಗಳ ಕಲಿಸತಾ ಇದೆ. ಆದರ ಯಾರನ್ನ

ಬೈಬೇಕಂತ ತಿಳೀವೊಲ್ದು. ಏನ ಮಾಡಲಿ? ಬ್ಯಾಟಿಗಿ ಹೋಗಿ ಬಂದಾಗಿಂದ ನಮ್ಮಪ್ಪ ಬದಲಾಗ್ಯಾನ  ಅಂತಾರ. ಹೆಂಗ ಬದಲಾಗ್ಯಾನ? ಎಲ್ಲಿ ಬದಲಾಗ್ಯಾನ? ತಿಳೀವೊಲ್ದು. ನಿಮಗ ತಿಳದಿದ್ದರ ನೀವ್ಯಾಕ ತಿಳಿಸಬಾರದು? ಮರ ಕಡಿದದ್ದು ದೊಡ್ಡದಲ್ಲ. ಆ ಮರ ಎಂದೋ ಸತ್ತಿತ್ತು. ಅದರ ಬೇರಿನಾಗ ವಿಷ ಸೇರಿತ್ತು. ನಮ್ಮಪ್ಪ ಬ್ಯಾಟಿ ಆಡಿ ಬಂದ ದಿನಾನs ಪಾರಂಬಿ ಮರದ ಚಿಗುರು ಬಾಡಿತ್ತು. ನೀವ್ಯಾರೂ ನನ್ನ ಮಾತು ಕೇಳಲೇ ಇಲ್ಲ. ಕರಿಯಜ್ಜಗ ಹೇಳಿದೆ, ಹೌದಂದ. ನನ್ನ ತಾಯಿಗೆ ಹೇಳಿದೆ. ಅವಳೋ ಅಂದಿನಿಂದ ಅರೆಹುಚ್ಚಿ! ಏನಿದರರ್ಥ?

ಪ್ರಭು : ನನಗೂ ಅದ s ತಿಳೀವೊಲ್ದೋ ಮಾರಾಯಾ!

*(ಅಷ್ಟರಲ್ಲಿ "ಅಯ್ಯೋ ಅಪ್ಪಾ ಸತ್ತಿನ್ರೋ" ಎಂದು ಕಿರುಚುತ್ತಾ ಇರಿಪ್ಯಾ ಬರುವನು.)*

ಪ್ರಭು : ಯಾಕೋ ಏ ಇರಿಪ್ಯಾ?

ಇರಿಪ್ಯಾ : *(ನಡುಗುತ್ತ)* ಪರಬೂ, ದೆವ್ವ ಕಂಡಿನೋ!

ಪ್ರಭು : ದೆವ್ವ! ಎಲ್ಲಿ ನೋಡಿದೆ?

ಇರಿಪ್ಯಾ : ಹಾಳ ಬಾವೀ ಹಂತ್ಯಾಕ!

ಪ್ರಭು : ಸೂಳೀಮಗನ, ಆ ಕಡೆ ಹೋಗಬ್ಯಾಡ್ರಂತ ಗೌಡ್ರು ಡಂಗುರ ಸಾರಿಲ್ಲೇನೊ?

ಇರಿಪ್ಯಾ : ದೂರದಾಗ ಇದ್ದಿನೋ ಮಾರಾಯಾ!

ಪ್ರಭು : ಹೆಂಗಿತ್ತು?

ಇರಿಪ್ಯಾ : *(ರಾಮಗೊಂಡನನ್ನು ನೋಡಿ ಅನುಮಾನಿಸುತ್ತ)* ಥೇಟ ಗೌಡರ್ಹಾಂಗ ಇತ್ತೊ ಎಪ್ಪಾ!

ರಾಮಗೊಂಡ : ಸುಳೀಮಗನ, ನಮ್ಮಪ್ಪನ್ನ ನೋಡೀಯೋ ಏನೋ!

ಇರಿಪ್ಯಾ : ದೇವರಾಣಿ! ಕರಿಮಾಯಿ ಆಣಿಯೋ ಎಪ್ಪಾ!
ಮೊದಮೊದಲು ನಾನು ಹಾಂಗs  ಅಂದಕೊಂಡೆ. ನಮ್ಮ ಗೌಡರು ಈ ಯಾಳೇದಾಗ ಇಲ್ಲಿಗ್ಯಾಕೆ ಬಂದಾರಪಾ ಅಂತ ನೋಡತೀನಿ, – ಮುಗಿಲಿಗೆ ನೆಲಕ್ಕ ಏಕಾಗಿ ನಿಂತೈತಲ!

ರಾಮಗೊಂಡ : ನಿನ್ನವ್ವನ, ಖರೇ ಹೇಳದಿದ್ದರೆ ನಿನ್ನನ್ನ ಇದs ಗೋರ್ಯಾಗ ಮುಚ್ಚತೇನ ಮಗನ!

ಇರಿಪ್ಯಾ : ನಾ ಯಾಕ ಸುಳ್ಳ ಹೇಳಲೋ ಮಾರಾಯಾ? ಕೆಂಪ ಹೆಡಿಗಿ ರುಂಬಾಲ ಸುತ್ತಿತ್ತು, ಜರಿ ಅಂಗಿ, ದಡಿ ಧೋತರ, ಹಣಿ ಗಂಟ ಹಾಕಿತ್ತು. ಆ ದಿನ ಅಡಿವ್ಯಾಗ ಹುಲಿ ಸಿಗದೇ ಇದ್ದಾಗಲೂ ಗೌಡರು ಹಿಂಗs ಹಣಿ ಗಂಟ ಹಾಕಿದ್ದರು. ಏನೋ ಹೇಳತೀನಿ ಬಾ ಅನ್ನವರ್ಹಾಂಗ ಕೈಮಾಡಿ ಕರ್ಯಾಕ ಹತ್ತಿತು. ಸತ್ತಿನೋ ಎಪ್ಪಾ ಅಂತ ಓಡಿಬಂದೆ. ಬೆನ್ನಹತ್ತಿ ಬಂತೇನೋ ಅಂತ ತಿರಿಗಿ ನೋಡಿದೆ, ಹಾಳಬಾವ್ಯಾಗ ಲಯ ಆಗತಿತ್ತು.

ರಾಮಗೊಂಡ  : ಈಗ ಹಾಳ ಬಾವಿಗಿ ಹೋದರ ಸಿಕ್ಕೀತೇನಲೆ?

ಇರಿಪ್ಯಾ : ಏನೋಪ್ಪ.

ರಾಮಗೊಂಡ : ಮಗನ, ಸುಳ್ಯಾದರ ನಿನ್ನ ಕಣ್ಣ ಕೀಳತೀನಿ.

ಪ್ರಭು : ಇರಿಪ್ಯಾ ಹಾಂಗ ಸುಳ್ಳ ಹೇಳಾವಲ್ಲ ತಗಿ.

ರಾಮಗೊಂಡ : ತಡಿ, ಹಂಗಾದರ ಹೋಗಿ ಬರತೀನಿ.

ಪ್ರಭು : ದುಡುಕಿನ ಕೈಯಾನ ಬುದ್ದೀ ಕೊಡಬಾರದು. ಕಂಡೀತು ಕಾಣಲಿಕ್ಕಿಲ್ಲ ಅದೇನಂಬೋದನ್ನ ಬರೋಬರಿ ವಿಚಾರ ಮಾಡಿ ನೋಡೂಣಂತ. ನೀ ಈಗಲೇ ಇಷ್ಟು ಅವಸರ ಮಾಡೋದು ಚೆಲೋ ಅಲ್ಲ.

ರಾಮಗೊಂಡ : ಪರಬು, ಇದರಾಗೇನೋ ಗುಟ್ಟ ಇದ್ದಾಂಗೈತಿ, ನೋಡಿ ಬರತೀನಿ.

ಪ್ರಭು : ಒಬ್ಬನs ಹೋಗಬ್ಯಾಡ. ನಾನೂ ಬರ್ತೀನಿರು.

ರಾಮಗೊಂಡ : ದೆವ್ವಿಗೆ ಹೆದರೋದಿಲ್ಲ. ನೀ ಏನೂ ಕಾಳಜಿ ಮಾಡಬ್ಯಾಡ.

*(ರಭಸದಿಂದ ಒಬ್ಬನೇ ಓಡಿಹೋಗುವನು.)*

## ಸತ್ಯದ ನೆರಳು

*(ಓಡಿಬಂದ ರಾಮಗೊಂಡ ಬಾವಿಯಲ್ಲಿ ಹಣಿಕಿ ಹಾಕುವನು)*

ರಾಮಗೊಂಡ : ನಾನು ಶಿವಾಪುರದ ಗೌಡ ರಾಯಗೊಂಡನ ಮಗ ರಾಮಗೊಂಡ. ನಾ ಕೇಳತೀನಿ : ಎಲಾ ಭುತವೇ, ಎಲ್ಲಿದ್ದರೂ ಹೊರಗ ಬಾ.

*(ಬಾವಿಯಿಂದ ವಿಚಿತ್ರವಾದ, ಭಯಂಕರ ಶಬ್ದ ಕೇಳಿಬರುತ್ತದೆ. ಆಮೇಲೆ ಇರಿಪ್ಯಾ ವರ್ಣಿಸಿದಂಥ ಭೂತ ಮೇಲೆ ಬರುತ್ತದೆ.)*

ರಾಮಗೊಂಡ : ಯಾರು ನೀನು ? ಖರೆ ಹೇಳು.

ಭೂತ : ನನ್ನ ಮಾತನ್ನ ಕೇಳು.

ರಾಮಗೊಂಡ : ಕೇಳ್ತೀನಿ, ಆದರ ಮೊದಲು ನನಗೆ ಉತ್ತರ ಕೊಡು. ಯಾಕ ನಮ್ಮಪ್ಪನ ರೂಪ ತೊಟ್ಟು ಬಂದೆ? ನಿನ್ನ ಮನಸ್ಸಿನಾಗೇನೈತಿ? ಯಾವ ಸೇಡು ತೀರಿಸಿಕೊಳ್ಳೋದಕ್ಕ ನಮ್ಮಪ್ಪನ ರೂಪ ತೊಟ್ಟೀದಿ?

ಭೂತ : ರಾಮಗೊಂಡಾ, ಕಣ್ಣ ತಗದ ನೋಡೋ – ನಾ ನಿನ್ನ ತಂದೆ, ರಾಯಗೊಂಡ!

ರಾಮಗೊಂಡ : ಈಗಷ್ಟs ನಮ್ಮಪ್ಪನ ಮನ್ಯಾಗ ನೋಡಿ ಬಂದೀನಿ. ಇಗ ಅವನ ಭೂತಾ ನೋಡತೀನಂದರ ಹೆಂಗ ನಂಬೋದು? ಕಳಕೊಳ್ಳದೇ ಇರೋ ತಂದೀನ್ನ ಕಳಕೊಂಡ ಹಾಂಗ ಮಾತಾಡೋದು ಹುಚ್ಚತನ, ಇಲ್ಲ ಅಪಶಕುನ. ನೀನು ನನ್ನ ತಂದೆಯೇ ಆಗಿದ್ದರ ಮನೆಯಲ್ಲಿಯೋ ನೀನು ಇಲ್ಲಿಗೆ ಹೆಂಗ ಬಂದೆ? ನಿಜ ಆಗಿದ್ದೋನು ಹೆಂಗ ಭೂತವಾದೆ?

ಭೂಗ : ಮನೆಯಲ್ಲಿದ್ದವನು ರಾಕ್ಷಸ! ನಾನs ನಿನ್ನ ನಿಜವಾದ ತಂದೆ, ಭೂತವಾಗಿದ್ದೀನಿ.

ರಾಮಗೊಂಡ : ಭೂತಗಳೂ ಸುಳ್ಳು ಹೇಳಬಹುದು.

ಭೂತ : ಬ್ಯಾಟಿ ಆಡಿ ಬಂದ ಮ್ಯಾಲ ಅವನ ನಡವಳಿಕ್ಯಾಗ ಏನೂ ವ್ಯತ್ಯಾಸ ಆಗೇ ಇಲ್ಲೇನು?

ರಾಮಗೊಂಡ : ಹೌದು, ಆಗೇದ. ಆದರ ಅದು ಮಾಯಾಮಾಟದಿಂದ ಆಗಿರಭೌದು.

ಭೂತ : ರಾಮಗೊಂಡ, ನೀನು ನನ್ನ ವೀರ್ಯಕ್ಕೆ ಹುಟ್ಟಿದ್ದೇ ಖರೆ ಆದರ ಹೊಕ್ಕಳ ಮುಟ್ಟಿಕೊಂಡು ನೋಡು, ಅಂತಃಕರಣದ ಕಣ್ಣ ತಗದ ನೋಡು. ನಿ ನನ್ನ ಮಗ; ನಾ ನಿನ್ನ ತಂದೆಯ ಭೂತ. ನನ್ನ ಕಥೆ ಕೇಳಿ ನೀನು ಕಣ್ಣೀರು. ಸುರಿಸಲಿ ಅಂತ ಹೇಳತಾ ಇಲ್ಲ. ಸತ್ತವನ ಆತ್ಮ ಸುಳ್ಳು ಹೇಳೋದಿಲ್ಲ, ನಂಬು. ಇಂದಿಗೆ ಆರು ತಿಂಗಳ ಹಿಂದೆ ಅಡವಿಗೆ ಏಳಪಟ್ಟಿ ಹುಲಿ ಬಂದಿತ್ತು. ಬ್ಯಾಟಿ ಆಡಾಕ ಹೊಂಟ ನಿಂತೆ. ನೀನೂ ಬರತೀನಿ ಅಂದಿ. ನಿನ್ನ ತಾಯಿಗೆ ಕೆಟ್ಟ ಕನಸ ಬಿದ್ದೈತಿ, ಈ ಸಲ ಬರಬೇಡ ಅಂದೆ, ನೆನಪಿದೆಯಾ?

ರಾಮಗೊಂಡ : ಹೌದು.

ಭೂತ : ಆದರ ಅದು ಹುಲಯಲ್ಲ, ರಾಕ್ಷಸ! ಮೋಸ ಮಾಡಿ ನಾನು ನನ್ನ ಜನರಿಂದ ಆಗಲೋ ಹಾಂಗ ಮಾಡಿದ. ನನ್ನ ಕೊಂದು ರಕ್ತ ಮಾಂಸ ಎಲ್ಲಾ ಈ ಹಾಳಬಾವ್ಯಾಗ ಚೆಲ್ಲಿದ. ನನ್ನ ಹಾಂಗs ಆಗಿ ಊರ ಸೇರಿದ. ಇಲ್ಲಿ ನಾ ಭೂತವಾಗಿದ್ದೀನಿ. ಅಲ್ಲಿ ಊರ ಆಳಾಕ ಹತ್ಯಾನ. ನಿನಗ ಇನ್ನ ಹೆಂಗ ಹೇಳಲೋ ಮಗನs?

ರಾಮಗೊಂಡ : ದೇವರs ಹೆಂಗ ನಂಬಲಿ? ಕಣ್ಣೆದುರಿಗೆ ಅವನೂ ಇದ್ದಾನೆ. ಕಣ್ಣ ನಂಬಲಾ? ಅಂತಃಕರಣಕ್ಕ ನಿನ್ನ ಮಾತು ಖರೇ ಅನಸ್ತದ. ನಿನ್ನ ನಂಬಲಾ?

ಭೂತ : ಆ ದಿನದಿಂದಲೇ ನಿನ್ನ ತಾಯಿ ಅರೆಹುಚ್ಚಿ ಆದಳು, ಊರು ಬದಲಾಯ್ತು, ಜನ ಬದಲಾದರು. ಗೌಡ ಬದಲಾಗ್ಯಾನಂತ ಜನ ತಂತಮ್ಮೊಳಗ ಮಾತಾಡ್ತಾ ತಮಗ ತಾವs ಚಾಡೀ ಹೇಳಿಕೊಳ್ತಾ ಕೂತರು. ಇದನ್ನಾದರೂ ನಂಬತೀಯ?

ರಾಮಗೊಂಡ : ನಿನ್ನ ಮಾತಿನಿಂದ ನನ್ನ ಹೃದಯ ಒಡೆದುಬಿಟ್ಟೆ. ನನ್ನ ಕಣ್ಣುಗಳನ್ನ ನಾನs ನಂಬದ ಹಾಂಗ ಮಾಡಿದೆ. ಈಗ ನನ್ನ ಕಣ್ಣಿಗೂ ಪ್ರತಿಯೊಂದೂ ಒಡೆದೊಡೆದು ಕಾಣಿಸ್ತ ಇದೆ. ನನಗ ನಾನs ಇಬ್ಬರಾಗಿ ಕಾಣಸ್ತ ಇದ್ದೀನಿ. ಎರಡೂ ಸತ್ಯಗಳನ್ನ ಒರೆಗೆ ಹಚ್ಚೋದು ಹೆಂಗ?

ಭೂತ : ಮೂಡದಿಕ್ಕಿನ ಏಳುಕೊಳ್ಳದಾಗ ಒಂದು ಆಲದ ಮರ ಐತಿ. ಮರದ ಪೊದರಿನಾಗೊಂದು ಕತ್ತಲದ ಅರಮನಿ ಐತಿ. ಅಲ್ಲಿ ಪಂಜರದಾಗ ಒಂದು ಗಿಣಿ ಐತಿ. ಅದರಾಗ ಅವನ ಜೀವ ಐತಿ. ಅದನ್ನ ಕೊಂದರ ಅವ ತನ್ನ ನಿಜರೂಪದಾಗ ಸಾಯತಾನ. ಅಲ್ಲಿ ಒಬ್ಬ ಸಾಧು ಶರಣ ಇದ್ದಾನ. ಅವ ಮಂತ್ರಿಸಿದ ನೀರು ಕೊಡತಾನ. ದನ್ನ ತಂದ ನನ್ನ ಮ್ಯಾಲ ಸಿಂಪಡಿಸಿದರ ನನ್ನ ಆತ್ಮಕ್ಕ ಶಾಂತಿ ಸಿಗತೈತೋ ಮಗನ. ಹುಷಾರ್‌ಹುಡುಗ, ಅಲ್ಲಿ ಹಿಂಡ ಹಿಂಡ ಸೈತಾನರನ್ನ ಕಾವಲಿಗಿಟ್ಟಾನ ರಾಕ್ಷಸ!

*(ಭೂತ ಮಾಯವಾಗುತ್ತದೆ.)*

ರಾಮಗೊಂಡ : ಯಾವುದು ನಿಜ, ಯಾವುದು ಸುಳ್ಳು? ಇದು ಮನೆಯೋ ಬಾವಿಯೋ? ಇವೆಲ್ಲ ನನ್ನನ್ನ ಗೊಂದಲಿಸಿ ಗೊಂದಲ ಹಾಕತಾವ, ಏನ ಮಾಡಲಿ? ಏಳುಕೊಳ್ಳಕ್ಕ ಹೋಗೋವಷ್ಟು ತಾಂಳ್ಮೆ ನನ್ನಲ್ಲಿಲ್ಲ. ಸತ್ಯ ಈಗಲೇ ತಿಳಿಯಬೇಕು. ಬಯಲಾಟದ ಬಣ್ಣ ದಾಟಿ ಎಲ್ಲರ ನಿಜ ಮುಖ ಕಾಣಬೇಕು. ನೆರಳಿದ್ದವರು ನೆರಳಾಗಿ, ಕೊಲೆ ಮಾಡಿದ ಕೈ ಕೆಂಪಾಗಿ ಕಾಣಬೇಕು. ಇದನ್ನ ತಿಳಿಯುವ ಸಮೀಪದ ದಾರಿಯೆಂದರೆ ತಾಯಿಯೇ! ತಾಯೀ-ತಂದೆಯ ಆತ್ಮಕ್ಕೆ ಆತ್ಮ ಬೆಸೆದವಳು, ದೇಹಕ್ಕೆ ದೇಹ ಬೆಸೆದವಳು. ಸತ್ಯ ಸುಳ್ಳಿನ ಸಂಚು ನಿನಗೆ ತಿಳಿದಿರಲೇಬೇಕು. ತಪ್ಪಿಸಿಕೊಳ್ಳೋದಕ್ಕಾಗಿಯೇ ನೀನು ಅರೆಹುಚ್ಚಿನಲ್ಲಿ ಅಡಗಿರಬೇಕು. ಇಕೋ ನಿನ್ನ ಭೇಟಿ ಈಗಲೇ ಈ ಕತ್ತಲಲ್ಲೇ ಆಗಬೇಕು.

*(ಹೊರಡುತ್ತಾನೆ. ಪಕ್ಕದ ಮರವೇ ಮುದುಕಿಯಾಗಿ ಕಾಣಿಸಿಕೊಳ್ಳುತ್ತಾಳೆ.)*

ಮುದುಕಿ : ನನ್ನ ಕೇಳಿದರ, ನಾ ನೀನs ಆಗಿದ್ದರ ಬೆಳಕು ಮೂಡೋ ತನಕ ಕಾಯತಿದ್ದೆ.

ರಾಮಗೊಂಡ : ಯಾಕ?

ಮುದುಕಿ : ಯಾಕಂದರ ನಿಮ್ಮವ್ವ ಮಲಿಗ್ಯಾಳ? ಮಲಗಿ ಕನಸ ಕಾಣಾಕ ಹತ್ಯಾಳ! ಕನಸಿನಾಗ ಹುಡುಗಿ ಆಗಿ ಕಾಡಿನಾಗ ಅಡ್ಡಾಡಾಕ ಹತ್ಯಾಳ! ಅದಕ್ಕ ಈಗ ಹೋಗಿ ಎಬ್ಬಿಸಬ್ಯಾಡ ಅಂದೆ.

ರಾಮಗೊಂಡ : ಎಬ್ಬಿಸಿದರ?

ಮುದುಕಿ : ಅಯ್ಯs, ಇಷ್ಟೂ ತಿಳಿಯಾಣಿಲ್ಲೋನೋ ಹುಡುಗ? ಕಾಡಿನಾಗ ಅಡ್ಡಾಡತಾಳ. ನಿಮ್ಮಪ್ಪ ಬಂದು ಅಕೀ ಮ್ಯಾಲ ಹೂವೆಸೆದು ಪದ ಹಾಡತನಾ! ಇಬ್ಬರೂ ಕೂಡತಾರ! ಈಗ ಎಬ್ಬಿಸಿದರ ಆಕಿ ನಿನ್ನನ್ನ ಇನ್ನೂ ಬಸಿರಾಗಿಲ್ಲ ಕೂಡ, ಬಸಿರಾಗಲಿ, ಹಡೀಲಿ. ನೀ ದೊಡ್ಡವಾಗೋವಷ್ಟ ಯಾಳೇ ಕೊಟ್ಟು ಎಬ್ಬಿಸು.

ರಾಮಗೊಂಡ : ಹಾಂಗಿದ್ದರ ತಡೀತೀನಿ. ನಾ ದೊಡ್ಡಾವಾಗಲಿ, ನಮ್ಮಪ್ಪ ಹುಲೀಬ್ಯಾಟಿಗಿ ಹೋಗಿಬರಲಿ. ಅಲ್ಲೀ ತನಕ ಕತೀ ಹೇಳ ಮುದುಕಿ. ಹುಲೀಬ್ಯಾಟಿ ಆಡಿ ಬಂದ ಮ್ಯಾಲ ನಮ್ಮಪ್ಪ ರಾಕ್ಷಸ ಆಗ್ಯಾನ ಅಂತಾರ. ನಮ್ಮವ್ವಗ ವ್ಯತ್ಯಾಸ ತಿಳೀಲಿಲ್ಲೇನು?

ಮುದುಕಿ : ಹೆಂಗಸಿಂದೇನ ಕೇಳತೀಯೋ ತಮ್ಮ! ಆಕೀ ಸತ್ಯ ಯಾರಿಗಿ ತಿಳದೈತಿ? ದೊಡ್ಡವಳಾದ ಮ್ಯಾಲ ಮುಖ ಮ್ಯಾಲ ಮಾಡಿ ಮಲಗತಾಳ, ಕೆಳಗೆ ತೊಡ್ಯಾಗಿಂದ ನದೀ ಹರೀತೈತಿ, ನೀರಿನಾಗ ಚೆಳಿಮಿಳಿ ಮೀನ ಸಾವಿರಾರ ಈಜಾಡತಿದ್ದರ ಆಯ್ತು, ನಗತಾ ಇರತಾಳ.

ರಾಮಗೊಂಡ : ಭಾಳ ದುರ್ದೈವಿ ಅವಳು.

ಮುದುಕಿ : ಹೌದು, ಅದಕ್ಕs ಎಬ್ಬಿಸಬ್ಯಾಡ ಅಂದೆ.

ರಾಮಗೊಂಡ : ಆಗಲಿ. ಬೆಳಗಾಗೋತನಕ ತಡೀತೀನಿ. ಆಮ್ಯಾಲ ಭಯಂಕರ ಸತ್ಯದಾಗ ಎಚ್ಚರಾಗಬೇಕು.

ಮುದುಕಿ : ನಿನ್ನ ಜಾಗಾದಾಗ ನಾನs ಇದ್ದಿದ್ದರ ಇನ್ನೂ ಎಚ್ಚರದಿಂದ ಕೆಲಸ ಮಾಡಿತಿದ್ದೆ. ಯಾಕಂದರ ಇಷ್ಟ ವರ್ಷ ನೋಡೇನಿ, ಸತ್ಯ ಒಂದೇ ಅಂತ ಅನ್ನಿಸೇ ಇಲ್ಲ. ಏನಿಲ್ಲದಂರೂ ಸತ್ಯ ಎರಡಾದರೂ ಇರತಾವ. ಒಂದು ಹೆಂಗಸಿನ ಸತ್ಯ, ಇನ್ನೊಂದು ಗಂಡಸಿನ ಸತ್ಯ. ಹೆಂಗಸು ತನ್ನ

ಸತ್ಯ ಎಂದೂ ಬಾಯಿಬಿಟ್ಟು ಹೇಳಾಣಿಲ್ಲ. ಅದಕ್ಕs ಗಂಡಸಿಗೆ ಅದು ತಿಳಿಯಾಣಿಲ್ಲ. ಅವ ತಿಳೀತಾನ – ತನ್ನ ಸತ್ಯ ಹೆಂಗಸಿನ ಸತ್ಯವೂ ಹೌದು ಅಂತ. ಹೆಂಗಸಿನ ಸತ್ಯ ಹೆಂಗಿರತೈತಿ ಹೇಳ್ಲೀಯಪ್ಪ? ಕೋಳಿಗೆ ಹುಂಜ ಯಾಕ ಕೂಗತೈತಿ ಅಂತ ಗೊತ್ತು. ಅದರ ಕೂಗಿನಾಗ ಏನೋ ಸತ್ಯ ಐತಿ ಅಂತ ಗೊತ್ತು. ಅದಕ್ಕs ಅದರ ಹಂತ್ಯಾಗ ಹೋಗತೈತಿ. ಆಮ್ಯಾಲ ತತ್ತೀ ಹಾಕತೈತಿ, ಮರಿ ಮಾಡತೈತಿ. ಮರಿ ಅದರ ಸತ್ಯ. ಅದರಾಚೆ ಈಚೆ ಸತ್ಯಕ್ಕ ಎಷ್ಟ ನೆರಳಿದ್ದರು ಅದಕ್ಕ ಕಾಣೂದs ಇಲ್ಲ. ಯಾಕಂದರ ಅದರ ಸತ್ಯಕ್ಕ ನೆರಳಿರೋದು ಸಾಧ್ಯ ಇಲ್ಲ. ಗಂಡಸಿಂದು ಹಾಂಗಲ್ಲ ನೋಡು. ಮಕ್ಕಳ ಹೆರೋದು ಸತ್ಯ, ಬಂಜೆತನ ಸತ್ಯ, ಹಗಲೂ ಸತ್ಯ, ರಾತ್ರೀನೂ ಸತ್ಯ, ದೊಡ್ಡ ಸತ್ಯ ಸಣ್ಣ ಸತ್ಯ, ಹೆಚ್ಚು ಸತ್ಯ – ಕಮ್ಮಿ ಸತ್ಯ. ಸತ್ಯಕ್ಕಿಂತ ಸತ್ಯದೆ ನೆರಳs ಜಾಸ್ತಿ ಅವನಲ್ಲಿ. ಹೌದಂತೀಯೋ, ಅಲ್ಲಂತೀಯೋ?

ರಾಮಗೊಂಡ : ಹೌದು.

ಮುದುಕಿ : ಅದಕ್ಕ ಗಂಡಸುs ಎಲ್ಲಾದಕ್ಕೂ ಮಾತಿನಾಗ ಉತ್ತರ ಕೊಡತಾನ. ಹೆಂಗಸಿಗೆ ಮಾತು ಗೊತ್ತs ಇಲ್ಲ. ಆಕಿ ಎಲ್ಲಾ ಕಣ್ಣಾಗ ತೋರಿಸಬೇಕು. ಆಕೀ ಕಣ್ಣು ಓದಾಕ ಬರದಿದ್ದರ ನೀನs ಸೋತ್ಹಾಂಗ, ಅವಳಲ್ಲ ತಿಳಕ.

ರಾಮಗೊಂಡ : ಹೌದು. ಮುದುಕಿ ನೀ ಯಾರು?

ಮುದುಕಿ : ತಾಯಿ.

ರಾಮಗೊಂಡ : ಯಾರ ತಾಯಿ?

ಮುದುಕಿ : ನಿನ್ನ ತಾಯಿ, ಊರ ತಾಯಿ! ಅಯ್‌ಶಿವನ, ಆ ದಿನ ಪಾರಂಬಿ ಮರ ಕಡಿಯೋರು ಬಂದಾಗ ನಾ ಬಂದಿದ್ದೆ. ನೀನೂ ಅಲ್ಲೇ ಇದ್ದೆ.

ರಾಮಗೊಂಡ : ಆವಾಗ ಬಂದವಳು ಹುಡುಗಿ.

ಮುದುಕಿ : ಆವಾಗಿಂದ ಎಷ್ಟು ಕಾಲ ಸರಿದು ಹೋಗೈತಿ! ಆಗ ಹುಡುಗಿ ಇದ್ದೆ, ಈಗ ಮುದುಕಿ ಆಗೇನಿ.

ರಾಮಗೊಂಡ : ನಾನು?

ಮುದುಕಿ : ನೀನೂ ಬೆಳೆದು ದೊಡ್ಡವನಾಗಿ ಸೀಳಿಹೋಗಿದ್ದಿ.  ಆಗ ರಾಮಗೊಂಡಾಗಿದ್ದಿ. ಈಗ ನಿಮ್ಮಪ್ಪನೂ ಆಗೀದಿ! ಹೋ…

(ಎಂದು ಮುದುಕಿ ಕುಣಿಯುತ್ತ ರಾಮಗೊಂಡನಿಗೆ ಅಣಕಿಸುತ್ತ ಹೋಗುವಳು. ರಾಮಗೊಂಡ ದಿಗ್ಭ್ರಾಂತನಾಗಿ ನಿಲ್ಲುವನು.)

## ಹುಲಿ ಹಾಲು ತಂದಕೊಡೋ ಮಗನ

*(ಗೌಡನ ಮನೆ. ಪಾರಿ ಮನೆಗೆಲಸ ಮಾಡುತ್ತಿದ್ದಾಗ ರಾಮಗೊಂಡ ಬರುತ್ತಾನೆ.)*

ರಾಮಗೊಂಡ : ಅವ್ವ ಏನ ಮಾಡತಾಳ?

ಪಾರಿ : ಮಲಗ್ಯಾಳ

ರಾಮಗೊಂಡ : ಈಗ ಹೆಂಗದಾಳ?

ಪಾರಿ : ಅಳತಾಳೋ ನಗತಾಳೋ ಒಂದೂ ತಿಳಿಯಾಣಿಲ್ಲ. ರಾತ್ರಿ ನಿನ್ನ ನೆನಪಾಗಿತ್ತೋ ಏನೋ, – ನನ್ನ ಕಂದಾ ಅಂತ ಅತ್ತಳು. ಗರ್ಭಕ್ಕ ಪೆಟ್ಟ ಹತ್ತಿದೆಯೋ ಏನೋ, – ಗುಡ್ಡ ಹೊತ್ಹಾಂಗ ಆಗೇತಿಬೇ ಪಾರೀ ಅಂತಿದ್ದಳು.

ರಾಮಗೊಂಡ : ಮದ್ದು ಕೊಟ್ಟೇನು?

ಪಾರಿ : ಕೊಟ್ಟೆ. ತಗೊಂಡಾಗ ಒಂದ ಜಂಪ ನಿದ್ದಿ ಮಾಡತಾಳ. ಮತ್ತ ಅಯ್ಯೋ ಪಿಂಡ ಅಂತ ಏಳತಾಳ, ಮಾತಾಡ್ತ ಮಾತಾಡ್ತ ಅರಿವು ಹಾರಿ ಏನೇನೋ ಬಡಬಡಸ್ತಾಳ. ಅಕಾ ಬಂದಳು.

ಗೌಡ್ತಿ : *(ಬರುವಳು)* ಚಂಡಾಳ ಪಿಂಡ! ಮೂರು ತಿಂಗಳೊಳಗ ದೊಡ್ಡವರ್ಹಾಂಗ ಒದೀತ್ತೈತಿ. ಗುದಮುರಿಗಿ ಹಾಕತ್ತೈತಿ. ತುಸ ನಡೆದಾಡಿದರ ಒಳಗಡೆ ಕುಣೀತ್ತೈತಿ. ನಿನ್ನ ಹೆಜ್ಜಿ ಬಿದ್ದಲ್ಲಿ ತಗ್ಗ ಬೀಳತಾವ, ಹುಷಾರೋ ಮರಿ! ಬಿದ್ದ ತಗ್ಗು ಗೋರಿ ಆಗತಾವ. ಗೋರಯಿಂದ ಹೆಣ ಎದ್ದು ಬಂದು ಹಲ್ಲು ಕಿರೀತಾ ನಿನ್ನ ಸುತ್ತ ಚೆಲ್ಲವರಿದರ ಏನ ಮಾಡತಿ? ಆಮ್ಯಾಲ ಯಾರೂ ಕಾಪಾಡೋದಿಲ್ಲ. ಕಾಪಾಡೋ ಕರಿಮಾಯಿ ಹೆದರಿ ಎದಿ ಒಡಕೊಂಡಾಳ. ಮರ ಕಡಿದು ನೆತ್ತಿಗೆ ತಂಪಿಲ್ಲದ ತಬ್ಬಲಿಯಾಗಿ ಬಿದ್ದಾಳ. ನೋಡೀಯಂತ ಹೊರಗ ಬಾ.

ಪಾರಿ : ಎವ್ವಾ, ಯಾರು ಬಂದಾರ ನೋಡು.

ಗೌಡ್ತಿ : *(ರಾಮಗೊಂಡನನ್ನು ನೋಡಿ)* ಆಯ್ ಗೌಡಾ, ಯಾವಾಗ ಬಮದಿ? ಅಂದ ಬ್ಯಾಟಿಗಿ ಹೋದಾವ ಇಂದ ಬಂದಿ? ಹಾದಿ ಗುಂಟ ಕಣ್ಣ ಹಡದೀ ಹಾಸಿ ಕಾದ ನಿಂತೀನಿ. ತಿಳೀಬಾರದ? ಸನೇಕ ಬಾ, ಹಂಗ್ಯಾಕ ದೂರ ನಿಂತಿ?

ಪಾರಿ : ಎವ್ವಾ, ಮಗ- ನಿನ್ನ ಮಗ ರಾಮಗೊಂಡ ಬಂದಾನ. ಅರಿವಿಗಿ ಬಂದ ನೋಡು.

ಗೌಡ್ತಿ : ಅಯ್ಯ, ಹೌಂದಲ್ಲ! ನನ್ನ ಹೊಟ್ಯಾಗಿನಿಂದ ಯಾವಾಗ ಹೊರಗ ಬಂದಿ? ಎಷ್ಟ ಒದ್ದಾಡಿದೆಯೋ ಕಂದ! ಹೊಟ್ಟಿ ತುಂಬ ಹುಣ್ಣಾಗ್ಯಾವ. ಪಾರೀ ನನ್ನ ಕಂದ ಹಸದ ಬಂದಾನ, ಹಾಲ ಕೊಡು, ಸನೇಕ ಬಾ.

*(ನೋವಿನಿಂದ ರಾಮಗೊಂಡ ಅವಳ ಬಳಿಗೆ ಹೋಗುವನು. ಗೌಡ್ತಿ ತಬ್ಬಿಕೊಳ್ಳುವಳು.)*

ನಿಮ್ಮಪ್ಪ ಹಿಂಗs ತಬ್ಬತಿದ್ದ. ಅವ ತಬ್ಬಿದಾಗಲೆಲ್ಲ ನಾ ಮಸಾರಿ ನೆಲ ಆಗತಿದ್ದೆ. ಅವ ಮೋಡ ಆಗತಿದ್ದ. ನಾ ಮಣ್ಣು, ನನ್ನ ಮಣ್ಣಿನ ಮ್ಯಾಲ ಅವನ ಕಣ್ಣು, ನೋಡತಾ ನೋಡತಾ ಅವ ಮಳಿಯಾಗಿ ಹೊಲ ತುಂಬಿ ಹರಿದಾಡತಿದ್ದ. ರಾತ್ರಿ ಎಲ್ಲಿ ಹೋಗಿದ್ದೆ ಕಂದಾ?

ಪಾರಿ : ಅರಿವಿಗಿ ಬಂದಾಳ, ಮಾತಾಡು.

ರಾಮಗೊಂಡ : ಕರಿಯಜ್ಜನ ಮಣ್ಣ ಮಾಡಾಕ ಹೋಗಿದ್ದೆ.

ಗೌಡ್ತಿ : ನನಗ ಹೇಳದ ಕೇಳದ ಎಲ್ಲಿಗೂ ಹೋಗಬ್ಯಾಡೋ ರಾಜಾ. ಮಲಗಿದಾಗೆಲ್ಲ ಹುಲಿ ಮೀಸಿ ನನ್ನ ಮುಖಕ್ಕ ಚುಚ್ಚಿಧಾಂಗ ಅನಸತ್ತೈತಿ. ನಿನ್ನಿ ರಾತ್ರಿಯಂತೂ ಒಂದು ಹುಲಿ ಬಂದು ನನ್ನ ಹೊಟ್ಟೀ ಮ್ಯಾಗ ಗಟ್ಟಿ ಕೂತಬಿಟ್ಟಿತ್ತು, ಚೀರಿದೆ, ಕೂಗಿದೆ. ಯಾರೂ ಬರಲಿಲ್ಲ. ನನ್ನ ಮೈಯಾಗ ಯಾವಾಗ ಹಲ್ಲೂರೈತೊ ಹೊಟ್ಟಿಗಿ ವಿಷ ಇಳಿದೈತಿ.

ರಾಮಗೊಂಡ : ಕೆಟ್ಟ ಕನಸ ಕಂಡಿರಬೇಕು.

ಗೌದ್ತಿ : ಹುಲಿ ಬಂದು ನನ್ನ ಹಾಸಿಗಿ ಹೊಲಸ ಮಾಡೇತಿ. ಎಷ್ಟ ಜಳಕ ಮಾಡಿದರೂ ವಾಸನೆ ಹೋಗವೊಲ್ದು.

*(ಅವಳು ಹುಲಿ ಅಂದಾಗೆಲ್ಲ ರಾಮಗೊಂಡ ವಿಶೇಷ ಗಮನ ಹರಿಸುವುದನ್ನ ಗಮನಿಸುತ್ತಾಳೆ.)*

ರಾಮಗೊಂಡ : ಅವ್ವಾ…

ಗೌದ್ತಿ : ನೀ ಏನೋ ಬಚ್ಚಿಡತಾ ಇದ್ದೀಯಲ್ಲ, ಏನದು?

ರಾಮಗೊಂಡ : ಏನಿಲ್ಲವಲ್ಲ.

ಗೌದ್ತಿ : ಸುಳ್ಳು, ಆಗಲೇ ನಿನ್ನ ಕಣ್ಣಾಗ ಬೆತ್ತಲೆ ಬೆಂಕಿ ಕಂಡಿತು. ಈಗ ಮೆಲ್ಲಗೆ ಅದಕ್ಕ ತಂಗಿ ತೊಡಿಸ್ತಾ ಇದ್ದೀಯಾ. ಹೇಳು ನಿನ್ನ ಮನಸ್ಸಿನಾಗೇನೈತಿ?

ರಾಮಗೊಂಡ : ಏನಿಲ್ಲವ್ವ.

ಗೌದ್ತಿ : ಏ ನನ್ನ ಕೋಣ, ಯಾರನ್ನ ಇರಿಯೋದಕ್ಕೆ ಗುರಿ ಇಟ್ಟೀದಿ? ನಿನ್ನ ಕೊಂಬಿನಾಗಿನ ಕನಸೆಲ್ಲ ನನಗ್ಗೊತ್ತು.

ರಾಮಗೊಂಡ : ನಿನ್ನ ಮುಂದ ಮುಚ್ಚಿಟ್ಟುಕೊಳ್ಳೋದು ಏನಿರತೈತಿಬೇ?

ಗೌದ್ತಿ : ಹಾಂಗಿದ್ದರ ತೇರ ಕಟ್ಟಿ ನನ್ನ ಜಾತ್ರಿ ಮಾಡು, ನಾ ಕರಿಮಾಯಿ! ನೀ ನನ್ನ ಕೋಣ. ನಿನ್ನ ಕಡಿದು, ನಿನ್ನ ಬಾಯಾಗ ಮುಂಗಾಲಿಟ್ಟು ನೆತ್ತೀ ಮ್ಯಾಲ ದೀಪ ಹಚ್ಚತೀನಿ. ಕೈಯಾಗ ಕೊಳ್ಳೀ ಹಿಡಕೊಂಡು ಸಿಡಿ ಆಡತೀನಿ.

*(ಒದೆಯುವಳು)*

ಪಾರಿ : ಏನಂಬೋ ಮಾತಾಡ್ತೀಯೇ ತಾಯೀ, ಒಳಿತನ್ನು.

ಗೌದ್ತಿ : *(ಹೊಟ್ಟೆ ಹಿಡಿದುಕೊಂಡು)* ಬ್ಯಾಟಿಗಿ ಹೋದ ಗೌಡ ಹುಲಿ ಎದಿ ಗುಂಡಿಗಿ ತಂದಕೊಡತೇನಂದ. ಅದನ್ನ ಮನಸ್ಸಿನಾಗs ತಿಂದ ಬಸರಾಗೇನಿ. ಅದಾಗಲೇ ಒಳಗ ಗುಡಿಗ್ಯಾಡಾಕ ಹತ್ತೇತಿ! ಹಸಿದು ಒದ್ದಾಡಾಕ ಹತ್ತೇತಿ! ನಾ ಬೆಳ್ಳೀಬೇಕು, ಆಹಾರ ಕೊಡಬೇ ಅಂತ ಒದರಾಡತೈತಿ. ನಾ ಎಲ್ಲಿಂದ ತರಲಿ? ನನ್ ರಕ್ತ ಕೊಟ್ಟೆ. ಮುಟ್ಟವೊಲ್ಲದು, ಹುಲಿ ಪಿಂಡ ನೋಡು. ಹುಲಿ ಹಾಲ ಕೊಡಬೇ ಅಂತೈತಿ.

*(ಹೊಟ್ಟೆಯ ಕೂಸನ್ನು ಸಮಾಧಾನಪಡಿಸುವಂತೆ ತಟ್ಟುತ್ತ)*

ಅಯ್ಯೋ ನನ್ನ ಕಂದಾ, ಬೆಳಕಲ್ಲ, ಕತ್ತಲಲ್ಲ-ಸಂಜೀನೆರಳಿನಾಗ ಮೂಡಿದ ಸಂದೇಹದ ಕಂದಾ, ನೀ ಹೆಂಗಿದ್ದೀ ಅಂತ ನನಗ್ಗೊತ್ತು. ನಿನಗಿನ್ನೂ ಆಕಾರ ಬಂದಿಲ್ಲ. ಆದರ ಕಾಲ ಮೀರಿ ಬೆಳೆದಿದ್ದೀಯಾ. ಆಗಲೇ ನನ್ನ ಗರ್ಭ ಕುಟ್ಟೋ ಗುಂಡುಕಲ್ಲಾಗಿದ್ದೀ. ನನಗೊತ್ತು, ಹುಲಿ ಹಾಲ ಕೊಡದಿದ್ದರ ನೀ ಅಲ್ಲೇ ಸಾಯತೀ ಅಂತ. ನೀ ಸಾಯೋದs ಒಳ್ಳೇದು, ಸತ್ತ ಮ್ಯಾಲಾದರೂ ಹೊರಗ ಬರತೀಯಲ್ಲಾ, ಬಾ. ಆಗ ನಿನ್ನ

ಮೈತುಂಬ ರಕ್ತದ ಉಚ್ಚೀ ಹೊಯ್ದು
ಹುಗೀತೀನಿ! *(ಎನ್ನುತ್ತ ಮಂಚದ ಮೇಲೆ ಕೂರುವಳು. ದೂರದಲ್ಲಿ ಅವರ್ಯಾರಿಗೂ ಕಾಣದಂತೆ ಗೌಡ ಬಂದಿದ್ದಾನೆ.)*

ನಿನಗ ಇನ್ನೊಂದ ನೆರಳ ಮೂಡಿಧಾಂಗ ಆಯ್ತಲ್ಲ?

ರಾಮಗೊಂಡ : ಏನಂದಿ?

ಗೌದ್ತಿ : ನಿನಗ ಎರಡ ನೆರಳು ಮೂಡ್ಯಾವ.

ರಾಮಗೊಂಡ : ಏನವ್ವ ನಿನ್ನ ಮಾತು?

ಗೌದ್ತಿ : ಇದು ಕನ್ನಡಿ ಮನಿ. ಇಲ್ಲಿದ್ದವರಿಗೆಲ್ಲಾ ಎರಡೆರಡು ನೆರಳು ಮೂಡತಾವ. ನನಗೊಂದು ಹುಲಿ ನೆರಳೈತಿ, ಒಂದು ನಂದೈತಿ. ಇಕಾ ನೋಡು, ನಿನಗೂ ಎರಡದಾವ. ಒಂದು ನಿಂತೈತಿ, ಇನ್ನೊಂದು ಹರಿದಾಡತೈತಿ. ಬೇಕಾದರ ಹೋಗಿ ಕನ್ನಡಿ ನೋಡಿಕೋ,

*(ರಾಮಗೊಂಡ ಅನುಮಾನದಿಂದ ಎದ್ದು ಸರ್ರನೆ ಕನ್ನಡಿ ಮುಂದೆ ಹೋಗುವನು. ದೂರದಲ್ಲಿ ಇವರಿಗೆ ಕಾಣದಂತೆ ನಿಂತಿದ್ದ ಗೌಡ ಕನ್ನಡಿಯಲ್ಲಿ ಮೂಡಿದ್ದವನು ರಾಮಗೊಂಡ ನೋಡಿದೊಡನೆ ಮರೆಯಾಗುವನು. ರಾಮಗೊಂಡ ಚಕಿತನಾಗಿ ತಿರುಗುವನು)*

ರಾಮಗೊಂಡ : ನನ್ನ ಸಂಶಯ ಇನ್ನಷ್ಟ ಬಲಿಯೋ ಹಾಂಗ ಮಾತಾಡ್ತಿ ತಾಯಿ. ಅವು ಹಿಂಗs ಬಲೀತಾ ಹೋದರ ಕಡೀಕ ನನ್ನನ್ನ ತಿಂದಹಾಕಭೌದು. ಒಡಪಿನಾಗ ಖರೆ ಹುಗೀಬ್ಯಾಡ. ನಿನ್ನ ಮಗನ ಗತಿ ಏನಾಗೇತಿ, ಕಣ್ಣು ತಗದ ನೋಡು. ನಿನ್ನೆ ರಾತ್ರಿ ಅಪ್ಪನ ಭೂತ ನೋಡಿ ಬಂದೆ. ಮನೀಗಿ ಬಂದು ಅಪ್ಪನ ಆಕಾರ ನೋಡಿದೆ. ಏನಿದರ ಅರ್ಥ? ಏಕಕಾಲಕ್ಕ ಇಬ್ಬರಿಗೆ ಮಗ ಆಗಲಾರೆ ನಾನು. ನೀನೂ ಅಷ್ಟ, ಇಬ್ಬರಿಗೆ… ಇಬ್ಬರಿಗೆ… ಈ ಇಬ್ಬರಲ್ಲಿ ಯಾರನ್ನ ನಂಬಲಿ? ನಂಬಿದರೂ ದುಃಖ, ನಂಬದಿದ್ದರ ಇನ್ನಷ್ಟ ದುಃಖ. ಇದಕ್ಕೆ ಕಡೀ ಉತ್ತರ ಕೊಡೋಳು ನೀನು. ಹುಚ್ಚಿನ ಮರೆಯೊಳಗ ನಿನ್ನ ಪಾಪ ಮುಚ್ಚಿಟ್ಟಕೋಬೇಡ, ಹೇಳು.

ಗೌದ್ತಿ : ಹಾ ಈಗ ನೆನಪಾಯ್ತು, ತಾಯಿ ನಾನು! ಕೆಟ್ಟದ್ದಕ್ಕೂ ತಾಯಿ, ಒಳ್ಳೇದಕ್ಕೂ ತಾಯಿ! ನನ್ನ ಸಂತಾನ ಕೊಡೋ ಎಲ್ಲಾ ಹಿಂಸೆಗೆ ಹಿಗ್ಗೋ ತಾಯಿ! ಆಹಾರಿಲ್ಲದ ಗರ್ಭದಾಗ ನನ್ನ ಕಂದ ಒದ್ದಾಡತೈತಿ ಹುಲಿಹಾಲು ತಂದಕೊಡೋ ಮಗನ,

ರಾಮಗೊಂಡ : ಹುಲೀಹಾಲಿಗೂ, ನಿನ್ನ ಉತ್ತರಕ್ಕೂ ಏನು ಸಂಬಂಧ?

ಗೌದ್ತಿ : ನನಗೂ ನಿನಗೂ ಏನು ಸಂಬಂಧ? ಹುಲಿಗೂ ನಿನಗೂ ಏನ ಸಂಬಂಧ? ಪಾರಂಬಿ ಕರ್ರೆವ್ವಗೂ ಕೀಲಕುದರಿಗೂ ಏನ ಸಂಬಂಧ? ಹಾಳಬಾವಿಗೂ ನನ್ನ ಗರ್ಭಕ್ಕೂ ಏನ ಸಂಬಂಧ?

ಗಿಣಿಗೂ ರಾಕ್ಷಸನಿಗೂ ಏನ ಸಂಬಂಧ?

ಪಾರಿ : ಬಿಡ ಎವ್ವಾ ಏನ ಮಾತಾಡ್ತಿ, ಒಂದಕ್ಕೂ ಅರ್ಥ ಇಲ್ಲ.

ರಾಮಗೊಂಡ : ಅಲ್ಲ, ಹುಚ್ಚಿನ ಮಾತಲ್ಲ ಇವು. ಅವ್ವ ಹೇಳೋ ಒಡಪಿನಾಗ ಏನೋ ಗುಟ್ಟ ಅಡಗೈತಿ. ನಿನಗೂ ನೆಮ್ಮದಿ ಇಲ್ಲ ತಾಯೇ. ಕನಸಿನೊಳಗಿದ್ದಾಂಗ ಮಾತಾಡತಿ. ಇಲ್ಲಿಂದ ನಿಜ ಮೂಡೀತು. ಹೇಳವ್ವ ಏನ ಮಾಡಲಿ?

ಗೌಡ್ತಿ : ಹಾಂಗಿದ್ದರ ಅವಸರ ಮಾಡು. ಪಿಂಡ ಹಸಿದು ಸಾಯೋ ಮೊದಲು ಹುಲಿಹಾಲು ತಗಂಬಾ.

ರಾಮಗೊಂಡ : ಇಕಾ ಹೊರಟೆ.

*(ಕುಡು ಗೋಲು ಹಿಡಿದು ಹೋಗುವನು ಅಡಗಿದ್ದ ಗೌಡ ಗಮನಿಸುವನು.)*

## ನನಗೂ ಒಂದು ಭೂತ

ಮೇಳ : ಪಟ್ಟೇದ ಕುದರೀಯ ಏರ್ಯಾನ ರಾಮಗೊಂಡ
ಬೆನ್ನ ಚಪ್ಪರಿಸ್ಯಾನ ಮೆಲ್ಲಕ |
ಹಾಡಿ ಹರಸವರಿಲ್ಲ, ನೋಡಿ ಮರಗವರಿಲ್ಲ
ಹಿಂದ ಮುಂದ ಯಾರಿಲ್ಲ ಎಡಬಲಕ ||

ಅಗಸೀ ಹೊರಗ ಬಂದ ಏನಂದ ರಾಮಗೊಂಡ
ಪಾರಂಬಿ ಕರ್ರೆವ್ವ ನಮ ಶರಣಾ |
ತಿರುಗಿ ಬಂದರ ನಾವು ಆರ ಸೊಲಿಗಿಯ ಹುಗ್ಗಿ
ಹಾಕ್ಸೇವ ಕೊಟ್ಟೇವ ಸೀರೀಖಣಾ ||

ಹಳ್ಳದ ಹಂತೇಲಿ ಬಂದೇನ ಅಂದಾನ?
ಗುಡ್ಡದ ನಿರವಾನಿ ನಮ ಶರಣಾ |
ತಿರುಗಿ ಬಂದರ ನಾವು ದೀಡ ನಮಸ್ಕಾರ
ಹಾಕೇವ ಕೊಟ್ಟೇವ ಬೆಳ್ಳೀಕಣ್ಣಾ ||

ಹಿರಿಯರ ಪುಣ್ಯ ನಮ ಮ್ಯಾಲಾ |
ಸುರಿತಿರಲಿ ಶಿವನೆ ಅನುಗಾಲಾ |
ಪಾರಂಬಿ ಕರ್ರೆವ್ವ ಗುಡ್ಡದ ನಿರವಾನಿ
ಈ ಊರ ಕಡೆಗಿರಲಿ ನಿಮ ಧ್ಯಾನಾ |
ಹೇಳತೇವ ಕೇಳ್ರಿ ಜನ ನಿಮ ಮುಂದ ಕತಿಯೊಂದ
ನಮ ಮುಂದ ಕುಂಡ್ರಿ ಹಿಂಗ ತೆರೆದ ಮನಾ ||

ಮೇಳ ೧ : ರಾಮಗೊಂಡ ನೀ ಬರೋತನಕ ಬಜನಿ ಮಾಡತೀವಿ.

ಮೇಳ ೨ : ನೀ ಸುಖರೂಪದಿಂದ ತಿರುಗಿಬರಲಿ ಅಂತ ಹರಕೀ ಹೊರತೀವಿ.

ಮೇಳ ೩ : ನೀ ಮೆಟ್ಟಿದ ಮಣ್ಣು ಚಿನ್ನಾಗಲಿ; ಹಿಡಿದ ಕೆಲಸ ಗಂಡಾಗಲಿ ಅಂತೀವಿ.

ಮೇಳ ೪ : ನೀ ಹೋಗೋ ದಾರೀಲಿ ತಂಗಾಳಿ ಸುಳೀಲಿ, ಕೆಂಪ ಹೂವರಳಿ ಸಾಲ ದೀವಟಿಗೆ ಹಿಡೀಲಿ.

ಮೇಳ ೧ :  ನೀ ಹೋಗೋ ದಾರೀಲಿ ಹಕ್ಕಿ ಹಾಡಲಿ
ಹೂ ಹೂವಿಗೆ ಚಿಟ್ಟೆ ಹಾರಾಡಲಿ.
ನೀ ಹಿಡಿದ ಕೆಲಸ ಹೂವಿನಷ್ಟು ಹಗರಾಗಿ
ನಿನ್ನ ಅಂಗೈಗಿ ಬರಲಿ.

ಮೇಳ ೨ : ಹುಲಿ ಆಕಳಾಗಲಿ
ತಾಲಿ ತುಂಬ ಹಾಲ ಕೊಡಲಿ.

ಮೇಳ ೧ : ಹೊತ್ತ ಮುಣುಗೂದರೊಳಗ ನೀ ತಿರುಗಿ ಬಂದು
ನಾವೆಲ್ಲ ನಿನ್ನ ಸಾಹಸ ಕತಿ ಮಾಡಿ
ಹಾಡೋ ಹಾಂಗಾಗಲಿ.

*(ಮೇಳ ಹಿಂದೆ ಸರಿಯುತ್ತದೆ. ಶಾರಿ ಓಡುತ್ತ ಬರುವಳು. ರಾಮಗೊಂಡನನ್ನು ಕಂಡು ಅನುಮಾನಿಸುತ್ತ ದೂರ ನಿಲ್ಲುವಳು.)*

ರಾಮಗೊಂಡ : ಯಾಕ ಬಂದಿ?

ಶಾರಿ : ನನ್ನ ಗುರುತ ಸಿಕ್ಕಿತ?

ರಾಮಗೊಂಡ : ಹುಚ್ಚೀ ಹಾಂಗ ಮಾತಾಡಬ್ಯಾಡ. ಬಾ ಇಲ್ಲಿ.

ಶಾರಿ : ನನ್ನ ಹೆಸರ ಹೇಳ ನೋಡೋಣು.

ರಾಮಗೊಂಡ : ಯಾಕ? ನಿನ್ನ ಹೆಸರು ನಿನಗ ನೆನಪಿಲ್ಲೇನು?

ಶಾರಿ : ಏನೇನೋ ಹೇಳಿ ಮಾತ ಮರಸ್ತಿ, ನೆನಪಿದ್ದರ ಹೇಳಲ್ಲ.

ರಾಮಗೊಂಡ : ಏ ಶಾರಿ, ಏನಾಗೇತಿ ನಿನಗ? ಗುರುತ ಇಲ್ಲದವರ್ಹಾಂಗ ನನ್ನ ಯಾಕ ಹಾಂಗ ನೋಡ್ತೀ?

ಶಾರಿ : ಗುರುತ ಇದ್ದಾವ ನಿನ್ನೆ ಅದ್ಯಾಕ ಗುರುತ ಇಲ್ಲದವರ್ಹಾಂಗ ಓಡಿ ಹೋದಿ?

ರಾಮಗೊಂಡ : ನಿನ್ನೆ? ನಾ ನಿನ್ನೆ ನಿನ್ನ ಕಂಡೇ ಇಲ್ಲ.

ಶಾರಿ : ಯಾಕ? ನಿನ್ನೆ ನೀ ನಮ್ಮ ಮನೀಗಿ ಬಂದಿರಲಿಲ್ಲ?

ರಾಮಗೊಂಡ : ಇಲ್ಲ.

ಶಾರಿ : ಇನ್ನೇನು ನಿನ್ನ ಭೂತ ಬಂದಿತ್ತ?

ರಾಮಗೊಂಡ : ಶಾರೀ, ಚಾಷ್ಟೀ ಮಾಡಬ್ಯಾಡ. ನಿನ್ನೆ ನಾ ನಿಮ್ಮ ಮನೀಗೆ  ಬಂದೇ ಇಲ್ಲ. ನಿನ್ನನ್ನಂತೂ ನೋಡೇ ಇಲ್ಲ.

ಶಾರಿ : ಮಂದಿ ಅನ್ನೋದು ಖರೆ ಅಂಥಂಗಾಯ್ತು.

ರಾಮಗೊಂಡ : ಏನು?

ಶಾರಿ  : ಕರಿಯಜ್ಜನ ದೆವ್ವ ನಿನ್ನ ಹಿಡಕೊಂಡೈತಿ. ಯಾರನ್ನೂ ನೀ ಗುರುತು ಹಿಡಿಯೋದಿಲ್ಲಂತ.

ರಾಮಗೊಂಡ : ಈಗ ನಿನ್ನ ಗುರುತು ಹಿಡೀಲಿಲ್ಲೇನು?

ಶಾರಿ : ನಿಮಗೆಲ್ಲಾ ಏನಾಗೇತಿ? ನಿಮ್ಮವ್ವ ಗುರುತು ಹಿಡಿಯೋದಿಲ್ಲ. ಅರೆಹುಚ್ಚಿ ಅನ್ನೋಣ. ನಿಮ್ಮಪ್ಪ ಗುರುತ ಹಿಡಿಯೋದಿಲ್ಲ.ಹೆಸರ ಹೇಳಿದರ ಯಾರ ಮಗಳು ಅಂತಾನ. ನಿನ್ನೆ ನೀನಾಗಿ ಮನೀ ಕಡೆ ಬಂದಿ. ಒಳಗ ಬಾ ಅಂದರ ಗುರುತಿಲ್ಲದವರ್ಹಾಂಗ ಕಣ್ಣಕಿಸದ ನನ್ನ ಕಡೆ ನೋಡತಾ ಓಡಿಹೋದಿ!

ರಾಮಗೊಂಡ : ನನಗೂ ಒಂದ ಭೂತ ಐತಿ ಅಂತಾಯ್ತು.

ಶಾರಿ ಅದೇನೋ ನಿನಗ್ಗೊತ್ತು.

ರಾಮಗೊಂಡ : ಈಗ ನಾ ಭೂತದಾಂಗ ಕಾಣತೀನೊ? ನಿನ್ನ ಮಾವನ್ಹಾಂಗ ಕಾಣತೀನೊ?

ಶಾರಿ : ನಾ ಚಾಷ್ಟೀ ಮಾಡಾಕ ಬಂದಿಲ್ಲ.

ರಾಮಗೊಂಡ : ಶಾರೀ ತಲ್ಯಾಗ ಏನೇನೋ ಹುಳ ಹೊಕ್ಕಾವ. ಎಲ್ಲಾ ಒಂದ ಗೊತ್ತಿಗಿ ಮುಟ್ಟಲಿ. ಆಮ್ಯಾಲ ಮಾತಾಡೋಣಂತ. ಕಾಡಿಗಿ ಹೋಗಿಬರ್ತೀನಿ, ನೀ ಮನೀಗಿ ನಡಿ,

ಶಾರಿ : ಕಾಡಿಗಿ ನಾನೂ ಬರತೀನಿ.

ರಾಮಗೊಂಡ : ಹೇಳಿದಷ್ಟು ಕೇಳು. ಯಾವುದೋ ದೊಡ್ಡ ಕೆಲಸಕ್ಕ ಹೊಂಟೇನಿ, ಅಡ್ಡಬಾಯಿ ಹಾಕಬ್ಯಾಡ.

ಶಾರಿ : ದೊಡ್ಡ ಕೆಲಸ! ಯಾವಳೋ ಮೆಳಿ ಹತ್ತರ ಕಾಯ್ತಾಳೇನೊ? ಮಲ್ಲಿಗಿ ಹೂ ಚೆಲ್ಲಾಡಬೇಕಲ್ಲ!

ರಾಮಗೊಂಡ : ಮತ್ತದs ಮಾತು. ಛೆ, ಏನಾಗೇತಿ ನಿನಗ?

ಶಾರಿ : *(ಅಳುತ್ತ)* ದಿನಾ ನನ್ನ ಗೆಳತ್ಯಾರ ಬಂದು ಎಲ್ಲಾ  ಹೇಳತಾರ: ರಾಮಗೊಂಡ ಮೊನ್ನಿ ಕಾಶೀ ಜೋಡಿ ಇದ್ದ; ನಿನ್ನಿ ಬಸ್ಸೀ ಜೋಡಿ ನಗತಿದ್ದ. ಆಕಿಗಿ ಹೂ ಕೊಟ್ಟ; ಈಕಿಗಿ ಎಲಡಿಕಿ ಕೊಟ್ಟ-ಅಂತ. ನನ್ನ ಮ್ಯಾಲ ಅದೇನಂಥಾ ಸಿಟ್ಟ ನಿನಗ?

ರಾಮಗೊಂಡ : ನಿನ್ನ ಹೊಟ್ಟಿ ಉರಸಾಕ ಏನೇನೋ ಕತಿ ಹೇಳತಾರ.

ಶಾರಿ : ನಿನ್ನೆ ಸಂಜೀನಾಗ ಬಣಿವೀ ಹಿಂದ ಸೀತೀನ ಹಿಡಿಕೊಂಡಿದ್ದೆಲ್ಲ. ಅದೂ ಕತೀಯೇನ?

ರಾಮಗೊಂಡ : ಛೇ, ಯಾಕ್ಹಿಂಗ ಸುಳ್ಳ ಹೇಳತಿ?

ಶಾರಿ : ನಾನs ಕಣ್ಣಾರೆ ನೋಡಿದ್ದು. ನಿನ್ನ ದೆವ್ವ ಅಲ್ಲ, ನಿನ್ನನ್ನs ನೋಡಿದ್ದು.

ರಾಮಗೊಂಡ : ನಿನಗೆಲ್ಲೋ ಹುಚ್ಚ ಹಿಡಿದಿರಬೇಕು.

ಶಾರಿ : ಹೌದು, ಖರೇ ಹೇಳಿದವರೆಲ್ಲಾ ಹುಚ್ಚರು ನಿನ್ನ ಪಾಲಿಗೆ.

*(ಮತ್ತೆ ಅಳುವಳು)*

ರಾಮಗೊಂಡ : ಶಾರೀ, ನನ್ನ ಮಾತ ನಂಬು; ನಿನ್ನೆ ಬಣವೀ ಹಿಂದ ಹೋಗಲೂ ಇಲ್ಲ, ಸೀತೀನ ನೋಡಲೂ ಇಲ್ಲ.

*(ಸಮಾಧಾನ ಮಾಡಲು ಹೋಗುವನು)*

ಶಾರಿ : ಥೂ ನನ್ನ ಮುಟ್ಟಬ್ಯಾಡ. ನಿನ್ನ ನಂಬಿಕಿ ತಿಳಧಾಂಗಾಯ್ತು.
ನನ್ನ ತೆಕ್ಕ್ಯಾಗಿಂದ ನಿನ್ನನ್ನ ಕಸಿದಳಲ್ಲಾ ಆ ಸೀತಿ
ಆಕಿ ತೋಳಿಗಿ ಹಾವು ಹಲ್ಲೂರಲಿ.
ಆ ಪರಿ ನಿನ್ನ ನೋಡತಿದ್ದಳಲ್ಲಾ
ಅವಳ ಕಣ್ಣು ಕೊಳತ ಹೋಗಲಿ.
ಗಲ್ಲ ಕಚ್ಚಿದಳಲ್ಲ.
ಅವಳ ಬಾಯಿಗಿ ಇರಿವಿ ಮುತ್ತಲಿ.
ನಿನ್ನ ಕೈ ತಾಗಿದಾಗೆಲ್ಲ ಸೊಂಟ ನಡುಗಿಸಿದಳಲ್ಲ.
ಅವಳ ಸೊಂಟ ಬತ್ತಿ ಹೋಗಲಿ.
ತೆಕ್ಕಿ ಹಾದ ನಿನ್ನ ಎದಿ ಇರಿದಳಲ್ಲ,
ಅವಳೆದಿ ಒಣಗಿಹೋಗಲಿ.

*(ಅಳುತ್ತ ಓಡುವಳು. ರಾಮಗೊಂಡ ತಬ್ಬಿಬ್ಬಾಗಿ ಗೊಂದಲದಲ್ಲಿ ಬೀಳುವನು. ಗೊಂದಲಗಳನ್ನು ಮೆಲುಕು ಹಾಕುತ್ತಾ ಹೊರಡುವನು.)*

# ಕತ್ತಲೆಗೆ ಬೆಳಕಾಗಿ ಬಂದವಳಿ

*(ಕಾಡಿನಲ್ಲಿ ಈ ಹಿಂದೆ ಬಂದಿದ್ದ ಇಬ್ಬರು ಮುದುಕಿಯರು ತೋಂತಕದಿನ ತಾಂ ತಕದಿನ ಎಂದು ಕುಣಿಯುತ್ತಾ ಬರುವರು.)*

ಮುದುಕಿ ೧ : ಕುದರಿ ಹೆಂಗ ಓಡಿಸ್ತಾನ ನೋಡ.

ಮುದುಕಿ ೨ : ಕುರಪುಟ್ ಕುರಪುಟ್ ಕುರಪುಟ್ ಕುರಪುಟ್

ಮುದುಕಿ ೧ : ದಟ್ಟ ಕಾಡಿನಾಗ ದರಕಾರಿಲ್ಲದಽ ಹೊಡೀತಾನ್ನೋಡಽ!

ಮುದುಕಿ ೨ : ಹೈ ಹೈ ಘೋಡಾ ಚಲ್ ಚಲ್ ಚಲ್.

ಮುದುಕಿ ೧ : ಸುತ್ತ ಹೆಂಗ ಕಣ್ಣಾಡಿಸಿ ಹುಲಿ ಹುಡುಕತಾನ್ನೋಡ!

ಮುದುಕಿ ೨ : ಮಸದ ಕುಡಗೋಲಧಾಂಗ ಹೊಳೀತಾನ ನೋಡ!

ಮುದುಕಿ ೧ : ಶ್ಯೂ! ಹುಲಿ ಬಂತು! ಹುಲಿ ಬಂತು!

ಮುದುಕಿ ೨ : ಈ ಹುಲೀನ್ನ ನಾವೆಲ್ಲೋ ನೋಡಿದ್ದೀವಲ್ಲಾ....

ಮುದುಕಿ ೧ : ಹೌಂದು ಎಲ್ಲಿ ನೋಡಿದ್ದೀವಿ?

ಮುದುಕಿ ೨ : ಹಾ ಗುರುತು ಸಿಕ್ಕಿತು! ಇವರಪ್ಪನ ಕೊಂದ ಹುಲಿ ಇದಽ!

ಮುದುಕಿ ೧ : ಹೌದು, ಇವರಪ್ಪನ್ನ ಕೊಂಧಾಂಗ ಇವನನ್ನೂ ಕೊಲ್ಲತೈತೋ ಏನೊ!

ಮುದುಕಿ ೨ : ಸಾಧ್ಯ ಇಲ್ಲ ತಗಿ. ಶ್ಯೂ! ನೋಡಲ್ಲಿ ಕುದರಿ ಮ್ಯಾಗಿಂದ ಇಳಿದ.

ಮುದುಕಿ ೧ : ಅಬ ಅಬ ಹುಲಿ ಹಾದಿಗಿ ಅಡ್ಡನಿಂತ!

ಮುದುಕಿ ೨ : ಏನ ಧೀರ! ಏನ ಗಂಭೀರ!

ಮುದುಕಿ ೧ : ಅವನ ದಿಗರೇನು! ಧಿಮಾಕೇನು!

ಮುದುಕಿ ೨ : ಹುಲಿ ಮುಕಳ್ಯಾಗ ಬಾಲ ಹಾಕ್ಕೊಂಡಿತು. ಪಳಗಿಸಿದ ಹುಲಿ ಹಾಂಗ ಅಲ್ಲೇ ಸುತ್ತಾಡತೈತಿ.

ಮುದುಕಿ ೧ : ಕುಡಗೋಲ ತೋರಿಸಿ ಹಾಲ ಕೊಡು ಅಂತಾನಲ್ಲ, ಹುಡುಗನ ಧೈರೆ ನೋಡ!

ಮುದುಕಿ ೨ : ಹಾಲ ಹಿಂಡಾಕ ಸುರುಮಾಡಿದ, ಮಲಿ ಜಗ್ಗಿ ಜಗ್ಗಿ ಹಾಲ ಹಿಂಡತಾನ. ಅವನ ಎದಿಗಾರಿಕೆ ನೋಡ!

ಮುದುಕಿ ೧ : ಹುಲಿ ಯಾಕ ಅವನ ಕಡೆ ಹಾಂಗ ನೋಡತೈತಿ?

ಮುದುಕಿ ೨ : ಕೆಚ್ಚಲ ಗುದ್ದತಾನಲ್ಲ, -ಅದಕ್ಕಿರಬೇಕು.

ಮುದುಕಿ ೧ : ಅಲ್ಲ ತಗಿ, ಅದರ ಮನಸ್ಸಿನಾಗೇನೋ ಜ್ವಾಲಾಮುಖಿ ಐತಿ. ಅದರ ಕಣ್ಣಂಚಿನಾಗೇನೋ ಸಂಚೈತಿ. ಅವ ಮೈಮರೀಲಿ ಅಂತ ಕಾದನಿಂತೈತಿ.

ಮುದುಕಿ ೨ : ಅಕಾ! ಹುಲಿ ಕೊಸರಿಕೊಂಡ ತಿರಿಗಿ ನಿಂತಿತು. ಅಯ್ಯಯ್ಯೋ ಹುಲಿ ಅವನ ಮ್ಯಾಲೆ ಹಾರಿತು. ನಾ ನೋಡಲಾರೆ… ನಾ ನೋಡಲಾರೆ!

ಮುದುಕಿ ೧ : ಅಕಾ ಅಕಾ ಅಲ್ಲಿ ನೋಡು, ರಾಮಗೊಂಡ ಕುಡಗೋಲಿನಿಂದ ಹುಲಿ ಬೆನ್ನಿಗೆ ಇರಿದ! ರಕ್ತ ಚೆಲ್ಲನ ಸಿಡೀತು!

*(ಚಪ್ಪಾಳೆ ತಟ್ಟಿ ಕುಣಿಯುವರು.)*

ಮುದುಕಿ ೨ : ಹುಲಿ ಅಂಜಿ ಓಡಿತು! ಹುಲಿ ಅಂಜಿ ಓಡಿತು!

*(ತೇಗುತ್ತ ರಾಮಗೊಂಡ ಬರುವನು. ಒಂದು ಕೈಯಲ್ಲಿ ಕುಡಗೋಲು ಇನ್ನೊಂದರಲ್ಲಿ ಹಾಲ ತಾಲಿಯಿದೆ. ಹುಲಿಯೊಂದಿಗೆ ಹೋರಾಡಿದ ಉದ್ವೇಗ ಅವನ ಮುಖದ ಮೇಲಿದೆ. ಅಷ್ಟರಲ್ಲಿ ಭೂತ ಪ್ರತ್ಯಕ್ಷವಾಗುತ್ತದೆ.)*

ಭೂತ : ಬಚಾವಾಗಿ ಬಂದೆಯಲ್ಲ. ಕರಿಮಾಯಿಗೆ ಸಾವಿರ ನಮಸ್ಕಾರ.

ರಾಮಗೊಂಡ : ಓ ನೀನು!

ಭೂತ : ನೀ ಬಚಾವಾಗಿ ಬಂದದ್ದು ದೊಡ್ಡ ಸಾಹಸ.

ರಾಮಗೊಂಡ : ಇರಬಹುದು.

ಭೂತ : ನನ್ನ ಮಾತಿನಾಗಿನ್ನೂ ನಂಬಿಕಿ ಬರಲಿಲ್ಲ.

ರಾಮಗೊಂಡ : ಸಂಶೇದಿಂದ ನಾ ಇನ್ನೂ ಮುಕ್ತನಾಗಿಲ್ಲ ನಿಜ. ಆದರ ಖಾತ್ರಿ ಆಗೋತನಕ ತಾಳ್ಮೆಯಿಂದಿರು.

ಭೂತ : ನಿನಗಿನ್ನೂ ಖಾತ್ರಿ ಆಗಲಿಲ್ಲಂದರ ಅದು ನನ್ನ ದುರ್ದೈವ.

ರಾಮಗೊಂಡ : ನಂದೂ ಹೌದು.

ಭೂತ : ಮುಖಕ್ಕ ಹೊಡಧಾಂಗ ಸತ್ಯ ಏಕಾಏಕಿ ನಿನ್ನ ಮುಂದ ಸಾಕಾರವಾದರೂ ನೋಡಲಾರೆ ಅಂತ ಕಣ್ಣ ಮುಚ್ಚತೀಯಲ್ಲ ಇದಕ್ಕೇನನ್ನಲ್ಲಿ

ರಾಮಗೊಂಡ : ಅಂದರ?

ಭೂತ : ಈಗ ಹುಲಿಯಾಗಿ ಬಂದು ನಿನಗ ಹಾಲ ಕೊಟ್ಟವನು ಅವನೇ.

ರಾಮಗೊಂಡ : ಅಂದರ ರಾಕ್ಷಸ?

ಭೂತ : ಹೌದು. ನನ್ನ ಮುಗಿಸಿಧಾಂಗ ನಿನ್ನನ್ನೂ ಮುಗಿಸಬೇಕಂತೆ ಬಂದಿದ್ದ. ಆಗಲಿಲ್ಲ. ಬೇಕಾದರ ವಾಡೇಕ್ಕ ಹೋಗಿ ನೋಡು, ಅವನ ಬೆನ್ನಾಗಿಂದ ರಕ್ತ ಹರೀತಿರತೈತಿ. ಅದನ್ನ ನೋಡಿದ ಮ್ಯಾಲಾದರೂ ನನ್ನ ಮಾತು ಖಾತ್ರಿಯಾದೀತು. ಸತ್ತು ಸ್ವರ್ಗಕ್ಕಿಲ್ಲ, ಇದ್ದು ಬದುಕಿಗಿಲ್ಲ, ನಟ್ಟನಡುವೆ ನಿನ್ನ ತಂದೆ ಆತ್ಮ ಗಾಳಿಯಾಗಿ ಹಾಳಬಾವೀ ತಳ ಹಿಡದೈತಿ. ಕಾಪಾಡೋ ಮಗನ!

ರಾಮಗೊಂಡ : ನನ ಗೊಂದಲ ನಿನಗ ಹೆಂಗ ಹೇಳಲಿ? ಇಲ್ಲೀತನಕ ನನ್ನಪ್ಪ ಮತ್ತವನ ಭೂತ-ಎರಡs ಅಂತಿದ್ದೆ. ಆದರ ಈಗ ನೋಡಿದರ ನಿನ್ನ ಹಾಂಗ ನನಗೂ ಒಂದ ಭೂತ ಐತಿ! ಕನ್ನಡಿ ಮುಂದ ನಿಂತರ ನನ್ನ ಬದಲು ನಮ್ಮಪ್ಪನ ನೆರಳು ಮೂಡತೈತಿ. ನಾ ಮನ್ಯಾಗಿದ್ದರ ನನ್ನ ನೆರಳು ಊರ ತುಂಬ ಓಡ್ಯಾಡಿ ಹುಡಿಗೇರ ಹರೆ ಹರೀತೈತಿ. ನಾ ಬದಿಕ್ಕಿದ್ದೀನೋ, ಸತ್ತಿದ್ದೀನೋ? ನಾ ರಾಮಗೊಂಡನೋ ಇಲ್ಲಾ ನನ್ನ ಭೂತವೋ ಅಂತ ಸಂಶೆ ಬರಾಕ ಹತ್ತೇತಿ. ದೇವರಂಥಾ ದೇವರಿಗೆ ಒಂದಂಬೊ ಸತ್ಯ ಇಲ್ಲ. ಕರಿಮಾಯಿ ಮುಂಜಾನೆ ಹುಡಿಗಿ ಆಗತಾಳ; ಸಂಜೀ ಹೊತ್ತ ಮುದುಕಿ ಆಗತಾಳ. ಅವ್ವನ ಒಂದೊಂದು ಮಾತಿಗೆ ಸಾವಿರ ನೆರಳ ಮೂಡತಾವ. ಒಂದೊಂದು ಸತ್ಯಕ್ಕ ದಾರಿ ತಪ್ಪಿಸುವ ಸಾವಿರ ದಾರಿಗಳು, ಯಾವುದನ್ನ ಹಿಡೀಲಿ, ಯಾವುದನ್ನ ಬಿಡಲಿ? ಸೂರ್ಯನಂಥ ಸೂರ್ಯನಿಗೂ ಮನುಷ್ಯ ಮತ್ತವನ ಭೂತಗಳನ್ನ ಬ್ಯಾರೇ ಮಾಡಿ ತೋರಿಸಲಿಕ್ಕಾಗಲೇ ಇಲ್ಲ. ಯಾರನ್ನಂತ ನಂಬಲಿ?

*(ಆಕಾಶದ ಕಡೆ ಮುಖ ಮಾಡಿ ಅಸಹಾಯಕನಾಗಿ ಕಿರುಚಿ)*

ಅಪ್ಪಾ, ಸೂರ್ಯನ್ನ ಮೀರಿದ ಬೆಳಕಿನ ಸ್ವಾಮಿ, ಈ ಲೋಕವನ್ನ ಅಖಂಡ ಸತ್ಯವಾಗಿ ತೋರಿಸೋ ತಂದೇ, ನನ್ನ ಗೊಂದಲ ಬಗಿಹರಿಸೋ ತಂದೇ….. ನೆರಳಿಲ್ಲದ ಸತ್ಯ ತೋರಿಸೋ ತಂದೇ…..

*(ಸಂಗೀತ ಕೇಳಿಬರುತ್ತದೆ, ಮೇಳದ ಹಾಡಿಗೆ ತಕ್ಕಂತೆ ಕುಣಿಯುತ್ತ ಒಬ್ಬ ಯಕ್ಷಿಣಿ ಬರುವಳು. ರಾಮಗೊಂಡ ಬೆರಗಾಗಿ ನಿಲ್ಲುವನು. ಭೂತ ಮಾಯವಾಗುವುದು.)*

ರಾಮಗೊಂಡ : ಕತ್ತಲೆಗೆ ಬೆಳಕಾಗಿ ಮೂಡಿದ ದೈವವೇ, ಬಂದವಳು ಯಾರೆಂದು ಕುರುಹುದೋರಿ ಕಾಪಾಡು ತಾಯೇ, ಸೌಖ್ಯ ಪ್ರದಾಯೇ.

ಯಕ್ಷಿಣಿ : ಸಂದೇಹದ ಮಂಜಿಗೆ ನಿಸ್ಸಂದೇಹದ ಕಿರಣ ನಾನು, ಲೋಕದ ತಾಯಿ ನಾನು. ನಾನೊಬ್ಬ ಯಕ್ಷಿಣಿಯೆಂದು ಭಾವಿಸೈಕಂದಾ, ನಿನ್ನ ಮಾತೆನಗೆ ಚಂದಾ.

ರಾಮಗೊಂಡ : ನಿನ್ನ ಬೆಳಕಿಗೆ ಬೆರಗಾಗಿ ಅನುಮಾನಗಳ ನಾಲಗೆ ಬತ್ತಿ ಹೋಗಿದೆ ತಾಯೇ. ಮರೆವಿನ ಮಾಯೆ ಆವರಿಸುವ ಮುನ್ನ ಮನಸ್ಸಿನಲ್ಲಿ ಧಾಂದಲೆ ಮಾಡುವ ಗೊಂದಲಗಳನ್ನು ತಿಳಿಯಾಗಿಸು ತಾಯೇ ಸೌಖ್ಯಪ್ರದಾಯೇ.

ಯಕ್ಷಿಣಿ : ನಿನ್ನ ಭಾವನೆಗಳಿಗೆ ಶಬ್ದ ತೊಡಿಸುವ ಮುನ್ನವೇ ಮೂರು ವರ ಕೊಡುವೆ ಕಂದಾ. ಒಳಗಿನ ಇಲ್ಲವೇ ಹೊರಗಿನ, ಹಿಂದೆ ಮುಂದೆ ಇಂದಿನ ವೈರಿಯ ಕುರುಹನ್ನ ಸಂದೇಹಕ್ಕೆಡೆಯಿಲ್ಲದಂತೆ ಅಂಗೈಯಲ್ಲಿ ತೋರಿಸುವ ಕನ್ನಡಿಯಿದು. ಎಲ್ಲಿಗೆಂದರೆ ಅಲ್ಲಿಗೆ, ವೈರಿಯ ಜೀವಪಕ್ಷಿ ಅಡಗಿರುವಲ್ಲಿಗೆ ಮನೋವೇಗ ಮೀರಿ ಹಾರುವ ಕೀಲು ಕುದುರೆಯಿದು. ಕೋಟಿ ಅಮಾವಾಸ್ಯೆಗಳ ಶಕ್ತಿಯ ರಕ್ಕಸರನ್ನ ಸರಾಗವಾಗಿ ಇರಿವ ಕೊಂಬಿದು. ಇವನ್ನು ತೆಗೆದುಕೊಂಡು ನಿನ್ನ ಕಾರ್ಯ ಸಾಧಿಸು ಕಂದಾ, ನಿನ್ನ ಕೃತಿಯೆನಗೆ ಚಂದಾ!

*(ಕೊಡುವಳು. ರಾಮಗೊಂಡ ಸ್ವೀಕರಿಸಿ)*

ರಾಮಗೊಂಡ : ಕೇಳುವುದೇನಂದರಿಯದೆ ಗೊಂದಲದಲ್ಲಿದ್ದಾಗ ಎಲ್ಲವನು ಪರಿಹರಿಸಿ ವರ ನೀಡಿದ ತಾಯೇ, ನಿನ್ನಿಷ್ಟದಂತೆ ಮಣಿಹ ಪೂರೈಸುವೆನು, ಆಶೀರ್ವದಿಸು.

ಯಕ್ಷಿಣಿ : ಜೋಕೆ ಮಗನೇ, ಇವು ನಿನ್ನ ಶಕ್ತಿಗಳು. ನಿನ್ನ ಆತ್ಮದಲ್ಲಿ ಬೆರೆತ ಶಕ್ತಿಗಳು. ಅಪ್ಪಿತಪ್ಪಿ ಕೈತಪ್ಪಿ ಈ ಮೂರಕ್ಕೆ ನಿನ್ನ ವೈರಿಯ ಹಸ್ತಸ್ಪರ್ಶವಾದರೆ ಇವು ಶಕ್ತಿಗುಂದುತ್ತವೆ. ಜೊತೆಗೆ ನೀನು ಕೂಡ; ಜೋಕೆ.

*(ಯಕ್ಷಿಣಿ ಕುಣಿಯುತ್ತಾ ಮಾಯವಾಗುವಳು. ಅವಳು ಹೋದ ದಿಕ್ಕಿಗೆ ನಮಸ್ಕರಿಸಿ ವರಗಳ ಬಗ್ಗೆ ಉತ್ಸಾಹಿತನಾಗುವನು.)*

ರಾಮಗೊಂಡ : ದಿವ್ಯಕನ್ನಡಿಯೇ, ಮಿಂಚಿನಂತೆ ಮೋಹಕವಾದ ಕನ್ನಡಿಯೇ, ತೋರಿಸು ನಿನ್ನ ಸತ್ಯವನ್ನು. ನನ್ನ ಶತ್ರು ಯಾರು? ಎಲ್ಲಿದ್ದಾನೆ? ಯಾವ ರೂಪದಲ್ಲೇ ಅಡಗಿರಲಿ ತೋರಿಸು.

*(ಕನ್ನಡಿ ನೋಡಿ ಬೆರಗಾಗುವನು.)*

ಹೌದು. ಇದು ನಮ್ಮನೆ! ಇವಳು ನನ್ನ ತಾಯಿ! ತಾಯಿ ಕನಸ ಕಾಣಾಕಹತ್ಯಾಳ. ಹೊಂಚಿ ನಿಂತಾನಲ್ಲ. ಯಾರಿವನು? ಬೆನ್ನಲ್ಲಿ ರಕ್ತ….!

*(ಕೋಪಗೊಂಡು)*

ಮೋಸ ! ಮೋಸ ! ನಮ್ಮಪ್ಪನ ಆಕಾರದಲ್ಲಿರೋ ರಾಕ್ಷಸ ! ಹುಲಿ ವೇಷದಾಗ ಬಂದು ಅಪ್ಪನ್ನ ಕೊಂದು ನನ್ನನ್ನೂ ಕೊಲ್ಲಬೇಕಂತ ಮಸಲತ್ತು ಮಾಡಿದ ಘಾತುಕ! ಪಾರಂಬಿ ಮರ ಕಡಿದು ಊರ ಗಂಡಸುತನದ ಬೇರಿಗೆ ಬಿಸಿ ನೀರೆರೆದ ಚಂಡಾಲ! ಗಳಿಗ್ಗೊಂದು ರೂಪ ಧರಿಸಿ, ಸಂಶೆ ಮೂಡಿಸಿ, ಊರಿನ ಅಖಂಡ ಆತ್ಮದಾಗ ಬಿರುಕು ಮೂಡಿಸಿದ ಮಾಟಗಾರ! ಎಲ್ಲಿ ನನ್ನ ತಂದೆಯ ಭೂತ? ಅಪ್ಪಾ… ಅಪ್ಪಾ…

*(ಸುತ್ತ ಹುಡುಕಿ ಅದು ಕಾಣದ್ದಕ್ಕೆ ನಿರಾಶನಾಗಿ)*

ಛೆ! ನಾನೋ ಹುಂಬ. ಭೂತ ಹೇಳಿದ ಸತ್ಯವನ್ನ ತಿರಸ್ಕರಿಸಿ ಅನುಮಾನ ಹೇಳೋ ಸುಳ್ಳಿಗೆ ನೀರೆರೀತಾ ಇದ್ದೆ. ಆತ್ಮದ ಪಿಸುದನಿಗಳನ್ನ ನಿರ್ಲಕ್ಷಿಸಿ ನನ್ನ ನಾನೇ ಚಾಡೀ ಹೇಳಿಕೊಳ್ತ ಸಂಶೇದೊಳಗ ಸಮಾಧಾನಪಡತಿದ್ದೆ. ಇರೀಬೇಕು! ಈಗಲೇ ಇರೀಬೇಕು. ರಾಕ್ಷಸ ತಾಯಿಯ ಕನಸಿನಾಗ ಪ್ರವೇಶ ಮಾಡೋ ಮೊದಲಽ ಇರೀಬೇಕು. ತಾಯಿಯ ಕನಸುಗಳನ್ನ ಮೈಲಿಗೆ ಮಾಡೋ ಮೊದಲಽ ಇರೀಬೇಕು!

*(ಹೋಗುವನು)*

## ಕನಸಿನಲ್ಲಿ ಪ್ರವೇಶ

ಮೇಳ : ಕನಸು ಕಂಡಳು ತಾಯಿ ಕಾಡ ಹೊಕ್ಕಂತೆ
ಕಾಡ ಬಣ್ಣಿಸುವೆವು ನಮಗೆ ತಿಳಿದಂತೆ.
ಆಲದಮರ ಜಡೆಯ ಬಿಟ್ಟು ನಿಂತಾವ
ಸುಳಿದಾಡೊ ನದಿಗಳು ಬುಸುಗುಡತಾವ.

ಗೌದ್ತಿ : *(ಗರ್ಭ ಹಿಡಿದುಕೊಂಡು ಬರುವಳು.)*

ಎಷ್ಟು ಚಡಪಡಸ್ತೀಯೋ ನನ್ನ ಕಂದಾ, ನಿನ್ನ ತಾಯಿಗೆ ತ್ರಾಸ ಆಗತೈತಿ ಅನ್ನೋ ಕಾಳಜಿ ಬ್ಯಾಡಾ ನಿನಗ? ಬರೀ ಮನ್ಯಾಗಿದ್ದೂ ಇದ್ದೂ ಬ್ಯಾಸರಾಗೇತೇನು? ನೀ ಎಷ್ಟಂದರೂ ಹುಲೀಪಿಂಡ; ಕಾಡಿನ ಗಾಳೀ ಉಂಡು ಬೆಳೀಬೇಕಾದವನು. ಬಾ, ನಿನ್ನನ್ನ ಕಾಡಿಗೆ ಕರೆಕೊಂಡು ಹೋಗತೀನಿ. ಅಲ್ಲಿ ಗಿಡ ಮರ ಗುಡ್ಡ ಬೆಟ್ಟದಾಗೆಲ್ಲ ಅಡ್ಡಾಡಸ್ತೀನಿ.

ಮೇಳ : **ಕಲ್ಲಾದ ಬೆರಗೀಗೆ ಕಣ್ಣಲ್ಲೆ ಜೀವ**
**ಮೊಳಕಾಲಿಗೆ ಕೈಕಟ್ಟಿ ಬೆಟ್ಟ ಕುಂತಾವ**
**ಹೆಡೆಯೆತ್ತಿ ನಿಂತಾವ ಕ್ಯಾದೀಗಿ ಹೂವ**
**ಸಂಪೀಗಿ ಮರದಾಗ ದೀಪ ಉರದಾವ**

ಗೌದ್ತೀ : ಅವಯ್ಯಾ, ಏನ ಚಂದ ಐತಿ ಕಾಡಿದು! ಕಾಡಿನಂಗಳದಾಗ ತಂಗಾಳಿ ಚೆಲ್ಲಾಟ ಆಡತೈತಿ. ಹೆಸರು ಗೊತ್ತಿಲ್ಲದ ಥರಾವರಿ ಹಸಿರು ಹುಲುಸಾಗಿ ಬೆಳದೈತಿ. ಆದರ ಅದ್ಯಾಕ ಈ ಮೆಳಿ ಹಿಂಗ ಕೆಂಪ ಕಾಣತೈತಿ? ಒಂದಃ ಒಂದ ಹಸಿರೆಲಿ ಇಲ್ಲ. ಮೈ ತುಂಬ ಕೆಂಪ ಹೂ ಬಿಟ್ಟೈತಿ. ಕಾಡು ಮುಟ್ಟಾಗೇತೋ ಏನೋ! ಹಂಗಾದರ ಈಗ ರಾಜಕುಮಾರ ಬರತಾನ. ಅವಯ್ಯಾ, ನನಗ ನಾಚಿಕಿ ಬರತೈತಿ…

ಮೇಳ : **ಮೆಳಿಯಾಗಿನ ಗವಿಯೊಳಗ ಹುಲಿಯೊಂದ ಕಂಡೆ**
**ಹುಲಿ ಹಿಡಿದು ತಿನ್ನುತ ನಾ ನಿಂತುಕೊಂಡೆ**
**ಅರ್ಧ ತಿಂದಿರುವಾಗ ನಾ ನೋಡಿಕೊಂಡೆ**
**ಅಷ್ಟರಲಿ ಅದೆ ನನ್ನ ಮುಗಿಸಿದ್ದ ಕಂಡೆ.**

*(ಗೌದ್ತಿ ಸಡಗರ ಮಾಡುತ್ತ ನಾಚಿಕೆಯನ್ನು ಅಭಿನಯಿಸುತ್ತಿರುವಾಗ ಕೆಂಪು ಮೆಳೆಯೊಳಗೆ ಹೊಂಚಿ ನಿಂತ ಗೌಡ ಕಾಣಿಸುತ್ತಾನೆ.)*

ಗೌದ್ತಿ : ಅದ್ಯಾಕ ಹಾಂಗ ಹೊಂಚತಿ. ಹೊರಗ ಬಾರಲ್ಲ. ಏ ನನ್ನ ಪುರುಷಾ, ನಿನ್ನ ಕಂಡು ಅರಳ್ಯಾವೋ ನಮ್ಮ ಹರುಷ! ಸನೇಕ ಬಾ ಅಂದರ…ರಾಜಕುಮಾರಾ ಸನೇಕ ಬಾರಲ್ಲ, ನೀ ಸನೇಕ ಬರೋವಾಗ ಏನೂ ಅಡ್ಡ ಬಾರದಿರಲಿ ಅಂತ ಎಷ್ಟ ಹಾರೈಸತತೀನಿ.

*(ಗೌಡ ಬರುವನು. ಅವನಿಗೆ ಆತು ನಿಲ್ಲುತ್ತ)*

ನೀ ಮರ ಆಗಿ ನಿಂತುಕೊ. ನಾ ಬಳ್ಳಿ ಆಗಿ ನಿನ್ನಗುಂಟ ಹಬ್ಬತೀನಿ. ನಿನ್ನ ಜೋಡಿ ಎಷ್ಟ ಮಾತಾಡಬೇಕಂತ ಅನಸತೈತಿ. ಆದರ ನಾ ಮಾತಾಡಿದಾಗ ನನ್ನ ಕಡೆ ನೋಡೋದಃ ಇಲ್ಲ ನೀನು. ಪರಿಮಳದ ಪವನ ಒಳಗ ಹೊರಗ ಘಮ್ಮಂತ ಹರಿದಾಡಿ, ವಾಸನೆ ಮೂಗ ತುಂಬಿ ಮತ್ತೇರಿ ಮಲಗತೀನಿ. ಅವಯ್ಯಾ, ಮರದ ಟೊಂಗಿ ಗಾಳಿಗಿ ಅಲುಗಿದಾಗೆಲ್ಲಾ ನನ್ನ ಮ್ಯಾಲ ಭಾರ ಬೀಳತೈತಿ. ಭಾರ ಬಿದ್ದಲ್ಲೆಲ್ಲಾ ಮೈ ಒಡ್ಡತೀನಿ. ಇಕ, ಬಳ್ಳೀಗರ್ಭಕ್ಕ ಕೆಂಪು ಮೊಗ್ಗು ಬಿಟ್ಟಾವ. ಒಳಗೇನೋ ನಿಧಿ ಮುಚ್ಚಿಟ್ಟುಕೊಂಡು ಮ್ಯಾಲ ಹೂವಿನ ನಗಿ ನಗತೈತಿ. ಬಳ್ಳಿ ತುಂಬ ಹೂವಾಗ್ಯಾವ, ಹೂವು ಕೇಳೋದಿಲ್ಲೇನು? ನೀ ಒಂದ ಕೇಳು, ನಾ ಮೂರ ಕೊಡತೀನಿ. ಇಕಾ ಕೊಡಲ?

ಗೌಡ : ಬೇಡ.

ಗೌದ್ತಿ : ಹೂವ್ಯಾಕ ಬ್ಯಾಡ?

ಗೌಡ್ತಿ : ನಾ ರಾಜಕುಮಾರ ಅಲ್ಲ, ರಾಕ್ಷಸ.

ಗೌಡ್ತಿ : ಮರ-ಬಳ್ಳಿ ನಡುವೆ ರಾಕ್ಷಸ ಹೆಂಗ ಬಂದ?

ಗೌಡ : ಕಾಡು ಮುಟ್ಟಾಗಿ ಮೈಲಿಗೆ ಆಗಿತ್ತಲ್ಲ. ಅದರೊಳಗಿಂದ ಹುಟ್ಟಿಕೊಂಡ.

ಗೌಡ್ತಿ : ಥೂ ಪಾಪಿ, ಏನ ಬೇಕು ನಿನಗ?

ಗೌಡ : ಹೂ ಬೇಕು, ಕೆಂಪ ಹೂ ಬೇಕು. ನಿನ್ನ ಗರ್ಭದಾಗ ಅರಳಿರೋ ಕೆಂಪ ಹೂವು ಬೇಕು.

ಗೌಡ್ತಿ : ಅದನ್ನ ಕಿತ್ತರ ನಾ ಸಾಯತೀನಿ.

ಗೌಡ : ಅದಕ್ಕs ನನಗ ಆ ಹೂ ಬೇಕು.

ಗೌಡ್ತಿ : ಬ್ಯಾರೇ ಹೂ ಬೇಕಾದರ ಹತ್ತ ಕಿತ್ತಕೊಡತೀನಿ.

ಗೌಡ : ನನಗ ಅದs ಹೂ ಬೇಕು. ಹ ಹ್ಹ ಹ್ಹ…..

ಗೌಡ್ತಿ : ನಾ ಯಾರಿಗೂ ಕಾಣದಲ್ಲಿ ಅಡಗತೀನಿ.

ಗೌಡ : ನನ್ನ ಹತ್ತಿರ ನೀ ಎಲ್ಲಿ ಅಡಗಿದರೂ ತೋರಿಸೋ ಕನ್ನಡಿ ಐತಿ.

ಗೌಡ್ತಿ : ಯಾರಿಗೂ ಸಿಕ್ಕಧಾಂಗ ನಾ ದೂರ ಓಡಿಹೋಗ್ತೀನಿ.

ಗೌಡ : ನನ್ನ ಹತ್ತಿರ ಗಾಳಿಗಿಂತ ವೇಗವಾಗಿ ಓಡೋ ಕೀಲಕುದರಿ ಐತಿ.

ಗೌಡ್ತಿ : ಹಂಗಾದರ ನಾ ಏನ ಮಾಡಲಿ? ರಾಜಕುಮಾರ ಎಲ್ಲಿ? ರಾಜಕುಮಾರಾ, ನನ್ನ ಕಾಪಾಡು, ಕಾಪಾಡು.

ಗೌಡ : ಯಾರೂ ಕಾಪಾಡೋದಕ್ಕಾಗೋದಿಲ್ಲ ರಾಜಕುಮಾರೀ, ನಿನ್ನ ರಾ ಜ ಕು ಮಾ ರ ಆಗಲೇ ನನ್ನ ಸೆರೆಯಾಳು. ಹ ಹ್ಹ ಹ್ಹಾ….

ಗೌಡ್ತಿ : ತಾಯೀ ಕರಿಮಾಯೀ, ನೀನಾದರೂ ಕಾಪಾಡs ಎವ್ವಾ!

ಗೌಡ : ದೇವರೂ ನನ್ನ ಎದುರು ನಿಂತುಕೊಳ್ಳಾಕ ಹೆದರತಾವ.

ಗೌಡ್ತಿ : ಅಯ್ಯೋ, ಏನ ಮಾಡಲಿ? ರಾಮಗೊಂಡಾ… ರಾಮಗೊಂಡಾ…

ಗೌಡ : ಹಂಗಾದರ ನಾ ರಾಮಗೊಂಡನ ವೇಷದಾಗs ಬರತೀನಿ.

*(ಗೌಡ  ಈ ಮಾತನ್ನು ಮತ್ತೆ ಹೇಳುತ್ತಿದ್ದಾಗ ಗೌತ್ತಿ ಓಡಾಡಿ ತಪ್ಪಿಸಿಕೊಳ್ಳಲೆತ್ನಿಸುತ್ತ ಹಾಸಿಗೆಯ ಮೇಲೆ ಬೀಳುತ್ತಾಳೆ. ಗೌಡ ರಾಕ್ಷಸನ ಅಭಿನಯ ಮಾಡುತ್ತ ಸುತ್ತ ಓಡಾಡುತ್ತಾನೆ. ಹೆದರಿದ ಗೌತ್ತಿ ಚೀರಿ ಎಚ್ಚರಾಗುತ್ತಾಳೆ. ಗೌಡ ಮಾಯವಾಗುತ್ತಾನೆ. ಗೌತ್ತಿ ಗಾಬರಿಯಿಂದ ಬೆದರಿ ತನ್ನ ಗರ್ಭ ಸುರಕ್ಷಿತವಾಗಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುತ್ತಾಳೆ.)*

## ಕರ್ಮದ ತೀರ್ಮಾನ

ಸೂತ್ರಧಾ : ರಾಮಗೊಂಡನಿಗೆ ಯಕ್ಷಿಣಿಯ ಭೇಟಿಯಾದ ಮೇಲೆ
ಗೆದ್ದೆವೆಂದೇ ಅಂದುಕೊಂಡೆವು.
ಅನುಮಾನಕ್ಕೆ ಅವಕಾಶವಾಗದ ಹಾಗೆ
ಶತ್ರುವನ್ನ ಅವನ ನಿಜದಲ್ಲೇ ತೋರಿಸುವ
ಕನ್ನಡಿ ಸಿಕ್ಕಿತ್ತು.
ಅವನಿದ್ದಲ್ಲಿಗೇ ಒಯ್ಯುವ ಕೀಲುಕುದುರೆಯಿತ್ತು.
ಇರಿಯುವುದಕ್ಕೆ ಕೊಂಬಿತ್ತು.

ಇಷ್ಟೆಲ್ಲ ವರ ಪಡೆದು ರಾಮಗೊಂಡ ಬಂದಾಗ
ಹಟ್ಟಿಯ ಮೇಲೆ ಹದದು ಹಾರಾಡುತ್ತಿದ್ದವು.
ನಮ್ಮ ಸೀಮೆಯಲ್ಲಿ ಇಷ್ಟು ಹದ್ದುಗಳಿದ್ದಾವೆಂದು
ನಮಗೆ ತಿಳಿದೇ ಇರಲಿಲ್ಲ.
ಜನ ದನ ಯಾರೂ ಸತ್ತಿರಲಿಲ್ಲ.
ಮನುಷ್ಯರ ಹೆದರಿಕೆ ಅವಕ್ಕೆ ಇರಲೇ ಇಲ್ಲ.
ನಾವೇ ಹೆಣ ಅಂದುಕೊಂಡೊವೋ ಏನೋ-
ನಮ್ಮ ಮೇಲೇ ಎರಡಗುತ್ತಿದ್ದವು.
ಮೇಲೆ ಮೇಲಕ್ಕೆ ಹಾರಿ,
ರೆಕ್ಕೆ ಬಿಡಿಯದೆ ಹಾಗೇ ತೇಲಿ
ತೇಲು ತೇಲುತ್ತ, ಬೇಟೆ ಸಿಕ್ಕಂತೆ
ಏಕ್‌ದಂ ಕೆಳಕ್ಕೆ, ನಮ್ಮ ನೆತ್ತಿಗೇ ಎಗರಿ
ಗಕ್ಕನೆ ಮೇಲಕ್ಕೆ ಹೋಗುತ್ತಿದ್ದವು.
ರಾಮಗೊಂಡನ್ನ ಜ್ಞಾಪಿಸಿಕೊಂಡೆವು,-
ಹೇಳಕೇಳುವ ಯಾರಿಗಾದರೂ ಹೇಳಬೇಕಲ್ಲ-ಅದಕ್ಕೆ.
ಕರಿಮಾಯಿ ಬರಿದಿದ್ದಳು. ಕರಿಯಜ್ಜ ಸತ್ತಿದ್ದ.
ರಾಮಗೊಂಡನಿಗೆ ಹೇಳಬೇಕು; ಆದರೆ
ಅವ ನಮ್ಮ ಗುರುತ ಹಿಡಿದಾನು ಅಂತ
ನಂಬಿಕೆ ಇರಲಿಲ್ಲ.
ಗೌಡನಿಗೆ ಹೇಳಬೇಕು-ಆದರೆ ಧೈರ್ಯ ಇರಲಿಲ್ಲ.

ಯಾಕೆಂದರೆ ಅವನನ್ನು ನೋಡಿದಾಗೆಲ್ಲ
ನಮ್ಮ ಜೀವ ನಮ್ಮ ಎದುರಿನಲ್ಲೇ
ಹಾರಿಹೋದಂತೆ ಅನಿಸುತ್ತಿತ್ತು.

ಕೊನೆಗೆ ಏನು ಮಾಡಬೇಕಂತ ತಿಳಿಯದೆ
ಗೌಡನ ಹೆಸರು ಹೇಳಿ ಹೊಯ್ಕೊಂಡರೆ
ಹದ್ದು ಹದರಿ ಹಾರಿಹೋದಾವೇನೋ ಅಂತ
ಬಾಯಿ ಬಾಯಿ ಬಡಕೊಳ್ತ ಇದ್ದಿವಿ,-
ಆಗಲೇ ನಮ್ಮ ಕರ್ಮದ ತೀರ್ಮಾನವೂ
ಆಗಿಬಿಟ್ಟಿತ್ತು.

*(ಗೌಡ್ತಿ ಮಲಗಿದ್ದಾಳೆ. ರಾಮಗೊಂಡ ಬರುವನು.)*

ರಾಮಗೊಂಡ : ಮಲಗವ್ವಾ ಮಲಗು. ಹುಚ್ಚು ಮತ್ತು ನಿದ್ದೆ ಎರಡೇ ನಿನ್ನ ರಕ್ಷಕರು. ಸತ್ಯ ನಿನ್ನ ಹತ್ತಿರ ಸುಳಿಯದ ಹಾಗೆ ಎರಡೂ ನಿನ್ನ ಸುತ್ತ ಹಗಲೂ ರಾತ್ರಿ ಕಾವಲು ಕಾಯತಾ, ಇವೆ. ನಾನೋ ಸತ್ಯದ ಬೆಳಕಿನಲ್ಲಿ ಹುಚ್ಚನಾದವನು. ಹುಚ್ಚಿನಿಂದಾಗಿ ನಿದ್ದೆ ನನ್ನ ಕಣ್ಣೆವೆಯ ಮೇಲೆ ಸುಳಿಯುವುದೇ ಇಲ್ಲ. ನಿನ್ನ ಗರ್ಭಕ್ಕೆ ಕೂಸಾಗಿ, ಇಬ್ಬರಿಗೆ ಮಗನಾಗಿ, ಆಡಿಕೊಂಬವರ ತೋರುಬೆರಳಿಗೆ ಗುರಿಯಾಗಿ ಬದುಕುವ ಕಷ್ಟ ನಿನಗೆ ತಿಳಿಯದು ತಾಯಿ. ಕಳ್ಳ ನೋಟಗಳಿಗೆ, ಪಿಸುದನಿಗಳಿಗೆ ಗುರಿಯಾಗಿ ನಾನು ಬದುಕಬೇಕು. ಸತ್ತರೂ ಬೆನ್ನಟ್ಟಿ ಬರುವ ಕಥೆಗಳಿಂದ ಮುಕ್ತಿಯಿಲ್ಲ ನನಗೆ!

ಗೌಡ್ತಿ : *(ಎಚ್ಚರುತ್ತ)* ಮಾಯದ ಕನ್ನಡಿ ನಿನಗೆ ತೋರಿಸಿದ್ದು ಖರೆ ಅಲ್ಲೋ ಮಗನs; ನಿನ್ನ ಎದಿ ಒಡೆಯೋದಕ್ಕ ಮಾಡಿದ ಪಿತೂರಿ ಅದು.

ರಾಮಗೊಂಡ : ಮಾಯದ ಕನ್ನಡಿ ನನ್ನ ಹತ್ತಿರ ಇದ್ದದ್ದು ನಿನಗ ಹೆಂಗ ತಿಳೀತು?

ಗೌಡ್ತಿ : ಮೈಗೆ, ಮನಸ್ಸಿಗೆ ಎಷ್ಟು ಸುಳ್ಳು ಸುತ್ತಿಕೊಂಡೀಯೋ ಕಂದ! ಸುಳ್ಳಿನ ಮ್ಯಾಲ ಸುಳ್ಳು! ಸುಳ್ಳಿನ ಮ್ಯಾಲ ಸುಳ್ಳು! ನಿನ್ನ ಕಂಡರ ನನ್ನ ಹೊಕ್ಕಳದಾಗಿನ ದುಃಖ ಉಕ್ಕಿಬರತಾವ. ಸುತ್ತಿಕೊಂಡ ಸುಳ್ಳು ಸುಲಿದು ಮೊದಲಿನ್ಹಾಂಗ ನನ್ನ ಮಗ ಆಗಿ ಬಾರೋ ಕಂದ!

ರಾಮಗೊಂಡ : ಗೊತ್ತಿದ್ದು ಮಾತಾಡ್ತೀಯೋ, ಗೊತ್ತಾಗದs ಮಾತಾಡ್ತೀಯೊ, -ನಿದ್ದೀ ಯೊ ಳ ಗಿ ದ್ದೀ ಯೋ ಎಚ್ಚರಾಗಿದ್ದೀಯೋ-ನನ್ನ ಮಾತು ಎಲ್ಲಿಗಾದರೂ ತಲುಪಲಿ ಕೇಳು; ನನ್ನ ಮುಖ ಎಂಜಲಾಗೇತಿ, ನಿನ್ನ ಹತ್ತಿರ ಬರಲಾರೆ.

ಗೌಡ್ತಿ : ಎಂಜಲ? ಎಂಜಲ ಯಾಕಾಯ್ತು?

ರಾಮಗೊಂಡ : ಹಾಳಬಾವ್ಯಾಗೊಂದು ಭೂತ ಕಂಡೆ, ಅದು ನನ್ನ ಮುಖದ ಮ್ಯಾಲ ಸತ್ಯ ಉಗುಳಲಿ ಎಂಜಲ ಮಾಡೇತಿ.

ಗೌಡ್ತಿ : ಸತ್ಯ ಉಗುಳಿದರ ಮುಖ ಎಂಜಲ ಹೆಂಗಾಗತೈತಿ? ಭೂತ ಅಂದಮ್ಯಾಲ ಸುಳ್ಳ ಉಗುಳಿರಬೇಕು; ಅದಕ್ಕs ಮುಖ ಎಂಜಲಾಗೇತಿ. ತೊಳಕೋ ಹಸನಾಗತೈತಿ.

ರಾಮಗೊಂಡ : ಆದರ ಅದು ನನ್ನ ಆತ್ಮ ಎಂಜಲ ಮಾಡೇತಿ.

ಗೌಡ್ತಿ : ಇಲ್ಲಿ ಬಾ ತೊಳೀತೀನಿ. ಬಾ....

*(ರಾಮಗೊಂಡ ಬರುವನು. ಅವನ ಮುಖವನ್ನು ಸೆರಗಿನಿಂದ ಒರೆಸಿ)*
ಹೌದ? ಮುಖ ಹಸನಾಯ್ತು. ತಾಯೀ ಮುಂದ ಮಗ ಯಾವತ್ತೂ ಹಸನಾಗಿರತಾನ. ಇಕಾ ನೋಡು. ಈಗಷ್ಟ ಜಳಕಾ ಮಾಡಿಧಾಂಗ ಕಾಣತಿ.

ರಾಮಗೊಂಡ : ನನ್ನ ಕಣ್ಣಾಗೇನೂ ಕಾಣ್ಸಾಣಿಲ್ಲೇನು?

ಗೌಡ್ತಿ : ಹೌದು ಕಣ್ಣಾಗ ಅಷ್ಟಿಷ್ಟ ಸಂಶೆ ಉಳಿದೈತಿ. ಆದರ ಉಳಿದಂತೆ ನಿನ್ನ ಆತ್ಮದ ತುಂಬ ಪ್ರೀತಿ ತುಂಬೇತಿ.

ರಾಮಗೊಂಡ : ಕಣ್ಣಾಗಿನ ಸಂಶೆ ಒಳಕ್ಕೂ ಇಳಿದು ವಿಷ ಹರಡತೈತಿ. ತಾಯೀ ಲಗು ನನ್ನನ್ನು ಕಾಪಾಡು.

ಗೌಡ್ತಿ : ಎಲ್ಲಾ ತೊಳೆದನಲ್ಲ? ಈಗ ಹಸನಾಗೀದಿ! ಜಳಕಾ ಮಾಡಿ 'ಅವ್ವಾ' ಅಂದಿ. ನಾ 'ಯಾಕೋ ಕಂದ?' ಅಂದೆ. ಏನೋ ಹೇಳಬೇಕಂದಿ. ತಗೊ ಕೇಳತೀನಿ.

ರಾಮಗೊಂಡ : ನಿನ್ನ ಕನವರಿಕಿ ನನಗ ತಿಳಿಯಾಣಿಲ್ಲ.

ಗೌಡ್ತಿ : ನಿನಗೆಲ್ಲಾ ತಿಳೀತೈತಿ. ಆದರೂ ಇಲ್ಲಂತಿ.

*(ಮೈಮೇಲೆ ಅಕ್ಕರೆಯಿಂದ ಕೈಯಾಡಿಸುತ್ತ)*

ಈಗ ಹೇಳು, ಭೂತದ ದನಿ ಇನ್ನೂ ಕೇಳಿಸತೈತೇನು? ನಾವೀಗ ಎಲ್ಲಿದ್ದೀವಿ ಗೊತ್ತ? ವಾಡೇದೊಳಗಲ್ಲ! ಕಾಡಿನಾಗಿನ ಗವಿಯೊಳಗ! ಊರಾಗಿನ ಗಾಳೀ ತುಂಬ ದೆವ್ವ ಭೂತದ ದನಿ ತುಂಬ್ಯಾವ, ಇದೊಂದs ಜಾಗ ಅವಕ್ಕ ಸಿಕ್ಕಿಲ್ಲ. ಈ ಗವಿಯೊಳಗ ನಮ್ಮನ್ನ ಬಿಟ್ಟು ಇನ್ಯಾರೂ ಇಲ್ಲ, ಭೂತ ಇಲ್ಲ, ರಾಕ್ಷಸ ಇಲ್ಲ, ಹುಲಿ ಇಲ್ಲ-ನಾವಿಬ್ಬರs. ನಾನು-ನೀನು!

ರಾಮಗೊಂಡ : ಈ ಗರ್ಭ?

ಗೌಡ್ತಿ : ಹೌದು ಈ ಗರ್ಭ.

*(ಗರ್ಭ ಹಿಡಿದುಕೊಂಡ ಅದನ್ನೇ ಕುರಿತು)*

ಎಷ್ಟ ಗುದಮುರಿಗಿ ಹಾಕತೀಯೋ ಕಂದ? ನಿನ್ನ ತಾಯಿಗೆ ಕಷ್ಟ ಕೊಡೋದರಾಗ ಎಷ್ಟ ಆನಂದಪಡತೀಯೋ?

*(ರಾಮಗೊಂಡನಿಗೆ)*

ಅದ್ಯಾಕಿಷ್ಟ ಒದ್ದಾಡತೈತೊ! ಮೊದಲಾದರ ನಿನ್ನ ಕಣ್ಣಿನಾಗ ನೋಡತಿದ್ದೆ. ಅದಕ್ಕ ಏನ ಬೇಕಂಬೋದೆಲ್ಲಾ ತಿಳೀತಿತ್ತು. ನಿನ್ನ ಕಣ್ಣಿನಾಗ ಮೂಡಿ ಹುಲಿಹಾಲ ಕೇಳಿತು. ಕೊಟ್ಟೆ. ಈ ಹೊತ್ತ ಏನು ಬೇಕಾಗಿ ಒದ್ದಾಡತೈತೊ! ಅದಕ್ಕೇನ ಬೇಕೋ ನೋಡೇನಂದರ ನಿನ್ನ ಕಣ್ಣೀನಾಗ ಬೆಳಕs ಇಲ್ಲ. ಬರೀ ಸಂಶೇ ತುಂಬೇತಿ, ಸಾವಿನಂಥಾ ಸಂಶೆ.

ರಾಮಗೊಂಡ : ಒಂದೊಂದು ಮಾತನ್ನ ಒಂದೊಂದ ಕಾರಣಕ್ಕ ಹೇಳ್ತೀ ತಾಯೀ, ಕಾರಣದ ಸೂತ್ರ ಪತ್ತೆ ಆಗೋದs ಇಲ್ಲ, ಹೆಂಗ ತಿಳೀಲಿ?

ಗೌಡ್ತಿ : ಬಾ ಕಂದಾ, ನಿನಗೇನು ಬೇಕನ್ನೋದು ನನಗೂ ತಿಳೀತಾ ಇಲ್ಲ. ಯಾಕಂದರ ನಿನಗಿನ್ನೂ ಬಾಯಿ ಬಂದಿಲ್ಲ. ಆ ಮಾಯದ ಕನ್ನಡಿ ಕೊಡು. ನಿನಗೇನು ಬೇಕನ್ನೋದನ್ನ ತಿಳಕೊಳ್ತೀನಿ.

ರಾಮಗೊಂಡ : ನಿನ್ನ ಮಾತ ಕೇಳಿದರ ಸಂಶೆ ಬರತಾವ. ನಿನ್ನ ಬಾಯಿಂದ ಯಾರೋ ಮಾತಾಡತಾರಂತ ಅನಸತೈತಿ.

ಗೌಡ್ತಿ : ಶ್ಯೂ! ಸನೇಕ ಬಾ. ಗರ್ಭ ಮಾತನಾಡತೈತಿ ಕೇಳು.

*(ರಾಮಗೊಂಡನ ತಲೆಯನ್ನು ತನ್ನ ಗರ್ಭದ ಮೇಲೆ ಇಟ್ಟುಕೊಂಡು ದನಿ ಬದಲಾಯಿಸಿ)*

ಏಯ್ ರಾಮಗೊಂಡಣ್ಣಾ, ಅವ್ವನ ಗರ್ಭ ಗುದ್ದಿ ಗುದ್ದಿ ನನ್ನ ಮೈ ಗಾಯ ಆಗೇತಿ, ಆ ಗಾಯ ನೋಡಿಕೋ ಬೇಕು. ಲಗು ಕನ್ನಡಿ ಕೊಡೋ ಎಣ್ಣಾ!

*(ರಾಮಗೊಂಡ ಕನ್ನಡಿ ಕೊಡುವನು. ಗೌಡ್ತಿ ಅದರಲ್ಲಿ ನೋಡುತ್ತಾ)*

ಗೌಡ್ತಿ : ಆಹಾಹಾ! ಎಲ್ಲೀ ಇದರವ್ವನ ! ಎಷ್ಟ ದೊಡ್ಡವಾಗೀನೋ ಎಣ್ಣಾ ನಾನು! ಮೈಮ್ಯಾಲ ಏಳಪಟ್ಟಿ ಮೂಡ್ಯಾವ! ನೀನು ಹುಲೀಹಾಲು ತಂದುಕೊಟ್ಟೆ ನೋಡು-ಅದಕ್ಕs ನಾ ಹುಲಿ ಆಗೀನೋ ಎಣ್ಣಾ!

ರಾಮಗೊಂಡ : ಎವ್ವಾ ಎವ್ವಾ, ನನ್ನ ತಾಯಿ ನೀನು.

ಗೌಡ್ತಿ : ನಾ ನಿನ್ನ ತಮ್ಮ! ನೀ ತಾಯೀಹಾಲು ಕುಡಿದವನು. ನಾನು ಹುಲೀಹಾಲು ಕುಡಿದವನು. ಅಣ್ಣಾ, ನನಗಿನ್ನೂ ಕೈಕಾಲು ಮೂಡಿಲ್ಲ. ನಿನ್ನ ಹಂತ್ಯಾಕಿನ ಕೀಲಕುದರಿ ಕೊಡೋ ಅಣ್ಣಾ. ಅದನ್ನ ಹತ್ತಿ ಕಾಡಿಗೆ ಹೋಗತೀನಿ. ಕಾಡಿನಾಗ ಹೊಂಚಿ ಕೂರತೀನಿ. ಯಾವನಾದರೂ ನಿನ್ನಂಥ ಗೌಡ ಬಂದರ ಅವನ್ನ ಕೊಂದು ಅವನ ಆಕಾರ ತಾಳತೀನಿ. ನೀ ಕೀಲಕುದರಿ ಕೊಡದಿದ್ದರ ನನಗ ಆಕಾರ ಬರೂದs ಇಲ್ಲ. ನಾ ಕಾಡಿಗೆ ಹೋಗದಿದ್ದರ ನನಗ ಆಕಾರ ಬರೂದs ಇಲ್ಲ. ಆಕಾರ ಬರದಿದ್ದರ ನಾ ಹೊರಗ ಬರೂದs ಇಲ್ಲ. ಇಲ್ಲೇ ಅವ್ವನ ಗರ್ಭ ಗೋರಿ ಮಾಡಿ ಸಾಯತೀನಿ.

*(ತಕ್ಷಣ ಗರ್ಭ ಹಿಡಿದುಕೊಂಡು ಸಹಜ ಧ್ವನಿಯಲ್ಲಿ)*

ಸಾಯಬ್ಯಾಡೋ ನನ್ನ ಕಂದಾ! ಸಾಯಬ್ಯಾಡೋ....

ರಾಮಗೊಂಡ : ಹಿಂಗೆಲ್ಲಾ ಮಾತಾಡಿ ನನ್ನ ಹಾದೀ ತಪ್ಪಿಸಬ್ಯಾಡಾ ತಾಯೀ. ಉರಿಯೋ ಸೇಡನ್ನ ಆರಿಸಿ ರಕ್ತ ಹರೀಬೇಕಾದಲ್ಲಿ ಕಣ್ಣೀರು ಹರಿಯೋ ಹಾಂಗ ಮಾಡಬ್ಯಾಡ. ನಿನ್ನ ಮಗನನ್ನ ನಂಬು. ನಾ ನಿನ್ನ ವೈರಿ ಅಲ್ಲ. ನಿನಗೂ ಗೊತ್ತಿಲ್ಲದ ಸತ್ಯಗಳಿವೆ. ನನಗ ನಮ್ಮೆಲ್ಲರ ದುಃಖದ ಮೂಲ ಗೊತ್ತು. ಅದರಿಂದ ಪಾರಾಗುವ ಉಪಾಯ ಗೊತ್ತು. ನನ್ನಲ್ಲಿ ನೀನು ನಂಬಿಕೆ ಇಡೋದಾರೆ ಕ್ಷಣಮಾತ್ರದಲ್ಲಿ ನಾವೆಲ್ಲ ಬಚಾವಾಗತೀವಿ. ಜಗತ್ತೆಲ್ಲ ಒಂದು ಸಲ ತನ್ನ ನಿಜದಲ್ಲಿ ನೆಲೆಗೊಳ್ಳಲಿ, ಆಮೇಲೆ ಕೀಲುಕುದುರೆ, ಕೊಂಬು, ಕನ್ನಡಿ-ಎಲ್ಲಾ ತಮ್ಮನಿಗೇ ಕೊಡತೀನಿ. ಮೊದಲೀಗ ಆ ಕನ್ನಡಿ ಕೊಡು.

ಗೌಡ್ತಿ : ನಿನ್ನ ಕನ್ನಡಿ ನಿನಗೆಷ್ಟು ಖರೆ ತೋರಿಸೀತೋ ಮಗನ? ನನ್ನ ಕಣ್ಣಿಗಿಂತ ಹೆಚ್ಚಿನ ಕನ್ನಡ ಇದೆಯೇನೋ ಕಂದ? ಯಾವ ಲೋಕ ಬೇಕು ಹೇಳು, ಆ ಲೋಕ ತೋರಸ್ತೀನಿ. ನಿನ್ನ ಅಧೋಲೋಕದ ಕದಾ ತೆಗೆದು ತೋರಿಸಲೇನು?

*(ಎರಡೂ ಕಣ್ಣು ಕಿಸಿದು ತೋರಿಸುತ್ತ)*

ಇಕಾ ನೋಡು ನನ್ನ ಕಣ್ಣಾಗ. ನೋಡು, ಕಾಣಿಸ್ತು? ಹೇಳು ಏನೇನ ಕಾಣ್ತಿ?

ರಾಮಗೊಂಡ : *(ಭಾವುಕನಾಗಿ)* ಕಾಡು ಕಾಣತಾ ಇದೆ, ಹಸಿರು ಕಾಣತಾ ಇದೆ. ನೀಲಿ ಮುಗಿಲು, ಹೊಳೆಯೋ ಚಂದ್ರ! ಅಲ್ಲೊಂದು ದೊಡ್ಡ ಆಲದಮರ. ಮರದಾಗೊಂದು ಪಂಜರ.... ಪಂಜರದಾಗೊಂದು ಗಿಳಿ... ಗಿಳೀಜಿವದಾಗ ರಾಕ್ಷಸನ ಜೀವ ಮಲಗೇತಿ.

ಗೌಡ್ತಿ : ಥೂ ! ನಿನ್ನ ಕಣ್ಣಿಗೆ ಖರೆ ಕಾಣಿಸೋದೇ ಇಲ್ಲ. ನಿನನಗೆ ಕನ್ನಡಿ ಕೊಟ್ಟಳಲ್ಲ. ಆ ಜಕ್ಕಿಣಿಗೆ ಖರೆ ಕಂಡಿಲ್ಲೋ ಮಗನ. ಅವಳು ಹೇಳಿದ್ದು ಯಾವುದೋ ಹಳಸಲು ಸತ್ಯ. ಕಟ್ಟ ಕಡೆಯ ಸತ್ಯ ತೋರಿಸಲೇನು? ನೋಡು, ಕಾಡಿನಾಗ ಒಂದು ಆಲದ ಮರ... ನಾನs ಆ ಆಲದ ಮರ. ಮರದಾಗೊಂದು ಪಂಜರ.... *(ಗರ್ಭ ತೋರಿಸುತ್ತ)*

ಇದs ಆ ಪಂಜರ. ಪಂಜರದಾಗೊಂದು ಗಿಣಿ ಐತಿ. ಗಿಣೀ ಹೊಟ್ಟೀ ಒಳಗೊಂದು ಹುಲಿ ಐತಿ. ಹುಲೀ ಹೊಟ್ಟೀ ಒಳಗೊಬ್ಬ ರಾಕ್ಷಸ. ಈ ರಾಕ್ಷಸ ಹೊರಗ ಬಂದರ ಸಾವಿರ ಸಾವಿರ ಸಂತಾನ ಮಾಡತಾನ. ಅವನ ಹನಿ ನೆತ್ತರ ಬಿದ್ದಲ್ಲಿ ಕೋಟಿ ರಾಕ್ಷಸರು ಹುಟ್ಟತಾರ. ಆವಾಗ ನಿನ್ನ ಇರಿಯೋ ಕೊಂಬು, ಕೀಲಕುದರಿ, ಮಾಯದ ಕನ್ನಡಿ-ಎದಕ್ಕೂ ಬರೋದಿಲ್ಲ. ಊರನ್ನ ಕಾಪಾಡಬೇಕಾದರ ಈ ರಾಕ್ಷಸನನ್ನ ಇರೀಬೇಕು. ಇರಿಯೋ ಧೈರ್ಯ ಇದೆಯ?

ಶ್ಯೂ ತಾಳು.. ಮಧ್ಯರಾತ್ರಿ, ಗಿಣಿ ಮಲಗೈತಿ, ರಾಕ್ಷಸ ಮಲಗ್ಯಾನ. ಸದ್ದು ಮಾಡಬ್ಯಾಡ. ಮೆಲ್ಲಗೆ ಕೊಂಬು ಧರಿಸು. ಇರಿ, ಬೇಗ ಇರಿ! ಇಂಥಾ ಅವಕಾಶ ನಿನಗ ಇನ್ನೊಮ್ಮಿಸಿಕ್ಕೋದಿಲ್ಲ. ಲಗು ಇರಿ.

ರಾಮಗೊಂಡ : ತಾಯೀ  ತಾಯೀ ಏನಂಬೊ ಮಾತಾಡ್ತೀ?

ಗೌಡ್ತಿ : ಇರೀಬೇಕಾದಾಗ ಮಾತಾಡ್ತ ನಿಲ್ಲಬೇಡ. ಗವಿಯೊಳಗ ಯಾರೂ ಇಲ್ಲ. ನಾವಿಬ್ಬರs ಇದ್ದೀವಿ. ತಾಯಿ ಅಂತ ಕರುಣೆ ತೋರಿಸಬ್ಯಾಡ. ಲಗು ಇರಿ.

ರಾಮಗೊಂಡ : ಎವ್ವಾ ಎವ್ವಾ! ನಿನ್ನ ಗರ್ಭ ಇರಿದು ಯಾವ ನರಕಕ್ಕ ಹೋಗಲಿ? ಹುಚ್ಚಿನ ಉನ್ಮಾದದೊಳಗ ಮಾತುಗಳನ್ನ ಚೆಲ್ಲಾಡ್ತ ಇದ್ದೀ ತಾಯೀ.

ಗೌಡ್ತಿ : ರಾಮಗೊಂಡಾ, ಇದರಂಥಾ ವ್ಯಾಳ್ಯಾ ನಿನಗ ಇನ್ನೊಮ್ಮಿ ಸಿಕ್ಕೋದಿಲ್ಲ. ಲಗು ಧೈರ್ಯ ಮಾಡು. ಕೈ ಮುಗಿದು ಬೇಡಿಕೋತೀನಿ ಬಾರೊ-

ರಾಮಗೊಂಡ : ಏನ ಬೇಡಿಕೋಳ್ತ ಇದ್ದೀಯವ್ವಾ? ನಿನ್ನ ಬೇಡಿಕೆಗಳಿಂದ ನನಗೂ ಹುಚ್ಚ ಹಿಡಿಸಬ್ಯಾಡ.

ಗೌಡ್ತಿ : ಬೇ ಡ ತೀ ನಿ, ಬ್ಯಾಟಿ ಹಾಂಗ ಅಟ್ಟಿಸಿಕೊಂಡ ಬಂದ ಬೇಡತೀನಿ. ಬೇಡಿದ್ದ ಕೊಡದಿದ್ದರ ಶಾಪ ಹಾಕತೀನಿ, ಬಾ.

*(ರಾಮಗೊಂಡನಿಗೆ ಕಾಣಿಸದಂತೆ ಆದರೆ ಗೌಡ್ತಿಗೆ ಗೊತ್ತಾಗುವಂತೆ ಗೌಡ ಕಾಣಿಸಿಕೊಳ್ಳುವನು.)*

ಥೂ ಹೇಡಿ ಹೋಗು. ರಾಕ್ಷಸ ಎಚ್ಚರಾದ. ಇನ್ನು ನೀ ಇರಿಯೋದಕ್ಕಾಗೋದಿಲ್ಲ. ಏಯ್ ಬಾರೋ ಇಲ್ಲಿ.

*(ರಾಮಗೊಂಡ ಮಂತ್ರ ಮುಗ್ಧನಂತೆ ಬರುವನು)*

ನನ್ನ ಕಂದ ಕೀಲಕುದರಿ ಬೇಡತಾನ ಕೊಡು.

*(ರಾಮಗೊಂಡ ಮಂತ್ರ ಮುಗ್ಧನಾದವನಂತೆ ಬೇಡಿದ್ದನ್ನೆಲ್ಲ ಕೊಡುವನು)*

ಕೊಂಬು ಕೊಡು. ಇನ್ನ ಮ್ಯಾಲ ನಿನ್ನ ನೀನs ಮಾತಾಡ್ತ, ಪಶ್ಚಾತ್ತಾಪ ಪಡತ, ಕಾಡಿನಾಗ ಶತಪತ ಹಾಕತಾ ತಿರುಗು ಹೋಗು.

*(ಧಣಿದು ಮಂಚದ ಮೇಲೆ ಕುಸಿದು ತಾನಿಸಿದುಕೊಂಡ ಶಕ್ತಿಗಳನ್ನೆಲ್ಲ ಗೌಡನಿಗೆ ಕೊಡುವಳು. ಗೌಡ ಒಂದೊಂದನ್ನೇ ಮುಟ್ಟಿದಂತೆ ರಾಮ ಗೊಂಡ ಭಯಭೀತನಾಗಿ ಶಕ್ತಿಗುಂದಿ ಕುಸಿಯುವನು.)*

ಅಯ್ಯೋ ಪ್ರಭು, ಇರಿಪ್ಯಾ.... ಯಾರಾದರೂ ಬನ್ರೋ....

*(ಕುಸಿಯುವನು.)*

ಗೌಡ್ತಿ : *(ಗರ್ಭಕ್ಕೆ ಸಮಾಧಾನ ಹೇಳುತ್ತ)* ಗಾಳಿ ಬುಸಗುಡತಾವ. ಆಕಾಶದಾಗ ಚಂದ್ರ ಇಲ್ಲ. ಈಗ ಸಧ್ಯೆ ಮಲಕ್ಕೊ. ನಾಳೆ ಬೆಳಿಗ್ಗೆ ಎದ್ದು ಕೀಲಕುದರಿ ಹತ್ತಿ ಹೋದೀಯಂತೆ. ಹೊಂಚಿ ನಿಂತು ಬ್ಯಾಟೀ ಆಡೀಯಂತೆ. ಈಗ ಸುಮ್ಮನೆ ಮಲಕ್ಕೊ ಕಂದಾ...

ಮಲಗು ಮಲಗೆಲೆ ಕಂದನೇ||
ಮಲಗು ಮಲಗೆಲೆ ಕಂದನೇ||

* * *